ಡಾ. ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ ಆಶೀರ್ವಾದಗಳೊಂದಿಗೆ

# ಪುನರ್ಜನ್ಮ

ತಟವರ್ತಿ ರಾಜ್ಯಲಕ್ಷ್ಮಿ



ಕನ್ನಡ ಅನುವಾದ : ಜಿ.ಎಸ್. ಸುಮಲತ ರಾಜು

# ಪುನರ್ಜನ್ಮ

ಮೂಲ : ತಟವರ್ತಿ ವೀರರಾಘವರಾವು
ಕನ್ನಡ ಅನುವಾದ : ಜಿ.ಎಸ್. ಸುಮಲತ ರಾಜು

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**PUNARJANMA**

Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066.

**M.: 9449695503, 8050082689, 9886532204**

| | | |
|---|---|---|
| ಮೊದಲನೇ ಮುದ್ರಣ | : | 2023 |
| ಎರಡನೆಯ ಮುದ್ರಣ | : | 2025 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | **ಶ್ರೀರಾಮ ಪಬ್ಲಿಕೇಶನ್ಸ್**<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್,<br>ಬೆಂಗಳೂರು – 560 066<br>ಮೊ.: 9449695503, 9886532204 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 130/– |
| ಪುಟಗಳು | : | v+125=130 |
| ಮುಖಪುಟ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು.

ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ

ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,

**ಎಚ್.ಎನ್.ಶ್ರೀನಿವಾಸ**

ಮತ್ತು

**ಎಸ್.ಎನ್.ವಿಜಯಲಕ್ಷ್ಮಿ**

**ಸಂಸ್ಥಾಪಕರು,**

ಶ್ರೀರಾಮಧಾಮ ಧ್ಯಾನಕೇಂದ್ರ

# ಪುನರ್ಜನ್ಮ

## ವಿಷಯಾನುಕ್ರಮಣ


| | |
|---|---|
| 1. ಜನನ | 1 |
| 2. ವಿದ್ಯಾಭ್ಯಾಸ | 3 |
| 3. ಬಾಲ್ಯ | 7 |
| 4. ವಿವಾಹ | 9 |
| 5. ಸಂಸಾರ | 11 |
| 6. ದೈವಮಂದಿರದಲ್ಲಿ 'ಧ್ಯಾನ' ಮಂದಿರ | 13 |
| 7. ಪಿರಮಿಡ್‌ಗಳ ವಿಶಿಷ್ಟತೆ | 15 |
| 8. ನನ್ನ 'ಧ್ಯಾನ' ಪ್ರವೇಶ | 17 |
| 9. ಸಮಾಜಸೇವೆ | 21 |
| 10. ಆಧ್ಯಾತ್ಮಿಕತೆ | 24 |
| 11. ನನ್ನ ಪುನರ್ಜನ್ಮ | 27 |
| 12. ನನ್ನ ಆಧ್ಯಾತ್ಮಿಕ ಪ್ರಚಾರ | 35 |
| 13. ನಾನು ಅರಿತುಕೊಂಡಂತೆ ಪತ್ರೀಜಿ | 43 |
| 14. ಗುರುಪೌರ್ಣಮಿ ದಿನ ಪತ್ರೀಜಿ ಬಗ್ಗೆ ನನಗೆ ಬಂದ ಸಂದೇಶ | 45 |
| 15. ಪತ್ರೀಜಿ ಅವರಲ್ಲಿ ನಾನು ನೋಡಿದ ತಾಯಿ ಪ್ರೇಮ | 47 |
| 16. ಸದ್ಗುರುಗಳ ಶಕ್ತಿಗಳು | 49 |
| 17. ಪರಮಾತ್ಮ ಕೃಪೆ–ಗುರುಕೃಪೆ | 52 |
| 18. ಆರಾಟ ಹೋರಾಟ | 55 |
| 19. ಮಾನವ ಎಂದರೆ | 57 |
| 20. 'ಧ್ಯಾನ'ಕ್ಕೆ ಬೇಕಾದ್ದು | 61 |
| 21. ಸಾಧನೆಯಲ್ಲಿ ಅಭಿವೃದ್ಧಿ ಆಗಬೇಕೆಂದರೆ | 65 |
| 22. ಸಾಧಕನು ಅಭಿವೃದ್ಧಿಯಾಗಲು ನಿತ್ಯವೂ ಆಚರಿಸಬೇಕಾದ್ದು | 73 |
| 23. ಧ್ಯಾನ ಮಾಡುವವರಿಗೆ ಬರುವ ಅಡ್ಡಿ ಆತಂಕಗಳು | 77 |
| 24. ಪಂಚಭ್ರಮೆಗಳು | 80 |
| 25. ಸಾಧಕನಿಗೆ ಇರಬೇಕಾದಲಕ್ಷಣಗಳು | 82 |
| 26. ಸಾಧಕರು ತಿಳಿದುಕೊಳ್ಳಬೇಕಾಗಿರುವುದು | 86 |
| 27. 'ಧ್ಯಾನ' ಸಾಧಕರು ಆಚರಿಸಬೇಕಾದ ಪಂಚನಿಯಮಗಳು | 88 |
| 28. ಆತ್ಮಜ್ಞಾನ ಹೊಂದಬೇಕೆಂದರೆ ಅನುಸರಿಸಬೇಕಾದದ್ದು | 95 |
| 29. ಆಸೆ | 102 |
| 30. ತ್ರಿವಿಧ ದೋಷಗಳು | 104 |
| 31. ಸಂಸ್ಕಾರಗಳು ವಾಸನೆಗಳು | 107 |
| 32. ಒಳ್ಳೆಯ ಸಾಧಕನಿಗೆ ಇರಬೇಕಾಗಿರುವ ಲಕ್ಷಣಗಳು | 109 |
| 33. ಸಾಧಕನಿಗೆ ಬರುವ ಪ್ರತಿರೋಧಗಳು | 114 |
| 34. ಸಂಕಲ್ಪಬೇಧಗಳು | 116 |
| 35. ಪಾತ್ರೆಶುದ್ಧಿ– ಪದಾರ್ಥಶುದ್ಧಿ – ಪಾಕಶುದ್ಧಿ | 119 |

# ಜನನ



ನನ್ನ ಹೆಸರು ರಾಜ್ಯಲಕ್ಷ್ಮಿನಮ್ಮವರ ಹೆಸರು ತಟವರ್ತಿ ವೀರರಾಘವರಾವ್ ನಮ್ಮದು ಪಶ್ಚಿಮ ಗೋದಾವರಿ ಜಿಲ್ಲೆ ಭೀಮವರಂ ಗ್ರಾಮ ನಮ್ಮ ತಂದೆ ಸತ್ಯನಾರಾಯಣಮೂರ್ತಿ ತಾಯಿ ರತ್ನಾವತಿ ನಮ್ಮದು ಪೂರ್ವ ಗೋದಾವರಿ ಜಿಲ್ಲೆ ತುನಿ.

ನಮ್ಮ ತಾತನವರಿಗೆ ಏಳುಜನ ಮಕ್ಕಳು, ನಮ್ಮ ತಂದೆ ಎಲ್ಲರಿಗಿಂತ ಚಿಕ್ಕವರು, ಅವರು ಹುಟ್ಟಿದ ಐದು ತಿಂಗಳಿಗೆ ಅಜ್ಜಿ ರಾಜಮಂಡ್ರಿ ಪುಷ್ಕರಸ್ನಾನಕ್ಕೆ ಹೋಗಿಬಂದು ಮಲೇರಿಯಾ ಕಾಯಿಲೆಯಿಂದ ಮರಣಿಸಿದರು, ಆಗ ತಾತ ನಮ್ಮ ತಂದೆಯವರನ್ನು ಕರೆದುಕೊಂಡು ಈ ಪರಿಸರಕ್ಕೆ ದೂರವಾಗಿರಿಸಬೇಕೆಂದು ಪಶ್ಚಿಮ ಬೆಂಗಾಲ್ ನ ಖರಗ್ಪುರ್‌ಗೆ ಹತ್ತಿರವಾಗಿರುವ “ಬೆಲ್ಡಾ” ಎನ್ನುವ ಗ್ರಾಮದಲ್ಲಿ ವಾಸ್ತವ್ಯ ಹೂಡಿ ಅಲ್ಲೇ ವ್ಯಾಪಾರಮಾಡುತ್ತಿದ್ದರು. ತಂದೆಯವರ ಬಾಲ್ಯ ಅಲ್ಲೇ ಕಳೆಯಿತು ಆರು ವರ್ಷ ವಯಸ್ಸಿನಲ್ಲಿದ್ದಾಗ ತುನಿಗೆ ಬಂದು ಎಸ್ ಎಸ್ ಎಲ್ ಸಿ ವರೆಗೂ ಓದಿದರು ಮಧ್ಯೆ ಮಧ್ಯೆ ತಾತನವರ ಬಳಿಗೆ ಹೋಗುತ್ತಿದ್ದರು. ತುನಿಯಲ್ಲಿ ನಮ್ಮ ತಂದೆಯವರ ಅಜ್ಜಿ ಮತ್ತು ಸೋದರತ್ತೆಯಂದಿರು ಮಕ್ಕಳನ್ನು ನೋಡಿಕೊಳ್ಳುತ್ತಿದ್ದರು. ತಂದೆಯವರು ವಿದ್ಯಾಭ್ಯಾಸ ಪೂರ್ಣಗೊಳಿಸಿ ವಿವಾಹ ಮಾಡಿಕೊಂಡು "ಬೆಲ್ಡಾ" ದಲ್ಲೇವ್ಯಾಪಾರಮಾಡುತ್ತಾ ಅಲ್ಲೇ ಸ್ಥಿರಗೊಂಡರು.

ತಂದೆಯವರದು ಪಕ್ಕಾ ಕಮ್ಯುನಿಸ್ಟ್ ಭಾವಗಳು, ದೇವಾಲಯಗಳಿಗೆ ಹೋಗುವುದಾಗಲಿ ಪೂಜೆಗಳು ಮಾಡುವುದಾಗಲಿ ಮಾಡುತ್ತಿರಲಿಲ್ಲ, ಇನ್ನು ಅಮ್ಮನ ವಿಷಯಕ್ಕೆ ಬಂದರೆ... ಸಂಪ್ರದಾಯಸ್ಥ ಕುಟುಂಬದಿಂದ ಬಂದವರು, ಯಾವಾಗಲೂ

ಮಡಿ, ಮಡಿ ಎನ್ನುತ್ತಾ ದಿನವೂ ತಲೆ ಸ್ನಾನಮಾಡಿ, ಒದ್ದೆ ಬಟ್ಟೆಗಳೊಂದಿಗೆ ಅಡುಗೆ ಮಾಡುತ್ತಿದ್ದರು. ಬೇರೆಯವರು ಬಂದರೆ ನೀರು ಹಾಕಿ ಶುದ್ಧಿಗೊಳಿಸುತ್ತಿದ್ದರು. ಅಂತಹ ಕುಟುಂಬದಿಂದ ಬಂದಂತಹ ತಾಯಿಯನ್ನು ನಮ್ಮ ತಂದೆಯವರು ಪೂಜೆಗಳು ಮಾಡಲು ಬಿಡದೆ, ದೇವಸ್ಥಾನಗಳಲ್ಲಿ ನಡೆಯುವುದು ಅನಾಚಾರಗಳು ಎಂದು ಹೇಳುತ್ತಾ 'ಮಡಿ'ಯನ್ನು ಒಪ್ಪದೇ, ದಿನ ಸ್ನಾನ ಮಾಡಿ ಒಣಗಿದ ಬಟ್ಟೆಯಲ್ಲಿ ಅಡುಗೆ ಮಾಡು ಎನ್ನುತ್ತಿದ್ದರು.

ಅಂತಹ ಭಾವಗಳನ್ನು ಹೊಂದಿದ್ದ ತಂದೆ ತಾಯಂದಿರ ಮೂರನೆಯ ಸಂತಾನವಾಗಿ ನಾನು ಜನಿಸಿದೆ, ನನಗೆ ಇಬ್ಬರು ಅಣ್ಣಂದಿರು, ದೊಡ್ಡಣ್ಣ ವೀರಭದ್ರರಾವ್, ಚಿಕ್ಕ ಅಣ್ಣ ವೆಂಕಟೇಶ್ವರ ರಾವ್, ನನ್ನ ನಂತರ ತಮ್ಮ ಗಾಂಧಿ. ಅಣ್ಣಂದಿರು ಇಬ್ಬರೂ ತಾತನ ಮನೆಯಲ್ಲಿ ಜನಿಸಿದರು. ನಾನು 'ತುನಿ'ಯಲ್ಲಿ ಜನಿಸಿದರೆ ತಮ್ಮ "ಬೆಲ್ಡಾ"ದಲ್ಲಿ ಜನಿಸಿದನು. ನಾನು ಹುಟ್ಟಿದ್ದು 'ತುನಿ'ಯಲ್ಲಿ ಆದರೆ ಮೂರನೆಯ ತಿಂಗಳಿನಲ್ಲಿ ತಂದೆಯವರು "ಬೆಲ್ಡಾ"ಗೆ ಕರೆದುಕೊಂಡು ಹೋದರು. ಅಂದಿನಿಂದ ನಾಲ್ಕನೆಯ ವರ್ಷಗಳ ವರೆಗೂ ತಂದೆ ತಾಯಿಯ ಬಳಿ ಇದ್ದು ಆನಂತರ ವಿಜಯನಗರಕ್ಕೆ ಹೋದೆನು. ತಂದೆಯವರ ದೊಡ್ಡ ಅಣ್ಣನವರು ವೀರಭದ್ರ 'ತುನಿ'ಯಲ್ಲಿ, ಎರಡನೇ ಅಣ್ಣ ವಿಜಯನಗರದಲ್ಲಿ ಇದ್ದರು.

ನಾನು ತಂದೆ ತಾಯಿಯರ ಗಾಢವಾದ ಮುದ್ದಿನಿಂದ ತುಂಬು ಪ್ರೇಮದಿಂದ ನಾನು ಅಪರೂಪವಾಗಿ ಬೆಳೆದೆನು. ತಂದೆಯವರಿಗೆ ಹೆಣ್ಣು ಮಕ್ಕಳೆಂದರೆ ತುಂಬಾ ಇಷ್ಟ. ಆದ್ದರಿಂದ ಅಣ್ಣಂದಿರಿಗಿಂತ ನನ್ನನ್ನೇ ಹೆಚ್ಚಾಗಿ ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು. ಹೊರಗಿನಿಂದ ಏನೇ ತಂದರೂ ಮೊದಲು ನನಗೆ ಕೊಡುತ್ತಿದ್ದರು, ಕೆಲವು ದಿನಗಳ ನಂತರ ಅಣ್ಣಂದಿರನ್ನು ತೆಲುಗು ಅಭ್ಯಾಸ ಮಾಡಿಸಬೇಕೆಂದು 'ತುನಿ'ಗೆ ಕಳುಹಿಸಿದರು ನನ್ನನ್ನು ತನ್ನ ಬಳಿಯಲ್ಲೇ ಇರಬೇಕೆಂದು ಕೊಂಡರು.

ಹೀಗಿರುವಾಗ ಅಮ್ಮ ಅಪ್ಪ, ತಮ್ಮ, ನಾನು ಮಲಗಿರುವಾಗ ಒಂದು ರಾತ್ರಿ ತಂದೆಯವರು ನನ್ನನ್ನು, ತಾಯಿ ತಮ್ಮನನ್ನು ಎತ್ತಿಕೊಂಡು ಬೇಗ ಬೇಗ ಹೊರಗೆ ಬಂದರು, ಬಂದ ಸ್ವಲ್ಪ ಹೊತ್ತಿಗೆ ನಮ್ಮ ಮನೆ ಸಂಪೂರ್ಣವಾಗಿ ಅಗ್ನಿಗೆ ಆಹುತಿಯಾಯಿತು. ಅದು ನಾನು ಮೊಟ್ಟ ಮೊದಲು ಎದುರಿಸಿದ ಅಗ್ನಿ ಅವಘಡ ಹಾಗೂ ನಾನು ಅದರಿಂದ ಹೊರಗೆ ಬಂದಿದ್ದು ಎಲ್ಲರೂ "ಆಯುಷ್ಯ ಗಟ್ಟಿ ಇತ್ತು" ಎನ್ನುತ್ತಿದ್ದರು.

# ವಿದ್ಯಾಭ್ಯಾಸ

ಆನಂತರ ನಮ್ಮನ್ನು ತಮ್ಮ ಹತ್ತಿರ ಇರಿಸಿಕೊಂಡು ವಿದ್ಯಾಭ್ಯಾಸ ಮಾಡಿಸಬೇಕು ಎಂದು ತಂದೆಯವರು 'ಖರಗ್ಪುರ್'ಗೆ ಪ್ರಯಾಣ ಬೆಳೆಸಿದರು, ಅಲ್ಲಿ ಸಂಸಾರ "ಬೆಲ್ಡಾ"ದಲ್ಲಿ ವ್ಯಾಪಾರ ತಂದೆಯವರು ಬೆಳಿಗ್ಗೆ ಹೋದರೆ ರಾತ್ರಿ ಬರುತ್ತಿದ್ದರು, ಆದ್ದರಿಂದ ನಮ್ಮ ವಿದ್ಯಾಭ್ಯಾಸದ ಕಡೆಗೆ ಗಮನ ಕೊಡಲಾಗಲಿಲ್ಲ ಅಲ್ಲಿ, ಶಾಲೆ ತುಂಬಾ ದೂರ ಖರಗ್ಪುರ್ ನಲ್ಲಿ ರೈಲ್ವೇ ಅವರು ಇರುತ್ತಿದ್ದರು. ಆಗ ನಮ್ಮ ದೊಡ್ಡಪ್ಪನವರು ತಂದೆಯವರಿಗೆ ನನ್ನನ್ನು ಆಂಧ್ರಕ್ಕೆ ಕಳುಹಿಸಿ ಎಂದು ಕೇಳಿದರು ಅವಳಿಗೆ ಬೆಂಗಾಲಿ ಕಲಿಸಿದರೆ ಮತ್ತೆ ಅವಳ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲಾಗುವುದಿಲ್ಲ. ಹೇಗೋ ತೆಲುಗಿನವರಿಗೇ ಮದುವೆ ಮಾಡಿಕೊಡುತ್ತೇವೆ, ತೆಲುಗು ಕಲಿಸೋಣ ಎಂದರು.

ಆಗ ತಂದೆಯವರು ಆ ಒಂದು ಷರತ್ತಿನಿಂದ ಆಂಧ್ರಕ್ಕೆ ಕಳುಹಿಸಿದರು, ಅದೇನೆಂದರೆ ನನ್ನ ಮಗಳು ನೃತ್ಯ, ಸಂಗೀತ ಕಲಿತುಕೊಳ್ಳಬೇಕು ಎಂದು. ಅದಕ್ಕೆ ದೊಡ್ಡಪ್ಪ ಒಪ್ಪಿಕೊಂಡು "ವಿಜಯನಗರದಲ್ಲಿ ನೃತ್ಯ ಶಾಲೆ" ಇದೆ ಎಂದು ಹೇಳಿ ವಿಜಯನಗರಕ್ಕೆ ಕರೆದುಕೊಂಡು ಬಂದರು. ಆದರೆ ಅವರ ಮಗಳಿಗೆ ನೃತ್ಯ ಬರುತ್ತಿರಲಿಲ್ಲ ಆದ್ದರಿಂದ ನನ್ನನ್ನು ಕೂಡಾ ನೃತ್ಯ ಶಾಲೆಯಿಂದ ಬಿಡಿಸಿದರು, ಐದನೆಯ ತರಗತಿವರೆಗೂ ವಿಜಯನಗರದಲ್ಲಿ ಓದಿದ್ದೇನೆ ಅಜ್ಜಿಯ ಮಡಿಗೆ ಹೆದರಿ ಅವರ ಮನೆಯಲ್ಲಿ ಇರದೆ ದೊಡ್ಡಪ್ಪನ ಮನೆಯಲ್ಲಿ ಪ್ರೈಮರಿ ಸ್ಕೂಲ್ ವಿದ್ಯಾಭ್ಯಾಸ ಪೂರ್ಣಗೊಳಿಸಿದೆನು ಆರನೆಯ ತರಗತಿಗೆ ಬರುವ ಹೊತ್ತಿಗೆ ಮೊದಲನೆಯ ದೊಡ್ಡಪ್ಪ ನನಗೆ ಸಂಗೀತ ಕಲಿಸುತ್ತೇನೆ ಎಂದು ಹೇಳಿ 'ತುನಿ'ಗೆ ಕರೆದುಕೊಂಡು ಬಂದರು.

ಅವರಿಗೆ ತುಂಬಾ ಕೋಪ, ಮನೆಯಲ್ಲಿ ಅವರ ಮಾತೇ ವೇದವಾಕ್ಯ ಅವರು ಏನೆಂದರೆ ಅದನ್ನು ಮನೆಯವರೆಲ್ಲ ಒಪ್ಪಿಕೊಳ್ಳಬೇಕು ಅಂತಹ ಚಂಡ ಶಾಸನರು 'ತುನಿ'ಗೆ ಬಂದಮೇಲೆ ಸಂಗೀತ ಹೇಳಿಸಲು ಶುರು ಮಾಡಿದರು, ಅಲ್ಲಿ ಕೂಡ ಅವರ ಮಗಳಿಗೆ ಸಂಗೀತ ಬರುತ್ತಿರಲಿಲ್ಲವಾದ್ದರಿಂದ ನನ್ನನ್ನು ಕೂಡ ಬಿಡಿಸಿದರು, ಆದರೆ ಆನಂತರ ಅಕ್ಕನಿಗೆ ಸಂಬಂಧ ಬಂದಮೇಲೆ ಭಾವನವರ ಸಹಕಾರದಿಂದ ವೀಣೆ ಕಲಿತು ಕೊಂಡು ರೇಡಿಯೋದಲ್ಲಿ ಕಾರ್ಯಕ್ರಮ ಕೂಡ ಕೊಡುತ್ತಿದ್ದಳು, ಎಲ್ಲರಿಗೂ ಉಚಿತವಾಗಿ ಸಂಗೀತ ಕಲಿಸುತ್ತಿದ್ದಳು, ಈಗಲೂ ಕಲಿಸುತ್ತಿದ್ದಾರೆ.

ತಂದೆಯವರಿಗೆ ಸಂಗೀತದ ಬಗ್ಗೆ ಇದ್ದ ಅಭಿಮಾನಕ್ಕೆ, ನನ್ನನ್ನು ತಿದ್ದಿ ತೀಡುವ ಆಸೆಗಳಿಗೆ ಭಂಗ ಏರ್ಪಟ್ಟಿತು, ಪುಣೆಯಲ್ಲಿ ಎಸ್ ಎಸ್ ಎಲ್ ಸಿ ವರೆಗೆ ಜಿಲ್ಲಾ ಪರಿಷತ್

ಶಾಲೆಯಲ್ಲಿ ಓದಿದೆನು, ಪ್ರತಿಯೊಂದು ಕ್ಲಾಸಿನಲ್ಲಿ ಒಳ್ಳೆಯ ಅಂಕ ಪಡೆದು ಉತ್ತೀರ್ಣವಾಗುತ್ತಿದ್ದ ನನಗೆ ಏಳನೆಯ ತರಗತಿಯಲ್ಲಿ ಎರಡು ಸಾರಿ ಮಲೇರಿಯಾ ಬಂದು ಎರಡು ತಿಂಗಳು ಹಾಸಿಗೆ ಹಿಡಿದೆನು, ಮುಖದಲ್ಲಿ ಎಡಗಣ್ಣಿಗೆ ಹಾನಿಯಾಯಿತು, ಬಾಯಿ ಎಡಗಡೆ ಎಳೆದಂತಾಗಿ ಒಂದು ವರ್ಷ ವಿದ್ಯಾಭ್ಯಾಸ ನಿಲ್ಲಿಸಿದೆನು, ಓದಿದರೆ ಕಣ್ಣು ಹೋಗುತ್ತದೆ ಎಂದು ಹೇಳಿದರು, ಆಗ ತಂದೆಯವರು ನನ್ನನ್ನು ಕಲ್ಕತ್ತಾಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸಿದರು, ಇನ್ನು 'ತುನಿ'ಗೆ ಕಳಿಸುವುದಿಲ್ಲ ಎಂದು ಬೆಂಗಾಲಿ ಕಲಿಸಿ ತನ್ನ ಬಳಿಯೇ ಇರಿಸಿಕೊಳ್ಳುತ್ತೇನೆ ಎಂದು ಬೆಂಗಾಲಿ ಕಲಿಸಿದರು.

ಆದರೆ ಒಂದು ವರ್ಷ ತಂದೆಯವರ ಬಳಿ ಇದ್ದ ಮೇಲೆ, ಮೊದಲನೆಯ ದೊಡ್ಡಪ್ಪ ಬಂದು, "ಈ ಸಾರಿ ನಾನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತೇನೆ" ಎಂದು ನಮ್ಮ ತಂದೆಯವರಿಗೆ ಮಾತು ಕೊಟ್ಟು ನನ್ನನ್ನು ಮತ್ತೆ ಆಂಧ್ರಕ್ಕೆ ಕರೆದುಕೊಂಡು ಬಂದರು, ಹಾಗೆ ಎರಡನೆಯ ಪ್ರಮಾದದಿಂದ ಹೊರಬಂದು ಮತ್ತೆ ಆಂಧ್ರಕ್ಕೆ ಬಂದು ವಿದ್ಯಾಭ್ಯಾಸ ಮುಂದುವರಿಸಿದೆನು, ಯಾವಾಗಲೂ ಮನೆಯಲ್ಲಿ ಎಲ್ಲರೊಂದಿಗೆ ಸ್ನೇಹದಿಂದ ಇರುತ್ತಾ ಕೀಟಲೆ ಮಾಡುತ್ತಾ ಆನಂದದಿಂದ ಇರುತ್ತಿದ್ದೆವು ಎಸ್ ಎಸ್ ಎಲ್ ಸಿ ಯಲ್ಲಿ ಇರುವಾಗ ಒಂದು ಬಾರಿ ಅರ್ಧ ವಾರ್ಷಿಕ ಪರೀಕ್ಷೆಯ ವಿಜ್ಞಾನ ವಿಷಯದಲ್ಲಿ ಯಾವುದೂ ಬಿಡದಂತೆ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಬರೆದಿದ್ದೆನು, ಅದಕ್ಕೆ ನಮ್ಮ ವಿಜ್ಞಾನದ ಶಿಕ್ಷಕರು "ನಿನಗೆ ಅತೀ ಬುದ್ಧಿವಂತಿಕೆ ಜಾಸ್ತಿಯಾಗಿದೆ" ನಾನು ನೋಡದೆ ನಿನಗೆ ಅಧಿಕ ಅಂಕಗಳನ್ನು ಹಾಕುತ್ತೇನೆ ಎಂದು ಕೊಂಡೆಯಾ? ಎಂದು ಬೈದರು. ಅವರು ಹಾಗೆ ಎಲ್ಲರ ಮುಂದೆ ಅವಮಾನಿಸಿದ್ದಕ್ಕೆ ಆತನ ಕಡೆಗೆ ಯಾವಾಗಲೂ ದುರುಗುಟ್ಟಿಕೊಂಡು ನೋಡುತ್ತಿದ್ದೆನು.

1969 ನೆಯ ವರ್ಷ ಎಸ್ ಎಸ್ ಎಲ್ ಸಿ ಓದುತ್ತಿರುವಾಗ ಗಾಂಧಿಯವರ 100 ವರ್ಷಗಳ ಆಚರಣೆ ಭಾರತ ಎಲ್ಲಾ ಆಚರಿಸಿತು, ಎಲ್ಲಾ ಶಾಲೆಗಳಂತೆಯೇ ನಮ್ಮ ಶಾಲೆಯಲ್ಲೂ ಸಂದೇಶಗಳು, ಚರ್ಚಾ ಸ್ಪರ್ಧೆ ನಡೆಸಲು ಸೂಚನೆ ಬಂದಿತು, ಆಗ ಮುಖ್ಯೋಪಾಧ್ಯಾಯರು ನಮ್ಮ ಶಿಕ್ಷಕರನ್ನು ಸಭೆಯಲ್ಲಿ ದಿನವೂ ಗಾಂಧೀಜಿ ಬಗ್ಗೆ ಒಬ್ಬರನ್ನು ಮಾತನಾಡಿಸಿ ಎಂದು ಹೇಳಿದರು, ಮೊಟ್ಟ ಮೊದಲನೆಯ ದಿನ ನನಗೆ ತಿಳಿಯದಂತೆ ನಮ್ಮ ವಿಜ್ಞಾನದ ಶಿಕ್ಷಕರು ನನ್ನ ಹೆಸರು ಪ್ರಕಟಿಸಿದರು, ನಾನು ಕಂಪಿಸಿ ವೇದಿಕೆ ಮೇಲೆ ಹೋಗುತ್ತಾ "ಗಾಂಧಿಯವರ ಬಗ್ಗೆ ಏನು ಹೇಳಬೇಕು"? ಎಂದು ಆಲೋಚಿಸಿದೆನು, ತಕ್ಷಣ ಒಂದು ಕ್ಷಣದಲ್ಲಿ ನನಗೆ ಏಳನೇ ತರಗತಿಯಲ್ಲಿ ಗಾಂಧೀಜಿಯವರ ಪಾಠ ನೆನಪಿಗೆ ಬಂದು, ಅದರಲ್ಲಿದ್ದ ಕೆಲವು ವಿಷಯಗಳು ನನಗೆ ಇಷ್ಟವಾದದ್ದು ವೇದಿಕೆ ಮೇಲೆ ಹೇಳಿದೆನು.

ಅದರಲ್ಲಿ ಗಾಂಧೀಜಿಯವರು ಯಾವಾಗಲೂ ಸತ್ಯವನ್ನೇ ಹೇಳುತ್ತಿದ್ದರೆಂದು ಅವರಿಗೆ ಸತ್ಯ ಹರಿಶ್ಚಂದ್ರ ಆದರ್ಶವೆಂದು, ಅವರು ಯಾವಾಗಲೂ ಶಾಖಾಹಾರ ಭುಜಿಸುತ್ತಿದ್ದರೆಂದು  ಅವರು ಶಾರೀರಿಕವಾಗಿ ತುಂಬಾ ತೆಳ್ಳಗಿದ್ದರು ಎಂದು ಹೇಳಿದನು, ಗಾಂಧಿಯವರು ವೈಶ್ಯ ಕುಟುಂಬದಲ್ಲಿ ಹುಟ್ಟಿದ ಕಾರಣ ಯಾವಾಗಲೂ ಮಾಂಸಾಹಾರ ತಿನ್ನಲಿಲ್ಲ ಆದರೆ ಒಂದು ಬಾರಿ ಒಬ್ಬ ಸ್ನೇಹಿತ ತುಂಬಾ ಶಕ್ತಿ ಬರುತ್ತದೆ ಎಂದು ಬಲವಂತ ಮಾಡಿದ್ದರಿಂದ ಮೇಕೆ ಮಾಂಸ ತಿಂದಿದ್ದರಿಂದ ಆ ರಾತ್ರಿಯೆಲ್ಲ ಅವರು ತುಂಬಾ ನೋವು ಅನುಭವಿಸಿದರಂತೆ ಮೇಕೆ ಗಾಂಧಿಯವರ ಹೊಟ್ಟೆಯಲ್ಲಿ ಮ್ಯಾ, ಮ್ಯಾ, ಎಂದು ಅಳುತ್ತಾ ಕಿರುಚುತ್ತಾ ಇರುವಂತೆ ಅನಿಸಿತಂತೆ, ಅವರು ಬೆಳಿಗ್ಗೆ ಎದ್ದು ಅವರ ತಂದೆಗೆ ನಡೆದಿದ್ದೆಲ್ಲ ಹೇಳಿ, ಕ್ಷಮಿಸಿ ಎಂದು ಚೀಟಿ ಬರೆದು ಮೇಜಿನ ಮೇಲೆ ಇಟ್ಟರಂತೆ. ಅವರು ಹಾಗೆ ತಪ್ಪು ಮಾಡಿದರು ಆ ತಪ್ಪು ತಿಳಿದುಕೊಂಡು ಇನ್ನು ಯಾವಾಗಲೂ ಮಾಂಸ ಮುಟ್ಟುವುದಿಲ್ಲ ಎಂದು ತಂದೆಗೆ ಮಾತುಕೊಟ್ಟು ಆ ಮಾತಿನ ಮೇಲೆ ಇದ್ದರಂತೆ.

ಗಾಂಧೀಜಿಯವರು ವಿದೇಶಗಳಿಗೆ ಹೋದಾಗ ಅವರಿಗೆ ಅವರ ತಾಯಿ ಏನು ಹೇಳಿದರು ಅಂದರೆ "ನೀನು ಪರಸ್ತ್ರೀಯಲ್ಲಿ ತಾಯಿಯನ್ನು, ತಂಗಿಯನ್ನು ನೋಡು ಭಾರತ ದೇಶದಲ್ಲಿ ಹುಟ್ಟಿದ್ದೀಯಾ, ಅಂತಹ ದೇಶದಲ್ಲಿ ಹುಟ್ಟಿದ ನೀನು ವಿದೇಶಗಳಿಗೆ ಹೋಗಿ ಮದ್ಯಪಾನ ಮಾಡುವುದಿಲ್ಲವೆಂದು, ಮಾಂಸ ತಿನ್ನುವುದಿಲ್ಲವೆಂದು, ಪರಸ್ತ್ರೀಯರೊಂದಿಗೆ ಪರಿಚಯ ಮಾಡಿಕೊಳ್ಳುವುದಿಲ್ಲವೆಂದು" ಮಾತು ನೀಡಿದರೆ ನಿನಗೆ ವಿದೇಶಕ್ಕೆ ಹೋಗಲು ಅನುಮತಿ ನೀಡುತ್ತೇನೆ, ಎಂದಾಗ ಗಾಂಧೀಜಿ ಒಪ್ಪಿಕೊಂಡು ತಾಯಿಗೆ ಪ್ರಮಾಣ ಮಾಡಿ ವಿದೇಶಕ್ಕೆ ಪ್ರಯಾಣ ಬೆಳೆಸಿದರಂತೆ, ಹಾಗೆ ಈ ಮೂರು ವಿಷಯಗಳು ನಾನು ವೇದಿಕೆ ಮೇಲೆ ಹೇಳಿದಾಗ ನಮ್ಮ ಮುಖ್ಯೋಪಾಧ್ಯಾಯರು ನನ್ನನ್ನು ದಿನವೂ ಗಾಂಧಿಯವರ ಬಗ್ಗೆ ಸ್ವಲ್ಪ ಸ್ವಲ್ಪ ಹೇಳಲು ತಿಳಿಸಿ ನನಗೆ ಒಂದು ಪುಸ್ತಕ ಕೊಟ್ಟು ಓದಲು ಹೇಳಿದರು, ಅವತ್ತಿನಿಂದ ನಾನು ಗಾಂಧೀಜಿಯವರ ಅಭಿಮಾನಿಯಾದೆನು, ಗಾಂಧೀಜಿಯವರು ತಮ್ಮ ಪುಸ್ತಕದಲ್ಲಿ "ನನಗೆ ಯಾವ ಸಮಸ್ಯೆ ಬಂದರೂ ಭಗವದ್ಗೀತೆಯನ್ನು ತೆರೆದು ನೋಡುತ್ತೇನೆ, ನನಗೆ ಅದರಿಂದ ಉತ್ತರ ಬರುತ್ತದೆ" ಎಂದು ಬರೆದಿದ್ದಾರೆ.

ಆ ದಿನ ವಿಜ್ಞಾನದ ಶಿಕ್ಷಕರು ನನ್ನ ಹೆಸರು ಸಭೆಯಲ್ಲಿ ಪ್ರಕಟಿಸದಿದ್ದರೆ, ನನಗೆ "ವೇದಿಕೆ ಭಯ" ಹೋಗುತ್ತಿರಲಿಲ್ಲ, ಅವರ ಕಾರಣವಾಗಿ ನನಗೆ ಹತ್ತು ಜನರ ಮುಂದೆ ಮಾತನಾಡುವ ಧೈರ್ಯ ಬಂದಿತು, ಯಾವ ಭಯವೂ ಇಲ್ಲದೆ ಮಾತನಾಡುತ್ತಿದ್ದೆ, ಪತ್ರೀಜಿಯವರ ಪರಿಚಯವಾದ ಮೇಲೆ ತಿಳಿಯಿತು  "ಏನು ನಡೆದರೂ ಅದು ನಮ್ಮ ಒಳ್ಳೆಯದಕ್ಕೆ" ಎಂದು, ನಂತರ ಅದರ ಬಗ್ಗೆ ಅರಿವು ಉಂಟಾಯಿತು.

ನಾನು ಮತ್ತೆ ಕಾಲೇಜಿಗೆ ಹೋಗಲು ವಿಜಯನಗರಕ್ಕೆ ಬಂದೆನು, ನನಗೆ ಗಣಿತ ತುಂಬಾ ಇಷ್ಟವಾದ ವಿಷಯ, ಆದರೆ ತಂದೆಯವರು ನನ್ನನ್ನು ವೈದ್ಯ ಮಾಡಬೇಕೆಂದು ಬೈ.ಪಿ.ಸಿಯಲ್ಲಿ ಸೇರಿಸಿದರು. ತಂದೆಯವರ ಕಾರಣದಿಂದ ಅದನ್ನೇ ತೆಗೆದುಕೊಳ್ಳಬೇಕಾಯಿತು. ನಾನು ಹೇಗಾದರೂ ಉತ್ತೀರ್ಣ ಆಗುತ್ತೇನೆ ಎಂದು ತಂದೆಯವರು ಬನಾರಸ್ ನಲ್ಲಿ ಓದಿಸಲು ಸ್ನೇಹಿತರ ಮೂಲಕ ಸೀಟ್ ರಿಸರ್ವೇಶನ್ ಮಾಡಿಸಿದರು, ಆದರೆ ತಾನೊಂದು ಬಗೆದರೆ ದೈವವೊಂದು ಬಗೆಯಿತು ಎನ್ನುವಂತೆ ನಾನು ಹೀಗೆ ಆಧ್ಯಾತ್ಮಿಕತೆಯೊಳಗೆ ಬರಬೇಕೆಂದು ಇತ್ತೇನೋ, ಸರಿಯಾಗಿ ನನ್ನ ಪರೀಕ್ಷೆಯ ಸಮಯಕ್ಕೆ ಅಣ್ಣ, ಅತ್ತಿಗೆ ನಿದ್ರೆ ಮಾತ್ರೆ ನುಂಗಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದರು, ಆಗ ನಾನು ಚಿಕ್ಕಪ್ಪ ಇಬ್ಬರೇ ಇದ್ದೆವು ಅವರನ್ನು ಆಸ್ಪತ್ರೆಗೆ ಸೇರಿಸಿದ್ದೆವು ಪರೀಕ್ಷೆಗಳು ನಡೆಯುವ ಇಡೀ ವಾರವೆಲ್ಲ ಮನೆಯು ಬಂಧುಗಳಿಂದ ತುಂಬಿ, ಪದೇ ಪದೇ ಆ ಘಟನೆ ನೆನಪಿಗೆ ಬರುತ್ತಿದ್ದ ಕಾರಣ ಪರೀಕ್ಷೆಗಳು ಸರಿಯಾಗಿ ಬರೆಯಲಿಲ್ಲ ಪಿಯುಸಿ ಅನುತ್ತೀರ್ಣನಾದೆನು, ಆಗ ದೊಡ್ಡಪ್ಪನವರು "ಇವಳಿಗೆ ಮದುವೆ ಮಾಡಿ ಬಿಡೋಣ" ಎಂದು ಹೇಳಿ ವಿದ್ಯಾಭ್ಯಾಸ ಬಿಡಿಸಿ "ತುನಿ"ಗೆ ಕರೆದುಕೊಂಡು ಬಂದರು.



**ನನ್ನ ತಾಯಿ ತಂದೆಯವರು**

**ಶ್ರೀ ಗುಂಡಾ ಸತ್ಯನಾರಾಯಣ ಮೂರ್ತಿ, ಶ್ರೀಮತಿ ರತ್ನಾವತಿಯವರು**

# ಬಾಲ್ಯ

ಚಿಕ್ಕಂದಿನಿಂದಲೂ ಒಟ್ಟು ಕುಟುಂಬದಲ್ಲಿ ಇದ್ದುದರಿಂದ ದೊಡ್ಡಪ್ಪನವರ ಮಕ್ಕಳು ನಾನು, ನನ್ನ ಸ್ವಂತ ಅಣ್ಣ ತಮ್ಮಂದಿರು, ಅಕ್ಕ ತಂಗಿಯರಂತೆ ಅನ್ಯೋನ್ಯವಾಗಿ ಇರುತ್ತಿದ್ದೆವು. ಯಾವಾಗಲೂ ಆಟಪಾಠಗಳಲ್ಲಿ ಎಂಟು ಮಂದಿ ಮಕ್ಕಳೊಂದಿಗೆ ಸಂತಸ ಸಂಭ್ರಮಗಳಿಂದ ಇರುತ್ತಿತ್ತು.

ಬಾಲ್ಯವೆಲ್ಲಾ, ಆಟ ಪಾಠಗಳೊಂದಿಗೆ ಕಳೆಯುತ್ತಿದ್ದೆವು, ಪ್ರತಿ ಹಬ್ಬವೂ ಸಂಭ್ರಮದಿಂದ ಇರುತ್ತಿತ್ತು, ರೊಟ್ಟಿಹಬ್ಬ ಬಂತೆಂದರೆ ಹಿಂದಿನ ದಿನವೇ ಮೆಹೆಂದಿ ಹಾಕಿಕೊಳ್ಳುವುದು, ರಾತ್ರಿಯೆಲ್ಲ ಆಟವಾಡಿ ಉಯ್ಯಾಲೆಯಲ್ಲಿ ತೂಗಿ ಬೆಳಗಿನ ಜಾವ ನದಿಗೆ ಹೋಗಿ ನಕ್ಷತ್ರಗಳನ್ನು ನೋಡಿ, ತದಿಗೆಯಂದು ಪೂಜೆ ಮಾಡುತ್ತಿದ್ದೆವು, ಹಾಗೆ ಮಾಡಿದರೆ ಒಳ್ಳೆಯ ಗಂಡ ಬರುತ್ತಾನೆಂದು ಹಿರಿಯರು ನಮ್ಮಿಂದ ಮಾಡಿಸುತ್ತಿದ್ದರು.

ವಿನಾಯಕ ಚೌತಿ ಬಂದರೆ ವಿಧವಿಧವಾದ ಹೂಗಳು, ಪತ್ರೆಗಳನ್ನು ಶೇಖರಿಸಿ ಪೂಜೆ ಮಾಡುತ್ತಿದ್ದೆವು, ದಸರಾ ಬಂದರೆ ಶಾಲೆ ಮಕ್ಕಳು, ಶಿಕ್ಷಕರು ಎಲ್ಲರೂ ಒಂದಾಗಿ ಎಲ್ಲರ ಮನೆಗಳಿಗೂ ಹೋಗಿ ಹಾಡುಗಳನ್ನು ಹಾಡಿ, ಕಡಲೆ, ಬೆಲ್ಲವನ್ನು ತಿನ್ನುತ್ತಿದ್ದೆವು, ಸಂಕ್ರಾಂತಿಯ ತಿಂಗಳು ಪೂರಾ ದಿನವೂ ದೊಡ್ಡ ದೊಡ್ಡ ರಂಗೋಲಿ ಮನೆ ಮುಂದೆ ಹಾಕಿ, “ನಿಮಗಿಂತ ನಾವು ದೊಡ್ಡ ರಂಗೋಲಿ ಹಾಕಿದ್ದೇವೆ” ಎಂದು ನೆರೆಹೊರೆಯವರೊಂದಿಗೆ ಪೈಪೋಟಿಗೆ ಇಳಿಯುತ್ತಿದ್ದೆವು. ಯುಗಾದಿ ಹಬ್ಬ ಬರುತ್ತದೆ ಎಂದರೆ ಸಾಕು ತಿಂಗಳ ಆರಂಭದಿಂದಲೇ ಬೆಳಗಿನ ಜಾವ ನೂಕಾಲಮ್ಮ ಅಮ್ಮನವರ ದೇವಾಲಯದ ಪ್ರಾಂಗಣವೆಲ್ಲಾ ತೊಳೆದು ರಂಗೋಲಿ ಹಾಕುತ್ತಿದ್ದೆವು, ಆಗ ಯಾವ ಕೆಲಸ ಏಕೆ ಮಾಡುತ್ತಿದ್ದೇವೆ ಎಂದು ತಿಳಿಯುತ್ತಿರಲಿಲ್ಲ, ಅದೆಲ್ಲಾ ಆಚಾರಗಳು ಎಂದು ಮಾಡಿಸುತ್ತಿದ್ದರು. ನಮಗೂ ಕೂಡ ಆ ಕೆಲಸಗಳೆ ಇಷ್ಟವಾಗುತ್ತಿತ್ತು, ನಾಗರ ಪಂಚಮಿ ಬಂದಿತೆಂದರೆ, ಎತ್ತಿನ ಗಾಡಿ ಹತ್ತಿ ದೂರದಲ್ಲಿರುವ ಹೊಲಕ್ಕೆ ಹೋಗಿ ಹುತ್ತಕ್ಕೆ ಹಾಲೆರೆದು ಬರುತ್ತಿದ್ದೆವು.

ನಮಗೆ ದೇವರೆಂದರೆ ಅರ್ಥ ಗೊತ್ತಿರಲಿಲ್ಲ, ಪೂಜೆಗಳಿಗೆ ಅರ್ಥವೇನೆಂದು ಗೊತ್ತಿಲ್ಲ, “ಹೀಗೆ ಮಾಡಬೇಕು” ಎಂದರೆ ಹಾಗೆ ಮಾಡುತ್ತಿದ್ದೆವು, ಇಂತಹ ಆಚಾರದಿಂದ ದೇವರು ನಮ್ಮನ್ನು ಚೆನ್ನಾಗಿ ಕಾಪಾಡುತ್ತಾನೆ ಎಂದು ಹಿರಿಯರು ಹೇಳುತ್ತಿದ್ದರು, ಆದರೆ ಹಿರಿಯರ ವಿವರಣೆ ನನಗೆ ತೃಪ್ತಿ ನೀಡುತ್ತಿರಲಿಲ್ಲ, ಪೂಜೆ ಮಾಡುವವರೆಲ್ಲಾ ಏಕೆ ಆನಂದವಾಗಿ

ಇಲ್ಲ? ಏಕೆ ಹೀಗೆ ಅನಿಸುತ್ತಿತ್ತು, ಆದರೆ ಹಬ್ಬದ ದಿನ ದೇವಸ್ಥಾನಕ್ಕೆ ಹೋಗಿ ತೆಂಗಿನಕಾಯಿ, ಬಾಳೆಹಣ್ಣು ಕೊಟ್ಟು ಹುಂಡಿಯಲ್ಲಿ ಹಣ ಹಾಕುವುದು ಕೋರಿಕೆಗಳು ಕೋರುವುದನ್ನು ಮಾಡುತ್ತಿದ್ದೆವು.

ಪತ್ರೀಜಿಯವರು ಪರಿಚಯವಾದ ಮೇಲೆ ಗೊತ್ತಾಗಿದ್ದು "ಕೇಳಿಕೊಂಡರೆ ಏನೂ ಬರುವುದಿಲ್ಲ ಶ್ರಮ ವಹಿಸಿದರೆ ಮಾತ್ರ ಬರುತ್ತದೆ" ಎಂದು.

ನನಗೆ ಚಿಕ್ಕಂದಿನಿಂದಲೂ ಯಾರ ಮನಸ್ಸನ್ನು ನೋಯಿಸುವುದು ಹಿಡಿಸುತ್ತಿರಲಿಲ್ಲ, ಎಲ್ಲರಿಗೂ ಸಹಾಯ ಮಾಡಬೇಕು ಎನಿಸುತ್ತಿತ್ತು ಚಿಕ್ಕಂದಿನಿಂದಲೂ ದೊಡ್ಡಮ್ಮನವರಿಗೆ ಎಲ್ಲಾ ಕೆಲಸದಲ್ಲಿ ಸಹಾಯ ಮಾಡುತ್ತಿದ್ದೆನು ಹಾಗೆ ಮಾಡುವುದರಿಂದ ಯಾವ ಕೆಲಸ ಹೇಗೆ ಮಾಡಬೇಕೋ, ಹೇಗೆ ಮಾಡಿದರೆ ಬೇಗ ಆಗುತ್ತದೋ ಚೆನ್ನಾಗಿ ಅರ್ಥವಾಯಿತು. ಚಿಕ್ಕಂದಿನಲ್ಲಿ ಹಾಗೆ ಚಿಕ್ಕ ಚಿಕ್ಕ ಕೆಲಸದಲ್ಲಿ ಸಹಾಯ ಮಾಡಿದ್ದರಿಂದ, ಈಗ ಏನು ಕೆಲಸ ಮಾಡಬೇಕೆಂದರೂ ಭಯವಾಗುವುದಿಲ್ಲ, ಚಿಕ್ಕಂದಿನಲ್ಲಿ ಹೈಸ್ಕೂಲಿನಲ್ಲಿದ್ದಾಗ "ತ್ರೋಬಾಲ್" ಆಡುತ್ತಿದ್ದೆ, ಮನೆಯಲ್ಲಿ ಅಣ್ಣಂದಿರ ಜೊತೆ ಯಾವಾಗಲೂ ಕೇರಮ್ ಆಡುತ್ತಿದ್ದೆ.

'ನನಗೆ ವೆಂಕಟೇಶ್ವರ ಸ್ವಾಮಿ' ಎಂದರೆ ತುಂಬಾ ಇಷ್ಟ, ಚಿಕ್ಕಂದಿನಲ್ಲಿ ಆನಂದವಾದರೂ ಸಂಕಟವಾದರೂ ವೆಂಕಟೇಶ್ವರ ಸ್ವಾಮಿ ಫೋಟೋ ಬಳಿಗೆ ಹೋಗಿ ಮಾತನಾಡುತ್ತಿದ್ದೆ, "ಅಮ್ಮ ಹತ್ತಿರ ಇರಲಿಲ್ಲ"! ಅದಕ್ಕಾಗಿ ಅಮ್ಮನಿಗೆ ಹೇಳಬೇಕಾದ್ದನ್ನೆಲ್ಲ ದೇವರಿಗೆ ಹೇಳುತ್ತಿದ್ದೇನೆ, ಅಂದುಕೊಳ್ಳುತ್ತಿದ್ದೆ ನನಗೆ ಚಿಕ್ಕವಳಿದ್ದಾಗ ಕೋಪದಿಂದ ಇರುವವರನ್ನು ಕಂಡರೆ ಇಷ್ಟವಾಗುತ್ತಿರಲಿಲ್ಲ, ದೊಡ್ಡಪ್ಪನವರಿಗೆ ಕೋಪ ಜಾಸ್ತಿ, ಎಲ್ಲರೂ ಅವರಿಗೆ ಭಯ ಪಡುತ್ತಿದ್ದರು, ನಾನು ಮಾತ್ರ ಇಷ್ಟು ಚಿಕ್ಕ ತಪ್ಪಿಗೆ ಹಾಗೆ ಬೈಯುತ್ತಾರಾ ಎಂದು ಕೇಳುತ್ತಿದ್ದೆ, ಆದರೆ ನನ್ನನ್ನು ಮಾತ್ರ ಏನೂ ಬೈಯುತ್ತಿರಲಿಲ್ಲ, ಎಲ್ಲರಿಗಿಂತ ಚೆನ್ನಾಗಿ ಓದುತ್ತೇನೆ ಎಂದು ಸ್ವಲ್ಪ ಹೆಚ್ಚು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು.

# ವಿವಾಹ

ನನ್ನ ವಿವಾಹ ರಾಘವರಾವ್ ಅವರೊಂದಿಗೆ 1972 ಫೆಬ್ರವರಿ 14 ರಂದು ನಡೆಯಿತು, ರಾಘವರಾವ್ ರವರಿಗೆ ಅಕ್ಕ, ಇಬ್ಬರು ತಂಗಿಯಂದಿರು, ಒಬ್ಬ ತಮ್ಮ ಇದ್ದರು, ರಾಘವರಾವ್ ಎಂದರೆ ಅವರ ತಂದೆ, ತಾಯಿಯವರಿಗೆ ತುಂಬಾ ಇಷ್ಟ. ಇವರು ಹುಟ್ಟುವ ಮೊದಲು ಒಂದು ಗಂಡು ಮಗು ಹುಟ್ಟಿ ಸತ್ತು ಹೋಗಿದ್ದರಿಂದ ತುಂಬಾ ಮುದ್ದಿನಿಂದ ಬೆಳೆಸಿದ್ದರು, ರಾಘವರಾವ್ ರವರಿಗೆ ಚಿಕ್ಕಂದಿನಿಂದಲೂ ಪರಿಶ್ರಮವುಳ್ಳ ವ್ಯಕ್ತಿತ್ವ ಅವರ ತಂದೆ, ತಾತನವರ ಪ್ರಭಾವ ಅವರ ಮೇಲೆ ಅಧಿಕವಾಗಿದ್ದು. ತಾತನವರಂತೆ ದಾನ ಧರ್ಮಗಳು ಮಾಡುವುದು, ತಂದೆಯಂತೆ ವ್ಯಾಪಾರದಕ್ಷತೆ, ಪ್ರಾಮಾಣಿಕತೆ ಬಂದಿತು. ತಾತ ಕೃಷ್ಣಮೂರ್ತಿಯವರು ಸ್ವಾತಂತ್ರ ಸೇನಾನಿ, ರಾಘವರಾವ್ ರವರ ತಂದೆ ಮುನಿಸಿಪಲ್ ಚೇರ್ಮೆನ್ ಆಗಿ, ಚೇಂಬರ್ ಆಫ್ ಕಾಮರ್ಸ್ ಪ್ರೆಸಿಡೆಂಟ್ ಆಗಿ ಕೆಲಸ ಮಾಡಿದರು, ರಾಜಕೀಯ ವಿಷಯಗಳು ತಾತ ಮತ್ತು ತಂದೆ ಅವರಿಂದ ಕಲಿತುಕೊಂಡರು, ಇವರೂ ಸಹ ಚೇಂಬರ್ ಪ್ರೆಸಿಡೆಂಟ್ ಆಗಿ, ರೈಸ್ ಮಿಲ್ ಸೆಕ್ರೆಟರಿ ಆಗಿ ಎಷ್ಟೋ ಪದವಿಗಳನ್ನು ಅಲಂಕರಿಸಿದರು.

ಅವರಿಗೆ "ಸೇವೆ ಮಾಡುವುದು" ಎಂದರೆ ತುಂಬಾ ಇಷ್ಟವಿತ್ತು. ಹಾಗಾಗಿ ಮನೆಯಲ್ಲೇ ಉಚಿತ ಹೋಮಿಯೋಪತಿ ವೈದ್ಯಶಾಲೆ ಇಟ್ಟರು, ಅವರಿಗೆ ಯಾರಿಗಾದರೂ ಸಹಾಯ ಮಾಡಬೇಕು ಎಂದರೆ ತುಂಬಾ ಇಷ್ಟ ಇವರ ಕುಟುಂಬದಲ್ಲಿ ಎಲ್ಲರಿಗೂ ಸಹಾಯ ಮಾಡುವ ಗುಣವಿತ್ತು.

ಇವರ ಅಕ್ಕನವರು 'ನೂಲಿಲಕ್ಷ್ಮಿ' ಅವರು ಕೂಡ ಮಹಿಳಾ ಅಧ್ಯಕ್ಷೆ ಆಗಿ ಎಷ್ಟೋ ಸೇವಾ ಕಾರ್ಯಕ್ರಮಗಳು ಮಾಡುತ್ತಾ ಎಷ್ಟೋ ಜನರಿಗೆ ಸಂಗೀತ ಕಲಿಸುತ್ತಿದ್ದರು, ಇವರತಮ್ಮ ಕೂಡ ವೈದ್ಯರಾಗಿ ಎಷ್ಟೋ ಜನರಿಗೆ ಸೇವೆ ಮಾಡಿದ್ದಾರೆ, ಅವರ ತಂಗಿಯಂದಿರು ಒಳ್ಳೆಯ ವಿದ್ಯಾಭ್ಯಾಸ ಮಾಡಿದ್ದಾರೆ, ನಮ್ಮ ಅತ್ತೆಯವರ ಕುಟುಂಬದಲ್ಲಿ ಎಲ್ಲರೂ ಕೂಡ ಒಳ್ಳೆಯ ವಿದ್ಯಾಭ್ಯಾಸ ಮಾಡಿದ್ದಾರೆ, ಅವರದೂ ಕೂಡ ಆಧ್ಯಾತ್ಮಿಕ ಕುಟುಂಬವೇ.

ನಮ್ಮ ವಿವಾಹವಾದ ಮೂರನೆಯ ದಿನ ಅತ್ತೆ ಮನೆಯಲ್ಲಿ ಕಾಲಿಟ್ಟಾಗ ಏಕೋ.. "ಈ ದಿನದಿಂದ, ಈ ಮನೆಯಲ್ಲಿ ನನ್ನ ಜೀವನ ಕೊನೆಯವರೆಗೂ ಇರಬೇಕು" ಎನಿಸಿತು. ಹಾಗೆ ಏಕೆ ಅನಿಸಿತೋ ನನಗೆ ತಿಳಿಯದು ಆದರೆ ಈಗ ಪತ್ರಿಸಾರ್ ಭೋಧನೆಗಳಿಂದ

ನಾನು ತಿಳಿದುಕೊಂಡಿದ್ದು ಏನೆಂದರೆ, "ಯಾವ ಮನೆಯಲ್ಲಿ ಎಲ್ಲರೂ ಧರ್ಮ ಬದ್ಧವಾಗಿ ಇರುತ್ತಾರೋ  ಪ್ರತಿಫಲ ನಿರೀಕ್ಷಿಸದೆ ಸೇವೆ ಮಾಡುತ್ತಾರೋ.. ಅಲ್ಲಿ ಧನಾತ್ಮಕ ವೈಬ್ರೇಶನ್ಸ್ ಇರುತ್ತವೆ" ಎಂದು ಅವರ ಮನೆಯಲ್ಲಿ ನಿತ್ಯ ಸೇವೆ, ದಾನ ಎರಡೂ ಮಾಡುವುದರಿಂದ ಅಷ್ಟು ವೈಬ್ರೇಶನ್ ಇರುತ್ತಿದ್ದವು. ಅದಕ್ಕೆ ನನಗೆ ಹಾಗೆ ಅನಿಸುತ್ತಿತ್ತು.

ನಮ್ಮ ಮನೆ ಅಷ್ಟು ಉನ್ನತವಾದ ಆಶಯವುಳ್ಳದ್ದು ಆದ್ದರಿಂದ ಪತ್ರೀಜಿಯಂತಹ ಮಹಾನುಭಾವರು ನಮ್ಮ ಮನೆಯಲ್ಲಿ ತಮ್ಮ ಪಾದಸ್ಪರ್ಶ ಮಾಡಿದರು, ಎಂದೆನಿಸಿತು ಒಬ್ಬ ಯೋಗಿ ಮನೆಯಲ್ಲಿ ಕಾಲಿರಿಸಿದರು ಎಂದರೆ ಆ ಮನೆ, ಮನೆಯಲ್ಲಿರುವವರು ಎಷ್ಟು ಪುಣ್ಯಾತ್ಮರಾದರೆ ಇದು ಸಾಧ್ಯವಾಗುತ್ತದೆ, ಇದು ನನಗೆ ಪತ್ರೀಜಿಯವರು ಪರಿಚಯವಾದ ನಂತರ ತಿಳಿಯಿತು.

ನಾನು ಈ ಮನೆಯಲ್ಲಿ ಕಾಲಿಟ್ಟಾಗ ರಾಘವರಾವ್ ರವರ ತಾತ ನನ್ನನ್ನು ಕರೆಯಿಸಿ ಮಾತನಾಡಿದರು ಆ ಮಾತುಗಳು ಈಗಲೂ ನೆನಪಿದೆ "ತಾಯಿ! ನೀನು ಈ ಮನೆಗೆ ಹಿರಿಯ ಸೊಸೆ, ಈ ಮನೆಯ ಪ್ರತಿಷ್ಠೆ ನಿನ್ನ ಕೈಯಲ್ಲಿದೆ, ನೀನು ಹೇಗೆ ಪ್ರವರ್ತಿಸುತ್ತೀಯೋ?" ಎಂದರು, ಆಗ "ನನ್ನಿಂದ ಈ ಕುಟುಂಬಕ್ಕೆ ಯಾವಾಗಲೂ ಯಾವ ಕೆಟ್ಟ ಹೆಸರು ತರುವುದಿಲ್ಲ" ತಾತ ಎಂದು ಮಾತು ಕೊಟ್ಟೆನು, ಅಂದಿನಿಂದ ಯಾವ ಕೆಲಸ ಮಾಡಿದರೂ ಅವರ ಮಾತುಗಳೇ ನನಗೆ ನೆನಪಿಗೆ ಬರುತ್ತವೆ.



'ಯಾವುದರ ಬಗ್ಗೆ ಶ್ರದ್ಧೆ ಇದ್ದರೆ ಅಂತಹ ಜ್ಞಾನ ಬರುತ್ತದೆ'

–ಬ್ರಹ್ಮರ್ಷಿ ಪತ್ರೀಜಿ

# ಸಂಸಾರ

ನಮ್ಮ ವಿವಾಹವಾದ ನಂತರ ಅತ್ತೆಯ ಮನೆಗೆ ಬಂದ ಮೇಲೆ ನಾನು ಹೇಗೆ ಸೇವೆ ಮಾಡಬೇಕೋ ಕಲಿತುಕೊಂಡೆನು, ನಮ್ಮ ಅತ್ತೆ ಯವರಿಂದ ಕೆಲಸದವರನ್ನು ಹೇಗೆ ನೋಡಿಕೊಳ್ಳಬೇಕು? ಅವರಿಗೆ ಹೇಗೆ ಕೊಡಬೇಕು ಕಲಿತುಕೊಂಡೆನು ಮನೆಯಲ್ಲಿ ನಾಲ್ಕು ಎಮ್ಮೆಗಳು ಇದ್ದವು, ಯಾವಾಗಲೂ ಎಲ್ಲರಿಗೂ ಮಜ್ಜಿಗೆ ಹಂಚುತ್ತಿದ್ದರು, ರಾಘವರಾವ್ ರವರ ತಂದೆಯ ತಾಯಿ ಪ್ರತಿ ಶುಕ್ರವಾರ ಮನೆಯಲ್ಲಿ ಭಜನೆಗಳನ್ನು ಹಾಡುತ್ತಿದ್ದರು, ನಾನು ಇವುಗಳನ್ನೆಲ್ಲ ಅವರಿಂದ ಕಲಿತುಕೊಂಡೆನು, ವಿವಾಹವಾದ ಒಂದು ವರ್ಷಕ್ಕೆ ನಮಗೆ ಮಗಳು ಹುಟ್ಟಿದಳು, ನನಗೆ ಹೆಣ್ಣು ಮಕ್ಕಳೆಂದರೆ ತುಂಬಾ ಇಷ್ಟ, ನಮ್ಮವರಿಗೆ ಗಂಡು ಮಕ್ಕಳೆಂದರೆ ಇಷ್ಟ ಅವರು ಮೂರು ಜನ ಗಂಡು ಮಕ್ಕಳು ಬೇಕು ಎಂದುಕೊಂಡರು ಆದರೆ ನನ್ನ ಬಯಕೆಯಂತೆ ಮೊದಲನೆಯ ಮಗು ಹೆಣ್ಣು, ಹೆಸರು "ಶ್ಯಾಮಲ" ಆನಂತರ ಇಬ್ಬರು ಗಂಡು ಮಕ್ಕಳು ದೊಡ್ಡ ಮಗ "ನರಸಿಂಹರಾವ್" ಚಿಕ್ಕಮಗ "ಕಿರಣ್".

ಮೂರೂ ಮಕ್ಕಳೆಂದರೆ ರಾಘವರಾವ್ ರವರಿಗೆ ತುಂಬಾ ಪ್ರೀತಿ ಆದರೂ ಮೇಲೆ ತೋರ್ಪಡಿಸಿ ಕೊಳ್ಳುತ್ತಿರಲಿಲ್ಲ, ಅವರು ಯಾವ ವಿಷಯವನ್ನೂ ತೋರಿಸಿಕೊಳ್ಳುವುದಿಲ್ಲ, ಆದರೆ ಅವರು ಬಯಸಿದ್ದನ್ನು ಕೊಂಡು ತರುತ್ತಿದ್ದರು, ವ್ಯವಹಾರದಲ್ಲಿ ಎಷ್ಟು ಮುಳುಗಿದ್ದರೂ ಮಕ್ಕಳ ವಿದ್ಯಾಭ್ಯಾಸದಲ್ಲಿ ತಮ್ಮ ಗಮನ ಕೊಡುತ್ತಿದ್ದರು, ಹಾಗೆಯೇ ವ್ಯಾಪಾರದಲ್ಲೂ ನಂಬರ್ ಒನ್ ಆಗಿ ಇರಬೇಕು ಎಂದು ಕೋರುತ್ತಿದ್ದರು, ಅವರ ಪರಿಶ್ರಮ ದೃಢ ನಿಶ್ಚಯತೆಯಿಂದ ಆರು ಕಾರ್ಖಾನೆಗಳನ್ನು ನಿರ್ಮಿಸಿದರು, ನಮ್ಮ ವ್ಯಾಪಾರದಲ್ಲೇ ಅಲ್ಲದೆ ಅವರ ಅಕ್ಕ ತಂಗಿಯರ ವ್ಯಾಪಾರಗಳನ್ನು ನೋಡಿಕೊಳ್ಳುತ್ತಿದ್ದರು, ಎಲ್ಲರೂ ಚೆನ್ನಾಗಿರಬೇಕು ಎಂದು ಕೋರಿಕೊಳ್ಳುತ್ತಿದ್ದರು, ಎಲ್ಲರಿಗಾಗಿ ತನ್ನ ಸುಖವನ್ನು ತ್ಯಾಗ ಮಾಡುತ್ತಿದ್ದರು, ನನ್ನನ್ನೂ ತುಂಬಾ ವಿಷಯಗಳಲ್ಲಿ ಪ್ರೋತ್ಸಾಹಿಸುತ್ತಿದ್ದರು. ಯಾವುದಕ್ಕೂ ಒತ್ತಡ ಹೇರುತ್ತಿರಲಿಲ್ಲ, ಹಾಗೆಯೇ ನಮ್ಮ ಮಕ್ಕಳ ವಿಷಯದಲ್ಲೂ ಕೂಡ ಅವರ ನಿರ್ಣಯವೇ ಆದರೂ ಎಲ್ಲರೂ ಚೆನ್ನಾಗಿದ್ದಾರೆ.

ನಾನು ಪತ್ರೀಜಿಯವರನ್ನು ನೋಡದೆಯೇ ಅವರ ಬಗ್ಗೆ ತಿಳಿದುಕೊಂಡೆನು, ನಮ್ಮ ಮಗಳ ಎರಡನೆಯ ಪ್ರಸವದ ಸಮಯದಲ್ಲಿ ಹಾಸ್ಪಿಟಲ್ ನಲ್ಲಿ ಸೇರಿಸಿದ್ದೆವು, ಅರ್ಧ ರಾತ್ರಿ ಎರಡು ಗಂಟೆಗಳಿಗೆ ಶಸ್ತ್ರಚಿಕಿತ್ಸೆ ಮಾಡಲು ನಿರ್ಧರಿಸಿದರು, ಆಗ ನಮ್ಮ ನಾದಿನಿ "ಲೀಲಾ" ಪತ್ರೀಜಿಯವರ ಬಗ್ಗೆ ಹೇಳಿದರು "ಭೀಮವರಂ ತ್ಯಾಗರಾಜ ಭವನದಲ್ಲಿ ಪತ್ರೀಜಿಯವರು

ಕ್ಲಾಸ್ ಹೇಳಲು ಬಂದಿದ್ದು ನಾನು ಅವರ ಕ್ಲಾಸ್ ಕೇಳಿದೆ 'ಧ್ಯಾನ'ದ ಬಗ್ಗೆ ತುಂಬಾ ಚೆನ್ನಾಗಿ ಹೇಳಿದರು" ಎಂದು ಹೇಳಿದಳು, ನಂತರ ನಮ್ಮ ಮಗಳನ್ನು "ಕಣ್ಣು ಮುಚ್ಚಿಕೊಂಡು ಶ್ವಾಸದ ಮೇಲೆ ಗಮನ ಇಡು" "ಯಾವ ಆಯಾಸ ಆಂದೋಳನೆ ಇರುವುದಿಲ್ಲ" ಎಂದು ಹೇಳಿದಳು ನಮ್ಮ ಮಗಳು ಹಾಗೆ ಮಾಡಿದಳು, ಅವಳು ಹೆಣ್ಣು ಮಗುವೇ ಬೇಕೆಂದುಕೊಂಡಿದ್ದಳು ಅದರಂತೆ ನಮ್ಮ ಮೊಮ್ಮಗಳು 'ಸ್ನೇಹಿತ'ಹುಟ್ಟಿದಳು, ನಾವು ಅವಳನ್ನು ಅದೃಷ್ಟವಂತೆ ಎಂದುಕೊಳ್ಳುತ್ತೇವೆ, ಮೊದಲನೆಯ ಮಗು ಗಂಡಾದರಿಂದ ಆನಂತರ ನಮ್ಮ ನಾದಿನಿ ದಿನವೂ ಪತ್ರೀಜಿಯವರ ಸಿ.ಡಿ "ಧ್ಯಾನದಿಂದ ಲಾಭಗಳು" ಕೇಳಿಸಿದರು ಹಾಗೆಯೇ ಪತ್ರೀಸಾರ್ ಅನ್ನು ನೋಡದೆಯೇ 'ಧ್ಯಾನ'ವನ್ನು ತಿಳಿದುಕೊಂಡೆನು, ಆದರೆ ನನಗೆ 'ಧ್ಯಾನ'ದ ಮೇಲೆ ಆಸಕ್ತಿ ಇಲ್ಲದೇ 'ಧ್ಯಾನ' ಮಾಡುತ್ತಿರಲಿಲ್ಲ.



**ನನ್ನ ಮಾವನವರು, ಅತ್ತೆಯವರು**

## ದಿವಂಗತ ತಟವರ್ತಿ ನರಸಿಂಹರಾವ್, ಶ್ರೀಮತಿ ಶ್ಯಾಮಲಾರವರು

# ದೈವಮಂದಿರದಲ್ಲಿ 'ಧ್ಯಾನ' ಮಂದಿರ

ರಾಘವರಾವ್‌ರವರು ವೆಂಕಟೇಶ್ವರ ಸ್ವಾಮಿ ಭಕ್ತರು, ಭೀಮವರಂನಲ್ಲಿ ವೆಂಕಟೇಶ್ವರ ಸ್ವಾಮಿ ಮಂದಿರ ಕಟ್ಟಿಸಿದರು, ಅವರ ತಂದೆ ತೀರಿ ಹೋಗಿದ್ದರಿಂದ ಅವರ ಹೆಸರಲ್ಲಿ ಯಾವುದೋ ಒಂದು ಇರಬೇಕು, ಅದು ಎಲ್ಲರಿಗೂ ಉಪಯೋಗವಾಗಬೇಕು ಎಂದು ಆಲೋಚಿಸಿ ನಮ್ಮ ರೈಸ್ ಮಿಲ್ ಪ್ರಾಂಗಣದಲ್ಲಿ ಮಂದಿರವನ್ನು ಕಟ್ಟಿಸಿದರು, ರೈಸ್ ಮಿಲ್ ಕಾರ್ಮಿಕರು ಎಲ್ಲರೂ ದಿನವೂ ದರ್ಶನ ಮಾಡಬೇಕೆಂಬುದು ಅವರ ಉದ್ದೇಶ.

ನಾವು ಪ್ರತಿ ವರ್ಷ ತಿರುಪತಿಗೆ ಹೋಗುತ್ತಿದ್ದೆವು, ಅಲ್ಲಿ ವೆಂಕಟೇಶ್ವರ ಸ್ವಾಮಿ 'ಧ್ಯಾನ' ಮಂದಿರ ನೋಡಿದೆವು, ಆಗ ಅವರಿಗೆ ನಾವು ಕೂಡ 'ಭೀಮವರಂ' ನಲ್ಲಿ ಒಂದು 'ಧ್ಯಾನ' ಮಂದಿರ ಕಟ್ಟಿದರೆ ಚೆನ್ನಾಗಿರುತ್ತದೆ ಎಂದುಕೊಂಡು ಕಟ್ಟಿಸಿದರು, ನನಗೆ ಅಲ್ಲಿಯವರೆಗೂ 'ಧ್ಯಾನ'ವೆಂದರೆ ತಿಳಿಯದು, ಆದರೆ ನಮ್ಮವರಿಗೆ ಮಾತ್ರ 'ಧ್ಯಾನ' ಕಲಿತುಕೊಳ್ಳಬೇಕು ಎನ್ನುವ ಆಶಯವಿತ್ತು, ನನಗಾದರೆ ಯಾವ ಇಚ್ಛೆಯೂ ಇರಲಿಲ್ಲ, ಅವರು ಮೊದಲು ಯಾವ ಕೆಲಸ ಮಾಡಿದರೂ ನಾನು ಮೊದಲು ಬೇಡ ಎಂದೇ ಹೇಳುತ್ತಿದ್ದೆ, ಆದರೆ ಅವರು 'ಧ್ಯಾನ'ಮಾಡುತ್ತೇನೆ ಎಂದಾಗ ನಾನು ಏನೂ ಮಾತನಾಡಲಿಲ್ಲ ಏಕೆಂದರೆ, ಅವರು ಏನು ಮಾಡಿದರೂ ಎಲ್ಲರಿಗೂ ಉಪಯೋಗವಾಗುವ ಒಳ್ಳೆಯ ಕೆಲಸ ಮಾಡುತ್ತಾರೆಂದು ತಿಳಿದಿತ್ತು. ಅವರು ಹಾಗೆ 'ಧ್ಯಾನಮಂದಿರ' ಕಟ್ಟಿ ಎಲ್ಲರಿಗೂ 'ಧ್ಯಾನ' ಕಲಿಸಬೇಕೆಂದುಕೊಂಡರು. ಕೆಲವರು ಯೋಗ ಗುರುಗಳನ್ನು ಆಹ್ವಾನಿಸಿ 'ಧ್ಯಾನ'ಹೇಳಿಸುತ್ತಿದ್ದರು, ಆದರೆ ನನಗಾಗಲಿ ಅವರಿಗಾಗಲಿ ಎಷ್ಟು ದಿನಗಳು ಕೇಳಿದರೂ 'ಧ್ಯಾನ'ದ ಬಗ್ಗೆ ಸರಿಯಾಗಿ ಅರ್ಥವಾಗುತ್ತಿರಲಿಲ್ಲ, 'ಧ್ಯಾನ'ವೆಂದರೆ ಏನು? 'ಧ್ಯಾನ' ಹೇಗೆ ಮಾಡಬೇಕು? 'ಧ್ಯಾನ'ಮಾಡಿದರೆ ಏನಾಗುತ್ತದೆ? ಏನು ಬರುತ್ತದೆ? ಯಾವ ವಯಸ್ಸಿನವರು ಮಾಡಬೇಕು? ಹಾಗೆ ಕಣ್ಮುಚ್ಚಿ ಕುಳಿತರೆ ಏನು ಲಾಭ ಬರುತ್ತದೆ? ಎನ್ನುವ ಪ್ರಶ್ನೆಗಳಿಗೆ ಸರಿಯಾದ ಉತ್ತರ ದೊರೆಯದೆ, ಎಷ್ಟು ವರ್ಷಗಳು ಮಾಡಿದರೂ ಅರ್ಥವಾಗದೆ, ಹಾಗೆ ಇದ್ದೆವು ಯಾವ ಬದಲಾವಣೆ ಆಗಲಿಲ್ಲ, ಮಧ್ಯೆ ಮಧ್ಯೆ ಕೆಲವು ದಿನಗಳು 'ಧ್ಯಾನ' ಮಾಡಲು ಆಗುತ್ತಿರಲಿಲ್ಲ.

ಪತ್ರೀಜಿಯವರು ಭೀಮವರಂ ನಲ್ಲಿ 2003 ನೆಯ ನವಂಬರ್ 11 ರಲ್ಲಿ ಮೊಟ್ಟ ಮೊದಲು ನಮ್ಮ 'ಧ್ಯಾನ' ಮಂದಿರಕ್ಕೆ ಬರುವವರೆಗೂ, ಸರಿಯಾದ 'ಧ್ಯಾನ' ನಡೆಯಲಿಲ್ಲ, ನಮ್ಮ ರೈಸ್ ಮಿಲ್ ಪ್ರಾಂಗಣದಲ್ಲಿ 'ಧ್ಯಾನ'ದ ಕ್ಲಾಸ್ ನಿರ್ವಹಿಸಲಾಯಿತು, ಆ ದಿನ ಸುಮಾರು 1000 ಜನ 'ಧ್ಯಾನ' ಕಲಿತುಕೊಂಡರು. ಆ ದಿನ ಪತ್ರೀಜಿಯವರು 'ಧ್ಯಾನ' ಮಾಡಿದರೆ ಬರುವ ಲಾಭಗಳೊಂದಿಗೆ ಯಾವ ಅನುಭವಗಳು ಬರುತ್ತವೋ ಎಲ್ಲವನ್ನು ಚೆನ್ನಾಗಿ ವಿವರಿಸಿದರು. ನಮಗೆ ಎರಡು ಗಂಟೆಗಳು ಕ್ಲಾಸ್ ತೆಗೆದುಕೊಂಡು ಅರ್ಧ ಗಂಟೆ 'ಧ್ಯಾನ' ಮಾಡಿಸಿದರು, ಆ ದಿನ ಪತ್ರಿ ಮೇಡಂ ಕೂಡ ಬಂದಿದ್ದರು, ಆಕೆಯ ಅನುಭವಗಳು ಕೂಡ ಹೇಳಿದರು. ಅವರ ದೊಡ್ಡ ಮಗಳು, ಅಳಿಯ ಶ್ರೀನಿವಾಸ ರೆಡ್ಡಿಯವರು ಕೂಡ ಬಂದಿದ್ದರು ಪತ್ರೀಜಿಯವರು ಎರಡು ದಿನಗಳು ಅಲ್ಲೇ ಇದ್ದು, 'ಧ್ಯಾನ'ದ ಕ್ಲಾಸುಗಳು ನಿರ್ವಹಿಸಿದರು ಅಂದಿನಿಂದ ನಮ್ಮ 'ಧ್ಯಾನ' ಮಂದಿರದಲ್ಲಿ ನಿತ್ಯ 'ಧ್ಯಾನ' ನಡೆಯುತ್ತಿತ್ತು.

# ಪಿರಮಿಡ್‌ಗಳ ವಿಶಿಷ್ಟತೆ

ಸಾರ್ ಮೊಟ್ಟ ಮೊದಲು 'ಧ್ಯಾನ' ಮಂದಿರಕ್ಕೆ ಬಂದಾಗ, ನಮ್ಮ ದೇವಸ್ಥಾನದ ಪೂಜಾರಿ ಪತ್ರೀಜಿಯವರನ್ನು ಒಂದು ಪ್ರಶ್ನೆ ಕೇಳಿದರು, ಏನೆಂದರೆ 'ಶ್ರೀಚಕ್ರಕ್ಕೆ' ಪಿರಮಿಡ್‌ಗೆ ವ್ಯತ್ಯಾಸವೇನು? ಎಂದು, ಆಗ ಪತ್ರೀಜಿಯವರು 90 ಸಾವಿರ ಶ್ರೀಚಕ್ರಗಳು ಸೇರಿದರೆ ಒಂದು ಪಿರಮಿಡ್ ಆಗುತ್ತದೆ ಎಂದರು, ಅಂದರೆ "90 ಸಾವಿರ ಶ್ರೀಚಕ್ರಗಳು ಒಂದೇ ಸ್ಥಳದಲ್ಲಿ ಇದ್ದರೆ ಎಷ್ಟು ಶಕ್ತಿ" ಇರುತ್ತದೆಯೋ ಅಷ್ಟು ಶಕ್ತಿ ಪಿರಮಿಡ್‌ನಲ್ಲಿ ಇರುತ್ತದೆ, ಎಂದು ಹೇಳಿದರು. ಇದರಿಂದ ಪಿರಮಿಡ್ ನಲ್ಲಿ ಎಷ್ಟು ಶಕ್ತಿ ಇದೆ ಎಂದು ಎಲ್ಲರೂ ಅರ್ಥ ಮಾಡಿಕೊಳ್ಳಬಹುದು.

ಪತ್ರೀಜಿಯವರು ಬಂದು ಹೋದ ನಂತರ ನಮ್ಮವರು ಮನೆ ಮೇಲೆ ಪಿರಮಿಡ್ ನಿರ್ಮಿಸಿದರು, ನನಗೆ ತುಂಬಾ ಸಂತೋಷವಾಯಿತು, ಏಕೆಂದರೆ ಅಲ್ಲಿಯವರೆಗೂ "ಶ್ರೀಚಕ್ರವೆಂದರೇನೇ ತುಂಬಾ ಶಕ್ತಿಯುಳ್ಳದ್ದು" ಎಂದುಕೊಳ್ಳುತ್ತಿದ್ದೆವು, ಪಿರಮಿಡ್ ನಿಂದ ಅದಕ್ಕಿಂತ ಎಷ್ಟೋ ಪಟ್ಟು ಅಧಿಕ ಶಕ್ತಿಯಲ್ಲವೇ, ಅಂತಹ ಪಿರಮಿಡ್ ಕಟ್ಟಿದರೆ ಎಲ್ಲರೂ ಉಪಯೋಗಿಸಿಕೊಂಡರೆ, ಎಲ್ಲರೂ ಶಕ್ತಿವಂತರಾಗುತ್ತಾರೆ ಎಂದು ಆನಂದ ಉಂಟಾಯಿತು.

ಸಾರ್ ಅವರು ಪರಿಚಯವಾದಮೇಲೆ ನಾನು ಎಷ್ಟೋ ವಿಷಯಗಳನ್ನು ಕಲಿತುಕೊಂಡೆನು, ಒಂದು ಸಾರಿ ನಾವು ಕರ್ನೂಲಿಗೆ ಹೋಗಿ ಸಾರ್ ಬಳಿ ಕುಳಿತಾಗ ನಮಗೆ ದೇವಾಲಯಗಳಿಗೂ, ಧ್ಯಾನಾಲಯಗಳಿಗೂ ಅರ್ಥ ಹೇಳಿದರು, ಅವರು "ದೇವಾಲಯಗಳೆಲ್ಲಾ ಹರಿದ್ವಾರಗಳು 'ಧ್ಯಾನ' ಮಂದಿರಗಳು ಹರಿಧಾಮಗಳು" ಎಂದರು, 'ದೇವರೇ' ಎಂದುಕೊಳ್ಳುತ್ತಾ ದ್ವಾರದ ಬಳಿ ಬಂದರೆ 'ಹರಿ' ದಕ್ಕುವುದಿಲ್ಲ ಹರಿ ಬೇಕೆಂದರೆ ಧಾಮದಲ್ಲಿ ಅಡಿ ಇಡಬೇಕು, ಎಂದು ಹೇಳಿದರು "ಹರಿದ್ವಾರದಲ್ಲಿ" ಅಲ್ಲ "ಹರಿಧಾಮದಲ್ಲಿ" ಇರುತ್ತಾನೆ. ಹರಿ ಬೇಕು ಎಂದು ಎಷ್ಟೋ ಪ್ರಯತ್ನಗಳು ಮಾಡಿ, ಕೊನೆಗೆ ಬೇಸರಗೊಂಡು, ಆತುರತೆಯಿಂದ 'ಧ್ಯಾನ' ಮಂದಿರಕ್ಕೆ ಬರುತ್ತಾರೆ.

'ಧ್ಯಾನ'ಮಾಡುತ್ತಾರೆ, ಆಗ ಹರಿ ದಕ್ಕುತ್ತಾನೆ. ಹರಿ ಎಂದರೆ "ಆತ್ಮ" ಅಲ್ಲವೆ? ಆದ್ದರಿಂದ ಕೊನೆಗೆ 'ಹರಿ' ಧಾಮದಲ್ಲಿ ಹರಿ ಇದ್ದಾನೆ ಎಂದು ತಿಳಿದುಕೊಂಡು, ಅವರೇ 'ಧ್ಯಾನ'ಮಂದಿರದೊಳಗೆ ಬರುತ್ತಾರೆ ಎಂದು ಹೇಳಿದರು, ಹಾಗೆ ಸಾರ್ 'ಧ್ಯಾನ'ಮಂದಿರಗಳ ಬಗ್ಗೆ ಹೇಳುತ್ತಾ, "ಅವು ಪಿರಮಿಡ್ ರೂಪದಲ್ಲಿ ಕಟ್ಟಿದರೆ ಅವರ 'ಧ್ಯಾನ'ಮೂರರಷ್ಟು ಬೆಳೆಯುತ್ತದೆ". "ಒಳ್ಳೆಯ ಅನುಭವಗಳು ಬರುತ್ತವೆ" ಎಂದು ಹೇಳಿದರು. ಪೂರ್ವಕಾಲದಲ್ಲಿ ಟೆಕ್ನಾಲಜಿ ತಿಳಿಯದೆ 'ಧ್ಯಾನ'ಮಂದಿರಗಳು ಮಾಮೂಲಿಯಾಗಿ ಕಟ್ಟುತ್ತಿದ್ದರು, ಆದರೆ ಪತ್ರೀಜಿ ಅವರಿಂದ ಎಲ್ಲರೂ ಪಿರಮಿಡ್ ಬಗ್ಗೆ ತಿಳಿದುಕೊಂಡಮೇಲೆ ಪ್ರತಿ ದೇವಾಲಯದಲ್ಲಿ, ಶಾಲೆಯಲ್ಲಿ ಪ್ರತಿ ಮನೆಯಲ್ಲೂ ಪಿರಮಿಡ್ ಕಟ್ಟುತ್ತಿದ್ದಾರೆ. ಈ ದಿನಗಳಲ್ಲಿ "ಪಿರಮಿಡ್ ಎಂದರೆ 'ಧ್ಯಾನ'ಮಾಡಲು" ಎಂದು ಎಲ್ಲರೂ ಅರ್ಥ ಮಾಡಿಕೊಳ್ಳುತ್ತಿದ್ದಾರೆ, ಅದಕ್ಕೆ ಎಲ್ಲರೂ ಪಿರಮಿಡ್ ಕಟ್ಟಿ, ಭಗವಂತನನ್ನು ಸೇರಿಕೊಳ್ಳಬೇಕೆಂದು ಪ್ರಯತ್ನಿಸುವವರಿಗೆ ಅಲ್ಲದೇ ಎಲ್ಲರಿಗೂ ಉಪಯೋಗ ಆಗುವಂತೆ ಮಾಡುತ್ತಿದ್ದಾರೆ.

# ನನ್ನ 'ಧ್ಯಾನ' ಪ್ರವೇಶ

'ಧ್ಯಾನ'ದ ಬಗ್ಗೆ ತಿಳಿದುಕೊಂಡ ನಾನು 'ಧ್ಯಾನ' ಮಾಡುತ್ತಿರಲಿಲ್ಲ, ನಮ್ಮವರಿಗೆ ಕೋಪ ಜಾಸ್ತಿ. ಆ ಕೋಪದೊಂದಿಗೇ ಭಯ ಪಡುತ್ತಿದ್ದರೆ ಅದರ ಜೊತೆಗೆ ಪತ್ರೀಜಿಯವರ ಕೋಪ ನೋಡಿ ಭಯಪಟ್ಟು, "ನನಗೆ 'ಧ್ಯಾನ'ಬೇಡ" ಎಂದುಕೊಳ್ಳುತ್ತಿದ್ದೆ. 'ಧ್ಯಾನ' ತಿಳಿದರೂ, ಅದರ ಮೇಲೆ ಅವಗಾಹನೆ ಇಲ್ಲದೇ 'ಧ್ಯಾನ' ಮಾಡುತ್ತಿರಲಿಲ್ಲ, ಆದರೆ 'ಧ್ಯಾನ' ಮಾಡಲು ಪ್ರಾರಂಭಿಸಿದ ಮೇಲೆ ತಿಳಿಯಿತು, "ಪತ್ರೀಜಿಯವರ ಕೋಪ ನಮ್ಮ ಅಜ್ಞಾನದ ಮೇಲೆ ಅಷ್ಟೇ ನಮ್ಮ ಮೇಲೆ ಅಲ್ಲಾ" ಎಂದು.

ನಮ್ಮವರು 'ಧ್ಯಾನ' ಚೆನ್ನಾಗಿ ಮಾಡುತ್ತಿದ್ದರು, ಮೂರು ಗಂಟೆ ನಾಲ್ಕು ಗಂಟೆಗಳು ಕಣ್ಮುಚ್ಚಿ ಹೇಗೆ ಕುಳಿತುಕೊಳ್ಳುತ್ತಾರೆ? ಎಂದುಕೊಳ್ಳುತ್ತಿದ್ದೆ. ಪತ್ರಿ ಸಾರ್ ಬಂದಾಗ ಮಾತ್ರ 'ಧ್ಯಾನ' ಮಾಡುತ್ತಿದ್ದೆ, ಅವರ ಮೊದಲ ಕ್ಲಾಸ್ ನವೆಂಬರ್ ನಲ್ಲಿ ನಡೆಯಿತು ನಾವು ಡಿಸೆಂಬರ್‌ನಲ್ಲೇ ಪಿರಮಿಡ್ ನಮ್ಮ ಮನೆ ಮೇಲೆ ಕಟ್ಟಿದೆವು ಪತ್ರೀಜಿ ಜನವರಿಯಲ್ಲಿ ಓಪನಿಂಗ್ ಮಾಡಿದರು ಮತ್ತೆ ಆ ದಿನ 'ಧ್ಯಾನ' ಮಾಡಿದೆನು.

ಪತ್ರಿ ಸಾರ್ ಫೆಬ್ರವರಿಯಲ್ಲಿ ಭೀಮವರಂನಲ್ಲಿ ಮೂರು ದಿನಗಳ 'ಧ್ಯಾನ' ಯಜ್ಞ ಮಾಡಲು ಹೇಳಿದರು, ನಮ್ಮವರು ತುಂಬಾ ಸಂತೋಷವಾಗಿ ಒಪ್ಪಿಕೊಂಡರು. ಯಜ್ಞವು ಫೆಬ್ರವರಿ 13, 14, 15 ದಿನಾಂಕದಂದು ನಡೆಯಿತು, ಆ ದಿನಗಳಲ್ಲಿ ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿ 'ಧ್ಯಾನ'ವೆಂದರೆ ಯಾರಿಗೂ ತಿಳಿಯದು. ಆದ್ದರಿಂದ ತಿರುಪತಿಯಿಂದ, ಗುಡಿವಾಡ ಇಂದ ವಿಜಯವಾಡದಿಂದ, ಬಳ್ಳಾರಿಯಿಂದ ಮಾಸ್ಟರ್ಸ್ ಬಂದು 'ಧ್ಯಾನ' ಪ್ರಚಾರ ಮಾಡಿದರು. ಅವರು ಎಷ್ಟೋ ಗ್ರಾಮಗಳು ತಿರುಗಿ, ಪಾಂಪ್ಲೆಟ್ಸ್ ಹಂಚಿ ಎಲ್ಲರಿಗೂ 'ಧ್ಯಾನ' ಯಜ್ಞದ ವಿಶಿಷ್ಟತೆ, ಪತ್ರೀಜಿ ವಿಶಿಷ್ಟತೆ ಹೇಳಿ ಯಜ್ಞಕ್ಕೆ ಬರಲು ಆಹ್ವಾನಿಸಿದರು.

ಪ್ರಚಾರ ಮಾಡಿದ ಮಾಸ್ಟರ್ಸ್ ಎಲ್ಲರೂ ನಮ್ಮ ಮನೆಯಲ್ಲಿ ಒಂದು ತಿಂಗಳ ಕಾಲ ಇದ್ದರು, ಅವರೆಲ್ಲ ನನ್ನನ್ನು 'ಧ್ಯಾನ' ಮಾಡಲು ಹೇಳುತ್ತಿದ್ದರು, 'ಧ್ಯಾನ' ಏಕೆ ಮಾಡಬೇಕೆಂದು ನಾನು ಅವರನ್ನು ಕೇಳುತ್ತಿದ್ದೆ, ಅವರು "ಧ್ಯಾನಸರ್ವರೋಗ ನಿವಾರಿಣಿ", "ಧ್ಯಾನ ಸಕಲ ಭೋಗ ಕಾರಿಣಿ", "ಧ್ಯಾನಸರ್ವಜ್ಞಾನ ಪ್ರಸಾದಿನಿ" ಎಂದು ಹೇಳುತ್ತಿದ್ದರು. ಆಗ ನಾನು ನನಗೆ ಯಾವ ರೋಗವು ಇಲ್ಲವಲ್ಲಾ? ಏಕೆ 'ಧ್ಯಾನ' ಮಾಡಬೇಕು ಎಂದು ಬೇಸರದಿಂದ ಕೇಳುತ್ತಿದ್ದೆ, ಆದರೆ ನಾನು 'ಧ್ಯಾನ'ಕ್ಕೆ ಬಂದ ಮೇಲೆ

"ಧ್ಯಾನ ಎನ್ನುವುದು ವರ್ತಮಾನದಲ್ಲಿರುವ ಅನಾರೋಗ್ಯಗಳು ಹೋಗಲಾಡಿಸುವುದೇ ಅಲ್ಲಾ, ಭವಿಷ್ಯತ್ತಿನಲ್ಲಿ ಬರುವ ರೋಗಗಳು ಕೂಡ ಬರುವುದಿಲ್ಲ" ಎಂದು ತಿಳಿದುಕೊಂಡೆನು.

"ಧ್ಯಾನ ಸಕಲ ಭೋಗ ಕಾರಿಣಿ" ಅಂದರೆ ನನಗೆ ತುಂಬಾ ಹಣವಿದೆ! 'ಧ್ಯಾನ'ವೇಕೆ ಎಂದು ಕೇಳುತ್ತಿದ್ದೆ, ಭೋಗವೆಂದರೆ ಹಣ ಎಂದುಕೊಳ್ಳುತ್ತಿದ್ದೆನು, ಆದರೆ "ಎಲ್ಲಿದ್ದರೂ, ಯಾವ ಪರಿಸ್ಥಿತಿಯಲ್ಲಿದ್ದರೂ ಆನಂದವಾಗಿರುವುದು ಭೋಗ" ಎಂದು 'ಧ್ಯಾನ'ಕ್ಕೆ ಬಂದ ಮೇಲೆ ತಿಳಿಯಿತು.

"ಧ್ಯಾನಸತ್ಯ ಜ್ಞಾನ ಪ್ರಸಾದಿನಿ" ಎಂದು ಹೇಳಿದರೆ ನನಗೆ ಬೇಕಾದ ಜ್ಞಾನವಿದೆಯಲ್ಲಾ ಎಂದುಕೊಳ್ಳುತ್ತಿದ್ದೆನು, ಆದರೆ ಪತ್ರೀಜಿಯವರ ಬೋಧನೆಗಳು ಕೇಳಿದ ಮೇಲೆ ನನಗೆ ತಿಳಿದದ್ದು ಏನೆಂದರೆ, ನನಗೆ ತಿಳಿದಿರುವುದು ಒಂದು ಹನಿಯಷ್ಟು, ತಿಳಿದುಕೊಳ್ಳಬೇಕಾದದ್ದು ಸಮುದ್ರದಷ್ಟು ಇದೆ ಎಂದು. 'ಧ್ಯಾನ'ಕ್ಕೆ ಬರುವ ಮೊದಲು ನನಗೇ ಎಲ್ಲಾ ತಿಳಿದಿದೆ ಎಂದುಕೊಳ್ಳುತ್ತಿದ್ದೆ, 'ಧ್ಯಾನ'ಕ್ಕೆ ಬಂದಮೇಲೆ "ನಾನು ತಿಳಿಯಬೇಕಾದ ಜ್ಞಾನ ಅನಂತವಾಗಿದೆ ಎಂದು". ಆದರೆ ಆಗ ಇದ್ದ ಅಜ್ಞಾನದಿಂದ ಅವರೆಷ್ಟು ಹೇಳಿದರೂ ನಾನು 'ಧ್ಯಾನ'ದಲ್ಲಿ ತೊಡಗಿಕೊಳ್ಳಲಿಲ್ಲ.

ಭೀಮವರಂನಲ್ಲಿ ಫೆಬ್ರವರಿಯಲ್ಲಿ 'ಧ್ಯಾನ'ಯಜ್ಞ ನಡೆಯಿತು, ಎರಡನೆಯ ದಿನ ನಮ್ಮ ಮದುವೆ ವಾರ್ಷಿಕೋತ್ಸವ, ಈ ವಿಷಯ ಪತ್ರೀಜಿಯವರಿಗೆ ಹೇಗೆ ತಿಳಿಯಿತೋ ನಮ್ಮಿಬ್ಬರಿಗೆ ತಿಳಿಯದಂತೆ ಶಿವಪ್ರಸಾದ್ ರವರ ಮೂಲಕ ಕೇಕ್ ತರಿಸಿ ವೇದಿಕೆ ಮೇಲೆ ನಮ್ಮಿಂದ ಕಟ್ ಮಾಡಿಸಿದರು. ಸಾರ್ ನನ್ನನ್ನು ವೇದಿಕೆ ಮೇಲೆ ಕರೆದು ಮೈಕ್ ಕೊಟ್ಟು "ಮಾತನಾಡಿ ಮೇಡಂ" ಎಂದರು, ಆದರೆ ನನಗೆ ಏನು ಮಾತಾಡಬೇಕೋ ತಿಳಿಯದು, 'ಧ್ಯಾನ'ದ ಬಗ್ಗೆ, ಪತ್ರೀಜಿ ಬಗ್ಗೆ ಗೊತ್ತೇ ಇಲ್ಲ, ಆದರೆ ನನಗೆ ಸುಳ್ಳು ಹೇಳುವುದು ಚಿಕ್ಕಂದಿನಿಂದ ಅಭ್ಯಾಸವಿಲ್ಲ, ಸುಳ್ಳು ಹೇಳುವುದೆಂದರೆ ತುಂಬಾ ಕೋಪ, ಅದಕ್ಕಾಗಿ ನನಗೆ 'ಧ್ಯಾನ'ಇಷ್ಟವಿಲ್ಲ, ಪತ್ರೀಜಿ ಎಂದರೂ ನನಗೆ ಇಷ್ಟವಿಲ್ಲ, ಆದರೆ ನನಗೆ ನಮ್ಮ ಯಜಮಾನರೆಂದರೆ ತುಂಬಾ ಇಷ್ಟ, ಅದಕ್ಕೆ ನಾನು ಈ ಕೆಲಸಗಳನ್ನೆಲ್ಲಾ ಮಾಡುತ್ತಿದ್ದೇನೆ ಎಂದು ಹೇಳಿದೆನು, ಆ ಕೂಡಲೇ ಸಾರ್ "ಮೇಡಂಗೆ ಎಲ್ಲರೂ ಚಪ್ಪಾಳೆ ಹೊಡೆಯಿರಿ" ಎಂದರು, ಏಕೆಂದರೆ ವೇದಿಕೆ ಮೇಲೆ ಸುಳ್ಳು ಹೇಳದೆ ನಿಜ ಹೇಳಿದ್ದಕ್ಕೆ ಚಪ್ಪಾಳೆ ಹೊಡೆಯಲು ಎಲ್ಲರಿಗೂ ತಿಳಿಸಿದರು.

ನನಗೆ ಆ ದಿನವೂ ಪತ್ರೀಜಿಯವರ ವಿಶಿಷ್ಟತೆ ತಿಳಿದಿರಲಿಲ್ಲ, ಅವರು ನಮ್ಮ ಮನಸ್ಸನ್ನು ಓದಬಲ್ಲರು ಎನ್ನುವುದು ತಿಳಿದಿರಲಿಲ್ಲ, ಪತ್ರೀಜಿ ನಮ್ಮಿಂದ ಕೇಕ್ ಕಟ್ ಮಾಡಿಸಿದರು ಇಂತಹ ಚಿಕ್ಕ ಚಿಕ್ಕ ಕೋರಿಕೆಗಳು ಎಲ್ಲರಿಗೂ ಇರುತ್ತವೆ ಎಂದು ಅವರಿಗೆ ತಿಳಿದಿದೆ ಆದ್ದರಿಂದ ಎಲ್ಲರಿಗೂ ಮಾನಸಿಕವಾದ ಆನಂದ ಉಂಟುಮಾಡುತ್ತಾರೆ.

ಯಜ್ಞ ಮುಗಿಯಿತು, ಎಲ್ಲರೂ ಹೊರಟು ಹೋದರು. ನಾನು ಮತ್ತೆ ಸಂಸಾರ ಜೀವನದಲ್ಲಿ ಮುಳುಗಿ ಮಕ್ಕಳು, ಸೊಸೆಯಂದಿರು ಮೊಮ್ಮಕ್ಕಳೊಂದಿಗೆ ಕಾಲಕ್ಷೇಪ ಮಾಡುತ್ತಿದ್ದೆನು ಆದರೆ 'ಧ್ಯಾನ'ಕ್ಕಾಗಿ ಜನ್ಮವನ್ನು ತೆಗೆದುಕೊಂಡು ದಿನಗಳು ಕಳೆಯುತ್ತಾ ಜೀವನವನ್ನು ವ್ಯರ್ಥ ಮಾಡುತ್ತಿದ್ದರೆ ಪ್ರಕೃತಿ ಹೇಗೆ ಸುಮ್ಮನಿರುತ್ತದೆ? ಯಾವುದೋ ವಿಧವಾಗಿ ನಮ್ಮನ್ನು ಎಚ್ಚರಿಸಿ, ನಾವು ಮಾಡಬೇಕಾದ ಕೆಲಸವನ್ನು ನಮಗೆ ನೆನಪಿಸುತ್ತಾ ಇರುತ್ತದೆ ಹಾಗೆಯೇ ನನಗೂ ಕೂಡ ಪ್ರಕೃತಿ ಎಚ್ಚರಿಸಿತು.

ಆರೋಗ್ಯದಿಂದ ಇದ್ದ ನಾನು ಯಜ್ಞವಾದ ಬಳಿಕ 15 ದಿನದಲ್ಲಿ ಹಾಸಿಗೆ ಹಿಡಿದೆನು ವಿಪರೀತವಾದ ಕೀಲು ನೋವುಗಳು ಬಂದವು, ಶರೀರದಲ್ಲಿ ಪ್ರತಿ ಜಾಯಿಂಟ್ ಗಳು ಊದಿಕೊಂಡು ನೋವು ಬರುತ್ತಿತ್ತು, ಜ್ವರವೂ ಬಂದಿದ್ದರಿಂದ ಮಂಚವನ್ನು ಬಿಟ್ಟು ಒಂದು ಹೆಜ್ಜೆಯೂ ಮುಂದಿಡಲಾಗದಂತಹ ಪರಿಸ್ಥಿತಿ ಏರ್ಪಟ್ಟಿತು, ವೈದ್ಯರು ಪರೀಕ್ಷೆ ಮಾಡಿ "ಸಂಧಿವಾತ ಬಂದಿದೆ, ಇದು ಸರಿ ಹೋಗದು, ಜೀವನಪರ್ಯಂತ ಔಷಧಗಳು ತೆಗೆದುಕೊಳ್ಳಬೇಕು". ಎಂದು ಹೇಳಿದರು ಆಗ ನಮ್ಮವರು "'ಧ್ಯಾನ' ಮಾಡಿದರೆ ಎಂತಹ ವ್ಯಾಧಿಗಳಾದರೂ ಕಡಿಮೆಯಾಗುತ್ತದೆ ಎಂದು ಪತ್ರೀಜಿ ಹೇಳಿದ್ದಾರಲ್ಲ 'ಧ್ಯಾನ' ಮಾಡಬಹುದಲ್ಲಾ!" ಎಂದು ಬಲವಂತವಾಗಿ ನನ್ನನ್ನು ಒಪ್ಪಿಸಿದರು. ನನಗೆ ಇಷ್ಟ ಇಲ್ಲದಿದ್ದರೂ ನಮ್ಮವರಿಗಾಗಿ 'ಧ್ಯಾನ' ಶುರು ಮಾಡಿದೆನು, 'ಧ್ಯಾನ' ಶುರು ಮಾಡುವ ಮೊದಲು ಒಂದು ನಿರ್ಣಯ ತೆಗೆದುಕೊಂಡೆನು, "ಕಡಿಮೆಯಾದರೆ ಎಲ್ಲರಿಗೂ ಇದು ಒಳ್ಳೆಯದು ಎಂದು ಹೇಳುತ್ತೇನೆ, ಕಡಿಮೆಯಾಗದಿದ್ದರೆ 'ಧ್ಯಾನ' ಮಾಡುವುದಿಲ್ಲ, ಯಾರಿಗೂ ಹೇಳುವುದಿಲ್ಲ". ಎಂದು ನಿರ್ಣಯಿಸಿಕೊಂಡು 'ಧ್ಯಾನ' ಪ್ರಾರಂಭಿಸಿದೆನು.

'ಧ್ಯಾನ' ಮಾಡಲು ಶುರು ಮಾಡಿದ 15 ದಿನಗಳಲ್ಲಿ ನಾನು ಕುಡಿಯುವ ನೀರಿನ ಲೋಟವನ್ನು ಕೈಯಲ್ಲಿ ಹಿಡಿದು ಕೊಳ್ಳುವಷ್ಟು ಹುಷಾರಾದೆನು! ತಿಂಗಳಿಗೆಲ್ಲಾ ಎದ್ದು ಓಡಾಡುವಂತಾಗಿದ್ದೆ ಎರಡು ತಿಂಗಳಲ್ಲೇ ಮಾಮೂಲಿ ಮನುಷ್ಯಳಾದೆನು! ಆಗ 'ಧ್ಯಾನ' ತುಂಬಾ ಒಳ್ಳೆಯದೆಂದು ನಿರ್ಣಯಕ್ಕೆ ಬಂದೆನು.

ದಿನವೂ ಬೆಳಿಗ್ಗೆ ಎರಡು ಗಂಟೆಗಳು ಸಂಜೆ ಎರಡು ಗಂಟೆಗಳು 'ಧ್ಯಾನ' ಮಾಡುತ್ತಿದ್ದೆನು, ಎರಡು ತಿಂಗಳು 'ಧ್ಯಾನ' ಮಾಡಿದಾಗ ಚೆನ್ನಾಗಿ ಅಭ್ಯಾಸವಾಗಿ, 'ಧ್ಯಾನ' ಮಾಡದಿದ್ದರೆ ಆ ದಿನವೆಲ್ಲ ಏನೋ ಕಳೆದುಕೊಂಡಂತೆ ಇರುತ್ತಿತ್ತು. 'ಧ್ಯಾನ' ಮಾಡಿದರೆ, ಎಷ್ಟೋ ಆನಂದವಾಗಿರುತ್ತಿತ್ತು, ಹಾಗೆ 'ಧ್ಯಾನ' ಮಾಡದಿದ್ದರೆ ಇರಲಾಗದು ಎನ್ನುವ ಸ್ಥಿತಿಗೆ ಬಂದೆನು. ಆಗ 'ಧ್ಯಾನ'ದಲ್ಲಿರುವ ಆನಂದ ಬೇರೆ ಯಾವುದರಲ್ಲೂ ಇಲ್ಲ ಎಂದು ಅನುಭವ ಪೂರ್ವಕವಾಗಿ ತಿಳಿದುಕೊಂಡೆನು, ಅದಕ್ಕಾಗಿಯೇ ಪತ್ರೀಜಿಯವರು ತಮ್ಮ ಜ್ಞಾನ ನವರತ್ನಗಳಲ್ಲಿ "ಅನುಭವವೇ ಜ್ಞಾನ" ಎಂದು ಹೇಳಿದ್ದಾರೆ. ಯಾರು ಹೇಳಿದರೂ, ಎಷ್ಟು ಜನ ಹೇಳಿದರೂ ಕೇಳದ ನಾನು "ಧ್ಯಾನ" ಮಾಡಿ ಹೊಂದಿದ ಲಾಭದಿಂದ "ಇದಕ್ಕೂ ಮಿಗಿಲಾದದ್ದು ಯಾವುದೂ ಇಲ್ಲ" ಎಂದು ತಿಳಿದುಕೊಂಡೆನು.

ಆದರೆ ಪತ್ರೀಜಿ ಯಾವಾಗಲೂ ನನಗೆ 'ಧ್ಯಾನ' ಮಾಡಲು ಹೇಳಲಿಲ್ಲವಾದರೂ ಅವರ ಪರಿಚಯವಾದ ಮೇಲೆ, ಅವರ ಬಗ್ಗೆ ಅರ್ಥವಾಯಿತು. ಒಬ್ಬ ಮನುಷ್ಯನನ್ನು ನೋಡಿದ ಕೂಡಲೇ ಅವರ ಬಗ್ಗೆ ತಿಳಿದುಕೊಳ್ಳುವ ಶಕ್ತಿ ಅವರಿಗೆ ಇದೆ, ನನ್ನನ್ನು ನೋಡಿದಾಗ ನನ್ನ ಬಗ್ಗೆ ಅವರಿಗೆ ತಿಳಿದೇ ಇರುತ್ತದೆ, ಮುಂದಿನ ದಿನಗಳಲ್ಲಿ ಈಕೆ 'ಧ್ಯಾನ'ವನ್ನು ಬಿಡುವುದಿಲ್ಲ, ಊರೂರು ತಿರುಗಿ 'ಧ್ಯಾನ'ವನ್ನು ಪ್ರಚಾರ ಮಾಡಿಯೇ ತಿರುತ್ತಾಳೆ ಎಂದು ಅವರಿಗೆ ತಿಳಿದಿತ್ತು, ಎಲ್ಲಾ ತಿಳಿದಿರುವ ಮಹಾನುಭಾವರು ಆದ್ದರಿಂದಲೇ ನನ್ನನ್ನು 'ಧ್ಯಾನ' ಮಾಡು ಎಂದು ಒತ್ತಾಯ ಮಾಡಲಿಲ್ಲ. ಪತ್ರೀಜಿಯವರು ಯಾರನ್ನೂ ಯಾವ ವಿಷಯದಲ್ಲೂ ಬಲವಂತ ಪಡಿಸುವುದಿಲ್ಲ. ನಾವು ಏನು "ಮಾಡುತ್ತೇವೆ" ಎಂದರೂ "ಆಯಿತು" ಎನ್ನುತ್ತಾರೆ, "ಮಾಡುವುದಿಲ್ಲ" ಎಂದರೂ "ಆಯಿತು" ಎನ್ನುತ್ತಾರೆ ಹಾಗೆ ನಾನು ಎಷ್ಟೋ ಸಂದರ್ಭಗಳಲ್ಲಿ ಗಮನಿಸಿದೆನು, ಹಾಗೆ ನನ್ನ 'ಧ್ಯಾನ' ಶುರುವಾಗಿ ದಿನೇ ದಿನೇ ಅಭಿವೃದ್ಧಿ ಹೊಂದಿ ಹುಣ್ಣಿಮೆ, ಅಮಾವಾಸ್ಯೆ ದಿನಗಳಲ್ಲಿ ಇಡೀ ರಾತ್ರಿ 'ಧ್ಯಾನ'ದಲ್ಲಿ ಕುಳಿತುಕೊಳ್ಳುವ ಸ್ಥಿತಿಗೆ ಬಂದೆನು.



**ನರನಿಂದ ನಾರಾಯಣನಾಗುವುದೇ**
**ಎಲ್ಲರ ಜೀವನದ ಗುರಿ**

**–ಬ್ರಹ್ಮರ್ಷಿ ಪತ್ರೀಜಿ**

# ಸಮಾಜ ಸೇವೆ

ನನಗೆ ಸಂಸಾರದಲ್ಲಿ ಜವಾಬ್ದಾರಿಗಳೆಲ್ಲಾ ಕಳೆದು ಹೋಗಿತ್ತು, ನಮ್ಮ ಮಕ್ಕಳ ವಿವಾಹಗಳು ಆಗಿದ್ದವು, ಆಗ ನಮ್ಮವರು ನನ್ನನ್ನು ಸಮಾಜ ಸೇವೆಯಲ್ಲಿ ಇರಿಸಬೇಕೆಂದು "ಮಹಿಳಾ ಸಂಘದ ಅಧ್ಯಕ್ಷೆ" ಮಾಡಿದರು. ಸದಸ್ಯರೆಲ್ಲರೂ ನನ್ನನ್ನು ಪ್ರೋತ್ಸಾಹಿಸುವುದರ ರೊಂದಿಗೆ ನಾನು ಅಧ್ಯಕ್ಷೆ ಆದೆನು, ಸಂಘದ ಪರವಾಗಿ ಎಷ್ಟೋ ಕಾರ್ಯಕ್ರಮಗಳು ಮಾಡುತ್ತಿದ್ದೆವು, ಇದಕ್ಕೆಲ್ಲ ಪ್ರೋತ್ಸಾಹ ರಾಘವರಾವ್‌ರವರದೇ, ಎಲ್ಲರಿಗೂ ನಾನು ಮಾಡಿದಂತೆ ಕಾಣಿಸುತ್ತಿತ್ತು, ಆದರೆ ನನ್ನ ಹಿಂದೆ ನಮ್ಮವರೇ ಎಲ್ಲಾ ಮಾಡುತ್ತಿದ್ದರು, ನಾನು 25 ಪರ್ಸೆಂಟ್ ಕೆಲಸ ಮಾಡಿದರೆ, ನಮ್ಮವರು 75 ಪರ್ಸೆಂಟ್ ಕೆಲಸ ಮಾಡುತ್ತಿದ್ದರು.

ಮನೆಯ ಹತ್ತಿರ ಕೂಡ ಒಂದು ಉಚಿತ ಹೋಮಿಯೋಪತಿ ಆಸ್ಪತ್ರೆ ಇಟ್ಟಿದ್ದೆವು, ಒಬ್ಬರು ವೈದ್ಯರು, ನರ್ಸ್ ಇರುತ್ತಿದ್ದರು, ಸುತ್ತಮುತ್ತಲಿನ ಗ್ರಾಮಗಳಿಂದಕೂಡ ಜನರು ಬಂದು ಔಷಧಿ ತೆಗೆದುಕೊಳ್ಳುತ್ತಿದ್ದರು, ದಿನಕ್ಕೆ ಸುಮಾರು ನೂರರಿಂದ ಇನ್ನೂರು ರೋಗಿಗಳು ಬರುತ್ತಿದ್ದರು, ರಾಘವರಾವ್ ರವರು ಎಷ್ಟು ಸೇವೆ ಮಾಡುತ್ತಿದ್ದರೂ, ಇನ್ನೂ ಏನೋ ಮಾಡಬೇಕೆಂದು ಆಲೋಚಿಸುತ್ತಾ ಇರುತ್ತಿದ್ದರು, ದೇವ ಮಂದಿರಗಳು ಕಟ್ಟುವುದು, 'ಧ್ಯಾನ'ಮಂದಿರ, ಕಲ್ಯಾಣ ಮಂಟಪ, ಹಾಸ್ಪಿಟಲ್ ಇಟ್ಟು ಹೀಗೆ ಎಷ್ಟೋ ಪದವಿಗಳ ಮೂಲಕ ಎಷ್ಟೋ ಸೇವಾ ಕಾರ್ಯಕ್ರಮಗಳು ಮಾಡುತ್ತಿದ್ದರು.

ಹಾಗೂ ಇನ್ನೂ ಕೆಲವು ದಿನಗಳಿಗೆ ನಮ್ಮವರು ನಮ್ಮ ಮನೆಯ ಹತ್ತಿರ "ಮಹಿಳೆಯರಿಗೆ ಟ್ರೈನಿಂಗ್ ಇನ್ಸಿಟ್ಯೂಟ್" ನ್ನು ನನ್ನಿಂದ ಪ್ರಾರಂಭಿಸಿದರು, ಅದರಲ್ಲಿ ಮಹಿಳೆಯರಿಗೆ ಟ್ರೈನಿಂಗ್, ಪೇಂಟಿಂಗ್, ಎಂಬ್ರಾಯ್ಡರಿ, ಸಾಫ್ಟ್ ಟಾಯ್ಸ್, ಗ್ಲಾಸ್ ಪೇಂಟಿಂಗ್, ಪಾಟ್ ಪೇಂಟಿಂಗ್, ವಾಲ್ ಡೆಕೋರೇಷನ್ ಹೀಗೆ ವಿಧವಿಧವಾದ ಕರಕುಶಲ ಕೆಲಸಗಳನ್ನು ಉಚಿತವಾಗಿ ಕಲಿಸುತ್ತಿದ್ದರು, ಇನ್ಸಿಟ್ಯೂಟ್ ನಲ್ಲಿ ಮೂರು ಜನ ಟೀಚರ್ಸ್ ಇದ್ದರು, ನಾನು ಹ್ಯಾಂಡ್ ಎಂಬ್ರಾಯ್ಡರಿ ಕಲಿಸುತ್ತಿದ್ದೆ, ಯಾರಾದರೂ ಅದರ ವಿದ್ಯೆಯಲ್ಲಿ ಪ್ರಾವೀಣ್ಯತೆ ಸಂಪಾದಿಸಿದರೆ, ಸರ್ಟಿಫಿಕೇಟ್ ಕೂಡ ಕೊಡುತ್ತಿದ್ದೆವು, ನಾವು ಕೊಡುವ ಸರ್ಟಿಫಿಕೇಟ್ ನಿಂದ ಅವರಿಗೆ ಲೋನ್, ಕೆಲಸಗಳು ಬರುತ್ತಿದ್ದವು! ಎಷ್ಟೋ ಜನ ಮಹಿಳೆಯರು ಕಲೆಗಳನ್ನೆಲ್ಲಾ ಕಲಿತುಕೊಂಡು, ಮನೆಯಲ್ಲಿದ್ದುಕೊಂಡೇ ತಾವೇ ಸ್ವಂತ ಸಂಪಾದನೆ ಮಾಡುತ್ತಿದ್ದರು.

ನನ್ನ ಬಳಿ ಮೂಗ ಮತ್ತು ಕಿವುಡು ಮಕ್ಕಳು ಕೂಡ ಟೈಲರಿಂಗ್, ಪೇಂಟಿಂಗ್, ಎಂಬ್ರಾಯ್ಡರಿ ಕಲಿತುಕೊಂಡರು. ಒಬ್ಬ ಅಂಗವಿಕಲ ಮಗು ಕೂಡ ಕಲಿತುಕೊಂಡಳು. ಹರಿಜನ ಮಕ್ಕಳು, ಮುಸ್ಲಿಂ ಮಕ್ಕಳು ಕೂಡ ಕಲಿತುಕೊಂಡರು. ನಾವು ಯಾವ ಕುಲ ಮತ ಎಂದು ಕೇಳದೆ ಅವರಿಗೆ ವಿದ್ಯೆ ಕಲಿಸಿದೆವು. ಅಂದರೆ ಪತ್ರೀಜಿ ಆದರ್ಶಗಳು ನಮಗೆ ಅವರು ಯಾರು ಎಂದು ತಿಳಿಯದಿದ್ದರೂ ನಮ್ಮ ಜೀವನಕ್ಕೆ ಬಂದವು, ಎಲ್ಲರಿಗೂ ಕಲಿಸುವುದು ಒಂದು ಕಡೆಯಾದರೆ, ಮಾತು ಬರದವರಿಗೆ ಕಲಿಸುವುದು ಒಂದು ಕಡೆ ಒಳ್ಳೆಯ ವಿಷಯ, ನಮಗೆ ತುಂಬಾ ಆನಂದವಾಗುತ್ತಿತ್ತು, ಎಷ್ಟೋ ಜನ ದೊಡ್ಡ ವ್ಯಕ್ತಿಗಳು, ಕಲೆಕ್ಟರ್ ಗಳು, ಮಿನಿಸ್ಟರ್ ಗಳು ನಮ್ಮ ಇನ್ಸ್ಟ್ಯೂಟ್ ಅನ್ನು ಸಂದರ್ಶಿಸಿದರು, ಅವರು "ಅಪ್ಲಿಕೇಶನ್ ಗಳು ಇಟ್ಟರೆ ಸರ್ಕಾರಿ ಸಹಾಯ, ಫಂಡ್ಸ್ ಬರುತ್ತವೆಯಲ್ಲಾ" ಎನ್ನುತ್ತಿದ್ದರು.

ಆದರೆ ರಾಘವರಾವ್ ರವರಿಗೆ ಅವುಗಳ ಮೇಲೆ ಆಸಕ್ತಿ ಇರಲಿಲ್ಲ, "ನಮಗೆ ಇರುವುದರಲ್ಲಿ ಭಗವಂತ ಕೊಟ್ಟಿದ್ದರಲ್ಲಿ ನಾವು ಸ್ವಲ್ಪವೇ ಖರ್ಚು ಮಾಡುತ್ತಿದ್ದೇವೆ, ಹಾಗೆ ಮಾಡಿದರೇನೇ ನಮಗೆ ತೃಪ್ತಿ" ಎನ್ನುತ್ತಿದ್ದರು. ನನಗೆ ನಮ್ಮವರು ಏನು ಮಾಡಿದರು ಇಷ್ಟವಾಗುತ್ತದೆ, ನಾನು ಅವರಿಗೆ ಎಂದು ಎಂತಹ ಸಲಹೆ ಕೊಡುತ್ತಿರಲಿಲ್ಲ, ಏಕೆಂದರೆ ಮೊದಲಿನಿಂದ ನನಗಿಂತ ಅವರಿಗೆ ಚೆನ್ನಾಗಿ ಗೊತ್ತು, ಹಾಗಿದ್ದಾಗ ನಾನು ಏನು ಮಾತನಾಡಬೇಕಾದ ಅಗತ್ಯವಿಲ್ಲ, ಅವರನ್ನು ಅನುಸರಿಸಿದರೆ ಎಲ್ಲಾ ಆನಂದವೇ, ಹಾಗೆ ಶುರು ಮಾಡಿದ ಆ ಸೇವೆ ಈಗಲೂ ಮುಂದುವರೆಯುತ್ತಿದೆ.

'ಧ್ಯಾನ'ಕ್ಕೆ ಬಂದ ನಂತರ ಉಚಿತ ಹೋಮಿಯೋಪತಿ ಆಸ್ಪತ್ರೆ ಮುಚ್ಚಿದೆವು, ಆದರೆ ಪತ್ರೀಜಿ ಅವರೊಂದಿಗೆ ಪರಿಚಯವಾದ ಮೇಲೆ ತಿಳಿದಿತ್ತು ಎಲ್ಲಕ್ಕಿಂತ ದೊಡ್ಡ ಸೇವೆ 'ಧ್ಯಾನ'ಪ್ರಚಾರವೆಂದು, ನಮಗೆ ಅರ್ಥವಾಯಿತು  ಭೌತಿಕ ಸೇವೆಗಳಿಗಿಂತ ಆಧ್ಯಾತ್ಮಿಕ ಸೇವೆಗಳು ದೊಡ್ಡದೆಂದು, 'ಪುಣ್ಯ ಕರ್ಮ' ಗಳಿಗಿಂತ 'ಮುಕ್ತಿ ಕರ್ಮಗಳು' ದೊಡ್ಡದೆಂದು ತಿಳಿದುಕೊಂಡೆವು, ಕಾರಣ ಪುಣ್ಯ ಕರ್ಮಗಳಿಂದ ಭೋಗವಂತವಾದ ಜನ್ಮಗಳು ಬರುತ್ತವೆ, ಆದರೆ 'ಮುಕ್ತಿ ಕರ್ಮಗಳಿಂದ' ಜನ್ಮಗಳೇ ಇಲ್ಲದ ಮುಕ್ತ ಸ್ಥಿತಿ ಹೊಂದಬಹುದೆಂದು ಅರ್ಥ ಮಾಡಿಕೊಂಡೆವು, ಆದ್ದರಿಂದ ದೇಹಕ್ಕೆ ಲಾಭ ಉಂಟುಮಾಡುವ ಉಚಿತ ಹೋಮಿಯೋ ವೈದ್ಯ ಶಾಲೆ ಯನ್ನು ಮುಚ್ಚಿ, ಆತ್ಮಕ್ಕೆ ಲಾಭ ಉಂಟುಮಾಡುವ ಮೂರು ದಿನಗಳ "ಆತ್ಮ ಜ್ಞಾನ ಶಿಕ್ಷಣ ಶಿಬಿರ" ಪ್ರಾರಂಭಿಸಿದೆವು 2004 ರಲ್ಲಿ ಪ್ರಾರಂಭಿಸಿದ ಈ ಶಿಬಿರ ಪ್ರತಿ ತಿಂಗಳು 1, 2, 3 ನೇ ತಾರೀಖಿನಲ್ಲಿ ಈಗಲೂ ಮುಂದುವರೆಯುತ್ತಿದೆ. ಎಷ್ಟೋ ಸಾವಿರ ಜನರು ಈ ಶಿಬಿರದಲ್ಲಿ ಪಾಲ್ಗೊಳ್ಳುವುದು ನಡೆದಿದೆ. ಈ ಶಿಬಿರದಲ್ಲಿ ಎಷ್ಟೋ ಜನ ಮಾಸ್ಟರ್ ಗಳಾಗಿ ತಯಾರಾಗಿದ್ದಾರೆ, ಆಂಧ್ರ

ತೆಲಂಗಾಣವೇ ಅಲ್ಲಾ ಎಷ್ಟೋ ರಾಷ್ಟ್ರಗಳಿಂದ ಕೂಡ ಬಂದು ಈ ಶಿಬಿರದಲ್ಲಿ 'ಧ್ಯಾನ'ಕಲಿತುಕೊಂಡರು. ಯಾವುದೇನಾದರೂ, ದೇಹ ಸೇವೆಗಳಿಗಿಂತ ಆತ್ಮ ಸೇವೆಗಳು ದೊಡ್ಡ ವೆಂದು ಅರ್ಥ ಮಾಡಿಕೊಂಡು ಭೀಮವರಂ ನಲ್ಲಿ ನಿರ್ವಹಿಸುವ ಶಿಬಿರವೇ ಅಲ್ಲದೆ ಎಷ್ಟೋ ಗ್ರಾಮಗಳಲ್ಲಿ 'ಧ್ಯಾನ'ವನ್ನು ಜ್ಞಾನವನ್ನು ಹೇಳಿದೆವು.

ಆಲೋಚಿಸಿ ನೋಡಿದರೆ ಆತ್ಮಕ್ಕೂ ದೇಹಕ್ಕೂ ಎಷ್ಟು ವ್ಯತ್ಯಾಸವಿದೆಯೋ ನಾವು ಅರ್ಥ ಮಾಡಿಕೊಳ್ಳಬಹುದು, ದೇಹ ಅಶಾಶ್ವತ, ಅಂದರೆ ಸ್ವಲ್ಪ ಕಾಲ ಇರುತ್ತದೆ, ಆದರೆ 'ಆತ್ಮ' ಶಾಶ್ವತ ಯಾವಾಗಲೂ ಇರುವಂತಹುದು ಆದ್ದರಿಂದ ನಾವು ದೇಹ ಸೇವೆಗಳಿಗಿಂತ 'ಆತ್ಮ ಸೇವೆಗಳನ್ನು' ಮಾಡಿಕೊಳ್ಳಬೇಕು, ಆದ್ದರಿಂದ ಪತ್ರೀಜಿಯವರನ್ನು ಅನುಸರಿಸುವವರು ತುಂಬಾ ಅದೃಷ್ಟವಂತರು, ಏಕೆಂದರೆ ಅವರು ಹೇಳುವುದು ಪ್ರೋತ್ಸಾಹಿಸುವುದು ಆತ್ಮ ಸೇವೆಯನ್ನು.

# ಆಧ್ಯಾತ್ಮಿಕತೆ

ನಾನು ಚಿಕ್ಕಂದಿನಿಂದಲೂ ಪೂಜೆಗಳು ಮಾಡುವುದು, ದೇವಾಲಯಗಳಿಗೆ ಹೋಗುವುದು, ಸ್ತೋತ್ರಗಳು ಓದುವುದು ವಿಷ್ಣು ಸಹಸ್ರನಾಮಗಳು, ಲಲಿತಾ ಸಹಸ್ರ ನಾಮಗಳು, ಭಗವದ್ಗೀತಾ ಪಾರಾಯಣ ಮಾಡುವುದು, ಪುರಾಣ ಶ್ರವಣಗಳಿಗೆ ಹೋಗುವುದು "ಇವುಗಳೇ ಆಧ್ಯಾತ್ಮಿಕತೆ" ಎಂದುಕೊಳ್ಳುತ್ತಿದ್ದೆ, ನಾನು ಕೂಡ ಹತ್ತು ವರ್ಷಗಳು ಭಜನೆಗಳು ಮಾಡಿದೆನು. ಪ್ರತಿ ಶುಕ್ರವಾರ ಅಮ್ಮನವರ ದೇವಾಲಯದಲ್ಲಿ ಲಲಿತಾ ಪಾರಾಯಣ, ಭಗವದ್ಗೀತಾ ಪಾರಾಯಣ ದೇವಿ ಸ್ತೋತ್ರಗಳು ಮಾಡುತ್ತಾ ಅಮ್ಮನವರ ಮೇಲೆ ಹಾಡುಗಳು ಹಾಡುತ್ತಿದ್ದರು, ಮಂಗಳವಾರ ರಾಮಾಲಯಕ್ಕೆ ಹೋಗಿ ವಿಷ್ಣು ಸಹಸ್ರನಾಮ ಪಾರಾಯಣ, ರಾಮರಕ್ಷಾ ಸ್ತೋತ್ರ, ಹನುಮಾನ್ ಚಾಲೀಸಾ ಓದುತ್ತಿದ್ದೆ, ಈ ಪಾರಾಯಣಗಳೆಲ್ಲಾ ಮಾಡಿದರೆ ಎಷ್ಟೋ ಪುಣ್ಯ ಬರುತ್ತದೆ ಎಂದು ಮಾಡುತ್ತಿದ್ದೆ ಆದರೆ ಅದಕ್ಕೂ ಮೀರಿ ಆಲೋಚಿಸುತ್ತಿರಲಿಲ್ಲ.

ಮೊದಲಿಗೆ ಯಾರಿಗಾದರೂ ಹೆಚ್ಚಾಗಿ ದೈವ ಸಂಬಂಧವಾದ ಕೆಲಸಗಳಲ್ಲಿ ಪಾಲ್ಗೊಳ್ಳುವವರನ್ನು "ಅವರಿಗೆ ಈ ಮಧ್ಯೆ ಆಧ್ಯಾತ್ಮಿಕತೆ ಹೆಚ್ಚಾಗಿದೆ"? ಎನ್ನುತ್ತಿದ್ದೆವು ಆದರೆ "ಇವು ಆಧ್ಯಾತ್ಮಿಕತೆಯಲ್ಲ" ಎಂದು ಪತ್ರೀಜಿಯವರ ಪರಿಚಯವಾಗುವ ವರೆಗೂ ನನಗೆ ತಿಳಿಯಲಿಲ್ಲ, ಅವರ ಪರಿಚಯವಾದ ಮೇಲೆ ಆಧ್ಯಾತ್ಮಿಕತೆ ಎಂದರೆ ಆತ್ಮಕ್ಕೆ ಸಂಬಂಧಿಸಿದ್ದು ಎಂದು ಅರ್ಥವಾಯಿತು. ಆದ್ದರಿಂದ ಆತ್ಮೋನ್ನತಿಗೆ ಸಂಬಂಧಿಸಿದ ಕೆಲಸಗಳು ಮಾಡಬೇಕು ಎಂತಹ ಕೆಲಸಗಳು ಮಾಡಿದರೆ ಆತ್ಮೋನ್ನತಿ ಆತ್ಮೋದ್ಧರಣೆ ಆಗುತ್ತದೋ ಆ ಕೆಲಸಗಳು ಮಾಡಿದರೇನೆ ಆಧ್ಯಾತ್ಮಿಕತೆಯಲ್ಲಿ ಇದ್ದ ಹಾಗೆ ಎಂದು ಪತ್ರೀಜಿ ಹೇಳುವುದರೊಂದಿಗೆ ನನಗೆ ಅರ್ಥವಾಯಿತು.

ಆಧ್ಯಾತ್ಮಿಕತೆ ಎಂದರೆ 'ಆತ್ಮ'ದ ಬಗ್ಗೆ ಅಧ್ಯಯನ ಮಾಡುವುದು ಎಂದು ತಿಳಿದುಕೊಂಡನು, ಆತ್ಮದ ಬಗ್ಗೆ ತಿಳಿದುಕೊಂಡರೆ ಎಲ್ಲವೂ ತಿಳಿದುಕೊಂಡಂತೆ 'ಆತ್ಮ'ವನ್ನು ತಿಳಿದುಕೊಳ್ಳದಿದ್ದರೆ ಏನೂ ತಿಳಿಯದ ಹಾಗೆಯೇ ಎಂದು ಅರ್ಥವಾಗುತ್ತದೆ.

ನಾವು ತಿಳಿದುಕೊಳ್ಳಬೇಕಾದದ್ದು, ಹೊಂದಬೇಕಾದದ್ದು ಹೊರಗೆ ಇಲ್ಲ, ಇರುವುದೆಲ್ಲ ನಮ್ಮಲ್ಲೇ ಇದೆ ಎಂದು ತಿಳಿದುಕೊಂಡಮೇಲೆ ನಮ್ಮಲ್ಲಿ ಇರುವ ಆತ್ಮವನ್ನು ತಿಳಿದುಕೊಳ್ಳಲು ಒಳ್ಳೆಯ ಮಾರ್ಗ "ಶ್ವಾಸದ ಮೇಲೆ ಗಮನ" 'ಧ್ಯಾನ'ಎಂದು ಅರ್ಥವಾಯಿತು, ಏಕೆಂದರೆ ನಿನ್ನೊಳಗೆ ಹೋಗುವುದು, ಹೊರಗೆ ಬರುವುದು ನಿನ್ನ ಶ್ವಾಸವೇ, ಅದರ ಮೇಲೆ ಗಮನ ಇಟ್ಟರೇನೇ ಎಲ್ಲವೂ ತಿಳಿಯುತ್ತದೆ, ಎಂದು ಪತ್ರೀಜಿ

ಹೇಳಿದರು. 'ಆತ್ಮವನ್ನು ತಿಳಿದುಕೊಳ್ಳದವರೆಗೂ ಶರೀರವೇ ನಾನೆಂದು ಕೊಳ್ಳುತ್ತೇವೆ, ಯಾವಾಗ 'ಆತ್ಮ'ದ ಬಗ್ಗೆ ತಿಳಿದುಕೊಳ್ಳುತ್ತೇವೆಯೋ ಆಗ ಇದು ನನ್ನ ಶರೀರ, ನಾನು 'ಆತ್ಮ' ಎಂದು ಅರ್ಥವಾಗುತ್ತದೆ.

ಹೇಗೆಂದರೆ? "ನನಗೆ ಕಾಲು ನೋವು, ಹಲ್ಲು ನೋವು ನನ್ನ ಶರೀರ ಕಪ್ಪಗಿದೆ ಬೆಳ್ಳಗಿದೆ ನನಗೆ ಮುಖದಲ್ಲಿ ಮೊಡವೆ ನನ್ನ ಮೂಗು, ಕಣ್ಣು, ನನ್ನ ಕಿವಿಗಳು, ನನ್ನ ಬಾಯಿ, ನನ್ನ ಕೂದಲು ಎಂದು ಹೇಳುತ್ತಾ ಇರುತ್ತೇವೆ ಇವೆಲ್ಲ ಶರೀರದಲ್ಲಿನ ಭಾಗಗಳು ಹಾಗಾದರೆ ಈ ಭಾಗಗಳು ನನ್ನದಾದರೆ ನಾನು ಯಾರು? ಈ ಶರೀರದ ಅವಯವಗಳು ನನ್ನವು ಎನ್ನುವುದಾದರೆ 'ನಾನು' ಬೇರೆ ಎಂದೇ ಅರ್ಥ!! ಶರೀರವಲ್ಲದೆ ಬೇರೆ ಏನಿದೆ ಯೋಚಿಸಿದರೆ ಆ 'ನಾನು' ಎನ್ನುವುದೇ ಶರೀರದಲ್ಲಿರುವ 'ಆತ್ಮ' ಎಂದು ತಿಳಿಯುತ್ತದೆ. ಅಂದರೆ ಆ ಆತ್ಮವೇ ನಾನು ಎಂದು ಅರ್ಥವಾಗುತ್ತದೆ.

ಶರೀರ ನನ್ನದು ಎಂದು ತಿಳಿಯುತ್ತದೆ, ಇದು ತಿಳಿದುಕೊಂಡ ಮೇಲೆ 'ಆತ್ಮ'ಕ್ಕಾಗಿ ಅಂದರೆ ನನಗಾಗಿ ಪ್ರಯತ್ನಿಸುತ್ತೇವೆ, ಶರೀರಕ್ಕೆಂದು ಪ್ರಯತ್ನಿಸುವುದಿಲ್ಲ. ಏಕೆಂದರೆ, ಈ ಶರೀರ ಈಜನ್ಮದೊಂದಿಗೆ ಅಂದರೆ ಇಲ್ಲಿಗೆ ಕೊನೆಯಾಗುತ್ತದೆ, ಮತ್ತೆ ಜನ್ಮ ತೆಗೆದು ಕೊಳ್ಳಬೇಕೆಂದರೆ, ಇನ್ನೊಂದು ಶರೀರ ಬೇಕು. ಹಾಗಾದರೆ ಜನ್ಮ ಜನ್ಮಗಳಿಗೆ ನಶಿಸದ 'ಆತ್ಮ'ಕ್ಕಾಗಿ ಆಲೋಚಿಸಬೇಕೆ? ಅಥವಾ ನಶಿಸುವ ಶರೀರಕ್ಕಾಗಿ ಆಲೋಚಿಸಬೇಕೆ? ಆತ್ಮದ ಬಗ್ಗೆಯೇ ಆಲೋಚಿಸಬೇಕು ಎಂದು ಅರ್ಥವಾಗುತ್ತದೆ, ಈ ವಿಷಯಗಳೆಲ್ಲವನ್ನೂ ಪತ್ರೀಜಿ ಹೇಳುತ್ತಿದ್ದಾರೆ, ಅವರಿಗೆ ಈ ಸತ್ಯದ ಬಗ್ಗೆ ತಿಳಿದಿದೆ, ಸತ್ಯವನ್ನು ತಿಳಿದುಕೊಂಡವರೇ ಸತ್ಯದಬಗ್ಗೆ ಹೇಳಬಲ್ಲರು.

ಪತ್ರೀಜಿಯವರಿಗೆ ಈ ಭೂಲೋಕದ ಬಗ್ಗೆ ಮಾತ್ರ ಅಲ್ಲ! ಕಣ್ಣಿಗೆ ಕಾಣಿಸದ ಸೂಕ್ಷ್ಮ ಲೋಕಗಳ ಬಗ್ಗೆ, ಸೃಷ್ಟಿ ಕುರಿತಾದ ಜ್ಞಾನವೂ ತಿಳಿದಿದೆ, ಅವರು ಬರೆದ "ಜ್ಞಾನ ನವರತ್ನಗಳು" ಎನ್ನುವ ಪುಸ್ತಕದಲ್ಲಿ, 'ಆತ್ಮ'ವೇ 'ಪರಬ್ರಹ್ಮ' ಎಂದು ಜೀವನೇ ದೇವರೆಂದು ದೇಹವೇ ದೇವಾಲಯ ಎಂದು ತಿಳಿಸಿದ್ದಾರೆ. "ಮೋಕ್ಷವೆನ್ನುವುದು ಪೂಜೆಗಳು, ಭಜನೆಗಳು, ಯಜ್ಞ ಯಾಗಾದಿಗಳಿಂದ ಬರುವುದಿಲ್ಲ, 'ಧ್ಯಾನ'ದಿಂದ ಆತ್ಮವನ್ನು ತಿಳಿದುಕೊಳ್ಳುವುದರಿಂದ ಮಾತ್ರ ಮೋಕ್ಷವು ಬರಲು ಸಾಧ್ಯ ಎಂದು ಹೇಳಿದ್ದಾರೆ.

ಪತ್ರೀಜಿಯವರು ಇನ್ನೂ ಏನು ಹೇಳಿದ್ದಾರೆ, ಎಂದರೆ "ಶ್ವಾಸದ ಮೇಲೆ ಗಮನ' ಇರಿಸುವುದೇ 'ಧ್ಯಾನ', ಇನ್ನೂ ಯಾವ ವಿಧವಾದ 'ಧ್ಯಾನ'ಗಳು ಸರಿಯಾದ ವಿಧಾನವಲ್ಲ, ಏಕೆಂದರೆ ಪತಂಜಲಿ ಮಹರ್ಷಿ 'ಧ್ಯಾನಂ ನಿರ್ವಿಷಯಂ ಮನಃ'

ಎಂದಿದ್ದಾರೆ, ಅಂದರೆ ಮನಸ್ಸಿನಲ್ಲಿ ಯಾವ ವಿಷಯಗಳು ಇರಬಾರದೆಂದು ಅರ್ಥ, ಮನಸ್ಸು ಕೆಲಸ ಮಾಡಬಾರದೆಂದು ಇದರ ಅರ್ಥ. ಮನಸ್ಸು ಕೆಲಸ ಮಾಡಿದರೆ ಅದು 'ಧ್ಯಾನ'ವಲ್ಲ, ಆದ್ದರಿಂದ ನಾವು ಯಾವ ಮಂತ್ರ ಉಚ್ಚರಿಸಿದರೂ, ಮನಸ್ಸಿನಲ್ಲಿ ಸ್ಮರಣೆ ಮಾಡಿದರೂ, ವಿಗ್ರಹದ ಮೇಲೆ ದೃಷ್ಟಿ ಹರಿಸಿದರೂ, ಮನಸ್ಸು ಕೆಲಸ ಮಾಡುತ್ತದೆ. ಚಕ್ರಗಳ ಮೇಲೆ ದೃಷ್ಟಿಯಿಟ್ಟು ಮಾಡಿದರೂ ಮನಸ್ಸು ಕೆಲಸ ಮಾಡುತ್ತದೆ. ಶ್ವಾಸವನ್ನು ಗಮನಿಸಿದರೆ ಆಗ ಸರಿಯಾದ 'ಧ್ಯಾನ'ವಾಗುವುದು ಎಂದು ಪತ್ರೀಜಿ ಹೇಳಿದ್ದಾರೆ.




ಶ್ವಾಸಕ್ಕೆ ಮನಸ್ಸಿಗೆ ಒಂದಕ್ಕೊಂದು ಕೊಂಡಿ ಇರುತ್ತದೆ, ಆದ್ದರಿಂದ ಮನಸ್ಸು ನಮ್ಮ ಅಧೀನಕ್ಕೆ ಬರಬೇಕೆಂದರೂ, ಶೂನ್ಯವಾಗಬೇಕೆಂದರೂ, ಶ್ವಾಸವನ್ನು ಗಮನಿಸಬೇಕು. ನಮಗೆ ಕೋಪ ಬಂದಾಗ ಶ್ವಾಸವು ವೇಗವಾಗಿರುತ್ತದೆ, ಶಾಂತರಾಗಿ ಇದ್ದಾಗ ಶ್ವಾಸವು ನಿಧಾನವಾಗಿ ಇರುತ್ತದೆ, ಅಂದರೆ ನಮ್ಮ ಮನಸ್ಸಿಗೆ ಅನುಗುಣವಾಗಿ ಶ್ವಾಸ ಇರುತ್ತದೆ ಎಂದು ಅರ್ಥವಾಗುತ್ತದೆ. ನಾವು ಮನಸ್ಸು ಕೆಲಸ ಮಾಡದ ಸ್ಥಿತಿಗೆ ಬರಬೇಕೆಂದರೆ ಶ್ವಾಸವನ್ನು ಹಿಡಿಯಬೇಕು ಎಂದು ಅರ್ಥವಾಗುತ್ತದೆ. ಶ್ವಾಸವನ್ನು ಗಮನಿಸುವುದರಿಂದ ನಾವು ಅಂತರ್ ಪ್ರಯಾಣ ಮಾಡಬಲ್ಲೆವು ಎಂದು ಹೇಳಿದ್ದಾರೆ ಪತ್ರೀಜಿ. ಅವರಿಂದಲೇ ಆಧ್ಯಾತ್ಮಿಕತೆಗೆ ಸರಿಯಾದ ಅರ್ಥ ತಿಳಿದುಕೊಂಡೆನು.



# ನನ್ನ ಪುನರ್ಜನ್ಮ

ನಾನು 'ಧ್ಯಾನ' ಚೆನ್ನಾಗಿ ಮಾಡುತ್ತಿದ್ದೆ, ಬೆಳಿಗ್ಗೆ ಎರಡು ಗಂಟೆ, ರಾತ್ರಿ ಎರಡು ಗಂಟೆ ಮಾಡುತ್ತಿದ್ದೆ 'ಧ್ಯಾನ'ವು ಅಭ್ಯಾಸವಾದ ಮೇಲೆ, 'ಧ್ಯಾನ'ಮಾಡದಿದ್ದರೆ ತುಂಬಾ ಬೇಜಾರು ಎನಿಸುತ್ತಿತ್ತು. 'ಧ್ಯಾನ'ವು ಒಂದು ಮತ್ತಿನಂತೆ ಇರುತ್ತಿತ್ತು.

ಆದರೆ 'ಧ್ಯಾನ' ಪ್ರಚಾರ ಮಾಡಬೇಕೆಂದರೆ ಇಷ್ಟ ಇರುತ್ತಿರಲಿಲ್ಲ, ಎಲ್ಲಿಗಾದರೂ ಹೋಗಿ 'ಧ್ಯಾನ'ಹೇಳಿಕೊಡಬೇಕು ಎಂದರೆ ಇಷ್ಟವಾಗುತ್ತಿರಲಿಲ್ಲ, ಪತ್ರೀಜಿಯವರು ಬಂದಾಗ ಮಾತ್ರ ಅವರ ಜೊತೆ ಹೋಗುತ್ತಿದ್ದೆ, ಮೊಟ್ಟ ಮೊದಲು ಪತ್ರೀಜಿ ಎರಡು ತಿಂಗಳಿಗೆ ಒಮ್ಮೆ ಭೀಮವರಂಗೆ ಬಂದು ಸುತ್ತಮುತ್ತಲಿನ ಎಲ್ಲಾ ಗ್ರಾಮಗಳಿಗೆ ಹೋಗಿ ಕ್ಲಾಸ್‌ಗಳು ಹೇಳುತ್ತಿದ್ದರು, ಅವರೊಂದಿಗೆ ಪ್ರಯಾಣ ಅದ್ಭುತವಾಗಿ ಇರುತ್ತಿತ್ತು. ಅವರು ಎಷ್ಟೋ ವಿಷಯಗಳನ್ನು ಹೇಳುತ್ತಿದ್ದರು. ಅವರ ಬಾಯಿಯಿಂದ ಹೊರಟ ಪ್ರತಿ ಮಾತು ನಮ್ಮ ಜೀವನಕ್ಕೆ ಅಗತ್ಯವಿದೆ ಎನಿಸುತ್ತಿತ್ತು. ಅವರು ಮಾತನಾಡುತ್ತಿದ್ದರೆ "ಅದು ನಮಗೇ ಹೇಳಿದರು ಎಂದುಕೊಳ್ಳುತ್ತಿದ್ದರು. ಅವರು ಹೇಳಿದ ವಿಷಯ ಕೇಳಿದ ನಂತರ "ನನ್ನ ಸಂದೇಹ ಹೋಯಿತು" ಎಂದು ಎಷ್ಟೋ ಜನರು ಹೇಳಿದರು. ಹಾಗೆ ನನಗೂ ಕೂಡ ಎಷ್ಟೋ ಸಂದೇಹಗಳು ಪರಿಹಾರವಾಗುತ್ತಿತ್ತು.

ಅವರ ಕ್ಲಾಸ್ ಎಲ್ಲಿ ನಡೆದರೂ ಹೋಗುತ್ತಿದ್ದೆವು, 2003 ನವೆಂಬರ್ 2 ನೆಯ ತಾರೀಕು ಪತ್ರೀಜಿ ಕ್ಲಾಸ್ "ಅಮಲಾಪುರಂ"ನಲ್ಲಿ ಇತ್ತು ಬೆಳಿಗ್ಗೆನೇ ಹೊರಡಬೇಕು ಎಂದುಕೊಂಡೆವು, ನನಗೆ ಬೆಳಿಗ್ಗೆ ಎದ್ದ ತಕ್ಷಣ ಕಾಫಿ ಕುಡಿಯುವುದು ಅಭ್ಯಾಸ, ಹಾಗೆ ಆ ದಿನ ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು 'ಧ್ಯಾನ' ಮಾಡಿ ಹೊರಡೋಣವೆಂದು, ಕಾಫಿ ಮಾಡಲು ಅಡುಗೆ ಮನೆಗೆ ಹೋಗಿ ಸ್ಟವ್ ಹಚ್ಚಿದ ಒಡನೆಯೇ ಒಲೆಯಿಂದ ಬಂದ ದೊಡ್ಡ ಜ್ವಾಲೆ ನನ್ನನ್ನು ಸುತ್ತುವರಿಯಿತು, ನನ್ನ ಶರೀರವೆಲ್ಲಾ ಸುಟ್ಟು ಹೋಯಿತು! ನಮ್ಮ ಯಜಮಾನರು ಬಂದು ರಗ್ಗು ಹೊದಿಸಿದರು, ಜ್ವಾಲೆ ನಂದಿಹೋಗಲಿಲ್ಲ, ಆಗ ಇನ್ನೊಂದು ರಗ್ಗನ್ನು ಹೊದಿಸಿದ ಮೇಲೆ ಬೆಂಕಿ ನಂದಿಹೋಯಿತು. ಉರಿಯುತ್ತಿದ್ದ ಜ್ವಾಲೆಯನ್ನು ನಂದಿಸಲು ಪ್ರಯತ್ನಿಸಿದಾಗ ಅವರ ಕೈ, ಕಾಲುಗಳಿಗೆ ಬೆಂಕಿ ತಗುಲಿತು, ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರೂ, ಅಲ್ಲಿ ವೈದ್ಯರು "ಇಲ್ಲಿ ಆಗುವುದಿಲ್ಲ" ಎಂದರು, ಆದರೂ ಆಸ್ಪತ್ರೆಗೆ ಸೇರಿಸಿಕೊಂಡರು, ಆದರೆ ಬದುಕುತ್ತೇನೆ ಎಂದು ಗ್ಯಾರೆಂಟಿ ಕೊಡಲಿಲ್ಲ.

ಈ ವಿಷಯವನ್ನು ಆ ದಿನ "ಅಮಲಾಪುರಂ"ನಲ್ಲಿ ಕ್ಲಾಸ್ ಮಾಡುತ್ತಿದ್ದ ಪತ್ರೀಜಿಗೆ ಯಾರೋ ಹೇಳಿದರಂತೆ, ಆಗ ಪತ್ರೀಜಿ "ಮೇಡಂ ಕೆಲಸ ಇನ್ನು ಭೂಮಿ ಮೇಲೆ ಇದೆ" ಅವರಿಗಾಗಿ 'ಧ್ಯಾನ' ಮಾಡಿ ಎಂದು ಎಲ್ಲರಿಂದ 'ಧ್ಯಾನ' ಮಾಡಿಸಿ, ಅಲ್ಲಿ ಕ್ಲಾಸ್ ಪೂರ್ತಿಯಾದ ಮೇಲೆ ಭೀಮವರಂ ಬಂದು ನನ್ನ ಬಳಿಯಲ್ಲಿ ಕುಳಿತು 'ಧ್ಯಾನ' ಮಾಡಿ ಮೇಡಂ ಬದುಕುತ್ತಾರೆ ಎಂದು ಹೇಳಿದರಂತೆ.

ನಾನು ಸತ್ತು ಹೋಗುತ್ತೇನೆ ಎಂದು ನಮ್ಮ ತಾಯಿ, ಅಣ್ಣಂದಿರು ವೆಸ್ಟ್ ಬೆಂಗಾಲ್ ನಿಂದ ಬಂದರು ನಮ್ಮ ತಾಯಿ ಎಷ್ಟೋ ಒಳ್ಳೆಯ ಕೆಲಸ ಮಾಡುತ್ತೀಯಾ ಆದರೆ ನೀನು ಹೀಗೆ ಏಕೆ ಸುಟ್ಟು ಹೋಗಬೇಕು? ಎಂದು ಕೇಳಿದರು, ಆಗಲೇ 'ಧ್ಯಾನ' ಮಾಡುತ್ತಾ ಪತ್ರೀಜಿ ಅವರಿಂದ ಕಲಿತ ಜ್ಞಾನದಿಂದ ನಾನು ಅಧೈರ್ಯಗೊಳ್ಳಲಿಲ್ಲ, ಈ ಜನ್ಮದಲ್ಲಿ ಎಲ್ಲಾ ಒಳ್ಳೆಯದೇ ಮಾಡಿದ್ದೇನೆ, ಒಳ್ಳೆಯವಳಾಗಿ ಇದ್ದೇನೆ, ಆದರೆ ಹಿಂದಿನ ಜನ್ಮದಲ್ಲಿ ಎಷ್ಟೋ ಮೀನು, ಕೋಳಿ, ಮೇಕೆಗಳು ಸಾಯಿಸಿ ಅವುಗಳ ರಕ್ತವನ್ನು, ಮಾಂಸವನ್ನು ತಿಂದಿರಬಹುದು ಅದರ ಫಲಿತವೇ ಇದು ಇರಬಹುದು, ಎಂದು ಅರ್ಥ ಮಾಡಿಕೊಂಡೆನು. ಕರ್ಮ ಅನುಭವಿಸುತ್ತೇನೆ ಎಂದು ಮೇಲಿನ ಲೋಕಗಳಿಂದ ಅಂದುಕೊಂಡು ಬಂದಾಗ ಅನುಭವಿಸಬೇಕು ಅಲ್ಲವೇ ಈ ವಿಷಯ ತಿಳಿಯದಿದ್ದರೆ ನಾನು ಕೂಡ ಕೊರಗುತ್ತಿದ್ದೇನೇನೋ?! ಆದರೆ ಪತ್ರೀಜಿಯವರಿಂದ ತಿಳಿದುಕೊಂಡ ಜ್ಞಾನ ನನಗೆ ಎಷ್ಟೋ ಧೈರ್ಯವನ್ನು ನೀಡಿತು, ಇದೆಲ್ಲಾ ನನ್ನ ಕರ್ಮಫಲವೇ! ನಾವು ಮಾಡಿದ ಕರ್ಮಗಳೇ ನಾವು ಅನುಭವಿಸುತ್ತಿದ್ದೇವೆ ಎಂದು ಹೇಳಿಕೊಂಡಮೇಲೆ ಇನ್ನು ಯಾವ ನೋವು ಇರುವುದಿಲ್ಲ, ಯಾವ ಕರ್ಮಗಳು ಅನುಭವಿಸುತ್ತೇವೆ ಎಂದು ನಿರ್ಣಯಿಸಿಕೊಂಡು ಭೂಮಿ ಮೇಲೆ ಬರುತ್ತೇವೋ ಅವುಗಳನ್ನೇ ಅನುಭವಿಸುತ್ತೇವೆ ಎಂದು ತಿಳಿದುಕೊಂಡರೆ ಯಾರೂ ಸಹ ಕರ್ಮವನ್ನು ಅನುಭವಿಸುವಾಗ ಕೊರಗುವುದಿಲ್ಲ. ಆದರೆ 'ಧ್ಯಾನ' ಮಾಡದೇ ಇರುವವರಿಗೆ ತಿಳಿಯುವುದಿಲ್ಲ, 'ಧ್ಯಾನ'ಮಾಡಿ ಜ್ಞಾನ ಹೊಂದಿದವರಿಗೆ ಮಾತ್ರ ತಿಳಿಯುತ್ತದೆ.

ಹಾಗೆ ಹತ್ತು ದಿನಗಳು ಭೀಮವರಂ ಆಸ್ಪತ್ರೆಯಲ್ಲಿ ಇದ್ದೆನು, ಇದು ಲಾಭವಿಲ್ಲ ಎಂದು ನಮ್ಮ ಮಕ್ಕಳು ಕಂಗಾಲಾಗಿ ಹೈದರಾಬಾದ್ ಅಪೋಲೋ ಹಾಸ್ಪಿಟಲ್ ನಲ್ಲಿ ಸೇರಿಸಿದರು. ಅಲ್ಲಿನ ವೈದ್ಯರು ಕೂಡ ಬದುಕುವುದು ಕಷ್ಟವೆಂದು ಹೇಳಿದರು, ನಮ್ಮ ಕುಟುಂಬದ ಸದಸ್ಯರೆಲ್ಲರೂ ತಳಮಳಗೊಂಡರು, ಯಾರಿಗೂ ಏನು ಮಾಡಬೇಕು ಎಂದು ತಿಳಿಯಲಿಲ್ಲ, ಆದರೆ ಮಾರನೆಯ ದಿನ ಪತ್ರೀಜಿ ಬಂದು "ಮೇಡಂ ಬದುಕುತ್ತಾರೆ" ಎಂದು ಹೇಳಿದರಂತೆ, ನಾಲ್ಕು ದಿನಗಳು ಪತ್ರಿ ಮೇಡಂ ರನ್ನು ಆಸ್ಪತ್ರೆಗೆ ಕಳುಹಿಸಿ ನನ್ನ

ಬಳಿ 'ಧ್ಯಾನ'ಮಾಡಲು ತಿಳಿಸಿದರು, ಅವರು ಒಂದು ಪಿರಮಿಡ್ಡನ್ನು ಆಸ್ಪತ್ರೆಯಲ್ಲಿ ಇದ್ದ ನನ್ನ ಹಾಸಿಗೆ ಮೇಲೆ ಇಟ್ಟು 'ಧ್ಯಾನ' ಮಾಡಿದರು, ಸಾರ್ ರವರು ತುಂಬಾ ಜನರ ಕೈಯಲ್ಲಿ ಕೂಡ 'ಧ್ಯಾನ' ಮಾಡಿಸಿದರು, ನನ್ನನ್ನು ಭೇಟಿಯಾಗಲು ಒಂದು ಗಂಟೆಯ ಕಾಲ ಕಳುಹಿಸುತ್ತಿದ್ದರು ರಾಘವರಾವ್ ರವರು ದಿನವೂ ಬಂದು 'ಧ್ಯಾನ'ಕ್ಕೆ ಸಂಬಂಧಿಸಿದ ವಿಷಯಗಳನ್ನೇ ಮಾತಾಡುತ್ತಿದ್ದರು.

ಸಮಾಧಾನದಿಂದ ಪ್ರೇಮದಿಂದ ಮಾತನಾಡಿಸಿ ಒಂದು ಪುಟ್ಟ ಮಗುವಿನಂತೆ ನನ್ನನ್ನು ನೋಡಿಕೊಳ್ಳುತ್ತಿದ್ದರು.

ಎರಡು ತಿಂಗಳು ಕಳೆಯುವುದರೊಳಗೆ ನನ್ನ ಶರೀರದಲ್ಲಿನ ಪ್ರತಿ ಅಂಗವೂ ಚಲನವಿಲ್ಲದೇ ಆಯಿತು, ರಕ್ತವೆಲ್ಲಾ ಹೋಗಿದ್ದರಿಂದ ಶರೀರ ಸತ್ತ ಹಾಗೆ ಆಯಿತು, ವೈದ್ಯರು ದಿನವೂ ಬಟ್ಟೆ ಹಾಕಿ, ದೊಡ್ಡ ದೊಡ್ಡ ಹತ್ತಿಯ ಉಂಡೆಗಳನ್ನು ಶರೀರದ ಸುತ್ತಲೂ ಕಟ್ಟುತ್ತಿದ್ದರು, ಮಾರನೆಯ ದಿನ ಕೀವು, ರಕ್ತದಿಂದ ಆ ಹತ್ತಿ ರಟ್ಟಿನಂತೆ ಶರೀರಕ್ಕೆ ಅಂಟಿಕೊಳ್ಳುತ್ತಿತ್ತು, ಆಗ ಸಲೈನ್ ಬಾಟಲ್ ಗಳು ನನ್ನ ಮೇಲೆ ಹಾಕಿ ನೆನೆಸಿ ಆ ಬ್ಯಾಂಡೇಜನ್ನು ಕೀಳುತ್ತಿದ್ದರು, ಆಗ ತಡೆದುಕೊಳ್ಳಲಾರದ ನೋವು, ಉರಿ ಉಂಟಾಗಿ ನರಕವನ್ನು ನೆನಪಿಸುತ್ತಿತ್ತು, ಅಡುಗೆ ಮಾಡುವಾಗ ಒಂದು ಬೆರಳು ಸುಟ್ಟರೆ "ಉರಿ, ಉರಿ" ಎನ್ನುತ್ತೇವೆ. ಅಂತಹುದರಲ್ಲಿ ಇಡೀ ಶರೀರ ಹೇಗೆ ತಡೆದುಕೊಳ್ಳಬೇಕು, ಅದೂ ಅಲ್ಲದೆ ಕದಲದೇ ಒಂದೇ ಕಡೆ ಮಲಗಿದ್ದರಿಂದ ಬೆನ್ನ ಮೇಲೆ ಗಾಯಗಳಾಗಿ ಅದು ಇನ್ನೂ ನೋವು ಕೊಡುತ್ತಿತ್ತು ಏಳಲು ಅಸಾಧ್ಯ. "ಇದೆಲ್ಲಾ ನನ್ನ ಕರ್ಮಫಲವೇ" ಎಂದು ಅರ್ಥವಾದ ಮೇಲೆ ನನ್ನ 'ಧ್ಯಾನ'ಶಕ್ತಿಯಿಂದ ನೋವನ್ನು ತಡೆದುಕೊಳ್ಳುವ ಶಕ್ತಿ ಬಂದಿತು.

ಶರೀರ ಸಂಪೂರ್ಣವಾಗಿ ಚಲನ ವಿಲ್ಲದೇ ಹೋಗಿದ್ದರಿಂದ ವೈದ್ಯರು ಶರೀರ ಔಷಧಿಗಳಿಗೆ ಸ್ಪಂದಿಸುತ್ತಿಲ್ಲ ಎಂದು ಡ್ರೆಸ್ಸಿಂಗ್ ಮಾತ್ರ ಮಾಡುತ್ತಿದ್ದರು. ಅಲ್ಲಿಯವರೆಗೆ ಪತ್ರಿ ಸಾರ್ ಮೂರು ಬಾರಿ ಬಂದರು. ಯಾವಾಗಲೂ ಧೈರ್ಯದಿಂದ ಮಾತನಾಡುವ ನಾನು ನಾಲ್ಕನೆಯ ಬಾರಿ ಬಂದಾಗ ಅವರನ್ನು ಹಿಡಿದು ಅತ್ತುಬಿಟ್ಟೆನು, ಯಾವಾಗ ಬಂದರೂ ಕುರ್ಚಿಯಲ್ಲಿ ಕುಳಿತು ಮಾತನಾಡುವ ಸಾರ್ ಆ ದಿನ ಸುಟ್ಟು ಹೋದ ನನ್ನ ಎಡಗೈ ಹಿಡಿದುಕೊಂಡು ನೆಲದ ಮೇಲೆ ಕುಳಿತರು. ಹೀಗೆ ಒಂದಿಂಚು ಕದಲಲಾಗದೆ ಇರುವ ಈ ಬದುಕು ನನಗೆ ಬೇಡ ಎಂದು ಅತ್ತು ಬಿಟ್ಟೆನು. ನನಗೆ ಆ ದಿನಗಳಲ್ಲಿ ಸೇವೆ ಎಂದರೆ ಇಷ್ಟ, ನಾನು ಸತ್ತರೆ ಇನ್ಸ್ಟಿಟ್ಯೂಟ್ ಮುಚ್ಚುತ್ತಾರೆ, ನಾನು ಇನ್ನಷ್ಟು ದಿನ ಬದುಕಿ ಸೇವೆ ಮಾಡಬೇಕು ಎಂದುಕೊಂಡೆನು, ಅದೇ ಸಾರ್ ರೊಂದಿಗೆ ಹೇಳಿದನು, ಬದುಕಬೇಕೆಂಬ

ಆಸೆ ಇಷ್ಟು ನಿಕೃಷ್ಟವಾಗಿ ಇರುತ್ತದೆ ಎಂದು ಗೊತ್ತಿರಲಿಲ್ಲ, ಇಲ್ಲದಿದ್ದರೆ ಬದುಕಬೇಕೆಂದು ಬಯಸುತ್ತಿರಲಿಲ್ಲ "ಸೇವೆಗಾಗಿ ಬದುಕಬೇಕೆಂದುಕೊಳ್ಳುವ ನಾನು ಮಂಚದ ಮೇಲಿಂದ ಏಳಲಾಗದ ನಾನು ಏನು ಸೇವೆ ಮಾಡುತ್ತೇನೆ? ಬದುಕಿದರೂ ವ್ಯರ್ಥವಲ್ಲವೇ? ಇಂತಹ ಬದುಕು ನನಗೆ ಬೇಡ ಸಾರ್" ಎಂದು ಎಷ್ಟೋ ಸಮಯದವರೆಗೆ ಪತ್ರೀಜಿಯವರನ್ನು ಹಿಡಿದುಕೊಂಡು ಅತ್ತೆನು. ಆಗ ಸಾರ್ ಹೇಳಿದ ಮಾತು "ನನ್ನ ಮಾತು ನಂಬುತ್ತೀರಾ ಮೇಡಂ" ಎಂದು ಕೇಳಿದರು. "ತಪ್ಪದೇ ನಂಬುತ್ತೇನೆ ಸಾರ್" ಎಂದೆನು, ಆಗ ನೀವು ಬದುಕಿಯೇ ತೀರುತ್ತೀರ ಎಲ್ಲಾ ಕೆಲಸಗಳನ್ನು ಮಾಡಿಕೊಳ್ಳುತ್ತಾ ಮಾಮೂಲಿಯಾಗಿ ಓಡಾಡುವಿರಿ ಎಂದರು.

ಆಗ ತಿರುಪತಿಯಲ್ಲಿ 'ಧ್ಯಾನ'ಯಜ್ಞ ನಡೆಯಿತು, ನಾನು ಹೋಗದ ಹಾಗೆ ಆಯಿತು ಎಂದು ಮತ್ತೆ ಶುರು ಮಾಡಿದರೆ, "ತಿರುಪತಿ ಒಂದೇ ಏನು ನಾವು ವಿದೇಶಗಳಿಗೂ ಹೋಗಿ 'ಧ್ಯಾನ'ಹೇಳುತ್ತೇವೆ" ಎಂದರು. ಆದರೆ ಆಗ ಆ ಮಾತು ನನಗೆ ಅರ್ಥವಾಗಲಿಲ್ಲ, "ನಾನೇನು? ವಿದೇಶಗಳಿಗೆ ಹೋಗುವುದೆಂದರೆ ಏನು? ಎಂದುಕೊಂಡೆನು, ಆದರೆ 2012 ಮೇ ನಲ್ಲಿ ನಾನು ಮಲೇಶಿಯಾ, ಸಿಂಗಪುರ್ ಗೆ ಹೋಗಿ ಕ್ಲಾಸ್ ಹೇಳುತ್ತಿದ್ದಾಗ ನನಗೆ ಅನಿಸಿದ್ದು ಒಬ್ಬ ಯೋಗಿ ಬಾಯಿಂದ ಮಾತು ಬಂದರೆ, ಅದು ನಡೆದೇ ತೀರುತ್ತದೆ ಎಂದು. ಹಾಗೆ ನನ್ನನ್ನು ಎರಡು ಗಂಟೆಗಳು ಸಮಾಧಾನಿಸಿ ಸಾರ್ "ಕಣ್ಣು ಮುಚ್ಚಿಕೊಂಡು ನಿದ್ರೆ ಮಾಡಿ ಮೇಡಂ ನಾನು ಹಾಡು ಹೇಳುತ್ತೇನೆ" ಎಂದು ಅನ್ನಮಾಚಾರ್ಯರ "ನಾನಾಟಿ ಬ್ರತುಕು ನಾಟಕಮು" ಎಂದು ಹಾಡು ಹೇಳಿ ನನ್ನ ನಿದ್ರೆ ಮಾಡಿಸಿ ಹೊರಗೆ ಹೋದರು.

ಯಾವ ಜನ್ಮದಲ್ಲಿ ಮಾಡಿದ ಪುಣ್ಯವೋ ಇಂತಹ ಸದ್ಗುರುವಿನ ಕೈಯಲ್ಲಿ ಹಾಡು ಹಾಡಿಸಿಕೊಂಡು ನಿದ್ರೆ ಮಾಡುವ ಅದೃಷ್ಟ ಉಂಟಾಯಿತು, ಆ ದಿನದಿಂದ ನನ್ನ ದೃಷ್ಟಿಯಲ್ಲಿ ಪತ್ರಿ ಸಾರ್ ಒಬ್ಬ ತಂದೆ, ಒಬ್ಬ ಗುರುವಿನಂತೆ ಉಳಿದಿದ್ದಾರೆ. ಹಾಗೆ ಸಾರ್ ಹೋದ ತಿಂಗಳಿಗೂ ಕೂಡ ಔಷಧಿಗಳು ಕೆಲಸ ಮಾಡದಿದ್ದರೂ ಬದುಕಿದೆನು, ಇದನ್ನು ನೋಡಿದಾಗ ತಿಳಿಯುವುದು ಸಾರ್ ಎಷ್ಟು ಶಕ್ತಿವಂತರು ಎಂದು, ಔಷಧಿಗಳು ಕೆಲಸ ಮಾಡದಿದ್ದರೂ, ಶರೀರ ಸೆಟೆದು ಕೊಂಡರೂ, ವೈದ್ಯರು ಸಾಯುತ್ತೇನೆ ಎಂದು ಹೇಳಿದರೂ, ಸಾರ್ ನೀಡಿದ ಶಕ್ತಿಯೊಂದಿಗೆ ನಾನು ಸಾವಿನಿಂದ ಹೊರ ಬಂದೆನು. ವೈದ್ಯರೊಂದಿಗೆ ಎಲ್ಲರೂ ಕೂಡ ಆಶ್ಚರ್ಯಗೊಂಡರು.

ಬದುಕಿದರೂ ಇನ್ನು ನಡೆಯಲು ಆಗುತ್ತಿರಲಿಲ್ಲ, ಸ್ನಾನ ಮಾಡಿಸಲು, ನಡೆಸಲು ಇಬ್ಬರು ನರ್ಸುಗಳು ಇದ್ದರು, ವೈದ್ಯರು ಆರು ತಿಂಗಳವರೆಗೂ ನಡೆಯಲಾಗುವುದಿಲ್ಲ

ಎಂದರು, ಆದರೆ ನಾನು ನರ್ಸುಗಳು, ನಮ್ಮ ಯಜಮಾನರ ಸಹಾಯದಿಂದ ಹದಿನೈದು ದಿನಗಳಲ್ಲಿ ನಡೆದು ಅಪೋಲೋ ಮೊದಲನೆಯ ಮಹಡಿ ಹತ್ತಿದೆನು.

ವೈದ್ಯರು ಆಶ್ಚರ್ಯಗೊಂಡರು "ಬದುಕುವುದಿಲ್ಲ ಎಂದುಕೊಂಡರೆ, ಬದುಕಿದಿರಿ, ಇಷ್ಟು ಬೇಗ ಹೇಗೆ ಸಾಧ್ಯವಾಯಿತು?" ಎಂದು ಕೇಳಿದರು ನೀವು "ಮೆಡಿಸಿನ್ ಮಾತ್ರ ಕೊಡುತ್ತೀರಿ ನಾವು ಮೆಡಿಟೇಶನ್ ಮಾಡುತ್ತೇವೆ" ಎರಡು ಸೇರಿದರೆ ಬೇಗ ಗುಣಮುಖರಾಗಬಹುದು ಎಂದೆನು.

ನಡೆಯಲು ಬಂದಮೇಲೆ ಪತ್ರಿ ಸಾರ್ ಮನೆಗೆ ಹೋದೆನು, ಸಾರ್ ನಮ್ಮ ಕಾರ್ ನಿಂತ ತಕ್ಷಣವೇ ಕಾರಿನ ಬಳಿಬಂದು ಬಾಗಿಲು ತೆಗೆದು ಒಂದು ಹಸುಗೂಸನ್ನು ಆಪ್ಯಾಯತೆಯಿಂದ ಹೇಗೆ ಇಳಿಸುತ್ತಾರೋ ಹಾಗೆ ನನ್ನನ್ನು ಕಾರಿನಿಂದ ಇಳಿಸಿ ಮನೆಯಲ್ಲಿ ಕೂರಿಸಿ, ಅವರ ಅಮ್ಮನಿಗೆ "ಅಮ್ಮ ಭೀಮವರಂ ಮೇಡಂ ನಮ್ಮ ಮನೆಗೆ ಬಂದಿದ್ದಾರೆ ಬಾ!" ಎಂದು ಕರೆದು ನನ್ನನ್ನು ತೋರಿಸಿದರು.

ಆ ದಿನ ಪತ್ರೀಜಿಯವರಲ್ಲಿ "ಸತ್ತು ಹೋಗುತ್ತದೆ ಎಂದುಕೊಂಡ ಮಗು ಬದುಕಿ ಮನೆಗೆ ಬಂದರೆ ತಂದೆ ಎಷ್ಟು ಆನಂದ ಪಡುತ್ತಾನೋ ಅಷ್ಟು ಆನಂದವನ್ನು ಅವರ ಮುಖದಲ್ಲಿ ನೋಡಿದೆನು! ನನ್ನನ್ನು ನೋಡುತ್ತಾ "ಎಷ್ಟು ಅಂದವಾಗಿ ಅಪರಂಜಿ ಬೊಂಬೆಯಂತೆ ಇದ್ದೀರಾ ಮೇಡಂ" ಎಂದರು ಆದರೆ ನನ್ನ ಕೂದಲು ಸುಟ್ಟು, ಹುಬ್ಬುಗಳು ಸುಟ್ಟು, ಮುಖ ಶರೀರ ಸುಟ್ಟು, ಬಿಳಿ ಮಚ್ಚೆಗಳೊಂದಿಗೆ ಅತಿ ಭಯಂಕರವಾಗಿದ್ದ ನನ್ನನ್ನು ನೋಡಿ ಆ ಮಾತು ಹೇಳಿದರು ಎಂದರೆ, ಆ ಮಾತಿನಲ್ಲಿ ಎಷ್ಟು ಅರ್ಥ ಇದೆಯೋ ತಿಳಿದುಕೊಳ್ಳಬಹುದು. ಸಾರ್ ಅರ್ಥವಿಲ್ಲದೆ ಒಂದು ಮಾತು ಆಡುವುದಿಲ್ಲ, ಆಳವಾದ ಅರ್ಥವಿರುತ್ತದೆ, ಆದರೆ ಎಷ್ಟೋ ಜ್ಞಾನವಿದ್ದರೆ ಮಾತ್ರ ಅರ್ಥವಾಗುತ್ತದೆ. ನಾನು ಸುಟ್ಟು ಹೋಗುವ ಮುಂಚೆ ಎಷ್ಟೋ ಗರ್ವದಿಂದ, ನಾನೇ ಅಂದಗಾತಿ, ನನಗೆ ಎಲ್ಲಾ ಗೊತ್ತಿದೆ ಎಂದು, ನನಗೆ ತಿಳಿದಿರುವುದೇ ಸರಿ ಎಂದುಕೊಳ್ಳುತ್ತಿದ್ದೆ, ಆದರೆ ಆಸ್ಪತ್ರೆಯಲ್ಲಿ ಇರುವ ಮೂರು ತಿಂಗಳುಗಳು ಸಾರ್ ಹೇಳುವ ಪ್ರತಿ ಮಾತು ಮೆಲುಕು ಹಾಕಿದರೆ ನಾನೆಷ್ಟು ಅಜ್ಞಾನದಿಂದ ಇದ್ದೆನೋ ಅರ್ಥವಾಯಿತು. ಪ್ರತಿಯೊಂದು ನಮ್ಮ ಕೈಯಲ್ಲಿದೆ, ಎಂದುಕೊಳ್ಳುತ್ತೇವೆ, ಆದರೆ ಯಾವುದೂ ನಮ್ಮ ಕೈಯಲ್ಲಿ ಇರುವುದಿಲ್ಲ, ನಾವು ಅಂದುಕೊಂಡಂತೆ ಆಗುವುದಿಲ್ಲ ಎಲ್ಲವನ್ನೂ ಪ್ರಕೃತಿ ಗಮನಿಸುತ್ತಾ ನಾವು ಹಿಂದೆ ಜನ್ಮಗಳಲ್ಲಿ ಮಾಡಿದ ಪಾಪಕ್ಕೆ, ಪುಣ್ಯಕ್ಕೆ ಯಾವುದು ಬರಬೇಕೋ ಅದೇ ಬರುತ್ತದೆ ಏನು ಕೊಡಬೇಕೋ ಅದೇ ನಮಗೆ ಪ್ರಕೃತಿ ಕೊಡುತ್ತದೆ ಎಂದು ಅರ್ಥವಾಯಿತು.

ಕರ್ಮಗಳಿಂದ ಯಾರೂ ತಪ್ಪಿಸಿಕೊಳ್ಳಲಾರರು, ಕರ್ಮ ಸಿದ್ಧಾಂತವನ್ನು ಅನುಸರಿಸುವ ಹಾಗೆ ನಮ್ಮ ಜೀವನ ಇರುತ್ತದೆ ಎಂದು ತಿಳಿದುಕೊಳ್ಳಬೇಕು, "ಒಳ್ಳೆಯದು ಮಾಡಿದರೆ ಒಳ್ಳೆಯದು, ಕೆಟ್ಟದ್ದು ಮಾಡಿದರೆ ಕೆಟ್ಟದಾಗುತ್ತದೆ" ಎಂದು ಸಾರ್ ಹೇಳುತ್ತಾರೆ ಇವೆಲ್ಲಾ ನೆನಪಿಗೆ ಬಂದು ನಾನು ಯಾವಾಗಲೋ ಯಾರಿಗೋ ಮಾಡಿದ ಅಪಕಾರ ಹೀಗೆ ಆಯಿತು ಎಂದು ತಿಳಿದುಕೊಂಡೆನು, ಹಾಗಾಗಿ ಅಂದವೆಲ್ಲ ಹೋದರೂ ದುಃಖವಾಗಲಿಲ್ಲ. ಯಾವುದು ಅಗತ್ಯವೋ ಅದೇ ನಮ್ಮ ಬಳಿ ಇರುತ್ತದೆ ಎಂದು ತಿಳಿದುಕೊಂಡ ಮೇಲೆ ದುಃಖ ಬರುವುದಿಲ್ಲ, ಹೀಗೆ ನನ್ನಲ್ಲಿ ಅಹಂಕಾರ, ನನ್ನ ಶರೀರದ ಮೇಲಿರುವ ಮಮಕಾರ ಎರಡೂ ಹೋದವು. ಈ ಮೂರು ತಿಂಗಳಲ್ಲಿ ನನ್ನ ಆತ್ಮ ಶುದ್ಧವಾದ ಬಂಗಾರದಂತೆ ತಯಾರಾಯ್ತು ಆದ್ದರಿಂದಲೇ ಸಾರ್ ಹಾಗೆ ಹೇಳಿದರು. ಸಾರ್ ಯಾವಾಗಲೂ ಬಾಹ್ಯ ಸೌಂದರ್ಯವನ್ನು ನೋಡುವುದಿಲ್ಲ ಅಂತರ್ ಸೌಂದರ್ಯವನ್ನೇ ನೋಡುತ್ತಾರೆ, ಯೋಗಿಗಳಿಗೆ ಬೇಕಾದದ್ದು ಅಂತರ್ ಸೌಂದರ್ಯವೇ.

ಏಕೆ ಹೀಗೆ ಹೇಳುತ್ತಿದ್ದೇನೆಂದರೆ, ಒಂದು ದಿನ ನಾನು ರಾಜಮಂಡ್ರಿಯಲ್ಲಿ ಪತ್ರಿ ಸಾರ್ ಕ್ಲಾಸ್ ಗೆ ಹೋದೆನು ಅಲ್ಲಿ ತುಂಬಾ ಜನ ಬಂದಿದ್ದರು. ನಾನು ಸಾರ್ ಪಕ್ಕದಲ್ಲೇ ಕುಳಿತುಕೊಂಡೆನು, ಇಷ್ಟರಲ್ಲಿ ಒಬ್ಬಾಕೆ ಚೆನ್ನಾಗಿ ಮೇಕಪ್ ಮಾಡಿಕೊಂಡು ಸಾರ್ ಹತ್ತಿರ ಬಂದು ಕುಳಿತುಕೊಂಡು ಮಾತಾಡುತ್ತಿದ್ದರು, ಹಾಗೆಯೇ ಸಾರ್ "ಇಲ್ಲಿ ಮಿಸ್ ಇಂಡಿಯಾ ವರ್ಲ್ಡ್ ಸ್ಪರ್ಧೆ ನಡೆಯುತ್ತಿಲ್ಲ" ಎಂದರು, ಅಂದರೆ ಯಾವಾಗಲೂ ಆತ್ಮ ಸೌಂದರ್ಯ ನೋಡುತ್ತಾರೆ, ಹೊರತು ಬಾಹ್ಯ ಸೌಂದರ್ಯವನ್ನು ನೋಡುವುದಿಲ್ಲ ಎಂದು ಅರ್ಥವಾಗುತ್ತದೆ ಅಲ್ಲವೇ? ಹಾಗೆ ನನ್ನಲ್ಲಿರುವ ಆತ್ಮ ಸೌಂದರ್ಯವನ್ನು ಮೆಚ್ಚಿಕೊಂಡರು ಎಂದುಕೊಂಡೆನು, ಹಾಗೆಯೇ ಸಾರ್ ರೊಂದಿಗೆ "ಸಾರ್ ಹೀಗೆ ಭಯಂಕರವಾಗಿ ತಯಾರಾದ ನಾನು ಪ್ರಪಂಚಕ್ಕೆ ನನ್ನ ಮುಖವನ್ನು ಹೇಗೆ ತೋರಿಸಲಿ, ನಿಮ್ಮನ್ನು ನೋಡಬೇಕೆಂಬ ನನ್ನ ಆಸೆ ಹೇಗೆ ತೀರುತ್ತದೆ?" ಎಂದು ಕೇಳಿದರೆ ಸಾರ್ ನನಗೊಂದು ವರ ಕೊಟ್ಟರು "ಮೇಡಂ ನೀವು ಹೊರಗಡೆ ಬರುವವರೆಗೆ ನಾನೇ ನಿಮಗಾಗಿ ಬರುತ್ತೇನೆ" ಎಂದು ಹೇಳಿ ಪ್ರತಿ ತಿಂಗಳು ಒಂದು ದಿನ ಒಂದು ರಾತ್ರಿಯೆಲ್ಲಾ ನಮಗೆ ಎಷ್ಟು ಕಾನ್ಸೆಪ್ಟ್ ಗಳು ಹೇಳುತ್ತಾ, ಎಷ್ಟೋ ಜ್ಞಾನ ಬೋಧನೆ ಮಾಡುತ್ತಿದ್ದರು!.

ಒಂದು ಕೀಟದಂತೆ ಇದ್ದ ನನ್ನನ್ನು ಒಂದು ಚಿಟ್ಟೆಯಂತೆ ಸಾರ್ ಬದಲಾಯಿಸಿದರು, ಹಾಗೆ ಪ್ರತಿ ತಿಂಗಳು ಬಂದರು! ಎರಡು ವರ್ಷಗಳ ನಂತರ, "ಮೇಡಂ ನಿಮಗೆ ನಾನು ಮಾತು ಕೊಟ್ಟಿದ್ದೇನೆ ಆದ್ದರಿಂದ ಬರಲೇಬೇಕು ಆದರೆ ನಾನು ತುಂಬಾ ದೂರದಲ್ಲಿ

ಇದ್ದರೆ ಕಷ್ಟವಾಗುತ್ತದೆಯಲ್ಲಾ!" ಎಂದರು. ಆಗ ನನಗೆ ನನ್ನ ಆನಂದಕ್ಕಾಗಿ ಸಾರ್ ರನ್ನು ತೊಂದರೆಗೆ ಈಡು ಮಾಡಿದೆನಲ್ಲ! ಇನ್ನು ಹೀಗೆ ಮಾಡಬಾರದೆಂದು "ಸಾರ್! ಈಗ ನಾನು ಚೆನ್ನಾಗಿಯೇ ಇದ್ದೇನೆ! ಇನ್ನೆಂದಿಗೂ ನಿಮಗೆ ಕಷ್ಟವಾಗುವುದಿಲ್ಲ, ಇನ್ನುಮೇಲೆ ನಿಮಗಾಗಿ ನಾನೇ ಬರುತ್ತೇನೆ ಸಾರ್! ಎಂದೆನು ಸಾರ್ ನನ್ನಂತಹ ಒಬ್ಬ ಶಿಷ್ಯೆಗೆ ಮಾತು ನೀಡಿ, ಆ ಮಾತಿಗಾಗಿ ಅವರು ಎಷ್ಟು ಕಷ್ಟಪಟ್ಟು ಬರುತ್ತಿದ್ದರು, ಈ ಕಾಲದಲ್ಲಿ ಗುರುಗಳಿಗಾಗಿ ಹಿಂಬಾಲಿಸುವ ಶಿಷ್ಯರು ಇದ್ದಾರೆ ಆದರೆ ಶಿಷ್ಯರನ್ನು ತಮ್ಮ ಮಕ್ಕಳ ಹಾಗೆ ನೋಡಿಕೊಳ್ಳುತ್ತಾ, ಅವರಿಗೋಸ್ಕರ ಕಷ್ಟಪಟ್ಟು ಅವರ ಬಳಿಗೆ ಹೋಗುವವರನ್ನು ಸಂತೈಸುವ ಗುರುಗಳು ಎಷ್ಟು ಜನರಿದ್ದಾರೆ.

ಆ ಸಂದರ್ಭದಲ್ಲೇ "ಮೇಡಂ! ನಿಮ್ಮ ಗತಜನ್ಮವೇನೋ ಹೇಳಲೇ?" ಎಂದು ಪತ್ರಿ ಸಾರ್ ನನ್ನನ್ನು ಕೇಳಿದರು, ಆದರೆ ನಾನು "ಬೇಡ ಬಿಡಿ ಸಾರ್" ಎಂದೆನು ಆಗ ಎಲ್ಲರೂ "ಗತಜನ್ಮ ಹೇಳುತ್ತಾರೆ ಎಂದರೆ ಏಕೆ ಬೇಡ ಎಂದೆ?" ಎಂದು ನನ್ನನ್ನು ಕೇಳಿದರು. ಆದರೆ ಏಕೋ ನನಗೆ ಗತ ಜನ್ಮ ಗಳ ಬಗ್ಗೆ ತಿಳಿದುಕೊಳ್ಳಬೇಕೆಂದು ಇರಲಿಲ್ಲ. ಯಾರಿಗೇ ಆಗಲಿ ಯಾವ ಜನ್ಮ ದಲ್ಲಾಗಲಿ ಹಿಂದಿನ ಜನ್ಮದ ಜ್ಞಾಪಕಗಳು ಇರುವುದಿಲ್ಲ. ಸೃಷ್ಟಿಕರ್ತ ಈ ನಿಯಮವನ್ನು ಇಟ್ಟಿದ್ದಾನೆಂದರೆ ಗತ ಜನ್ಮದ ಅನುಭವ ವರ್ತಮಾನ ಜನ್ಮಕ್ಕೆ ಅಗತ್ಯವಿಲ್ಲ ಎಂದೇ ಅಲ್ಲವೇ? ಗತದ ಅನುಸಾರವೇ ವರ್ತಮಾನ ಇರುತ್ತದೆ, ಒಳ್ಳೆಯದು ಮಾಡಿದರೆ ಒಳ್ಳೆಯದು, ಕೆಟ್ಟದ್ದು ಮಾಡಿದರೆ ಕೆಟ್ಟದ್ದು ಎಂದು ಪತ್ರೀಜಿಯವರಿಂದ ತಿಳಿದುಕೊಂಡೆನು. ನಾನು ಎಷ್ಟೋ ಪುಣ್ಯ ಮಾಡಿದ್ದೆ ಆದ್ದರಿಂದಲೇ ಪತ್ರೀಜಿಯಂತಹ ಸದ್ಗುರು ಈ ಜನ್ಮದಲ್ಲಿ ಸಿಕ್ಕಿದರು, ಅಂದರೆ ನನ್ನ ಹಿಂದಿನ ಜನ್ಮ ಒಳ್ಳೆಯ ಜನ್ಮವೇ ಆಗಿರುತ್ತದೆ, ನನಗೆ ಈ ಜನ್ಮವೇ ಉನ್ನತವಾದದ್ದು ಎನಿಸಿತು, ಏಕೆಂದರೆ ನಾನು ಪತ್ರೀಜಿಯವರ ಶಿಷ್ಯೆ ಎಂದುಕೊಂಡರೇನೇ ನನಗೆ ಆನಂದವಾಗುತ್ತದೆ, ಈ ಆನಂದಕ್ಕಿಂತ ನನ್ನ ಗತಜನ್ಮ ಎಷ್ಟು ಉನ್ನತವಾದದ್ದು ಆದರೂ ನನಗೆ ಕಡಿಮೆಯೇ ಅದಕ್ಕೆ ನಾನು ನನ್ನ ಗತಜನ್ಮ ತಿಳಿಯಲು ಇಚ್ಚಿಸಲಿಲ್ಲ.

ನಾನು ಇಂತಹ ಜ್ಞಾನ ಹೊಂದಲು ಪತ್ರೀಜಿ ಎಷ್ಟು ಕಾರಣರೋ, ನನ್ನ ಪತಿ ಕೂಡ ಅಷ್ಟೇ ಕಾರಣರು, ರಾಘವರಾವ್ ರವರನ್ನು ವಿವಾಹ ಮಾಡಿಕೊಂಡನಂತರ ನಾನು ಆನಂದ ಹೊಂದಿದೆನು, 'ಧ್ಯಾನ'ಕ್ಕೆ ಬಂದಮೇಲೆ ಆ ಆನಂದ ಇನ್ನೂ ಹೆಚ್ಚಾಯಿತು. ಪತ್ರೀಜಿಯವರು ಪರಿಚಯವಾದಮೇಲೆ ಜನ್ಮ ಎಂದರೇನು? ಹೇಗೆ ಜನ್ಮ ತೆಗೆದುಕೊಳ್ಳುತ್ತೇವೋ? ನಮ್ಮ ಸುತ್ತಲೂ ಇರುವವರನ್ನು ಹೇಗೆ ಆಯ್ಕೆ ಮಾಡಿ ಕೊಂಡು ಬರುತ್ತೇವೋ? ತಂದೆ ತಾಯಿಯರನ್ನು, ಗಂಡನನ್ನಾಗಲಿ, ಹೆಣ್ಣಾಗಿಯಾಗಲಿ, ಗಂಡಾಗಿಯಾಗಲಿ, ನಾವೇ ಹೇಗೆ ಆಯ್ಕೆ ಮಾಡಿಕೊಳ್ಳುತ್ತೇವೋ?... ಎನ್ನುವುದು

ತಿಳಿದುಕೊಂಡೆನು, ಅಷ್ಟೇ ಅಲ್ಲ "ಹೇಗೆ ಹುಟ್ಟಬೇಕು? ಎಲ್ಲಿ ಹುಟ್ಟಬೇಕು?" ಎಂದು ನಮ್ಮ ಜೀವನವನ್ನು ನಾವೇ ಡಿಸೈನ್ ಮಾಡಿ ಕೊಂಡು ಬರುತ್ತೇವೆ ಎಂದು ತಿಳಿದ ಮೇಲೆ ನನಗೆ ಜೀವನದ ಮೇಲೆ ಎಷ್ಟೋ ಅವಗಾಹನೆ ಉಂಟಾಯಿತು.

ನನಗೆ ಈ ಅಪಘಾತ ಆದಮೇಲೆ ನನ್ನ ಪತಿ, ನನ್ನನ್ನು ತುಂಬಾ ಅಪರೂಪವಾಗಿ, ಪ್ರೇಮದಿಂದ ನೋಡಿಕೊಳ್ಳುತ್ತಿದ್ದರು ಹೆಂಡತಿ ಅಂದವಾಗಿ ಇರುವಾಗ ಯಾವ ಗಂಡನಾದರೂ ಪ್ರೇಮದಿಂದ ನೋಡಿಕೊಳ್ಳುತ್ತಾನೆ, ಆದರೆ ಅನಾರೋಗ್ಯವಾಗಿದ್ದು, ಅಂದವೆಲ್ಲಾ ಕಳೆದುಕೊಂಡು, ಮಂಚದ ಮೇಲೆ ಐದಾರು ತಿಂಗಳುಗಳು ಇದ್ದರೆ ನನ್ನನ್ನು ಚಿಕ್ಕ ಮಗುವಿನಂತೆ ನೋಡಿಕೊಂಡು ಎಷ್ಟೋ ಸೇವೆ ಮಾಡಿದರು. ಆಸ್ಪತ್ರೆಗೆ ಬಂದಾಗ ಕೂಡ ನನ್ನೊಂದಿಗೆ ಕಳೆದ ಆ ಒಂದು ಗಂಟೆಯ ಕಾಲ ಎಲ್ಲ ಆಧ್ಯಾತ್ಮಿಕ ಪರವಾದ ವಿಷಯಗಳು ಮಾತನಾಡಿ ನನಗೆ ಎಷ್ಟೋ ವಿಷಯಗಳು ಹೇಳುತ್ತಿದ್ದರು, ನನ್ನ ಶರೀರಕ್ಕೆ ಉರಿ ಎನ್ನುವುದು ತಿಳಿಯಬಾರದು ಎಂದು ಎಷ್ಟೋ ಆಧ್ಯಾತ್ಮಿಕ ವಿಷಯಗಳನ್ನು ಹೇಳುತ್ತಾ, ತಾನು ಪುಸ್ತಕದಲ್ಲಿ ಓದಿದ ಹೊಸ ವಿಷಯಗಳು ಹೇಳಿ ನನ್ನ ದೃಷ್ಟಿಯನ್ನು ಹೊರಳಿಸುತ್ತಿದ್ದರು ದಿನವೂ ಎಷ್ಟೋ ವಿಷಯಗಳು ಮಾತಾಡುತ್ತಿದ್ದರು, ನಾನು ಮಂಚದ ಮೇಲೆ ಇದ್ದಷ್ಟು ದಿನಗಳು ಗುರುವಿನಂತೆ ಎಷ್ಟೋ ವಿಷಯಗಳು ಹೇಳುತ್ತಿದ್ದರು, ಅವರು ನನ್ನ ಆಧ್ಯಾತ್ಮಿಕ ಏಳಿಗೆಗೆ ಎಷ್ಟೋ ಪ್ರೋತ್ಸಾಹ ನೀಡುತ್ತಿದ್ದರು, ಹಾಗೆ ನಾನು ಎರಡು ವರ್ಷಗಳು 'ಧ್ಯಾನ'ಮಾಡುತ್ತಾ, ಎಷ್ಟೋ ಪುಸ್ತಕಗಳು ಓದುತ್ತಾ, ಪತ್ರಿ ಸಾರ್ ಬಂದಾಗ ಅವರ ಬಳಿಯಿಂದ ಎಷ್ಟೋ ವಿಷಯಗಳು ತಿಳಿದುಕೊಳ್ಳುತ್ತಾ, ರಾಘವರಾವ್ ರವರ ಬೋಧನೆಗಳೊಂದಿಗೆ ಮಾಸ್ಟರ್ ಆಗಿ ಎತ್ತರಕ್ಕೇರಿದೆನು!.



**'ತ್ರಿಕರಣ ಶುದ್ಧಿ ಇರುವವರಿಗೆ ಮಾತ್ರ ಅಂತರಾತ್ಮದ ಬೋಧನೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ'**

**–ಬ್ರಹ್ಮರ್ಷಿ ಪತ್ರೀಜಿ**

# ನನ್ನ ಆಧ್ಯಾತ್ಮಿಕ ಪ್ರಚಾರ

ಆ ಘಟನೆ ನಡೆದಾಗಿನಿಂದ ನನ್ನ ಜೀವನ ಪೂರ್ಣವಾಗಿ ಬದಲಾಯಿತು, ಒಂದು ವಿಧವಾಗಿ ನನ್ನದು 'ಪುನರ್ಜನ್ಮ' ಎಂದೇ ಹೇಳಬೇಕು. ನಾನು ಆಸ್ಪತ್ರೆಯಿಂದ ಬಂದ ಮೇಲೆ 'ಧ್ಯಾನ' ಮಾಡುತ್ತಾ ಪುಸ್ತಕಗಳು ಓದುತ್ತಿದ್ದೆನು ಹೀಗೆ ಎರಡು ವರ್ಷಗಳು 'ಧ್ಯಾನ' ಮಾಡುವ ಹೊತ್ತಿಗೆ ನನಗೆ ಕೂಡ ಎಲ್ಲರಿಗೂ 'ಧ್ಯಾನ' ಹೇಳಬೇಕು ಎನಿಸಿತು, ಇಷ್ಟು ಅದ್ಭುತವಾದ 'ಧ್ಯಾನ' ತಿಳಿಯದೇ, ಯಾರೂ 'ಧ್ಯಾನ' ಮಾಡುತ್ತಿಲ್ಲ, ಎಲ್ಲಾ ಪೂಜೆಗಳು, ಭಜನೆಗಳು, ಸ್ತೋತ್ರಗಳು, ತೀರ್ಥಯಾತ್ರೆಗಳು, ಜಪಗಳು, ಯಜ್ಞ ಯಾಗಾದಿಗಳಿಂದ ಮೋಕ್ಷ ಬರುತ್ತದೆ ಎಂದು ಭಾವಿಸುತ್ತಾರೆ. ಆದರೆ 'ಧ್ಯಾನ'ದಿಂದ ಮಾತ್ರವೇ ಮನುಷ್ಯ ಬಯಸಿದ ಸ್ಥಾಯಿಗೆ ಹೋಗಬಲ್ಲ ಅವಗಾಹನೆ ಯಾರಿಗೂ ಇಲ್ಲ, ಯಾವ ಗುರುಗಳೂ ಹೇಳುತ್ತಿಲ್ಲ.

ತುಂಬಾ ಜನ ಭಗವದ್ಗೀತೆ ಓದುತ್ತಿದ್ದಾರೆ, ಆದರೆ ಗೀತೆಯಲ್ಲಿನ ಶ್ರೀ ಕೃಷ್ಣ ಪರಮಾತ್ಮ 'ಯೋಗಿಯಾಗು' ಎಂದು ಹೇಳಿದ ವಿಷಯ ಯಾರಿಗೂ ಅರ್ಥವಾಗುತ್ತಿಲ್ಲ, ಆದ್ದರಿಂದ ಯಾರೂ ಯೋಗಿಯಾಗಲು ಪ್ರಯತ್ನಿಸುತ್ತಿಲ್ಲ, ಎಲ್ಲರೂ ಭಕ್ತರಾಗಿಯೇ ಇದ್ದಾರೆ. ಎಲ್ಲರೂ "ಪೂಜೆ ಮಾಡಿದರೇನೆ ಭಕ್ತಿ" ಎಂದು ಕೊಳ್ಳುತ್ತಿದ್ದಾರೆ. ಅದರಿಂದಲೇ ತೃಪ್ತಿ ಪಟ್ಟುಕೊಳ್ಳುತ್ತಿದ್ದಾರೆ. ಒಂದು ವೇಳೆ ಕಷ್ಟಗಳು ತೀರದಿದ್ದರೆ ಆ ದೇವರಿಗೆ ದಯೆಇಲ್ಲ ಇನ್ನೊಬ್ಬ ದೇವರನ್ನು ಅಥವಾ ಇನ್ನೊಂದು ಮತವನ್ನು ಬದಲಾಯಿಸುತ್ತಿದ್ದಾರೆ, ಅಷ್ಟೇ ಹೊರತು 'ದೇವರು' ಯಾರ ಕಷ್ಟಗಳನ್ನು ತೀರಿಸುವುದಿಲ್ಲವೆಂಬ ವಿಷಯ ಯಾರಿಗೂ ತಿಳಿಯುತ್ತಿಲ್ಲ. ಅವರ ಕಷ್ಟಗಳು ಅವರೇ ತೊಲಗಿಸಿಕೊಳ್ಳಬೇಕು, ಆ ಶಕ್ತಿ ಅವರಿಗೇ ಇದೆಯೆಂದು ತಿಳಿದುಕೊಳ್ಳಲಾರದೇ ಹೋಗುತ್ತಿದ್ದಾರೆ.

ಯಾರು ಜ್ಞಾನವನ್ನು ಹೊಂದುತ್ತಾರೋ ಅವರು ಯಾವುದಕ್ಕೂ ದುಃಖ ಪಡುವುದಿಲ್ಲ. ಕಾರಣ ಗೀತೆಯಲ್ಲಿ "ಜ್ಞಾನಾಗ್ನಿ ದಗ್ದ ಕರ್ಮಾಣಂ" ಎಂದು ಭಗವಾನ್ ಹೇಳಿದ್ದಾರಲ್ಲಾ! ಜ್ಞಾನದಿಂದ ಕರ್ಮಗಳನ್ನು ಸುಟ್ಟು ಹಾಕಿ, ಕಷ್ಟಗಳನ್ನು ಪರಿಹರಿಸಿಕೊಳ್ಳಬೇಕು. ಹಾಗಾದರೆ ಈ ಪೂಜೆಗಳು ಏಕೆ? ಎಂದರೆ ಆತ್ಮ ಜ್ಞಾನವಿಲ್ಲದ ತಂದೆ ತಾಯಿಯರಿಂದ, ಗುರುಗಳಿಂದ, ಸಮಾಜವೆಲ್ಲಾ ವಿಗ್ರಹವೇ ಭಗವಂತನೆಂದು ಭಾವಿಸಿ, ವಿಗ್ರಹವೆನ್ನುವ ಅಸತ್ಯವನ್ನೇ ಆಶ್ರಯಿಸುತ್ತಿದ್ದಾರೆ, ಆದರೆ ಸತ್ಯವನ್ನು ಅಂದರೆ ಆತ್ಮವನ್ನು ಯಾರೂ ಆಶ್ರಯಸುತ್ತಿಲ್ಲ, 'ಧ್ಯಾನ' ಮಾಡುತ್ತಿಲ್ಲ ಈ ವಿಷಯ ಪತ್ರಿ ಸಾರ್ ಬರುವವರೆಗೆ ನನಗೂ ಗೊತ್ತಿರಲಿಲ್ಲ.

ಲೋಕದಲ್ಲಿ "ಸತ್ಯ" ತಿಳಿದ ಗುರುಗಳು ಇದ್ದರೂ ಧನಾಕರ್ಷಣೆ, ಜನಾಕರ್ಷಣೆಗೆ ಒಳಗಾಗಿ ಪ್ರಜೆಗಳನ್ನು ಅಸತ್ಯ ಮಾರ್ಗದಲ್ಲಿ ನಡೆಸುತ್ತಿದ್ದಾರೆ. ಪತ್ರೀಜಿಯವರು ಬಂದಮೇಲೆ ಸತ್ಯವೇನೆಂದು ಅರ್ಥವಾಯಿತು, ಅದರ ಜೊತೆ ವಿಗ್ರಹ ಭಗವಂತನಲ್ಲಾ, 'ಆತ್ಮವೇ' ಭಗವಂತನೆಂದು ತಿಳಿದುಕೊಂಡೆವು ಅವರು ವಿಗ್ರಹಾರಾಧನೆ ಮಾಡಿದರೆ ಲಾಭವಿಲ್ಲ ಆತ್ಮವನ್ನು ಹಿಡಿದುಕೊಳ್ಳಬೇಕು. ಅದಕ್ಕೆ ಮಾರ್ಗ "ಧ್ಯಾನ" ಎಂದು ಹೇಳುತ್ತಾ ಭಗವಂತ ಹೊರಗೆಲ್ಲೂ ಇಲ್ಲ ನಮ್ಮ ಅಂತರಂಗದಲ್ಲೇ ಸಿಗುತ್ತಾನೆ ಎಂದು ಹೇಳಿದರು, "ಭಗವಂತ ಎಂದರೆ 'ಆತ್ಮ', ಈ ಕಣ್ಣಿಗೆ ಕಾಣುವುದಿಲ್ಲ" ಎಂದು ಹೇಳುತ್ತಾರೆ, ಆದ್ದರಿಂದ ನಮ್ಮಲ್ಲೇ ಇರುವ ಪರಮಾತ್ಮನನ್ನು ಬಿಟ್ಟು ಹೊರಗಿರುವ ವಿಗ್ರಹವನ್ನು ಪೂಜಿಸಿದರೆ, ಕಾಲವನ್ನು ವ್ಯರ್ಥ ಮಾಡಿದಂತೆ. ಮಾಡಬೇಕಾದದ್ದು ಮಾಡಿದರೆ ಹೊಂದುವುದನ್ನು ಹೊಂದುತ್ತೇವೆ.

ಪತ್ರೀಜಿಯವರಿಗೆ ಜನಾಕರ್ಷಣೆ, ಧನಾಕರ್ಷಣೆಯ ಅಗತ್ಯವಿಲ್ಲ. ಅವರು ಸತ್ಯವನ್ನು ಹೇಳಲು ಭೂಮಿಗೆ ಬಂದ ಮಹಾನುಭಾವ. ಯಾರೇನು ಅಂದುಕೊಂಡರೂ ಅವರು ಲೆಕ್ಕಿಸುವುದಿಲ್ಲ, ಅವರು ಯಾರನ್ನು ಮರಳು ಗೊಳಿಸುವುದಿಲ್ಲ ಸತ್ಯವನ್ನು ಘಂಟಾಘೋಷವಾಗಿ ಹೇಳುತ್ತಾರೆ, ಅಂತಹ ಗುರು ದೊರೆತಿರುವುದು ಅದೃಷ್ಟವೇಸರಿ.

ಆದಿಶಂಕರಾಚಾರ್ಯರು ಒಂದು ಮಾತು ಹೇಳುತ್ತಿದ್ದರಂತೆ, ಅದು ಮಾನವ ಜನ್ಮ 'ತ್ರಿರತ್ನ ಮಯಂ' ಎಂದು, ಆ ಮೂರು ರತ್ನಗಳು ಏನೆಂದರೆ! ಒಂದು ಮಾನವ ಜನ್ಮ ದೊರೆಯುವುದು, ಅದು ದೊರೆತರೆ ಒಂದು ರತ್ನವು ದೊರೆತಂತೆ, ಎರಡನೆಯದು ಏನೆಂದರೆ ಮೋಕ್ಷ ಹೊಂದಬೇಕು 'ಸತ್ಯ' ತಿಳಿದುಕೊಳ್ಳಬೇಕು ಎನ್ನುವ ಬಯಕೆ ಹುಟ್ಟುವಿಕೆ, ಅದಿದ್ದರೆ ಎರಡನೆಯ ರತ್ನ ದೊರೆತಂತೆ, ಇನ್ನು ಮೂರನೆಯ ರತ್ನವೇನೆಂದರೆ, ಮೋಕ್ಷವನ್ನು ಹೊಂದಬೇಕೆಂಬ ಬಯಕೆಇದ್ದರೂ, ಆ ಮಾರ್ಗಕ್ಕೆ ತೆಗೆದುಕೊಂಡು ಹೋಗುವ ಗುರುಗಳು ಸಿಗುವುದು, ಅವರು ಈ ಮೂರು ರತ್ನಗಳು ಲಭಿಸುವುದು ಅಸಾಧ್ಯ ಎಂದಿದ್ದಾರೆ, ಆದರೆ ಈ ಮೂರು ಪಿರಮಿಡ್ ಮಾಸ್ಟರ್ಸ್ ಗೆ ದೊರೆತಿದೆ. ಈ ಭೂಮಿ ಮೇಲೆ ಪಿರಮಿಡ್ ಮಾಸ್ಟರ್ಸ್ ಗಳಿಗಿಂತ ಅದೃಷ್ಟವಂತರು ಯಾರೂ ಇಲ್ಲ ಅನಿಸುತ್ತದೆ, ಏಕೆಂದರೆ ಪತ್ರೀಜಿಯವರಿಂದ ಎಲ್ಲರೂ 'ಧ್ಯಾನ'ಸಾಧನೆ ಮಾಡುತ್ತಿದ್ದಾರೆ, ಜ್ಞಾನವಂತವಾದ ಪುಸ್ತಕಗಳು ಓದುತ್ತಿದ್ದಾರೆ, ಆತ್ಮಜ್ಞಾನಕ್ಕೆ ಸಂಬಂಧಿಸಿದ ಸತ್ಸಂಗಗಳಿಗೆ ಹೋಗುತ್ತಿದ್ದಾರೆ, ಹಾಗೆ ಜ್ಞಾನಕ್ಕೆ ಸಂಬಂಧಿಸಿದ ಎಷ್ಟೋ ಹೊಸ ವಿಷಯಗಳು ಕಲಿತುಕೊಳ್ಳುತ್ತಿದ್ದಾರೆ, ನಾನು ಕೂಡ ಹೊಸ ವಿಷಯಗಳನ್ನು ಕಲಿತಾಗಲೆಲ್ಲಾ ತುಂಬಾ ಆನಂದವಾಗಿ ಅದ್ಭುತವಾಗಿ ತೋರುತ್ತದೆ.

ಪತ್ರೀಜಿ "ಹಂಚಿದರೆ ಹೆಚ್ಚಾಗುತ್ತದೆ" ಎಂದು ಹೇಳುತ್ತಾರೆ, ಇದು ಅರ್ಥ ಮಾಡಿಕೊಂಡಮೇಲೆ ನಾನು ಕಲಿತ "ಧ್ಯಾನ", ನಾನು ತಿಳಿದುಕೊಂಡ 'ಸತ್ಯ' ಎಲ್ಲರಿಗೂ ಹೇಳಬೇಕು ಎಂದುಕೊಂಡೆನು, ನನಗೂ ಕೂಡ 'ಧ್ಯಾನ'ಪ್ರಚಾರ ಮಾಡಬೇಕು ಎನಿಸಿತು, ಆದರೆ ನನಗೆ ಯಾವ ಅನುಭವವೂ ಇರಲಿಲ್ಲ ಆನಂದ ಸಿಗುತ್ತದೆ ಹೇಳಿದರೆ ಸಾಕಾಗುವುದೇ? ಎನಿಸಿತು ಆಗ ಸಾರ್ ಎರಡು ಪದಗಳ ಬಗ್ಗೆ ಹೇಳಿದರೆ ಸಾಕು ಎಂದರು ಅವು 1) ಅಹಿಂಸೆ 2) ಆನಾಪಾನಸತಿ, ಈ ಎರಡರ ಬಗ್ಗೆ ಜನಕ್ಕೆ ಹೇಳಿದರೆ ಸಾಕು ಎಂದರು. ಆಗ ನನಗೆ ಧೈರ್ಯ ಬಂದಿತು, ನನಗೂ 'ಧ್ಯಾನ'ಹೇಳಬೇಕು ಎನಿಸುತ್ತದೆ ಎಂದು ಹೇಳಿದರೆ, ನೀನು ಹುಟ್ಟಿದ್ದೆ 'ಧ್ಯಾನ'ಹೇಳಿಕೊಡಲು, ಆದರೆ ಇಲ್ಲಿಯವರೆಗೂ ನೀನು ಯಾರಿಗೂ ಬಾಯಿ ಬಿಚ್ಚಿ ಹೇಳಲಿಲ್ಲ, ಅದಕ್ಕೆ ನಾನೇನು ಮಾತನಾಡಲಿಲ್ಲ, ಈಗ ನೀನೇ ಹೇಳುತ್ತಿರುವುದರಿಂದ ನನಗೆ ಆನಂದವಾಗಿದೆ, ಖಂಡಿತವಾಗಿಯೂ ಮಾಡಿ ಮೇಡಂ ಎಂದರು, ಹಾಗೆ ಗುರುಗಳ ಆಶೀರ್ವಾದ ನನಗೆ ಲಭಿಸಿತು.

ಹೇಗೆ ಶುರು ಮಾಡಬೇಕು ಎಂದು ಆಲೋಚಿಸಿ, ಕಾರ್ತಿಕ ಮಾಸವಾದರೆ ತುಂಬಾ ಜನ ಹೆಂಗಸರು ಮಾಂಸ ತಿನ್ನುವುದಿಲ್ಲ, ಆ ತಿಂಗಳಲ್ಲಿ ಶುರು ಮಾಡಿದರೆ ಚೆನ್ನಾಗಿರುತ್ತದೆ ಎಂದುಕೊಂಡೆನು, ಅದು ಭೀಮವರಂ ನಲ್ಲೇ ಮಾಡಬೇಕು ಎಂದುಕೊಂಡೆನು, ಆಗ ಮನೆ ಮನೆಯ 'ಧ್ಯಾನ'ವೆಂದು ನಲವತ್ತು ದಿನಗಳ ಮಂಡಲ 'ಧ್ಯಾನ' ಪ್ರಾರಂಭಿಸಿ ನಲವತ್ತು ಮನೆಗಳು ಬುಕ್ ಮಾಡಿ ದಿನಾಂಕ ಪ್ರಕಾರ ಪಾಂಪ್ಲೆಟ್ಸ್ ಮಾಡಿಸಿ ಎಲ್ಲರಿಗೂ ಹಂಚಿದೆವು, ಒಂದೊಂದು ಬೀದಿಯಲ್ಲಿ ಒಂದೊಂದು ದಿನ ಮಾಡುತ್ತಿದ್ದೆವು. ಆ ಬೀದಿಯವರನ್ನೆಲ್ಲಾ ಕರೆದು ಪಾಂಪ್ಲೆಟ್ಸ್ ಗಳು ಕೊಟ್ಟು 'ಧ್ಯಾನ'ದಿಂದ ಆಗುವ ಲಾಭಗಳನ್ನು ತಿಳಿಸಿ ಹೇಳುತ್ತಿದ್ದೆವು, ನಲವತ್ತು ಮನೆಗಳು ಎಂದು ಆರಂಭಿಸಿ ಪೂರ್ಣಗೊಳ್ಳುವ ವೇಳೆಗೆ ಇನ್ನೂ ಕೆಲವು ಮಂದಿ ನಮ್ಮ ಮನೆಯಲ್ಲಿ 'ಧ್ಯಾನ' ಹೇಳಿ ಕೊಡಿ ಎಂದು ಕೇಳಿದ್ದರಿಂದ ರಾಘವರಾವ್ ರವರು 108 ದಿನಗಳಿಗೆ ಪಾಂಪ್ಲೆಟ್ಸ್ ಮಾಡಿಸಿದರು ನನಗೆ ಮನಸ್ಸಿನಲ್ಲಿ ಅಷ್ಟು ದಿನಗಳು ಮಾಡಬಲ್ಲೆನೆ ಎಂದು ಭಯವಾಯಿತು, ಆದರೆ ಅವರ ಪ್ರೋತ್ಸಾಹದಿಂದ ಸಂಪೂರ್ಣಗೊಳಿಸಿದೆನು.

ಪತ್ರಿ ಸಾರ್‌ಗೆ ಎಷ್ಟೋ ಜ್ಞಾಪಕ ಶಕ್ತಿ ಇದೆ, ಎಷ್ಟೋ ಊರುಗಳನ್ನು ತಿರುಗುತ್ತಾ ಎಷ್ಟೋ ಜನರನ್ನು ಬೇಟಿಯಾಗುತ್ತಾ, 'ಧ್ಯಾನ'ಪ್ರಚಾರ ಮಾಡುತ್ತಾ, ಎಷ್ಟೋ ಬ್ಯುಸಿಯಾಗಿದ್ದರೂ ಭೀಮವರಂ ನಲ್ಲಿ ಮನೆ ಮನೆ 'ಧ್ಯಾನ'ಕಾರ್ಯಕ್ರಮ ಮಾಡುತ್ತಿದ್ದೇವೆ ಎಂದು ಮಧ್ಯೆ ಮಧ್ಯೆ ಫೋನ್ ಮಾಡುತ್ತಿದ್ದರು. ಹೇಗೆ ನಡೆಯುತ್ತಿದೆ ಮೇಡಂ? ಎಂದು ಕೇಳುತ್ತಿದ್ದರು, ಸರಿಯಾಗಿ ನಲವತ್ತು ದಿನಗಳು ಆಗುವ ಸಮಯದಲ್ಲಿ

ನಾವು ಹೇಳದೆಯೇ ನಾಳೆಗೆ ನಲವತ್ತು ದಿನಗಳು ಪೂರ್ಣಗೊಳ್ಳುತ್ತದೆ ನಾನು ಭೀಮವರಂ ಬರುತ್ತಿದ್ದೇನೆ, ಎಂದರು ನಮಗೆ ಆಶ್ಚರ್ಯವಾಯಿತು, ಎಷ್ಟು ಕೆಲಸಗಳಿದ್ದರೂ ಸಾರ್ ಈ ವಿಷಯವನ್ನು ಎಷ್ಟು ಚೆನ್ನಾಗಿ ನೆನಪಿನಲ್ಲಿಟ್ಟು ಕೊಂಡಿದ್ದಾರೆ ಎಂದು.

ಹಾಗೆಯೇ 108 ದಿನಗಳಾದ ಮೇಲೆ ನಾಳೆಗೆ 108 ದಿನಗಳಾಗುತ್ತದೆ ನಾಳೆ ನೀವು ಕ್ಲಾಸಿನಲ್ಲಿದ್ದರೆ, ಅಲ್ಲಿಗೆ ನಾನು ಬರುತ್ತೇನೆ, ಎಂದು ಹೇಳಿದ್ದರಿಂದ ನಮಗೆ ಮತ್ತೊಂದು ಬಾರಿ ಆಶ್ಚರ್ಯವಾಯಿತು, ಅವರು ಮಲ್ಟಿ ಡೈಮೆನ್ಶನ್ನಲ್ಲಿರುವ ವ್ಯಕ್ತಿಯಲ್ಲವೇ ಅದಕ್ಕೆ ಅವರಿಗೆ ಯಾವುದಾದರೂ ಸಾಧ್ಯ ಎಂದೆನಿಸಿತು, ಆಗ ನಾವು ಹೇಳುವ ಕ್ಲಾಸಿಗೆ ಬರುವುದಲ್ಲ ನಿಮಗೆ ಒಂದು ಕ್ಲಾಸ್ ಅರೇಂಜ್ ಮಾಡಿಕೊಡುತ್ತೇವೆ ಎಂದು ಹೇಳಿದೆವು, ಹಾಗೆ ಏರ್ಪಡಿಸಿದ ಕ್ಲಾಸಿನಲ್ಲಿ 108 ದಿನಗಳು ಬಂದವರಿಗೆ ಹೆಚ್ಚು ಕ್ಲಾಸ್ ಗಳನ್ನು ಬುಕ್ ಮಾಡಿದವರಿಗೆ ಸಾರ್ ಕೈಯಲ್ಲಿ ಸನ್ಮಾನಗಳು ಮಾಡಿಸಿದೆವು, ಅವರೆಲ್ಲ ಎಷ್ಟೋ ಆನಂದಗೊಂಡು ನಾವು ಮಾಡುವ ಈ ಚಿಕ್ಕ ಕೆಲಸಕ್ಕೆ ಅಂತಹ ಮಹಾನುಭಾವರೊಂದಿಗೆ ನಮಗೆ ಸನ್ಮಾನವೇ? ಎಂದು ಸಂತಸಪಟ್ಟರು, ಅದಕ್ಕೆ ಸಾರ್ ಹೇಳುವುದು ಮಾಡಬೇಕಾದ್ದು ಮಾಡಿದರೆ, ಹೊಂದ ಬೇಕಾದ್ದು ಹೊಂದುತ್ತಾರೆ ಎಂದು ಅವರೆಲ್ಲಾ ಕ್ಲಾಸ್‌ಗಳನ್ನು ಏರ್ಪಡಿಸಿದ್ದರಿಂದ ಸಾರ್ ರಿಂದ ಸನ್ಮಾನಿತರಾದರು ಮನೆ ಮನೆ 'ಧ್ಯಾನ'ಯಜ್ಞ ಪೂರ್ಣಗೊಳಿಸಿದ ನನಗೂ ತುಂಬಾ ಆನಂದವಾಯಿತು.

ಮೊದಲಲ್ಲಿ "ಏನು ಹೇಳಬೇಕೋ ಭಯಪಡುತ್ತಾ ಸಾರ್ ಅನ್ನು ಕೇಳಿದಾಗ, ಅವರು ನಿನ್ನ ಅನುಭವವೇ ಹೇಳು ಎಂದರು" ಆಗ ನನ್ನ "ಈ ಪುನರ್ಜನ್ಮ" ಅನುಭವ ಹೇಳಿ "ಉತ್ತರ ಗೀತೆಯಲ್ಲಿ"ನ ಶ್ಲೋಕ ದ ಬಗ್ಗೆ ಹೇಳುತ್ತಿದ್ದೆ.

**ಶ್ಲೋಕ: – ಪೂಜ ಕೋಟಿ ಸಮಂ ಸ್ತೋತ್ರಂ, ಸ್ತೋತ್ರ ಕೋಟಿ ಸಮೋ ಜಪ**

**ಜಪಕೋಟಿ ಸಮಂ 'ಧ್ಯಾನ', 'ಧ್ಯಾನ'ಕೋಟಿ ಸಮೋ ಲಯಃ**

ಈ ಶ್ಲೋಕದ ಬಗ್ಗೆ ಹೇಳಿ ಎಲ್ಲಕ್ಕಿಂತ 'ಧ್ಯಾನ'ವೇ ದೊಡ್ಡದು ಎಂದು ಹೇಳುತ್ತಿದ್ದೆ, ಹಾಗೆ ಹೇಳುತ್ತಾ ಇದ್ದರೆ ದಿನವೂ ಏನೋ ಒಂದು ಹೊಸ ವಿಷಯ ಹೇಳಬೇಕೆಂದು ಅನಿಸುತ್ತಿತ್ತು ಆಗ ಮತ್ತೆ "ಉತ್ತರ ಗೀತೆ" ಓದುತ್ತಾ ಇದ್ದರೆ ಮತ್ತೆ ಯಾವುದೋ ಒಂದು ಹೊಸ ವಿಷಯ ಸಿಗುತ್ತಿತ್ತು, ಹಾಗೆ ದಿನವೂ ಹೇಳುತ್ತಾ ಇದ್ದರೆ, ನಾನು ಹೇಳುವ ವಿಷಯಗಳು ನನಗೆ ಹೊಸದಾಗಿ ಇರುತ್ತಿತ್ತು, ಆ ವಿಷಯ ಸಾರ್ ಗೆ ಹೇಳಿದರೆ "ಮೇಡಂ ಯಾರಾದರೆ 'ಧ್ಯಾನ' ಪ್ರಚಾರ ಮಾಡುತ್ತಾರೋ ಅವರಿಗೆ ಇಬ್ಬರು ಆಸ್ಟ್ರಲ್ ಮಾಸ್ಟರ್ ಗಳು

ಸಹಾಯ ಮಾಡುತ್ತಾರೆ", ಆದ್ದರಿಂದ ನೀವು ಹೇಳಲು ಪ್ರಯತ್ನಿಸುತ್ತಿರಿ ಎಂದು ಹೇಳಿದರು.

ಆಗ ಇನ್ನೂ ಧೈರ್ಯದಿಂದ ಮುಂದೆ ಹೋದನು, ಹಾಗೆ 108 ದಿನಗಳು ಪೂರ್ಣಗೊಳಿಸಿದೆನು. ನನಗೆ ಪ್ರಕೃತಿ ಒಂದು ಉಡುಗೊರೆ ನೀಡಿತ್ತು, ಅದೇನೆಂದರೆ ವೈಜಾಗ್ ನ ವೀರ ಜಗದೀಶ್ವರಿ ಮೇಡಂ ಫೋನ್ ಮಾಡಿ ನೀ"ವು ವೈಜಾಗ್ ನಲ್ಲಿ ಒಂದು ದಿನದ ಕ್ಲಾಸ್ ನಿರ್ವಹಿಸಿ ಎಂದು ಹೇಳಿದರು". ನಾನು "ಆಲೋಚಿಸಿ ಹೇಳುತ್ತೇನೆ" ಎಂದು ಹೇಳಿದೆನು, ಆಗ ಸಾರ್ ರಿಂದ ಫೋನ್ ಬಂದಿತು, ಆಗ ನಾನು ಸಾರ್ ರನ್ನು ವೀರ ಜಗದೀಶ್ವರಿ ಮೇಡಂ ಫೋನ್ ಮಾಡಿದ್ದಾರೆ ನನಗೆ ಒಂದು ದಿನದ ಕ್ಲಾಸ್ ಹೇಳಲಾಗುವುದೇ"? ಎಂದು ಕೇಳಿದೆನು. ಆಗ ಸಾರ್ 108 ದಿನ ಕ್ಲಾಸ್ ಮಾಡಿದ್ದೀರಿ ಒಂದು ದಿನದ ಕ್ಲಾಸ್ ಏಕೆ ಹೇಳಲಾಗುವುದಿಲ್ಲ? ನೀವು ಖಂಡಿತ ಹೇಳುವಿರಿ ಹೇಳಿ ಮೇಡಂ ಎಂದರು, ಆಗ ನನಗೆ ಧೈರ್ಯ ಬಂದಿತು ಏಕೆಂದರೆ ಗುರುವಿನ ಆಶೀರ್ವಾದ ಇರುವ ಶಿಷ್ಯರು ಯಾವ ಕೆಲಸವಾದರೂ ಮಾಡುತ್ತಾರೆ ಎನ್ನುವುದು ನನ್ನ ನಂಬಿಕೆ.

ಪತ್ರಿ ಸಾರ್ "ಪ್ರಕೃತಿ ಪ್ರತಿಯೊಂದನ್ನು ಗಮನಿಸುತ್ತದೆ" ಎಂದು ಹೇಳುತ್ತಿರುತ್ತಾರೆ, ನಾನು ಮಾಡಿದ ಪ್ರಚಾರದಿಂದ ಪ್ರಕೃತಿ ನನ್ನನ್ನು ಒಂದು ದಿನದ ಕ್ಲಾಸ್ ಹೇಳುವ ಮಾಸ್ಟರ್ ರನ್ನಾಗಿ ರೂಪಿಸಿದೆ ಎನಿಸಿತು, ಹಾಗೆ ನಾನು ಮೊದಲ ಒಂದು ದಿನದ ಕ್ಲಾಸ್ ನಿರ್ವಹಿಸಿದೆನು, ಮತ್ತೆ ಕೆಲವು ದಿನಗಳು ಆಗುವ ಹೊತ್ತಿಗೆ 108 ಊರುಗಳು ಮಾಡಿದರೆ ಚೆನ್ನಾಗಿ ಇರುತ್ತದೆ ಎನಿಸಿತು, ಹಾಗೆಯೇ ನನ್ನ ಅಭಿಲಾಷೆಯನ್ನು ಸಾರ್ ಬಳಿ ಹೇಳಿದೆನು, ಮಾಡಿ ಎಂಬ ಸಲಹೆ ಅವರಿಂದ ಬಂದಿತು. ಅದು ಪೂರ್ತಿಗೊಳಿಸಿದೊಡನೆ ಪತ್ರಿ ಸಾರ್ "ದೇವಾಲಯಗಳು ಧ್ಯಾನಾಲಯಗಳು" ಎನ್ನುವ ಒಂದು ಪಾಂಪ್ಲೆಂಟ್ ಬಿಡುಗಡೆ ಮಾಡಿದರು, ಆಗ ದೇವಾಲಯವನ್ನು ಧ್ಯಾನಾಲಯಗಳಾಗಿ ಬದಲಾಯಿಸಬೇಕೆಂದು ಸಾರ್ ಪಾಂಪ್ಲೆಂಟ್ ಬಿಡುಗಡೆಗೊಳಿಸಿದರು ಎಂದು ನನಗೆ ತಿಳಿಯಿತು, ದೇವಾಲಯಗಳಲ್ಲಿ 'ಧ್ಯಾನ' ಸಪ್ತಾಹಗಳು ಇಡಬೇಕು ಎಂದುಕೊಂಡೆನು, ಮತ್ತೇ ಸಾರ್ ಅಪ್ಪಣೆ ಪಡೆದು ಸಪ್ತಾಹಗಳು ಆರಂಭಿಸಿ ನಲವತ್ತು ದೇವಾಲಯಗಳಲ್ಲಿ ಪೂರ್ಣಗೊಳಿಸಿದೆನು.

ಸಪ್ತಾಹ ಪೂರ್ಣಗೊಳಿಸಿದ ಪ್ರತಿ ದೇವಾಲಯದಲ್ಲೂ ಮತ್ತೆ ನಲವತ್ತು ದಿನಗಳು ಕ್ಲಾಸ್ ಇಟ್ಟು, ನಲವತ್ತು ದಿನಗಳು ಒಬ್ಬೊಬ್ಬ ಮಾಸ್ಟರ್ ಗೆ ಒಪ್ಪಿಸಿದೆನು, ಹಾಗೆ ಭೀಮವರಂ ನಲ್ಲಿ ಎಷ್ಟೋ ಮಂದಿ ಮಾಸ್ಟರ್ ಗಳಾದರು, ಪತ್ರಿ ಸಾರ್ ಪುಸ್ತಕಗಳಿಂದ, ರಾಘವರಾವ್ ಪುಸ್ತಕಗಳಿಂದ ಯಾರಾದರೂ ಕ್ಲಾಸ್ ಗಳನ್ನು ಸುಲಭವಾಗಿ ಹೇಳಬಲ್ಲರು,

ಹಾಗಾಗಿ ಪ್ರತಿಯೊಬ್ಬರೂ ಸ್ವಾಧ್ಯಾಯ ಮಾಡುವುದು, ಎಲ್ಲಿ ಕ್ಲಾಸ್ ಗಳು ನಡೆದರು ಮಿಸ್ ಆಗದಂತೆ ಹೋಗಿ ಕೇಳುವುದು ಎಲ್ಲರಿಗೂ ಅಭ್ಯಾಸವಾಯಿತು ಪತ್ರಿ ಸಾರ್ ಎಲ್ಲರನ್ನೂ ಪ್ರಚಾರವೇಕೆ ಮಾಡಲು ಹೇಳುತ್ತಾರೋ ಆಗ ನನಗೆ ಅರ್ಥವಾಯಿತು.

ನಾವು 'ಧ್ಯಾನ' ಹೇಳುವುದರಿಂದ ಎದುರಿನವರಿಗೆ 'ಧ್ಯಾನ'ತಿಳಿಯುವುದರೊಂದಿಗೆ, ನಾವು ಕೂಡ ಚೆನ್ನಾಗಿ ಅರಿತುಕೊಳ್ಳುತ್ತೇವೆ, ನಾವು ಓದುವ ಪುಸ್ತಕಗಳಿಂದ, ಕೇಳುವ ಕ್ಲಾಸ್‌ಗಳಿಂದ ನಮ್ಮಲ್ಲಿ ಜ್ಞಾನ ಹೆಚ್ಚುತ್ತದೆ, ಆದರೆ ಯಾವಾಗಲೂ ಬೇರೆಯವರು ಹೇಳುವುದನ್ನು ಕೇಳುವುದರಿಂದ ಶಿಷ್ಯರಾಗಿಯೇ ಇರುತ್ತೇವೆ, ಆದರೆ ಯಾವಾಗ ಹೇಳಲು ಶುರು ಮಾಡುತ್ತೇವೋ, ಅಂದಿನಿಂದ ಗುರುಗಳಾಗಿ ಬದಲಾಗುತ್ತೇವೆ, ಪ್ರತಿ ಪಿರಮಿಡ್ ಮಾಸ್ಟರ್ ಸಾಧನೆ, ಬೋಧನೆ ಎರಡೂ ಮಾಡಿದರೆ "ಇರುವ ಸ್ಥಿತಿಗಿಂತ ಉನ್ನತ ಸ್ಥಿತಿಗೆ" ಏರುತ್ತಾರೆಂದು ನಮ್ಮಿಂದ ಕ್ಲಾಸ್ ಗಳನ್ನು ಹೇಳಿಸುತ್ತಾರೆಂದು ಅರ್ಥವಾಯಿತು, ಆದರೆ ಗುರುಗಳು ಸಹಜವಾಗಿ ಶಿಷ್ಯರನ್ನು ಮಾತ್ರ ತಯಾರಿಸುತ್ತಾರೆ, ಪತ್ರೀಜಿಯವರು ಮಾತ್ರ ಎಲ್ಲರನ್ನೂ ಗುರುಗಳನ್ನಾಗಿ ರೂಪಿಸುತ್ತಿದ್ದಾರೆ, ಆದ್ದರಿಂದಲೇ ಅವರು ಎಲ್ಲರಿಗೂ ಪ್ರೀತಿ ಪಾತ್ರರಾಗಿದ್ದಾರೆ.

ಹಾಗೆ ನಲವತ್ತು ದೇವಾಲಯಗಳು ಆದ ನಂತರ ಪತ್ರೀಜಿ "ಧ್ಯಾನಗ್ರಾಮೀಣ" ಕ್ಲಾಸ್ ಭೀಮವರಂ ನಲ್ಲಿ ಮಾಡಬೇಕೆಂದು ನಿಗಧಿ ಪಡಿಸಿದರು, ಪಶ್ಚಿಮ ಗೋದಾವರಿಯಲ್ಲಿ 900 ಗ್ರಾಮಗಳಿವೆ, ಎಲ್ಲಾ ಗ್ರಾಮಗಳನ್ನು ಸುತ್ತಿ ಪ್ರಚಾರ ಪೂರ್ಣ ಮಾಡಬೇಕೆಂದು ಪತ್ರಿ ಸಾರ್ ಕ್ಲಾಸ್‌ಗೆ ಹೆಚ್ಚು ಜನರು ಬರಬೇಕೆಂದು ರಾಘವರಾವ್ ರವರ ಬಯಕೆ, ಆದ್ದರಿಂದ ಕಾರ್ಯಕ್ರಮಕ್ಕೆ ತುಂಬಾ ದೊಡ್ಡ ಮೈದಾನ ಬುಕ್ ಮಾಡಿದರು, ನಾವು ಅಷ್ಟು ದೊಡ್ಡ ಮೈದಾನದಲ್ಲಿ ಜನರು ತುಂಬುತ್ತಾರಾ? ಎಂದುಕೊಂಡೆವು, ಆದರೆ ರಾಘವರಾವ್ ರವರ ಸಂಕಲ್ಪದಿಂದ ಖಂಡಿತ ನಡೆಯುತ್ತದೆ ಎಂದು ಭಾವಿಸಿದೆವು.

ಈ ಕಾರ್ಯಕ್ರಮ ತುಂಬಾ ಅದ್ದೂರಿಯಾಗಿ ಮಾಡಬೇಕೆಂಬ ದೃಢ ನಿಶ್ಚಯದೊಂದಿಗೆ ಭೀಮವರಂನ ಮಾಸ್ಟರ್‌ಗಳೆಲ್ಲರೂ ಉತ್ಸಾಹದಿಂದ ಪಾಲ್ಗೊಂಡು ಜಯಪ್ರದಗೊಳಿಸಿದರು. ಎಲ್ಲರೂ ಕಷ್ಟಪಟ್ಟು, ಸ್ವಯಂ ಪ್ರತಿ ಗ್ರಾಮಕ್ಕೆ ತೆರಳಿ ಕರಪತ್ರಗಳನ್ನು ಕೊಟ್ಟು, ಮದುವೆಗೆ ಆಮಂತ್ರಿಸಿದಂತೆ, ಆಮಂತ್ರಿಸಿ ಬಂದರು. ಭೀಮವರಂ ನಲ್ಲಿ ಎರಡು ದಿನಗಳು ಪೂರ್ತಿ ಬ್ಯಾಂಡ್ ಸೆಟ್ ಇಡಿಸಿ ಮನೆಮನೆಗೂ ತಿರುಗಿ ಪಾಂಪ್ಲೆಟ್ಸ್ ಹಂಚಿ ಕುಂಕುಮ ಕೊಟ್ಟು ಕರೆದರು, ರಾಘವರಾವ್ ರವರು ಏನು ಮಾಡಿದರೂ ವಿಭಿನ್ನವಾಗಿ ಮಾಡಬೇಕು ಎನ್ನುತ್ತಾರೆ, ಅವರು ಪ್ರತಿಯೊಂದು ಕೆಲಸದಲ್ಲೂ ಹೊಸತನವಿರಬೇಕು ಎನ್ನುತ್ತಾರೆ.

ಡಿ. ಎನ್. ಆರ್ ಕಾಲೇಜ್ ಮೈದಾನದಲ್ಲಿ ನಡೆದ ಆ ಕಾರ್ಯಕ್ರಮಕ್ಕೆ ಸುಮಾರು ಹದಿಮೂರು ಸಾವಿರ ಮಂದಿ ಹಾಜರಾದರು! ಪ್ರತಿ ಊರುಗಳಿಂದ ಬಸ್, ಕಾರುಗಳಲ್ಲಿ ಬಂದವರಿಗೆಲ್ಲರಿಗೂ ಮೈದಾನದಲ್ಲಿ ಭೋಜನ ಏರ್ಪಾಟು ಮಾಡಿದರೆ ಅವರಿಗೆ ಪ್ರಯಾಣ ತಡ ಆಗಬಹುದೆಂದು, ಎಲ್ಲರಿಗೂ ಆಹಾರವನ್ನು ಪ್ಯಾಕ್ ಮಾಡಿಸಿ ಕಾರುಗಳಲ್ಲಿ ಬಸ್ಸುಗಳಲ್ಲೇ ನೀಡಿದೆವು, ಸ್ವಸ್ಥಳಗಳಲ್ಲಿರುವವರಿಗೆ ಮೈದಾನದಲ್ಲಿ ಭೋಜನ ಏರ್ಪಾಟು ಮಾಡಿದೆವು, ಯಾರಿಗೂ ಯಾವ ಅಸೌಕರ್ಯವೂ ಆಗದಂತೆ ರಾಘವರಾವ್ ರವರು ತುಂಬಾ ಚೆನ್ನಾಗಿ ಏರ್ಪಾಟು ಮಾಡಿದರು ಪತ್ರಿ ಸಾರ್ ರವರ ಕ್ಲಾಸ್ ಕೂಡ ತುಂಬಾ ಚೆನ್ನಾಗಿತ್ತು. ಕಾರ್ಯಕ್ರಮ ಆರಂಭಿಸುವ ಮೊದಲೇ ಎಲ್ಲರನ್ನೂ ಕರೆದಿದ್ದೇವೆ, ತುಂಬಾ ಜನರು ಬರುವ ನಿರೀಕ್ಷೆಇದೆ ಎಲ್ಲರೂ ನಿಮ್ಮ ಪ್ರವಚನದಿಂದ ಸಮ್ಮೋಹಿತರಾಗಬೇಕು, ನಮ್ಮ ಪಾಲಿನ ಪ್ರಯತ್ನ ಮಾಡಿದ್ದೇವೆ, ನಿಮ್ಮ ಕರುಣೆ ಅವರ ಮೇಲೆ ಇರಬೇಕು, ನಿಮ್ಮ ಬೋಧನೆಯಿಂದ ಅವರೆಲ್ಲರನ್ನೂ ಪ್ರಭಾವಿತಗೊಳಿಸಬೇಕು ಎಂದೆವು.

ಅಲ್ಲಿಯವರೆಗೂ ನಡೆದ ಕಾರ್ಯಕ್ರಮಗಳಿಗೆ ಅಷ್ಟು ಜನ ಬಂದಿರಲಿಲ್ಲ. ಆದರೆ ಅಂದಿನ ಕಾರ್ಯಕ್ರಮಕ್ಕೆ ಜನಸಾಗರ ನೆರೆದಿತ್ತು, ಸಾರ್ ವೇಮನ ಪದ್ಯಗಳನ್ನು ಹಾಡಿ, ಮಾಂಸಾಹಾರ ಏಕೆ ಬಿಡಬೇಕು ಎಂದು ಹೇಳಿದರು. 'ಧ್ಯಾನ'ದ ವಿಶಿಷ್ಟತೆ, ಎಲ್ಲರೂ 'ಧ್ಯಾನ' ಏಕೆ ಮಾಡಬೇಕು ಎಂದು ಹೇಳಿ ಕಲಿಯುಗ ಎಂದರೇನು? ಈಗ ಬರಲಿರುವ ಸತ್ಯ ಯುಗ ಎಂದರೇನು? ಆ ಯುಗ ಲಕ್ಷಣಗಳನ್ನು ವಿವರಿಸುತ್ತಾ, ಪ್ರಜೆಗಳು ಹೇಗಿರಬೇಕು ಎಂದು ವಿವರವಾಗಿ ಹೇಳಿದರು. ಕಲಿಯುಗದಲ್ಲಿ ಬರುವ ಕಷ್ಟಗಳು ಹೋಗಲು ಮಾರ್ಗಗಳನ್ನು ಹೇಳಿದರು, ನಿನ್ನ ಕಷ್ಟಗಳನ್ನು ಹೋಗಲಾಡಿಸುವ ಮಾರ್ಗ ನಿನ್ನ ಕೈಯಲ್ಲಿದೆ, ಯಾವ ಭಗವಂತನೂ ನಿಮ್ಮ ಕಷ್ಟಗಳನ್ನು ತೊಲಗಿಸುವುದಿಲ್ಲ, ನಿಮ್ಮ ಜೀವನದಲ್ಲಿ ಪ್ರವೇಶಿಸುವುದಿಲ್ಲ, "ಯಾರ ಜೀವನದಲ್ಲಿ 'ಧ್ಯಾನ' ಇರುವುದೋ ಅವರು ನಿತ್ಯವೂ ಆನಂದವಾಗಿ ಇರುತ್ತಾರೆ, ಯಾರು 'ಧ್ಯಾನ' ಪ್ರಚಾರ ಮಾಡುತ್ತಾರೋ ಅವರು ಬ್ರಹ್ಮಾನಂದ ಸ್ಥಿತಿಯಲ್ಲಿ ಇರುತ್ತಾರೆ". ಎಂದು ತುಂಬಾ ಅದ್ಭುತವಾದ ಸಂದೇಶ ನೀಡಿದರು. ವಾರ್ತಾಪತ್ರಿಕೆಗಳೆಲ್ಲಾ "ಭೀಮವರಂ ನಲ್ಲಿ 'ಧ್ಯಾನ'ಸಮುದ್ರ ಉಕ್ಕಿತು" ಎಂದು ಬರೆದವು. ಈ ವಿಧವಾಗಿ ನಮ್ಮ ಭೀಮವರಂ ಪಿರಮಿಡ್ ಮಾಸ್ಟರ್ ಗಳು ಎಲ್ಲರೂ ಒಂದಾಗಿ ಮಾಡಿದ ಸಮೂಹ ಕೃಷಿಯಿಂದ ಸಿಹಿ ನೆನಪುಗಳನ್ನು ಸಂಗ್ರಹಿಸಿಕೊಂಡೆವು.

ಹಾಗೆ ನಾವು ಪ್ರಚಾರ ಮಾಡುತ್ತಲೇ ಇದ್ದೆವು, 'ಧ್ಯಾನ' ಗ್ರಾಮೀಣ" ಆದರೂ ವರ್ಷಕ್ಕೆ ನಮಗೆ 'ಧ್ಯಾನ' ಮಹಿಳಾ ಕಾರ್ಯಕ್ರಮ" ಮಾಡಿರೆಂದು ಪತ್ರೀಜಿ ಹೇಳಿದರು. ಮತ್ತೆ ಕಾರ್ಯಕರ್ತರು, ಮಾಸ್ಟರ್ ಗಳು ಪ್ರಚಾರವನ್ನು ಇಮ್ಮಡಿಗೊಳಿಸಿದರು, ಸಾರ್ ಏನೆಂದರೆಂದರೆ "ಕಾರ್ಯಕ್ರಮದಲ್ಲಿ ಎಲ್ಲಾ ಹೆಂಗಸರೇ, ಒಬ್ಬ ಗಂಡಸು ಕೂಡ ಇರಬಾರದು" ಎಂದರು, "ಮೈದಾನದಲ್ಲಿ ಯಾರೂ ಗಂಡಸರು ಕಾಣಬಾರದು" ಎಂದು

ಮಹಿಳೆಯರ ಕಾರ್ಯಕ್ರಮ ಅಲ್ಲವೇ ಎಂದರು. ನಾವು ಕೂಡ ಎಲ್ಲರಿಗೂ ಹಾಗೆ ಹೇಳಿದೆವು, ಆದರೆ ಜಿಲ್ಲೆಯಲ್ಲಿ ದೂರದಿಂದ ಬಂದವರಿಗೆ ಮತ್ತೆ ಹೋಗಲು ಗಂಡಸರ ಸಹಾಯ ಬೇಕು, ಆದ್ದರಿಂದ ದೂರದಿಂದ ಬಂದವರ ಜೊತೆ ಕೆಲವರು ಮಾತ್ರ ಗಂಡಸರು ಬಂದರು, ಮೈದಾನದಲ್ಲಿ ಹೆಂಗಸರನ್ನೇ ಕೂರಿಸಿ, ಒಳಗೆ ಹಾಲ್ ನಲ್ಲಿ ಗಂಡಸರನ್ನು ಕೂರಿಸಿ, ಹೊರಗೆ ನಡೆಯುವುದೆಲ್ಲಾ ಪರದೆ ಮೇಲೆ ಬರುವಂತೆ ಲೈವ್ ನೀಡಿದೆವು.

ಆದರೆ ಸಾರ್ ಕಾರ್ ಇಳಿಯುತ್ತಾ ಗಂಡಸರ ಬಳಿ ತೆರಳಿ ಅವರಿಗೆ ಹಸ್ತಲಾಘವ ಮಾಡಿದರು, ಇದರ ಅನುಸಾರ ಮಧ್ಯೆ ಮಧ್ಯೆ "ನಮ್ಮಲ್ಲಿ ಡಿಸಿಪ್ಲಿನ್ ಇದೆಯಾ? ಇಲ್ಲವಾ"? ಎಂದು ಪರೀಕ್ಷಿಸುತ್ತಾರೆ ಎನಿಸಿತು. ಆದರೆ ಎಲ್ಲರನ್ನೂ ಸಂತೋಷಪಡಿಸುತ್ತಾರೆ, ಆ ದಿನ "ಜಾಬಾಲಿ" ಕುರಿತು ಅದ್ಭುತವಾದ ಕಾನ್ಸೆಪ್ಟ್ ಹೇಳಿ ಎಷ್ಟೋ ಉತ್ಸಾಹಗೊಳ್ಳುವಂತೆ ಮಾಡಿದರು.

ಹಾಗೆ ಭೀಮವರಂ ನಲ್ಲಿ ನಡೆದ ಎಲ್ಲಾ ಕ್ಲಾಸುಗಳು ಅದ್ಭುತವಾಗಿದ್ದವು, ಅದರಿಂದ ನಾವೆಲ್ಲರೂ ಆಧ್ಯಾತ್ಮಿಕತೆಯಲ್ಲಿ ಉನ್ನತಿಯನ್ನು ಸಾಧಿಸಿದೆವು, ಪ್ರಚಾರ ಎಷ್ಟು ಮಾಡುತ್ತೇವೋ, ಅಷ್ಟು ನಾವು ಶಿಷ್ಯರಂತಲ್ಲದೇ ಗುರುಗಳಾಗುತ್ತೇವೆ, ಸಾರ್ ಕೂಡಾ ಅದೇ ಹೇಳುತ್ತಾರೆ, ಜೀವನದಲ್ಲಿ ಶಿಷ್ಯರಾಗಿ ಅಲ್ಲದೆ ಗುರುಗಳಾಗಬೇಕು ಎನ್ನುತ್ತಾರೆ. ಹಾಗೆ ನನ್ನ ಪ್ರಚಾರ ಸಾಗುತ್ತಾ, ಈ ದಿನ ನಾನು ಮೂರು ದಿನಗಳು ಕ್ಲಾಸ್ ಮಾಡುವ ಮಾಸ್ಟರ್ ಆಗಿದ್ದೇನೆ ಎಂದರೆ, ಅದಕ್ಕೆ ಕಾರಣ ಪತ್ರೀಜಿ ಮತ್ತು ನನ್ನ ಪತಿರಾಘವರಾವ್ ರವರಿಂದಲೇ ಎಂದು ಹೇಳಬಹುದು.

'ಧ್ಯಾನ' ಮಾಡಿದರೆ ಬರುವ ಆನಂದಕ್ಕಿಂತ 'ಧ್ಯಾನ' ಪ್ರಚಾರದಲ್ಲೇ ಸಾವಿರ ಪಟ್ಟು ಆನಂದವಿರುತ್ತದೆ ಎನ್ನುವ ಪತ್ರೀಜಿಯವರ ಮಾತು ನನ್ನ ವಿಷಯದಲ್ಲಿ ಅಕ್ಷರಶಹ ಸತ್ಯ.



# ನಾನು ಅರಿತುಕೊಂಡಂತೆ ಪತ್ರೀಜಿ

ಪತ್ರೀಜಿಯವರನ್ನು ಅರ್ಥ ಮಾಡಿಕೊಳ್ಳುವುದು ತುಂಬಾ ಕಷ್ಟ, ಶಾರೀರಿಕ ಸ್ಥಿತಿಯಲ್ಲಿರುವವರಿಗೆ, ಮಾನಸಿಕ ಸ್ಥಿತಿಯಲ್ಲಿ ಇರುವವರಿಗೆ ಅವರು ಅರ್ಥವಾಗುವುದಿಲ್ಲ, ಅವರ ಮಾತು, ಕೃತಿಗಳು ಅರ್ಥವಾಗಬೇಕೆಂದರೆ ಆ ಎರಡು ಸ್ಥಿತಿಗಳು ದಾಟಿ, ಬುದ್ಧಿ ಸ್ಥಿತಿ, ಆತ್ಮ ಸ್ಥಿತಿಗಳಿಗೆ ಸೇರಿಕೊಳ್ಳಬೇಕು, ಅವರಿಗೆ ಮಾತ್ರ ಪತ್ರೀಜಿ ಅರ್ಥವಾಗುತ್ತಾರೆ.

ಶಾರೀರಿಕ ಸ್ಥಿತಿಯಲ್ಲಿ ಇರುವವರು, "ಅವರು ಹೆಂಗಸರನ್ನು ಹೆಣ್ಣು ಮಕ್ಕಳನ್ನು ಮಾತ್ರ ಹತ್ತಿರ ಸೇರಿಸಿಕೊಳ್ಳುತ್ತಾರೆ ಅವರ ಕೈಯಲ್ಲಿ ಕಾಲು ಒತ್ತಿಸಿಕೊಳ್ಳುತ್ತಾರೆ", ಎಂದು ಮತ್ತು "ಸ್ವಾಮೀಜಿಗಳು ಹಾಗೆ ಮಾಡುವುದಿಲ್ಲವಲ್ಲಾ"! ಎಂದು ಹೇಳುತ್ತಾರೆ. ಶಾರೀರಿಕ ಸ್ಥಿತಿಯಲ್ಲೇ ಹೆಣ್ಣು, ಗಂಡು ಎನ್ನುವ ಭೇದ ಗಳಿರುತ್ತವೆ, ಆದರೆ ಆತ್ಮ ಪರವಾಗಿ ಆ ಬೇಧಗಳು ಇರುವುದಿಲ್ಲ ಎಂದು ತಿಳಿಯದ ಅಜ್ಞಾನಿಗಳೇ ಹಾಗೆ ಗಂಡು, ಹೆಣ್ಣು ಎನ್ನುವಂತೆ ಬೇರೆಯಾಗಿ ನೋಡುತ್ತಾರೆ ಮಾತಾಡುತ್ತಾರೆ, ಆದ್ದರಿಂದ ಅವರು ಶಾರೀರಿಕ ಸ್ಥಿತಿಯನ್ನು ದಾಟಿದವರು ಎಂದು ಹೇಳಬಹುದು.

ಇನ್ನು ಮಾನಸಿಕ ಸ್ಥಿತಿಯಲ್ಲಿ ಇರುವವರು "ಅವರಿಗೆ ಅಷ್ಟು ಕೋಪವೇಕೆ? ನಿಧಾನವಾಗಿ ಹೇಳಬಹುದಲ್ಲ? ಹಾಗೆ ಹೊಡೆಯುವುದು ಏಕೆ? ಎಂದು ಕೇಳುತ್ತಾರೆ, ಹಾಗೆ ಕೇಳಿದವರು ಮಾನಸಿಕ ಸ್ಥಿತಿಯಲ್ಲಿ ಇದ್ದಹಾಗೆಯೇ, ಏಕೆಂದರೆ ಅವರಿಗೆ ಅಹಂ ಇರುತ್ತದೆ ಅದನ್ನು ಹೋಗಲಾಡಿಸಲು ಮಾತ್ರ ಗುರುಗಳು ಹಾಗೆ ವರ್ತಿಸುತ್ತಾರೆ, ಇದು ತಿಳಿಯದೆ ಅವರ ಮಾತನ್ನು, ಅವರ ಕಾರ್ಯವನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ. "ಕಲ್ಲು ಶಿಲ್ಪವಾಗಿ ಬದಲಾಗಬೇಕು" ಅಂದರೆ, ಶಿಲ್ಪಿ ಕೈಯಲ್ಲಿ ಇರುವ ಶಿಲೆ ಉಳಿಯಿಂದ ಎಷ್ಟೋ ಹೊಡೆತಗಳನ್ನು ತಡೆದುಕೊಳ್ಳಬೇಕು, ಕಲ್ಲಿಗೆ ನೋವಾಗುತ್ತದೆ ಎಂದು ಶಿಲ್ಪಿ ಏನು ಮಾಡದಂತೆ ಸುಮ್ಮನಾದರೆ, ಶಿಲೆ ಯಾವತ್ತಿಗೂ ಶಿಲ್ಪವಾಗುವುದಿಲ್ಲ. ಗುರುವು ತನ್ನ ಮಾತುಗಳೆಂಬ ಉಳಿಯಿಂದ ಕಲ್ಲೆಂಬ ಅಜ್ಞಾನದಲ್ಲಿರುವ ಶಿಷ್ಯರನ್ನು ಒಂದು ಸುಂದರ ಶಿಲ್ಪದಂತೆ ಬದಲಾಯಿಸಲು ಗುರು ಹಾಗೆ ಪ್ರವರ್ತಿ ಸುತ್ತಾನೆ. ಇದು ತಿಳಿದುಕೊಳ್ಳದ ಅಜ್ಞಾನಿಗಳು ಅವರ ಮೇಲೆ ಅಪವಾದಗಳನ್ನು ಹಾಕಿದರೆ ನಷ್ಟವಾಗುವುದು ನಮಗೇ ಹೊರತು ಅವರಿಗಲ್ಲ. ಮಾನಸಿಕ ಸ್ಥಿತಿಯಲ್ಲಿ ಇರುವವರು ಆ ಕಾರಣ ಹುಡುಕದೆ ಪತ್ರೀಜಿ ಅವರನ್ನು ನಿಂದಿಸುತ್ತಾರೆ.

ಇನ್ನು ಮೂರನೆಯ ವಿಧವಾದ "ಬುದ್ಧಿ ಸ್ಥಿತಿಯಲ್ಲಿ" ಇರುವವರು, ಅವರ ಪ್ರತಿ ಮಾತು ಎಷ್ಟು ಅಮೂಲ್ಯವಾದದ್ದೋ ಗ್ರಹಿಸುತ್ತಾರೆ, ಬುದ್ಧಿ ವಿಕಾಸ ವಾದವರು ಮಾತ್ರವೇ ಅವರನ್ನು ಅರ್ಥ ಮಾಡಿಕೊಳ್ಳಬಲ್ಲರು, ಬುದ್ಧಿ ಪರವಾಗಿ ವಿಕಾಸವಾದವರಿಗೆ ಮಾತ್ರ ಅವರಲ್ಲಿರುವ ಶಕ್ತಿ, ಜ್ಞಾನ ಅರ್ಥವಾಗುತ್ತದೆ.

ಆತ್ಮ ಪರವಾಗಿ ಅಭಿವೃದ್ಧಿಯಾದವರಿಗೆ ಪತ್ರೀಜಿ ಈ ಭೂಮಿ ಮೇಲೆ ಏಕೆ ಬಂದಿದ್ದಾರೋ ಈ ಭೂಮಂಡಲಕ್ಕೆ ಯಾವ ಕೆಲಸ ಅಗತ್ಯವಿದೆಯೋ ಅವರು ಏನು ಮಾಡುತ್ತಿದ್ದಾರೋ ಅರ್ಥವಾಗುತ್ತದೆ.

ಅವರು ಈ ಭೂಮಿ ಮೇಲೆ ಧರ್ಮವನ್ನು ಉಳಿಸಲು, ಸತ್ಯವೆಂದರೆ ಏನೋ ತಿಳಿಸಲು ಬಂದಿದ್ದಾರೆ. ಕಲಿಯುಗದಲ್ಲಿ ಭೂಮಿ ಮೇಲೆ ಸತ್ಯ, ಧರ್ಮವೆಂಬುದು ಕಣ್ಮರೆಯಾಗಿದೆ.

ಸತ್ಯವೆಂದರೆ ಪ್ರತಿ ಮಾನವನು ತಾನೇ ದೈವವೆಂದು ಅಂದರೆ ಆತ್ಮವೆಂದು ತಿಳಿದುಕೊಳ್ಳುವುದು, ಆ ಸತ್ಯವನ್ನು ತಿಳಿದುಕೊಳ್ಳುವ ಮಾರ್ಗವೇ ಆನಾಪಾನಸತಿ 'ಧ್ಯಾನ', 'ಧ್ಯಾನ'ದಿಂದ ಮಾತ್ರವೇ ಪ್ರತಿ ವ್ಯಕ್ತಿ ತಾನು ದೇವರೆಂದು ತಿಳಿದುಕೊಳ್ಳುತ್ತಾನೆ. 'ಧ್ಯಾನ'ಚೆನ್ನಾಗಿ ಆಗಬೇಕೆಂದರೆ, ಧರ್ಮವನ್ನು ಆಚರಿಸಬೇಕು, ಅಂದರೆ ಹಿಂಸಾ ಭಕ್ಷಣೆಯನ್ನು ಬಿಡಬೇಕು. ಹಿಂಸೆ ಬಿಟ್ಟು ಹಂಸದ ಮೇಲೆ ಅಂದರೆ ಶ್ವಾಸದ ಮೇಲೆ ಗಮನವಿಟ್ಟರೆ ಪ್ರತಿಯೊಬ್ಬರೂ ತಾನೇ ಭಗವಂತನೆಂದು ತಿಳಿದುಕೊಳ್ಳುತ್ತಾರೆ, ಎಲ್ಲರೂ ಆತ್ಮಶಕ್ತಿಯನ್ನು ಬೆಳೆಸಿಕೊಂಡು, ಶಕ್ತಿವಂತರಾಗಲು ಆತ್ಮ ಪರವಾಗಿ ಉನ್ನತಿ ಸಾಧಿಸಿದರೆ, ಅಷ್ಟಸಿದ್ಧಿಗಳು, ಅಷ್ಟೈಶ್ವರ್ಯಗಳು ವಶವಾಗುತ್ತವೆ.

ಒಂದು ಮೋಸಂಬಿ ಹಣ್ಣು ನೋಡಿದಾಕ್ಷಣ, ರುಚಿಯಾಗಿ ಸಿಹಿಯಾಗಿ ಇರುತ್ತದೆ ಎಂದು ಅದನ್ನು ಕಚ್ಚಿ ತಿನ್ನುತ್ತೇವೆಯೇ? ಇಲ್ಲಾ! ಹಾಗೆ ಕಚ್ಚಿದರೆ ಕಹಿಯಾಗಿ ಒಗರು ರುಚಿ ಇರುತ್ತದೆ, ಕಹಿಯಾದ ಬೀಜವು ಇರುತ್ತದೆ, ಹಾಗೆಂದು ಅದನ್ನು ಹೊಟ್ಟು ಸುಲಿದು ತಿನ್ನದಿದ್ದರೇ ನಮಗೆ ಅದರ ರುಚಿ ತಿಳಿಯುವುದಿಲ್ಲ, ಆ ಕಹಿಯಾದ ಸಿಪ್ಪೆಯೇ ಆ ಹಣ್ಣಿಗೆ ರಕ್ಷಣೆ, ಆ ಕಹಿಯಾದ ಬೀಜಗಳು ಮತ್ತೊಂದು ಗಿಡಕ್ಕೆ ಜನ್ಮ ನೀಡುತ್ತವೆ. ಪತ್ರೀಜಿಯವರು ಕೂಡಾ ಅಂತಹವರೇ, ಅವರ ಮಾತುಗಳು ಕಠಿಣವಾದ ಬೀಜಗಳಂತೆ ಇರುತ್ತವೆ, ಅವರ ಪ್ರವರ್ತನೆ ಕಹಿಯಾದ ಸಿಪ್ಪೆಯಂತೆ ಇರುತ್ತದೆ! ಮೊದಲ ಬಾರಿಗೆ ಕೇಳಿದರೆ ಅವರ ಮಾತುಗಳು ಇಷ್ಟವಾಗುವುದಿಲ್ಲ, ಹಾಗೆಂದು ಅವರ ಸಾಂಗತ್ಯ ಬಿಟ್ಟರೆ ಎಂದಿಗೂ ಜ್ಞಾನವಂತರಾಗುವುದಿಲ್ಲ, ಮತ್ತೊಬ್ಬರನ್ನು ಜ್ಞಾನಿಗಳನ್ನಾಗಿ ತಯಾರು ಮಾಡಲಾರರು, ಅವರ ಮಾತಿನಲ್ಲಿ ಇರುವ ಅಂತರಾರ್ಥವನ್ನು ಅರಿತರೆ ಜ್ಞಾನವಂತರಾಗಿ, ಇನ್ನೊಬ್ಬ ಜ್ಞಾನಿಯನ್ನು ತಯಾರು ಮಾಡಲು ಸಾಧ್ಯ.

# ಗುರು ಪೌರ್ಣಮಿಯ ದಿನ ಪತ್ರೀಜಿಯವರ ಬಗ್ಗೆ ನನಗೆ ಬಂದ ಸಂದೇಶ

ಪತ್ರೀಜಿಯವರ ಬಗ್ಗೆ ಎಷ್ಟು ಹೇಳಿದರೂ ಕಡಿಮೆ ಎಂದೇ ಅನಿಸುತ್ತದೆ, ಅವರ ಬಾಯಿಂದ ಹೊರಟ ಮಾತುಗಳು ಎಷ್ಟೋ ಜ್ಞಾನವಂತವಾಗಿ ಇರುತ್ತವೆ.

ಈ ಭೂಮಿ ಮೇಲೆ ಅವರು ಮಾನವ ಕುಲಕ್ಕೆ ಮಾಡುತ್ತಿರುವ ಕೆಲಸ ಗಳನ್ನು ನೋಡಿದರೆ ತುಂಬಾ ಆಶ್ಚರ್ಯವಾಗುತ್ತದೆ. ಅವರು ಪ್ರತಿದಿನ ಎಷ್ಟೋ ಕಿಲೋಮೀಟರ್ ಗಳು ಪ್ರಯಾಣಿಸುತ್ತಾ ಇರುತ್ತಾರೆ, ಒಂದು ದಿನವೂ ಅವರಲ್ಲಿ ಆಯಾಸ ಕಾಣಿಸುವುದಿಲ್ಲ, ನಿರಂತರವೂ ಈ ಮಾನವ ಜನಾಂಗಕ್ಕೆ ಜ್ಞಾನ ನೀಡಬೇಕೆಂಬ ಆತುರತೆ ಅವರಲ್ಲಿ ಕಾಣಿಸುತ್ತದೆ, ಅವರು ಜ್ಞಾನ ಬೋಧನೆ ನೀಡುತ್ತಿದ್ದರೆ ಈ ಮಾನವ ಜನ್ಮಕ್ಕೆ ದುಃಖವನ್ನು ಹೋಗಲಾಡಿಸಲು ಭೂಮಿಗೆ ಬಂದ ಅವತಾರ ಪುರುಷನಹಾಗೆ ಕಾಣಿಸುತ್ತಾರೆ.

ದುಃಖಗಳು, ಬಾಧೆಗಳು ತೊಲಗಲು ಬೇಕಾದಂತಹ 'ಧ್ಯಾನ'ಸಾಧನೆ ಮಾಡಿದರೆ ಮಾತ್ರ ಅವು ಹೋಗಲು ಸಾಧ್ಯ. ನಿನ್ನೆ ಬಂದ ರೋಗಕ್ಕೆ ಇಂದು ಔಷಧಿ ತೆಗೆದುಕೊಂಡರೆ ಹೇಗೆ ಹೋಗುತ್ತದೋ  ಹಾಗೆಯೇ ಜನ್ಮಗಳಿಂದ ಬಂದ ದುಃಖ ಈ ಜನ್ಮದಲ್ಲಿ ಮಾಡುವ 'ಧ್ಯಾನ' ಸಾಧನೆಯಿಂದ ಹೋಗುತ್ತದೆ ಎಂದು ವಸಿಷ್ಠ ಮಹರ್ಷಿಗಳು ಹೇಳುತ್ತಾರೆ, ಹಾಗೆಯೇ ಪತ್ರೀಜಿ ಕೂಡ ಯಾವ ದುಃಖ ಹೋಗಬೇಕೆಂದರೂ, ರೋಗಗಳು ಹೋಗಬೇಕೆಂದರೂ, ಆತ್ಮ ಜ್ಞಾನ ಬ್ರಹ್ಮ ಜ್ಞಾನ ಉಂಟಾಗಬೇಕೆಂದರೂ 'ಧ್ಯಾನ'ಸಾಧನೆ ಮಾಡಬೇಕೆಂದು ಹೇಳುತ್ತಾರೆ.

ಹಾಗೆ ವಸಿಷ್ಠರು ಶ್ರೀರಾಮನಿಗೆ ಹೇಳಿದಂತೆ ಪತ್ರೀಜಿ ನಮ್ಮೆಲ್ಲರಿಗೂ ಜ್ಞಾನ ಬೋಧೆ ಮಾಡುತ್ತಾರೆ, ಎಲ್ಲರನ್ನೂ ಆನಂದದಲ್ಲಿ ಇರಿಸುತ್ತಾರೆ, ಎಲ್ಲರೂ ಜ್ಞಾನವಂತರು ಆಗಬೇಕೆಂದು ನಿರಂತರ ಶ್ರಮಿಸುತ್ತಿದ್ದಾರೆ, ಹಾಗೆ ಅವರು ಎಷ್ಟೋ ಜನ ಪಿರಮಿಡ್ ಮಾಸ್ಟರ್‌ಗಳನ್ನು ತಯಾರು ಮಾಡಿ 'ಧ್ಯಾನ' ಪ್ರಚಾರ ಮಾಡಿಸುತ್ತಿದ್ದಾರೆ.

ಮೊದಲಿಗೆ 'ಜ್ಞಾನ' ಶ್ರುತಿಗಳಗಳ ರೂಪದಲ್ಲಿ ಇರುತ್ತಿತ್ತು, ಅವು ಮಾನವರು ಅರ್ಥ ಮಾಡಿಕೊಳ್ಳಲು ತುಂಬಾ ಕಷ್ಟವಾಗುತ್ತಿತ್ತು, ಶ್ರುತಿಗಳನ್ನು ಅರ್ಥ ಮಾಡಿಕೊಳ್ಳುವುದು ಎಷ್ಟು ಜಟಿಲವೆಂದರೆ, ಒಬ್ಬ ಸ್ತ್ರೀಯ ಸಿಕ್ಕು ಹಿಡಿದ ಕೂದಲು ನೋಡಲು ಹೇಗಿರುತ್ತದೆಯೋ ಹಾಗೆ ಕೃತಿಗಳನ್ನು ಅರ್ಥ ಮಾಡಿಕೊಳ್ಳುವುದು ತುಂಬ ಕಷ್ಟ ಎಂದು ಋಷಿಗಳು ಕೂಡ ಹೇಳುತ್ತಿದ್ದರು, ಅಂತಹ ಶ್ರುತಿಗಳನ್ನು ವೇದವ್ಯಾಸರು ನಾಲ್ಕು ವೇದಗಳು, ಅಷ್ಟಾದಶ ಪುರಾಣಗಳಾಗಿ ವಿಭಜಿಸಿದ್ದಾರೆ, ಅವರು...

ಋಗ್ವೇದವನ್ನು – ಪೈಲರಿಗೆ

ಯಜುರ್ವೇದವನ್ನು– ವೈಶಂಪಾಯನಿಗೆ

ಸಾಮವೇದವನ್ನು – ಜೈಮಿನಿಗೆ

ಅಥರ್ವಣ ವೇದವನ್ನು– ಸುಮಂತರಿಗೆ

ಅಷ್ಟಾದಶ ಪುರಾಣಗಳನ್ನು – ಸೂತನಿಗೆ ಬೋಧಿಸಿದ್ದಾರೆ.

ಅವರು ದೇಶದ ನಾಲ್ಕು ದಿಕ್ಕುಗಳಿಗೂ ಈ ಜ್ಞಾನವನ್ನು ಹಂಚಿದ್ದಾರೆ, 'ವೇದ' ಎಂದರೆ ಜ್ಞಾನ ಎಂದು ಅರ್ಥ, ಪತ್ರೀಜಿ ಕೂಡ ಈ ಜ್ಞಾನವನ್ನು ಚಿಕ್ಕ ಚಿಕ್ಕ ಕಾನ್ಸೆಪ್ಟ್ ಗಳಾಗಿ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಹೇಳುತ್ತಾ, ಚಿಕ್ಕ ಮಕ್ಕಳಿಗೂ ಅರ್ಥವಾಗುವ ಆಡುಭಾಷೆಯಲ್ಲಿ ಪುಸ್ತಕಗಳನ್ನು ಕೂಡ ಬರೆದಿದ್ದಾರೆ, ಹೀಗೆ ಪ್ರಚಾರ ಮಾಡುತ್ತಿರುವ ಪತ್ರೀಜಿ ವ್ಯಾಸರಂತೆಯೇ ಕಾಣುತ್ತಾರೆ, ಬುದ್ಧನಂತೆ ಅಹಿಂಸೆ ಬಗ್ಗೆ ಹೆಚ್ಚಾಗಿ ಹೇಳುತ್ತಾರೆ, ಸಮಸ್ತ ಮಾನವ ಕುಲದ ದುಃಖಕ್ಕೆ ಕಾರಣ ಮಾಂಸಾಹಾರ ತಿನ್ನುವುದೇ ಎಂದು, ಹಿಂಸೆ ಬಿಡದಿದ್ದರೆ ಪ್ರಜೆಗಳಲ್ಲಿ ಶಾಂತಿ ಬರುವುದಿಲ್ಲವೆಂದೂ, ಶಾಖಾಹಾರವೇ ಮಾನವನ ಆಹಾರವೆಂದು ಹೇಳುತ್ತಾರೆ.

ಬುದ್ಧನು ಬಂದ ಮೇಲೆ ಯಜ್ಞಯಾಗಗಳಲ್ಲಿ ಬಲಿಗಳನ್ನು ತಡೆಹಿಡಿದರು. ಹಾಗೆಯೇ ಪತ್ರೀಜಿ ಬುದ್ಧನಂತೆ ಜ್ಞಾನವನ್ನು ಹಂಚುತ್ತಾ, ಮಾನವರನ್ನು ಹಿಂಸೆಗೆ ದೂರವಾಗಿ ಇರಿಸುತ್ತಿದ್ದಾರೆ.

ಹಾಗೆಯೇ ಆದಿಶಂಕರಾಚಾರ್ಯರು ಅದ್ವೈತವನ್ನು ಬೋಧಿಸಿದರು, ಕಾಶ್ಮೀರದಿಂದ ಕನ್ಯಾಕುಮಾರಿ ವರೆಗೆ ಮೂರು ಸಾರಿ ಭಾರತ ದೇಶದಲ್ಲಿ ಪರ್ಯಟಿಸಿ ಎಷ್ಟೋ ದೇವಾಲಯಗಳನ್ನು ಪುನರುದ್ಧರಿಸಿ, ದೇಶದಲ್ಲಿ ನಾಲ್ಕು ದಿಕ್ಕುಗಳಂತೆ ನಾಲ್ಕು ಪೀಠಗಳನ್ನು ಸ್ಥಾಪಿಸಿ, 'ಜ್ಞಾನ' ಬೋಧಿಸುತ್ತಿದ್ದರು, ಅವರು ಬರೆದ ಗ್ರಂಥಗಳು ಎಲ್ಲಾ ಜ್ಞಾನ ಬೋಧೆಗಳೆ, ಹಾಗೆಯೇ ಪತ್ರೀಜಿ ಭಾರತ ದೇಶದಲ್ಲೇ ಅಲ್ಲದೆ ವಿದೇಶಗಳಲ್ಲೂ ಕೂಡ 'ಧ್ಯಾನ', ಆತ್ಮಜ್ಞಾನ ಬೋಧಿಸುತ್ತಿದ್ದಾರೆ, ಹಳ್ಳಿಗಳಲ್ಲಿ ಪಟ್ಟಣಗಳಲ್ಲಿ ಎಷ್ಟೋ ಕಡೆ ಪಿರಮಿಡ್ ಮೆಗಾ ಪಿರಮಿಡ್ಸ್ ನಿರ್ಮಿಸುತ್ತಿದ್ದಾರೆ, ಪ್ರತಿ ವ್ಯಕ್ತಿ 'ಧ್ಯಾನ' ಮಾಡಿ, ಆತ್ಮ ಜ್ಞಾನಿಯಾಗಿ, ಬ್ರಹ್ಮಜ್ಞಾನಿಯಾಗಿ ಬದಲಾಗಬೇಕೆಂದು ಪ್ರಚಾರ ಮಾಡಿಸುತ್ತಿದ್ದಾರೆ. ವಸಿಷ್ಠರು, ವ್ಯಾಸರು, ಬುದ್ಧ, ಆದಿಶಂಕರಾಚಾರ್ಯರಂತಹವರೆಲ್ಲರೂ ಮಾಡಿದ ಕೆಲಸವನ್ನೇ ಪತ್ರೀಜಿ ಮಾಡುತ್ತಿದ್ದಾರೆ, ಇದರಿಂದ ಅವರು ಎಷ್ಟು ಶಕ್ತಿವಂತರೋ ನಾವು ಅರ್ಥಮಾಡಿಕೊಳ್ಳಬಹುದು.

# ಪತ್ರೀಜಿಯವರಲ್ಲಿ ನಾನು ಕಂಡ ತಾಯಿ ಪ್ರೀತಿ

ಪತ್ರೀಜಿಯವರಲ್ಲಿ ನಾನು ತಂದೆಯನ್ನು, ಗುರುವನ್ನು ನೋಡುತ್ತಿದ್ದೆ ಆದರೆ ಒಂದು ಘಟನೆಯಿಂದ ಅವರಲ್ಲಿ ತಾಯಿ ಪ್ರೀತಿಯನ್ನು ಕೂಡ ನೋಡಿದೆನು, ಒಂದು ಬಾರಿ ನಾನು ರಾಘವರಾವ್ ರವರು ಬೆಂಗಳೂರಿನ ವೈಟ್ ಫೀಲ್ಡ್ ನಲ್ಲಿ ಕ್ಲಾಸ್ ನಿರ್ವಹಿಸಿದವು, ಆ ಕ್ಲಾಸ್‌ಗೆ ಪತ್ರೀಜಿ ಬಂದು, ಒಂದು ಗಂಟೆಯ ಕ್ಲಾಸ್ ತೆಗೆದುಕೊಂಡರು, ಅವರು ಹೋಗುತ್ತಿದ್ದಾಗ ಎಲ್ಲರೂ ಹೊರಟರು, ರಾಘವರಾವ್ ರವರು ಕೂಡಾ "ನಾವು ಹೋಗೋಣ"? ಎಂದರು, ನಾನು "ನೀವು ಹೋಗಿ ಈಗ ಎಂಟು ಗಂಟೆ ತಾನೇ, ರಾತ್ರಿ ಹತ್ತು ಗಂಟೆಯವರೆಗೂ 'ಧ್ಯಾನ' ಇದೆಯಲ್ಲ! 'ಧ್ಯಾನ' ಆದಮೇಲೆ ಬರುತ್ತೇನೆ" ಎಂದು ಹೇಳಿದೆನು.

ರಾಘವರಾವ್ ರವರು ಪತ್ರೀಜಿ ಕೂಡಾ ಹೊರಟರು, ಹತ್ತು ಗಂಟೆಗೆ ರಾಘವರಾವ್ ರವರು ಕಾರು ಕಳುಹಿಸಿ, "ಪತ್ರೀಜಿ ಹೊರಟು ಹೋಗುತ್ತಿದ್ದಾರೆ ಬೇಗ ಹೊರಟು ಬಾ" ಎಂದು ಹೇಳಿ ಕಳುಹಿಸಿದರು. ನಾನು ಬರುವ ಹೊತ್ತಿಗೆ ಪತ್ರೀಜಿ ಹೊರಗೆ ಬಂದು ಕಾರು ಹತ್ತುತ್ತಿದ್ದವರು ನನ್ನನ್ನು ನೋಡಿ, "ಈಗ ಬಂದಿರಾ, ನಿಮಗೆ ಊಟ ಬಡಿಸಿ ನಾನು ಹೋಗುತ್ತೇನೆ" ಎಂದು ಡೈನಿಂಗ್ ಟೇಬಲ್ ಬಳಿಗೆ ಕರೆದುಕೊಂಡು ಹೋದರು ಅಷ್ಟು ಹೊತ್ತಿಗೆ ಅಡುಗೆ ಮಾಡಿ ಎಲ್ಲರಿಗೂ ಬಡಿಸಿ ಸಾರ್ ಹೊರಡುತ್ತಿದ್ದರು, ಆದರೂ ನನಗೆ ಊಟ ಬಡಿಸಲು ಮತ್ತೆ ಬಂದರು! ಟೇಬಲ್ ಬಳಿಗೆ ಬಂದು ಪಾತ್ರೆಗಳನ್ನು ನೋಡಿದರೆ ಎಲ್ಲಾ ಖಾಲಿಯಾಗಿ ಕಾಣಿಸಿತು, ಆಗ ಸಾರ್ "ಎಲ್ಲಾ ಖಾಲಿಯಾಗಿದೆ ಹೋಗಲಿ ಬಿಡಿ ನಾನೇ ಅಡುಗೆ ಮಾಡಿ ನಿಮಗೆ ಬಡಿಸಿ ಹೋಗುತ್ತೇನೆ" ಆ ಕೂಡಲೇ ಅಡುಗೆ ಮಾಡಿ ನನಗೆ ಬಡಿಸಿ, ಅವರು ಹೊರಡುವ ಹೊತ್ತಿಗೆ ಹನ್ನೊಂದು ಗಂಟೆಗಳು ಆಯಿತು, ಮಳೆ ಬರುತ್ತಿತ್ತು, ಅವರು ಕರ್ನಾಟಕದಿಂದ ಆಂಧ್ರಕ್ಕೆ ಹೋಗಬೇಕು, ಆದರೂ ಅವರ ಪ್ರೀತಿ ಕಂಡು ನನಗೆ ಅನಿಸಿದ್ದು ಮಾತು ಕೊಟ್ಟರೆ ಎಷ್ಟು ಕಷ್ಟವಾದರೂ ಆ ಕೆಲಸ ಮಾಡುತ್ತಾರೆ, ಶಿಷ್ಯರನ್ನು ಮಕ್ಕಳ ಹಾಗೆ ನೋಡಿಕೊಳ್ಳುತ್ತಾರೆ, ಸಾರ್‌ಗೆ 'ಧ್ಯಾನ'ಮಾಡುವವರು, ಪ್ರಚಾರ ಮಾಡುವವರು ಎಂದರೆ ತುಂಬಾ ಇಷ್ಟ, ಅವರಿಗಾಗಿ ಎಷ್ಟು ಕಷ್ಟವಾದರೂ ಸಹಿಸುತ್ತಾರೆ ಎಂದು ಅರ್ಥ ಮಾಡಿಕೊಂಡೆನು.

ನಾನು ಆ ದಿನಗಳಲ್ಲಿ ಸಾರ್ ಅವರಲ್ಲಿ ಮಾತೃ ಹೃದಯವನ್ನು ಕಂಡೆನು, ತಾಯಿಯೇ ಮಗುವಿನ ಹಸಿವನ್ನು ನೀಗಿಸುತ್ತಾಳೆ, ಹೊರಗಿನಿಂದ ಬಂದ ಮಗುವಿನ ಹಸಿವನ್ನು ಗುರುತಿಸುವವಳು ತಾಯಿಯೇ, ನನ್ನ ಮನಸ್ಸಿನಲ್ಲಿರುವ ಭಾವವನ್ನು ಪತ್ರೀಜಿ ಅವರಿಗೆ ಹೇಗೆ ಹೇಳಬೇಕು? ಎಂದುಕೊಳ್ಳುತ್ತಿದ್ದೆ ಆದರೆ ಆಗ ಅವರೇ ಮಾರನೆಯ ದಿನ ಫೋನ್ ಮಾಡಿ "ಹೇಳಿ ಮೇಡಂ" ಎಂದರು, ಆಗ ನಾನು ಸಾರ್ ನನಗೆ ಪುನರ್ಜನ್ಮ ನೀಡಿ ತಂದೆಯಾದಿರಿ, ಜ್ಞಾನವನ್ನು ನೀಡಿ ಗುರುವಾದಿರಿ ರಾತ್ರಿ ನನಗೆ ಅನ್ನವನ್ನು ಮಾಡಿ ಬಡಿಸಿ ತಾಯಿಯಾದಿರಿ! ಇನ್ನು ಮುಂದೆ ನಾನು ನಿಮ್ಮಲ್ಲಿ ಎಷ್ಟು ನೋಡುತ್ತೇನೋ ಎಂದು ಹೇಳಿದಾಗ "ಹಾಗಾ" ಎಂದು ನಕ್ಕು ಫೋನ್ ಇಟ್ಟರು. ಹಾಗೆ ಅವರಲ್ಲಿ ನಾನು ತಾಯಿ ಹಾಗೂ ತಾಯಿಯ ಪ್ರೀತಿಯನ್ನು ನೋಡಿದೆನು.

# ಸದ್ಗುರುಗಳ ಶಕ್ತಿಗಳು

ಸದ್ಗುರುಗಳಿಗೆ ನಾಲ್ಕು ವಿಧವಾದ ಶಕ್ತಿಗಳಿರುತ್ತವೆ. ಆ ಶಕ್ತಿಗಳೊಂದಿಗೆ ಅವರು ಶಿಷ್ಯರಿಗೆ ದೀಕ್ಷೆ ಕೊಡುತ್ತಾರೆ, ಪತ್ರೀಜಿಯವರೂ ಹೀಗೆ ಕೊಡುತ್ತಾರೆ, ನಾವು ಗಮನಿಸಿದರೆ ತಿಳಿಯುತ್ತದೆ, ಅವು 1. ದೃಕ್ ದೀಕ್ಷೆ 2.ಸ್ಪರ್ಶ ದೀಕ್ಷೆ 3.ವಾಕ್ ದೀಕ್ಷೆ 4.ಮನೋ ದೀಕ್ಷೆ.

**1. "ದೃಕ್ ದೀಕ್ಷೆ" :** ಇದನ್ನು 'ಮೀನಿನ' ನ್ಯಾಯವೆನ್ನುತ್ತಾರೆ, ಮೀನು ಮೊಟ್ಟೆಗಳನ್ನು ಇಟ್ಟು ಹಿಂದೆ ತಿರುಗಿ ಅವುಗಳನ್ನು ತೀಕ್ಷ್ಣವಾಗಿ ನೋಡುತ್ತದೆ, ತಾಯಿ ಮೀನಿನ ದೃಷ್ಟಿ ಸೋಕಿದ ಕೂಡಲೇ ಮೊಟ್ಟೆಗಳು ಮರಿಗಳಾಗುತ್ತವೆ, ಸದ್ಗುರು ಶಿಷ್ಯರನ್ನು ಈ ದೀಕ್ಷೆಯಿಂದಲೇ ಶಕ್ತಿ ನೀಡಿ ಜ್ಞಾನವನ್ನು ಉಂಟುಮಾಡುತ್ತಾರೆ, ನಾವು ಗಮನಿಸಿದರೆ ಒಂದೊಂದು ಸಾರಿ ಪತ್ರೀಜಿಯವರು ಕಣ್ಣು ದೊಡ್ಡದು ಮಾಡಿ ನಮ್ಮ ಕಣ್ಣಿನೊಳಗೆ ನೋಡುತ್ತಾರೆ, ಆಗಲೇ ಗುರುವಿನ ಕರುಣಾಕಟಾಕ್ಷ ನಮ್ಮ ಮೇಲೆ ಬೀಳುತ್ತದೆ, ಆಗ ಗುರುವಿನ ಕರುಣೆಯಿಂದ ಅಜ್ಞಾನವು ನಮ್ಮ ಜೀವನವನ್ನು ಬಿಟ್ಟು ಜ್ಞಾನ ಜೀವಿಗಳಾಗುತ್ತೇವೆ.

**2. "ಸ್ಪರ್ಶ ದೀಕ್ಷೆ" :** ಇದನ್ನು ವಿಹಂಗನ್ಯಾಯವೆನ್ನುತ್ತಾರೆ, ಪಕ್ಷಿ ಮೊಟ್ಟೆಗಳನ್ನು ಇಟ್ಟು ಜೋಪಾನ ಮಾಡಿ ತನ್ನ ರೆಕ್ಕೆಗಳ ಸ್ಪರ್ಶದಿಂದ ಮರಿಗಳನ್ನು ಮಾಡುತ್ತದೆ, ಹಾಗೆಯೇ ಸದ್ಗುರು ತನ್ನ ಕೈ ಸ್ಪರ್ಶದಿಂದ ಶಿಷ್ಯರನ್ನು ಶಕ್ತಿವಂತರಾಗಿ ಮಾಡುತ್ತಾರೆ, ಅದಕ್ಕೆ ಪತ್ರೀಜಿ ಎಲ್ಲರಿಗೂ ಹಸ್ತಲಾಘವ ನೀಡುತ್ತಾರೆ.

**3. "ವಾಕ್ ದೀಕ್ಷೆ" :** ಇದನ್ನು ಬ್ರಮರ ಕೀಟ ನ್ಯಾಯವೆನ್ನುತ್ತಾರೆ, ಬ್ರಮರ ಪತ್ರ ಹರಿತ್ತನ್ನು ಆಹಾರವಾಗಿ ತೆಗೆದುಕೊಳ್ಳುವ ಒಂದು ಕೀಟವನ್ನು ತಂದು ತನ್ನ ಗೂಡಿನಲ್ಲಿಟ್ಟು, ದ್ವಾರದ ಬಳಿ ಝೇಂಕಾರ ಶಬ್ದ ಮಾಡುತ್ತದೆ, ಗೂಡಿನಲ್ಲಿರುವ ಕೀಟ ಬ್ರಮರವನ್ನು ನೋಡುತ್ತಾ, ನೋಡುತ್ತಾ ತಾನು ಬ್ರಮರವಾಗಿ ಬದಲಾಗುತ್ತದೆ, ನಂತರ ಪತ್ರಹರಿತ್ತನ್ನು ತಿನ್ನುವುದನ್ನು ಬಿಟ್ಟು, ಪುಷ್ಪಗಳಿಂದ ಮಕರಂದವನ್ನು ಹೀರುತ್ತದೆ, ನಾವು ಕೂಡಾ 'ಧ್ಯಾನ'ಕ್ಕೆ ಬರುವ ಮುಂಚೆ ಕೀಟದ ಹಾಗೆ ಇದ್ದೆವು, ಮಾಂಸಾಹಾರ ತಿನ್ನುತ್ತಾ ಅಜ್ಞಾನದಲ್ಲಿ ಇದ್ದೆವು. ಪತ್ರೀಜಿಯವರ ಪ್ರವಚನಗಳು ಕೇಳಿ ಕೇಳಿ ನಾವು ಕೂಡ ಆತ್ಮಜ್ಞಾನವನ್ನು ಹೊಂದಿ ಚಿಟ್ಟೆಯ ಹಾಗೆ ಬದಲಾದೆವು ಮಾಂಸಾಹಾರ ತ್ಯಜಿಸಿ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಿದ್ದೇವೆ, ಈಗ ನಾವು ಪತ್ರೀಜಿಯವರ ಹಾಗೆ ಆಗಿಲ್ಲದಿದ್ದರೂ ಸ್ವಲ್ಪ ಮಟ್ಟಿಗೆ ಕೆಲವರಿಗಾದರೂ ಜ್ಞಾನವನ್ನು ಹೇಳುತ್ತಿದ್ದೇವೆ, ನಮಗೆ ಇಂತಹ ಶಕ್ತಿ

ಬಂದಿದೆ ಎಂದರೆ ಅದು ಪತ್ರೀಜಿಯವರ ವಾಕ್‌ಗೆ ಇರುವ ಶಕ್ತಿಯಿಂದ ಮಾತ್ರ ಸಾಧ್ಯವಾಗಿದೆ ಅದೇ ನಮ್ಮನ್ನು ಗುರುಗಳನ್ನಾಗಿ ಬದಲಾಯಿಸಿದೆ.

**4. "ಮನೋ ದೀಕ್ಷೆ" :** ಇದನ್ನೇ "ಕೂರ್ಮಾಲೋಚನೆ" ಎನ್ನುತ್ತಾರೆ, ಆಮೆ ಒಂದು ಕಡೆ ಮೊಟ್ಟೆಗಳನ್ನು ಇಟ್ಟು, ಆಹಾರಕ್ಕೆ ಹೋಗುತ್ತದೆ, ಮೇಘಗಳ ಗುಡುಗಿನ ಶಬ್ದ ಕೇಳುತ್ತಲೇ ಆಮೆಯು ಈ ಮೇಘಗಳ ಶಬ್ದಕ್ಕೆ "ನನ್ನ ಮೊಟ್ಟೆಗಳು ಮರಿಗಳಾಗಬೇಕು" ಎಂದು ಸಂಕಲ್ಪ ಮಾಡುತ್ತದೆ, ಹಾಗೆ ಅಂದುಕೊಂಡೊಡನೆ ಮೊಟ್ಟೆಗಳು ಮರಿಗಳಾಗುತ್ತವೆ, ಹಾಗೆಯೇ ಸದ್ಗುರು ಎಲ್ಲಿದ್ದರೂ ಶಿಷ್ಯರನ್ನು ಕಾಪಾಡುತ್ತಾ ಇರುತ್ತಾನೆ.

ಈ ನಾಲ್ಕನೆಯ ದೀಕ್ಷೆ ನನ್ನ ವಿಷಯದಲ್ಲಿ ನನಗೆ ಅನುಭವವಾಯಿತು, "ಆತ್ಮ ಜ್ಞಾನ ಹೊಂದಬೇಕೆಂದರೆ, ಉನ್ನತಿ ಸಾಧಿಸಬೇಕೆಂದರೆ ಅಹಂಕಾರ ಇರಬಾರದು, ಅದೇ ಆತ್ಮಜ್ಞಾನಕ್ಕೆ ದೊಡ್ಡ ಅಡ್ಡಿ" ಎಂದು ಪತ್ರೀಜಿ ಹೇಳುತ್ತಿರುತ್ತಾರೆ, ನಾನು 2005ರಲ್ಲಿ 'ಧ್ಯಾನ' ಪ್ರಚಾರ ಮಾಡುತ್ತಾ ಇದ್ದಾಗ, ಒಂದು ಊರಿನಲ್ಲಿ ಜನರು ಬರಲಿಲ್ಲ, ನಾನು ಆಗ ತಾನೇ 'ಧ್ಯಾನ' ಪ್ರಚಾರ ಪ್ರಾರಂಭಿಸಿದ್ದೆ, ನಾನು ಕಾರ್ಯಕರ್ತರೊಂದಿಗೆ "ನೀವು ಪ್ರಯತ್ನ ಮಾಡಿದ್ದರೆ ಜನ ಬರುತ್ತಿದ್ದರು, ಪ್ರಯತ್ನಿಸಲಿಲ್ಲ ಎಂದು ನಾನು ಗಾಂಭೀರ್ಯದಿಂದ ಅಹಂನಿಂದ ಮಾತನಾಡಿದೆನು, ಆಗ ಸಮಯ ಮಧ್ಯಾಹ್ನ ಎರಡು ಗಂಟೆಯಾಗಿತ್ತು, ನಾವು ಊಟ ಮಾಡುತ್ತಾ ಮಾತಾಡಿಕೊಳ್ಳುತ್ತಿದ್ದೆವು ಆಗಲೇ ಪತ್ರೀಜಿಯವರಿಂದ ಫೋನ್ ಬಂದಿತು, "ಕ್ಲಾಸ್ ಹೇಗೆ ನಡೆಯಿತು ಮೇಡಂ"? ಎಂದರು, ನಾನು ಚೆನ್ನಾಗಿ ನಡೆಯಿತು ಸಾರ್ ಎಂದೆನು ಹಾಗೆ ಮೂರು ಬಾರಿ ಕೇಳಿದರು, ನಾನು ಮೂರು ಬಾರಿಯೂ ಹಾಗೆ



ಹೇಳಿದೆನು ಸಾರ್ ಒಂದು ನಿಮಿಷ ಮೌನವಾಗಿದ್ದರು, ನನಗೆ ಆ ಕೂಡಲೇ ಅಂತರ್ಗತವಾಗಿ ಅವರ ಮೆಸೇಜ್ ಬಂದಿತು, "ನಾನು ಇಷ್ಟು ಬ್ರಹ್ಮಜ್ಞಾನವನ್ನು ಇಪ್ಪತ್ತು ವರ್ಷಗಳ ಹಿಂದೆಯೇ ಆರು ಗಂಟೆಗಳು ಪ್ರಯಾಣ ಮಾಡಿ ಇಬ್ಬರಿಗೆ 'ಧ್ಯಾನ'ಕಲಿಸಿದೆನು, ನೀನು ಎಷ್ಟು ದೊಡ್ಡವಳು ಹತ್ತು ಮಂದಿ ಸಾಲಲಿಲ್ಲವೇ ನಿನ್ನ ಶಕ್ತಿಗೆ ಅನುಗುಣವಾಗಿ ನಿನ್ನ ಮುಂದೆ ಜನ ಇರುತ್ತಾರೆ. ಸಾಧಕನು ಪ್ರತಿಯೊಂದು ಸ್ವೀಕರಿಸಲೇಬೇಕು", ಎನ್ನುವಂತೆ ನನಗೆ ಅರ್ಥವಾಗಿಹೋಯಿತು, ಸಾರ್ ಎಲ್ಲಿದ್ದರೂ ಅವರಿಗೆ ಎಲ್ಲವೂ ತಿಳಿಯುತ್ತದೆ ಅವರಿಗೆ ತಿಳಿದುಕೊಳ್ಳುವ ಶಕ್ತಿ ಇದೆ.

ನಮ್ಮಲ್ಲಿ ಅಹಂಕಾರ ಬೆಳೆದರೆ ನಾವು ಉನ್ನತಿ ಸಾಧಿಸಲಾಗುವುದಿಲ್ಲ, ಅದಕ್ಕೆ ನನಗೆ ಹಾಗೆ ತಿಳಿಯುವಂತೆ ಮಾಡಿದರು, ಆ ಫೋನ್ ನನಗೆ ಆಸ್ಟ್ರೇಲಿಯಾದಿಂದ ಬಂದಿತ್ತು, ಇದರಿಂದ ಅವರಿಗೆ ಎಷ್ಟು ಮನೋಶಕ್ತಿ ಇದೆ ಎಂದು ತಿಳಿಯುತ್ತದೆ, ಅದಕ್ಕೆ ನಾವು ಅವರ ಪ್ರವಚನವನ್ನು ಶ್ರವಣ, ಮನನವನ್ನು ಮಾಡಬೇಕು.

ಕರ್ಮ ಜೀವಿಗಳಾಗಿ ಬಂದ ನಮ್ಮನ್ನು ಪತ್ರೀಜಿ 'ಧ್ಯಾನ'ದಿಂದ ತಾಯಿಗರ್ಭದಿಂದ ಬಂದ ಮಾಂಸ ಪಿಂಡವನ್ನು ಮಂತ್ರ ಪಿಂಡವನ್ನಾಗಿಸಿ, ನಮ್ಮನ್ನು ಜ್ಞಾನ ಪುತ್ರರನ್ನಾಗಿ ಮಾಡುತ್ತಾರೆ, ಅವರಿಗೆ ಕೋಟಿ ಕೋಟಿ ವಂದನೆಗಳು ಅರ್ಪಿಸಿದರೂ ಅವರ ಋಣವನ್ನು ತೀರಿಸಿಕೊಳ್ಳಲಾರೆವು.



**'ಮಾನವನನ್ನು ದಾನವನನ್ನಾಗಿ ಮಾಡುವುದು ಹಿಂಸೆ,**
**ಮಾನವನನ್ನು ದಿವ್ಯಾತ್ಮನನ್ನಾಗಿ ಮಾಡುವುದು - ಹಂಸ'**

**–ಬ್ರಹ್ಮರ್ಷಿ ಪತ್ರೀಜಿ**

# ಪರಮಾತ್ಮನ ಕೃಪೆ – ಗುರುವಿನ ಕೃಪೆ

ನಾವು ಈ ಭೂಮಿಗೆ ಸತ್ಯವನ್ನು, ನಮ್ಮ ನಿಜ ಸ್ಥಿತಿಯನ್ನು ತಿಳಿದುಕೊಳ್ಳಲು ಬಂದಿದ್ದೇವೆ, ಈ ಸೃಷ್ಟಿ ಎಲ್ಲವೂ ಪರಮಾತ್ಮನ ಸೃಷ್ಟಿಯೇ 84 ಲಕ್ಷ ಜೀವರಾಶಿಗಳು ಕೂಡಾ ಪರಮಾತ್ಮನ ಸೃಷ್ಟಿಯೇ.

84 ಲಕ್ಷ ಜೀವರಾಶಿಗಳಲ್ಲಿ ಮಾನವ ಜನ್ಮ ಒಂದೇ ಪರಮಾತ್ಮನನ್ನು ಅರಿತುಕೊಳ್ಳುವ ಜನ್ಮ ಮಾನವ ಜನ್ಮ ಬಂದ ಕೂಡಲೇ ತಿಳಿಯಲಾಗುವುದಿಲ್ಲ, ಸುಮಾರು 300 ರಿಂದ 350 ಜನ್ಮಗಳು ಆಗುವವರೆಗೂ ಪರಮಾತ್ಮನನ್ನು ಅರಿಯುವ ಬಯಕೆ ಕೂಡ ಹುಟ್ಟುವುದಿಲ್ಲ, ಆ ಪರಮಾತ್ಮನನ್ನು ತಿಳಿದುಕೊಳ್ಳಬೇಕೆಂದರೆ ಅವರಿಗೆ ಒಬ್ಬ ಸದ್ಗುರುವಿನ ಅಗತ್ಯವಿರುತ್ತದೆ, ಯಾರಿಗೆ ಸದ್ಗುರು ದೊರೆಯುತ್ತಾನೆ ಎಂದರೆ ಪರಮಾತ್ಮನಿಗೆ ಯಾರ ಮೇಲೆ ಪ್ರೀತಿ ಇದೆಯೋ ಅವರಿಗೆ ಮಾತ್ರ ದೊರೆಯುತ್ತಾನೆ, ಸದ್ಗುರು ನಮ್ಮ ಜೀವನದಲ್ಲಿ ಪ್ರವೇಶಿಸಿದರೆ ನಾವು ಪರಮಾತ್ಮನ ಕೃಪೆಗೆ ಪಾತ್ರರಾದಂತೆಯೇ.

ಪರಮಾತ್ಮನ ಕೃಪೆ ನಮ್ಮ ಮೇಲೆ ಇಲ್ಲದಿದ್ದರೆ ಸದ್ಗುರು ಪಕ್ಕದಲ್ಲೇ ಇದ್ದರೂ ಆತನನ್ನು ಗುರುತಿಸಲಾರೆವು, ಸದ್ಗುರು ಎಂದರೆ ಸತ್ಯವನ್ನು ಹೇಳಬೇಕು ಸತ್ಯವನ್ನು ಹೇಳುವುದೆಂದರೆ ಸಮಾಜವನ್ನು ಧಿಕ್ಕರಿಸುವುದೇ ಆಗಿರುತ್ತದೆ, ಎಲ್ಲಾ ಗುರುಗಳು ವಿಗ್ರಹಾರಾಧನೆ ಬಗ್ಗೆ ಹೇಳಿದರೆ, ಸದ್ಗುರು ಮಾತ್ರ ಆತ್ಮಾರಾಧನೆ ಹೇಳುತ್ತಾರೆ, ಬೇರೆ ಗುರುಗಳು ಪುಣ್ಯ ಕರ್ಮಗಳೆ ಮಾಡಿಸುತ್ತಾರೆ (ಆದರೆ ಸದ್ಗುರುವು ಕರ್ಮಗಳೆ ಇಲ್ಲದ ಮಾರ್ಗವನ್ನು ಬೋಧಿಸುತ್ತಾರೆ) ಏಕೆಂದರೆ ಕರ್ಮವಿದ್ದರೆ ಜನ್ಮವಿರುತ್ತದೆ, ಜನ್ಮವಿದ್ದರೆ ತಾನೇ ದುಃಖವಿರುತ್ತದೆ. ಆದರೆ ಕರ್ಮಗಳಿಲ್ಲದಿದ್ದರೆ ಜನ್ಮವೇ ಇರುವುದಿಲ್ಲ ಇವೆಲ್ಲವೂ ಸದ್ಗುರುವಿನಿಂದ ಮಾತ್ರ ತಿಳಿಯುತ್ತವೆ.

ನಾವು ಈ ದಿನ ಪತ್ರೀಜಿಯಂತಹ ಸದ್ಗುರುವನ್ನು ಹೊಂದಿದ್ದೇವೆ ಎಂದರೆ, ಈ ಜನ್ಮದಲ್ಲಿ ಆಗಲಿ, ಗತಜನ್ಮದಲ್ಲಾಗಲಿ ಭಗವಂತನನ್ನು ತಿಳಿದುಕೊಳ್ಳಬೇಕೆಂಬ ಬಯಕೆಯಿಂದ ಇದ್ದೇವೆ ಎಂದು ಅರ್ಥ. ಪರಮಾತ್ಮನ ಕೃಪೆಯಿಂದಲೇ ನಾವು ಪತ್ರೀಜಿಯವರಂತಹ ಸದ್ಗುರುವನ್ನು ಹೊಂದಿದ್ದೇವೆ, ಯಾರು ಜೀವ ಹಿಂಸೆ ಮಾಡುವುದಿಲ್ಲವೋ! ಎಲ್ಲರಮೇಲೂ ಪ್ರೇಮದಿಂದ ಇರುತ್ತಾರೋ! ಪವಿತ್ರತೆಯಿಂದ ಜೀವಿಸುತ್ತಾರೋ! ಅವರ ಮೇಲೆ ಪರಮಾತ್ಮ ಕೃಪೆ ಇರುತ್ತದೆ.

**ಸದ್ಗುರು ಕೃಪೆ :–**

ಪರಮಾತ್ಮ ಕೃಪೆಯಿಂದ ಸದ್ಗುರು ನಮ್ಮ ಜೀವನಕ್ಕೆ ಬಂದಮೇಲೆ, ಗುರುವಿನ ಮಾತು ಪರಮಾತ್ಮನ ಮಾತಿನಂತೆ ನಾವು ಭಾವಿಸಬೇಕು, ಒಬ್ಬ ಸದ್ಗುರು ಯಾವಾಗಲೂ ಶಿಷ್ಯರಿಗೆ ಕರ್ಮಗಳು ಮಾಡಲು ಹೇಳುವುದಿಲ್ಲ, ಅದಕ್ಕೆ ಪತ್ರೀಜಿ ಪಾಪವೂ ಬೇಡ, ಪುಣ್ಯವೂ ಬೇಡ ಸತ್ಯ ದರ್ಶನವೇ ನಮಗೆ ಮುಖ್ಯವೆಂದು ಹೇಳುತ್ತಾರೆ ನಮ್ಮಿಂದ ಮಾಂಸಾಹಾರ ಬಿಡಿಸಿ, ಪಾಪ ಕರ್ಮಗಳಿಗೆ ದೂರವಿರಿಸುತ್ತಾರೆ 'ಧ್ಯಾನ' ಯಜ್ಞಗಳು ಮಾಡಿಸಿ ಸತ್ಯ ಕರ್ಮಗಳನ್ನು ಪ್ರೋತ್ಸಾಹಿಸುತ್ತಾರೆ, ಸತ್ಯ ಕರ್ಮಗಳಿಂದ ಸತ್ಯ ದರ್ಶನ ಉಂಟಾಗುತ್ತದೆ ಎಂದು ನಮ್ಮಿಂದ 'ಧ್ಯಾನ' ಯಜ್ಞಗಳನ್ನು ಮಾಡಿಸುತ್ತಾರೆ ಸದ್ಗುರು ಯಾವಾಗಲೂ ಈ ಸೃಷ್ಟಿ ಕಲ್ಯಾಣಕ್ಕಾಗಿ ಆಲೋಚಿಸುತ್ತಾರೆ.

ಪರಮಾತ್ಮ ಯಾವಾಗಲೂ ನೇರವಾಗಿ ನಮ್ಮೊಂದಿಗೆ ಮಾತನಾಡುವುದಿಲ್ಲ, ಗುರುವಿನ ಮೂಲಕವೇ ಎಲ್ಲವನ್ನೂ ಹೇಳುತ್ತಾನೆ, ಆತನೇ ಎಲ್ಲಾ ಮಾಡಿದರೆ ಇಷ್ಟು ಅವತಾರಗಳು, ಇಷ್ಟು ಜನ ಗುರುಗಳು ಭೂಮಿ ಮೇಲೆ ಬರುವ ಅಗತ್ಯವಿಲ್ಲ, ಅವನು ಹೇಳುವುದಿಲ್ಲ ಆದ್ದರಿಂದಲೇ ಗುರುಗಳನ್ನು ಭೂಮಿ ಮೇಲೆ ಕಳುಹಿಸುತ್ತಾನೆ, ಅದಕ್ಕೇ "ಗುರು ಸಾಕ್ಷಾತ್ ಪರಬ್ರಹ್ಮ" ಎಂದು ಹೇಳುತ್ತಾರೆ.

"ಗುರು ಹೇಳಿದರೆ ಆ ಪರಮಾತ್ಮ ಹೇಳಿದಂತೆ" ಎಂದು ನಾವು ಭಾವಿಸಬೇಕು, ಗುರುಗಳು ಮಾರ್ಗ ತೋರಿಸಲೆಂದೇ ಬರುತ್ತಾರೆ, ಮಾಡಬೇಕಾದ ಕೆಲಸವನ್ನೆಲ್ಲಾ ನಾವೇ ಮಾಡಬೇಕು ಪತ್ರೀಜಿಯವರು ನಮಗೆ ಜ್ಞಾನವೆನ್ನುವ ಬೀಜಗಳನ್ನು ನೀಡಿದ್ದಾರೆ, ಅವು ಮೊಳಕೆಯೊಡೆಯಬೇಕೆಂದರೆ ನಮ್ಮ ಶರೀರವೆನ್ನುವ ಹೊಲದಲ್ಲಿ 'ಧ್ಯಾನ'ವೆನ್ನುವ ನೀರು ಹಾಕಿ, ಸ್ವಾಧ್ಯಾಯವೆನ್ನುವ ಗೊಬ್ಬರ ಹಾಕಿ, ಸಜ್ಜನ ಸಾಂಗತ್ಯವೆನ್ನುವ ಕೃಷಿ ಮಾಡಿದರೆ ಮಾತ್ರ ಆತ್ಮಜ್ಞಾನವೆನ್ನುವ ಬೆಳೆ ಬರುತ್ತದೆ, ಆ ಬೆಳೆಯನ್ನು ನಾವು ಹತ್ತು ಜನರಿಗೆ ಹಂಚಿದರೆ ಬ್ರಹ್ಮಜ್ಞಾನವೆನ್ನುವ ಮಹಾವೃಕ್ಷ ಹೊಂದುತ್ತೇವೆ, ಪತ್ರಿಸಾರ್ "ಹಂಚಿದರೆ ಹೆಚ್ಚಾಗುತ್ತದೆ, ಅಡಗಿಸಿಟ್ಟರೆ ದೋಚಲ್ಪಡುತ್ತದೆ" ಎಂದು ಹೇಳುತ್ತಾರೆ, ಗುರುವಿನ ಮಾತಿನಲ್ಲಿ ನಂಬಿಕೆ ಇಟ್ಟು ನಮಗೆ ತಿಳಿದ ಜ್ಞಾನವನ್ನು ಹತ್ತು ಜನರಿಗೆ ಹಂಚಿದರೆ ನಮ್ಮ ಮೇಲೆ ಗುರುವಿನ ಕೃಪೆ ಇರುತ್ತದೆ.

ಯಾವಾಗಲೂ ಪ್ರಾಪಂಚಿಕ ವಿಷಯಗಳು, ಸಮಸ್ಯೆಗಳು, ಲಾಭಗಳ ಬಗ್ಗೆ ಸದ್ಗುರುಗಳ ಬಳಿ ಮಾತನಾಡಬಾರದು, ಆಧ್ಯಾತ್ಮಿಕ ವಿಷಯಗಳು ತಿಳಿದುಕೊಳ್ಳುವುದು, ಅವರು ಹೇಳಿದ 'ಧ್ಯಾನ' ಸ್ವಾಧ್ಯಾಯ ಮಾಡುವುದು ನಾವು ಹೊಂದಿದ ಜ್ಞಾನವನ್ನು ಹಂಚಬೇಕು ಆಗಲೇ ಗುರು ಕೃಪೆಯಾಗುತ್ತದೆ.

ಗುರುಗಳೆಲ್ಲಾ ಸಮುದ್ರದಲ್ಲಿರುವ ಅಲೆಗಳಂತಹವರು, ಅಲೆಗಳು ಎದ್ದು ದಡಕ್ಕೆ ಬಂದು ಮತ್ತೆ ಸಾಗರದಲ್ಲಿ ಎಲ್ಲಾ ಸೇರಿ ಹೋಗುವುದೋ! ಗುರುಗಳು ಕೂಡಾ ಭೂಮಿ ಮೇಲೆ ತಮ್ಮ ಕಾರ್ಯಕ್ಕಾಗಿ ಬಂದು, ಕೆಲಸ ಪೂರ್ಣವಾದಮೇಲೆ ಪರಮಾತ್ಮನಲ್ಲಿ ಲೀನರಾಗುತ್ತಾರೆ, ಅದಕ್ಕಾಗಿಯೇ ಗುರುಗಳು ಭೂಮಿ ಮೇಲೆ ಇದ್ದಾಗ ಅವರೊಂದಿಗೆ ಇದ್ದು ಅವರ ಭೋಧನೆಗಳನ್ನುಕೇಳಿ ಅವುಗಳನ್ನು ಪುಸ್ತಕದ ರೂಪದಲ್ಲಿ ಬದಲಾಯಿಸಿಕೊಂಡವರು ನಿಜವಾದ ಅಧ್ಯಾತ್ಮಿಕತೆಯ ಮಾರ್ಗದಲ್ಲಿ ಪಯಣಿಸಬಲ್ಲರು.

ಜೀವಿಸಿರುವ ಗುರುವಿನ ಬಳಿ ಕಲಿತುಕೊಳ್ಳದೇ, ಯಾರೋ ಹೇಳಿದರೆ ಕೇಳುವವರು ಸರಿಯಾದ ಗುರಿಯೆಡೆಗೆ ಪಯಣಿಸಲಾರರು, ಆದ್ದರಿಂದ ಗುರುವಿನೊಂದಿಗೆ ಸಹಜೀವನ ಮಾಡಿದವರು ತುಂಬಾ ಅದೃಷ್ಟವಂತರು, ಆದ್ದರಿಂದಲೇ ಹೇಳುವುದುಗುರುವಿನ ಮಾರ್ಗದರ್ಶನದಲ್ಲಿ ನಡೆದವರೆಲ್ಲಾ ಅವರ ಕೃಪೆಗೆ ಪಾತ್ರರಾಗುತ್ತಾರೆ.



# ಆರಾಟ ಹೋರಾಟ

ಜನ್ಮ ತೆಗೆದುಕೊಂಡ ನಂತರ ಬಾಲ್ಯದಿಂದ ವೃದ್ಧಾಪ್ಯದವರೆಗೂ ಎಲ್ಲರ ಜೀವನದಲ್ಲೂ ಹೋರಾಟ ಇರುತ್ತದೆ, ಬಾಲ್ಯದಲ್ಲಿ ಆಟ ಆಡಿಕೊಳ್ಳಲು, ಗಲಾಟೆ ಮಾಡಲು ಕಾತುರವಿರುತ್ತದೆ, ಆದರೆ ಹಿರಿಯರು "ಓದಿಕೋ, ಗಲಾಟೆ ಮಾಡಬೇಡ, ಹೀಗೆ ಇರು, ಹಾಗೆ ಇರು" ಎಂದು ಹೇಳುತ್ತಾರೆ ಆಗ ಅವರೊಂದಿಗೆ ಹೋರಾಟ ಮಾಡುತ್ತೇವೆ.

ಯೌವನದಲ್ಲಿ ಸ್ನೇಹಿತರೊಂದಿಗೆ ತಿರುಗಬೇಕೆಂದು, ಸಿನಿಮಾಗಳಿಗೆ ಶಿಕಾರಿಗೆ ತಿರುಗಬೇಕೆಂದು, ಜೀವನ ಎಂಜಾಯ್ ಮಾಡಬೇಕೆಂದು ಹಾರಾಟ, ಆದರೆ ಹಿರಿಯರು ಅದಕ್ಕೆ ಅಡ್ಡಿ ಹೇಳಿದ್ದಕ್ಕೆ ಅವರೊಂದಿಗೆ ಆರಾಟ, ಪ್ರೌಢ ವಯಸ್ಸಿನಲ್ಲಿ ಎಲ್ಲಾ ಜವಾಬ್ದಾರಿಗಳು ತೀರಿಸಿಕೊಳ್ಳಬೇಕೆಂದು, ಚೆನ್ನಾಗಿ ಸಂಪಾದಿಸಬೇಕೆಂದು, ಒಳ್ಳೆಯ ಮನೆ ಕಟ್ಟಿಕೊಳ್ಳಬೇಕೆಂದು, ಒಳ್ಳೆಯ ಕಾರು ಕೊಂಡುಕೊಳ್ಳಬೇಕೆಂದು, ಮಕ್ಕಳನ್ನು ಚೆನ್ನಾಗಿ ಓದಿಸಬೇಕೆಂದು ಎಲ್ಲರಿಗಿಂತ ಉನ್ನತ ಸ್ಥಾನದಲ್ಲಿ ಇರಬೇಕೆಂದು ತುಡಿತ, ಆದರೆ ಅವು ಈಡೇರಿಸಿಕೊಳ್ಳಲು ನಿತ್ಯವೂ ಹೋರಾಟ ಮಾಡಬೇಕು.

ವೃದ್ಧಾಪ್ಯದಲ್ಲಿ ಜವಾಬ್ದಾರಿಗಳು ಮುಗಿದರೂ "ಎಲ್ಲರೂ ನನ್ನ ಮಾತೇ ಕೇಳಬೇಕು, ನಾನು ಹೇಳಿದಂತೆ ಇರಬೇಕು" ಎನ್ನುತ್ತಾ ಎಲ್ಲರ ಮೇಲೂ ದೊಡ್ಡಸ್ತಿಕೆ ಚಲಾಯಿಸುತ್ತಾ, ತನ್ನ ಮುಂದಾಳತ್ವ ಹೋಗುತ್ತದೆಏನೋ ಎಂದು ಅದು ಉಳಿಸಿಕೊಳ್ಳಲು ಆರಾಟ, ಅದಕ್ಕಾಗಿ ಹೋರಾಟ ಮಾಡುತ್ತಾ ಜೀವನವೆಲ್ಲಾ ದುಃಖದಲ್ಲಿ ಇರುತ್ತಾರೆ.

ಈ ಆರಾಟ ಹೋರಾಟಗಳು ಎಲ್ಲಿಯವರೆಗೆ? ಅಜ್ಞಾನದೊಂದಿಗೆ ಇರುವವರೆಗೆ, ಜ್ಞಾನವಂತರಾದಾಗ ಈ ಆರಾಟ ಹೋರಾಟ ಯಾವುದರ ಮೇಲೆ ಇರಬೇಕು, ಹೇಗೆ ಉಪಯೋಗಿಸಿಕೊಳ್ಳಬೇಕೋ ತಿಳಿಯುತ್ತದೆ.

ಆಧ್ಯಾತ್ಮಿಕ ಪ್ರಪಂಚದಲ್ಲಿ ಪ್ರವೇಶಿಸಿದವರಿಗೂ ಈ ಆರಾಟ ಹೋರಾಟಗಳು ಇರುತ್ತವೆ, ಹೇಗೆಂದರೆ? 'ಧ್ಯಾನ' ಪ್ರಾರಂಭಿಸಿದ ಹೊಸದರಲ್ಲಿ 'ಧ್ಯಾನ' ಮಾಡಬೇಕೆಂಬ ಆರಾಟವಿರುತ್ತದೆ, ಆದರೆ ಆಲೋಚನೆಗಳಿಂದ ಇರುವ ಮನಸ್ಸಿನೊಂದಿಗೆ ಹೋರಾಟ ಮಾಡಬೇಕಾಗುತ್ತದೆ, ನಂತರ 'ಧ್ಯಾನ' ಎಲ್ಲರಿಗೂ ಹೇಳಬೇಕೆಂಬ ತುಡಿತ ಉಂಟಾಗುತ್ತದೆ, "ವಿಗ್ರಹ ದೇವರಲ್ಲ, ಆತ್ಮವೇ ದೇವರು" ಎಂಬ ಸತ್ಯ ತಿಳಿದಮೇಲೆ ಅದನ್ನು ಎಲ್ಲರಿಗೂ ಹೇಳಬೇಕೆಂಬ ತುಡಿತ ಇರುತ್ತದೆ. ಪೂಜೆಯಲ್ಲಿ ದೇವರನ್ನು ಆಶ್ರಯಿಸಲಾರೆವು, 'ಧ್ಯಾನ'ದಿಂದ ದೈವವನ್ನು ಆಶ್ರಯಿಸಬಹುದು ಎಂದು ಹೇಳಬೇಕೆಂಬ

ಆತುರತೆ ಬರುತ್ತದೆ, ಆದರೆ ಇದು ಅರ್ಥ ಮಾಡಿಕೊಳ್ಳದವರನ್ನು ಒಪ್ಪಿಸಲು ತುಂಬಾ ಹೋರಾಟ ಮಾಡಬೇಕಾಗಿಬರುತ್ತದೆ.

ಪಕ್ಷಿಗಳನ್ನು, ಪ್ರಾಣಿಗಳನ್ನು ಹಿಂಸಿಸುವುದು, ಮಾಂಸಾಹಾರ ತಿನ್ನುವುದು ಮಹಾ ಪಾಪ. ಆದ್ದರಿಂದ ಎಲ್ಲರಿಂದ ಮಾಂಸಾಹಾರವನ್ನು ಬಿಡಿಸಲು ಕಸರತ್ತು ಮಾಡಬೇಕಾಗುತ್ತದೆ, ಆದರೆ ಎಲ್ಲರಿಗೂ ಹೇಳಿ ಒಪ್ಪಿಸಬೇಕೆಂದರೆ ಎಲ್ಲರಿಂದಲೂ 'ಧ್ಯಾನ'ಮಾಡಿಸುವಾಗ ತುಂಬಾ ಹೋರಾಟ ಮಾಡಬೇಕಾಗುತ್ತದೆ.

ಈ ಕಲಿಯುಗದ ಪ್ರಜೆಗಳಲ್ಲಿ ಮೂಢತ್ವ, ಮೂರ್ಖತ್ವ ಹೆಚ್ಚಾಗಿರುತ್ತದೆ. "ತಾನು ಮಾಡಿದ್ದೇ ಸರಿ ತನಗೇ ಎಲ್ಲಾ ತಿಳಿದಿದೆ" ಎಂದುಕೊಳ್ಳುವುದು ಮೂರ್ಖತ್ವ ಹಾಗೆ "ಎಲ್ಲರೂ ಮಾಡುವುದು ಸರಿ, ಎಲ್ಲರೂ ಮಾಡಿದಂತೆ ಮಾಡಬೇಕು" ಎಂದು ಕೊಳ್ಳುವುದು 'ಮೂಢತ್ವ', ಹೀಗೆ ಮೂರ್ಖತ್ವದಲ್ಲಿ, ಮೂಢತ್ವದಲ್ಲಿ ಇರುವವರನ್ನು ಬದಲಾಯಿಸಬೇಕೆಂಬ ತುಡಿತದಿಂದ ಪ್ರಯತ್ನಿಸಿದರೆ, ಎಷ್ಟೋ ಹೋರಾಟ ಕೂಡಾ ಮಾಡಬೇಕಾಗುವುದು.

ಮಾಮೂಲು ಜೀವನದಲ್ಲಿ ಆರಾಟ, ಹೋರಾಟದಿಂದ ಶರೀರ, ಮನಸ್ಸು ಆಯಾಸಗೊಳ್ಳುವುದರಿಂದ ಬಿ.ಪಿ, ಶುಗರ್ ನಂತಹ ವ್ಯಾಧಿಗಳೊಂದಿಗೆ ಶರೀರ ಅನಾರೋಗ್ಯದ ಪಾಲಾಗುತ್ತದೆ, ಆದರೆ ಆಧ್ಯಾತ್ಮಿಕ ಜೀವನದಲ್ಲಿ ಪ್ರವೇಶಿಸಿದವರಿಗೆ ಈ ಆರಾಟ, ಹೋರಾಟದಿಂದ ತೃಪ್ತಿ, ಆನಂದ, ಸಂತೋಷ ಬರುತ್ತದೆ.

ಪತ್ರೀಜಿ ಮೂವತ್ತು ವರ್ಷಗಳಿಂದ ಎಷ್ಟೋ ಕಷ್ಟಪಟ್ಟು ಪ್ರಜೆಗಳಲ್ಲಿ ಅಜ್ಞಾನವನ್ನು ತೊಲಗಿಸುತ್ತಿದ್ದಾರೆ, ಅವರ ಹೆಜ್ಜೆಯ ಜಾಡಿನಲ್ಲಿ ನಡೆದವರೆಲ್ಲಾ 'ಧ್ಯಾನ'ಮಾಡಿ ಸತ್ಯವನ್ನು ತಿಳಿದುಕೊಂಡು ಜ್ಞಾನಿಗಳಾಗಿ ಲೋಕ ಕಲ್ಯಾಣಕ್ಕಾಗಿ ಗುರುಗಳ ಹಾದಿಯಲ್ಲಿ ನಡೆಯಲು ಪ್ರಯತ್ನಿಸುತ್ತಿದ್ದಾರೆ, ಪತ್ರೀಜಿ ಯಾವ ಧ್ಯೇಯದಿಂದ ಪ್ರಜೆಗಳ ಬಳಿಗೆ ಬಂದರೋ ಅದೇ ಧ್ಯೇಯದೊಂದಿಗೆ ಅವರ ಶಿಷ್ಯರು ಕೆಲಸ ಮಾಡುತ್ತಿದ್ದಾರೆ, ಪಿರಮಿಡ್ ಮಾಸ್ಟರ್‌ಗಳ ಆರಾಟ, ಹೋರಾಟಗಳು ಲೋಕಕಲ್ಯಾಣಕ್ಕಾಗಿಯೇ! ಹಾಗೆ ಇಲ್ಲದವರು ಪಿರಮಿಡ್ ಮಾಸ್ಟರ್‌ಗಳು ಅನಿಸಿಕೊಳ್ಳಲಾರರು!.

ಪತ್ರೀಜಿಯವರ ಆಶಯ ಎಲ್ಲರನ್ನೂ ಜ್ಞಾನಿಗಳಾಗಿ, ಆತ್ಮ ಜ್ಞಾನಿಗಳಾಗಿ ಬದಲಾಯಿಸಬೇಕೆಂಬುದು, ಅದಕ್ಕೆ ಯಾರು ಎಷ್ಟು ಕೆಲಸ ಮಾಡಬೇಕೆಂದು ಹೇಳುತ್ತಾ, "ವಿಶ್ವವು ನನಗೇನು ಕೊಟ್ಟಿದೆ ಎಂದು ಆಲೋಚಿಸಬಾರದು, ನಾನು ಏನು ವಿಶ್ವಕ್ಕೆ ಕೊಟ್ಟಿದ್ದೇನೆ"? ಎಂದು ಆಲೋಚಿಸಿ ಎಂದು ಬೋಧಿಸುತ್ತಾರೆ ನಮ್ಮ ಸುಖಗಳನ್ನು ಬಿಟ್ಟು ಬಿಡಲು ಯಾವಾಗಲೂ ಹೇಳುವುದಿಲ್ಲ, ನಾವು ಸಂತೋಷವಾಗಿ ಇದ್ದುಕೊಂಡು ಬೇರೆಯವರು ಸುಖವಾಗಿರುವಂತೆ ಮಾಡಬೇಕು ಎನ್ನುತ್ತಾರೆ.

# ಮಾನವನೆಂದರೆ?

ಶರೀರ, ಮನಸ್ಸು, ಆತ್ಮ ಈ ಮೂರು ಸೇರಿದರೇನೆ ಮಾನವನಾಗುವುದು.

## ಶರೀರ

ಶರೀರ ತಂದೆ ತಾಯಿಯಿಂದ ಬರುತ್ತದೆ, ಈ ಶರೀರ ಪಂಚಭೂತಗಳಿಂದ ಏರ್ಪಟ್ಟಿದೆ ಈ ಶರೀರದಲ್ಲಿ ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು ಇವೆ, ಆತ್ಮಗಳಾದ ನಾವು ನಮ್ಮ ಆತ್ಮೋನ್ನತಿಗೆ ಜೀವನದ ಪಾಠಗಳು ಕಲಿತುಕೊಳ್ಳಲು ನಮ್ಮ ಇಚ್ಛೆಯೊಂದಿಗೆ, ಯಾವ ರೀತಿಯ ಶರೀರ ಬೇಕೋ ಅದೇ ಶರೀರವನ್ನು ಆಯ್ಕೆ ಮಾಡಿಕೊಂಡು ಬರುತ್ತೇವೆ, ಬಂದಮೇಲೆ ಅಜ್ಞಾನದಿಂದ "ಶರೀರವೇ ನಾನು" ಎಂದುಕೊಳ್ಳುತ್ತೇವೆ' "ಆತ್ಮವೇ ನಾನು" ಎನ್ನುವ ಜ್ಞಾನವನ್ನು ಹೊಂದುವವರೆಗೂ "ಶರೀರವೇ ನಾನು" ಎನ್ನುವ ಭ್ರಾಂತಿಯಲ್ಲಿ ಇರುತ್ತೇವೆ, ಆದರೆ ಒಂದು ಅಶಾಶ್ವತವಾದ ಶರೀರದಲ್ಲಿ ಇನ್ನೊಂದು ಶಾಶ್ವತವಾದ ಆತ್ಮವಿದೆ ಎಂದು ತಿಳಿದುಕೊಳ್ಳಬೇಕು, ಈ ಶರೀರವನ್ನು "ಭೋಗದಲ್ಲಿ ಇರಿಸಿದರೆ ರೋಗ – ಯೋಗದಲ್ಲಿ ಇರಿಸಿದರೆ ಜ್ಞಾನ" ಬರುತ್ತದೆ.

## ಮನಸ್ಸು

ಮನಸ್ಸೆನ್ನುವುದು ನಮ್ಮನ್ನು ಬೆಳೆಸುವ ತಂದೆ ತಾಯಿಯರಿಂದ, ನಾವು ಬೆಳೆದ ಸಮಾಜದಿಂದ ಬರುತ್ತದೆ. ಮನಸ್ಸು ರಕ್ತ ಮಾಂಸಗಳಿಂದ ನಿರ್ಮಾಣವಾಗಲಾರದು, ಪ್ರಾಣಶಕ್ತಿ ಎನ್ನುವ ಅತ್ಯಂತ ಸೂಕ್ಷ್ಮ ಪ್ರಕಾಶದೊಂದಿಗೆ ಮನಸ್ಸು ತುಂಬಿದೆ. ಮನಸ್ಸಿನ ಕೆಲಸವೇನೆಂದರೆ ನಮಗೆ ಇಷ್ಟವಿದ್ದರೂ ಇಲ್ಲದಿದ್ದರೂ ಎಲ್ಲವನ್ನೂ ಸ್ವೀಕರಿಸುತ್ತದೆ, ನಮ್ಮ ಮನಸ್ಸು ನಮ್ಮ ಜೀವನ ಪರ್ಯಂತ ನಮ್ಮೊಂದಿಗೆ ಇರುತ್ತದೆ.

ತುಂಬಾ ಜನ "ನನ್ನ ಮನಸ್ಸು ಚೆನ್ನಾಗಿಲ್ಲ" ಎನ್ನುತ್ತಾರೆ, ಮನಸ್ಸು ಚೆನ್ನಾಗಿಲ್ಲ ಎಂದು ಕೊರಗುವುದಲ್ಲ, ನಾವು ಮನಸ್ಸನ್ನು ತೆಗೆದು ಹಾಕಲಾರೆವು, ಅದನ್ನು ಸರಿಪಡಿಸಿಕೊಳ್ಳಬೇಕು ಹಾಗೆ ಸರಿಪಡಿಸುವ ಮಾರ್ಗವೇ "ಧ್ಯಾನ", ನಮ್ಮ ಮನಸ್ಸು ದುಶ್ಚಿಂತೆಗಳಿಂದ, ದುರ್ಭಾವನೆಗಳಿಂದ ಕಲುಷಿತವಾಗಿರುತ್ತದೆ, ಮನಸ್ಸಿನೊಳಗಿನ ಮಲಿನ ಭಾವಗಳು ಹೋಗಬೇಕೆಂದರೆ 'ಧ್ಯಾನ'ದಿಂದ ಮಾತ್ರ ಸಾಧ್ಯವಾಗುತ್ತದೆ.

ಮನಸ್ಸು ಕನಸು ಕಾಣುವುದು, ಕೋರಿಕೆಗಳನ್ನು ಕೋರುವುದು ಹೆಚ್ಚು, ಮನಸ್ಸು ಒಂದು ವಸ್ತ್ರದಂತೆ. ಮುಳ್ಳಿನ ಕೊಂಬೆಯ ಮೇಲೆ ಬಿದ್ದ ವಸ್ತ್ರವನ್ನು ಒಂದೇ ಬಾರಿ ಎಳೆದರೆ, ವಸ್ತ್ರವು ಹರಿದು ಹೋಗುತ್ತದೆ, ಅದಕ್ಕಾಗಿ ತುಂಬಾ ಜಾಗ್ರತೆಯಿಂದ ಬಟ್ಟೆಯನ್ನು

ತೆಗೆಯುತ್ತಾರೆ, ಹಾಗೆ ಮನಸ್ಸನ್ನು ಒಂದೇ ಬಾರಿಗೆ ಬದಲಾಯಿಸಲಾರೆವು 'ಧ್ಯಾನ' ಮಾಡುವುದರಿಂದ ಮೆಲ್ಲಮೆಲ್ಲನೆ ಬದಲಾವಣೆ ಹೊಂದುತ್ತದೆ, ವಸ್ತ್ರದ ಒಂದೊಂದು ಎಳೆ ತೆಗೆದರೆ ವಸ್ತ್ರವು ಹೇಗೆ ಇಲ್ಲವಾಗುವುದೋ ಹಾಗೆ ಮನಸ್ಸಿನಲ್ಲಿ ಇರುವ ಮಾಲಿನ್ಯವನ್ನು 'ಧ್ಯಾನ'ದಿಂದ ದಿನವೂ ಸ್ವಲ್ಪ ಸ್ವಲ್ಪವಾಗಿ ತೊಲಗಿಸಿ ಕೊನೆಗೆ ಪೂರ್ತಿಯಾಗಿ ತೊಲಗಿ ಹೋಗುತ್ತದೆ.

ಓಡುವುದು ಶರೀರಕ್ಕೆ ಕಷ್ಟವಾದರೆ, ಒಂದು ಕಡೆ ಸ್ಥಿರವಾಗಿ ನಿಲ್ಲುವುದು ಮನಸ್ಸಿಗೆ ಕಷ್ಟ, ಮನಸ್ಸು ಅನ್ಯಮನಸ್ಕವಾಗಬೇಕು ಅದು 'ಧ್ಯಾನ'ದಿಂದ ಮಾತ್ರ ಸಾಧ್ಯ, ಮನಸ್ಸು ಒಂದು ತೋಟದಂತೆ, ತೋಟಕ್ಕೆ ಅನ್ಯರು, ಅನ್ಯವಾದವುಗಳು ಪ್ರವೇಶಿಸದೆ, ಸೈನಿಕನಂತೆ ಕಾವಲು ಕಾಯಬೇಕು, ಕಳೆಯ ಗಿಡಗಳು ಬೆಳೆಯದಂತೆ ನೋಡಿಕೊಳ್ಳಬೇಕು, ಕಳೆ ಗಿಡಗಳು ಇದ್ದರೆ ತೋಟದಲ್ಲಿ ಆವರಿಸಿ ಬೆಳೆಯನ್ನು ಕುಂಠಿತಗೊಳಿಸುವಂತೆ ಭಯಾಂದೋಲನೆಗಳು ಮನಸ್ಸಿನಲ್ಲಿದ್ದರೆ ಆತ್ಮವು ಉನ್ನತಿ ಸಾಧಿಸುವುದಿಲ್ಲ.

ನಾವು ಆನಂದವಾಗಿ ಜೀವಿಸಬೇಕೆಂದರೆ, ವ್ಯತಿರೇಕ ನಕಾರಾತ್ಮಕ ಆಲೋಚನೆಗಳು ಇರಬಾರದು, ಮನುಷ್ಯ ದಿನಕ್ಕೆ ಅರವತ್ತು ಸಾವಿರ ಆಲೋಚನೆಗಳು ಮಾಡುತ್ತಾನೆ, ವಿಚಿತ್ರವೇನೆಂದರೆ ಅದರಲ್ಲಿ ಶೇಕಡ 90ರಷ್ಟು ಗತದ ಕುರಿತಾದ ಆಲೋಚನೆಗಳೇ ಇರುತ್ತವೆ, ನಮ್ಮ ಆಲೋಚನೆಗಳೇ ನಮ್ಮ ಕೆಲಸಗಳು, ನಮ್ಮ ಕೆಲಸಗಳೇ ನಮ್ಮ ಫಲಿತಗಳು, ನಮ್ಮನ್ನು ಬದಲಾಯಿಸಿಕೊಳ್ಳಲು ಅಂಕಿತ ಭಾವದೊಂದಿಗೆ ಕೃಷಿ ಮಾಡಿದರೆ, ಕ್ರಮವಾಗಿ ಜೀವನ ಸಾಧಾರಣದಿಂದ ಅಸಾಧಾರಣ ಸ್ಥಾಯಿಯೊಳಗೆ ಹೆಜ್ಜೆಯಿಡುತ್ತದೆ, ನಾವು ಗತಕಾಲಕ್ಕೆ ಬಂಧಿಯಾಗದಿದ್ದರೆ ಭವಿಷ್ಯತ್ತಿಗೆ ನಿರ್ಮಾಣ ಶಿಲ್ಪಿಗಳಾಗುತ್ತೇವೆ.

ಹಡಗು ಯಾವ ಕಡೆಗೆ ಹೋಗುತ್ತಿದ್ದರೂ, ದಿಕ್ಸೂಚಿ ಉತ್ತರ ದಿಕ್ಕನ್ನು ಸೂಚಿಸುತ್ತದೆ, ಹಾಗೆಯೇ ಲೋಕ ವ್ಯವಹಾರಗಳು ಎಷ್ಟು ಇದ್ದರೂ 'ಧ್ಯಾನ' ಮಾಡುವವರ ಮನಸ್ಸು 'ಆತ್ಮ'ದ ಮೇಲೆಯೇ ಇರುತ್ತದೆ.

ಮನಸ್ಸನ್ನು ಬಲಹೀನಗೊಳಿಸುವ ಎಷ್ಟು ದೊಡ್ಡ ಬಯಕೆಯಾದರೂ ಬಿಡಬೇಕು, ಮನಸ್ಸಿನಲ್ಲಿ ಶಾಂತಿ ಇಲ್ಲದಿದ್ದರೆ ಪ್ರದೇಶ ಬದಲಾದರೂ ಶಾಂತಿ ಬರುವುದಿಲ್ಲ, 'ಆತ್ಮ'ದ ಮೇಲೆ ದೃಷ್ಟಿ ಇಟ್ಟರೆನೇ ಮನಸ್ಸು ಶಾಂತಿಸುತ್ತದೆ. ಮನಸ್ಸು ಜೀರೋ ಆದರೆ ನಾವು ಹೀರೋಗಳಾಗುತ್ತೇವೆ, ಮನಸ್ಸೇ ಹೀರೋ ಆದರೆ ನಾವು ಝೀರೋ ಆಗುತ್ತೇವೆ. ಪ್ರಾಪಂಚಿಕ ವಿಷಯಗಳಿಂದ ಯಾವಾಗ ಮನಸ್ಸು ಹೋಗುವುದೋ ಆಗ ಮನಸ್ಸು ಭಗವತ್ ಸ್ವರೂಪವೇ ಆಗುತ್ತದೆ, ಕೊಳೆ ತೊಳೆದ ಮನಸ್ಸು ಬ್ರಹ್ಮವೇ ಆಗುತ್ತದೆ.

ಮನಸ್ಸನ್ನು ಪ್ರಪಂಚದ ಕಡೆಗೆ ತಿರುಗಿಸಿದರೆ 'ಬಂಧ' ಆತ್ಮದ ಕಡೆಗೆ ತಿರುಗಿಸಿದರೆ 'ಮೋಕ್ಷ', ಹಾಗೆ ಆತ್ಮದ ಕಡೆಗೆ ತಿರುಗಿಸಿದರೆ ಮನಸ್ಸು ಎಲ್ಲದರಲ್ಲೂ ಇದ್ದರೂ

ಎಲ್ಲದರಿಂದ ಬೇರೆಯಾಗಿಯೇ ಇರುತ್ತದೆ, ಕೆಸರಿನಲ್ಲಿರುವ ಕಮಲ ಕೆಸರನ್ನು ಅಂಟಿಸಿಕೊಳ್ಳದಂತೆ ಹೇಗೆ ಇರುತ್ತದೋ ಆತ್ಮದ ಕಡೆಗೆ ತಿರುಗಿಸಿದ ಮನಸ್ಸು ಎಲ್ಲದರಲ್ಲಿದ್ದರೂ, ಎಷ್ಟು ಕರ್ಮಗಳು ಮಾಡುತ್ತಿದ್ದರೂ ಏನೂ ಅಂಟಿಸಿಕೊಳ್ಳುವುದಿಲ್ಲ.

ನಿಶ್ಚಲವಾಗಿರುವ ನೀರಿನಲ್ಲಿ ತಳವು ಕಾಣಿಸುತ್ತದೆ, ಹಾಗೆ 'ಧ್ಯಾನ'ದಿಂದ ಮನಸ್ಸು ನಿಶ್ಚಲ ಮಾಡಿದರೆ ಆತ್ಮವನ್ನು ತಿಳಿದುಕೊಳ್ಳಬಲ್ಲೆವು. ಮನುಷ್ಯನ ಮೇಲೆ ಮನಸ್ಸು ದೊಡ್ಡಸ್ತಿಕೆ ಮಾಡುವವರೆಗೂ 'ಆತ್ಮವು' ಹೊರಗೆ ಪ್ರಕಟವಾಗುವುದಿಲ್ಲ. ಮನಸ್ಸು ಯಾವಾಗಲೂ ಬಾಹ್ಯ ವಿಷಯಗಳ ಮೇಲೆ ಅಭಿರುಚಿ ಹೊಂದಿದ್ದರೆ, ಕೆಟ್ಟ ಆಲೋಚನೆಗಳು ಮಾಡುತ್ತದೆ, ಬಾಹ್ಯ ವಿಷಯಗಳಿಂದ ಆಲೋಚನೆಗಳನ್ನು ಆಂತರ್ಯಕ್ಕೆ ಹೊರಳಿಸಿದರೆ ಮನಸ್ಸಿಗೆ ಪ್ರಶಾಂತತೆ ಉಂಟುಮಾಡುತ್ತದೆ, ಅಂತಹ ಮನಸ್ಸಿನಿಂದ ನಿಧಾನವಾಗಿ 'ಪರಮಾತ್ಮ' ದರ್ಶನ ಅಂದರೆ 'ಬ್ರಹ್ಮ ಸಾಕ್ಷಾತ್ಕಾರ' ಉಂಟಾಗುತ್ತದೆ. ಇದರಿಂದ ಜನನ ಮರಣಗಳಿಂದ ವಿಮುಕ್ತಿ ಉಂಟಾಗುತ್ತದೆಂದು "ವಿವೇಕ ಚೂಡಾಮಣಿ"ಯಲ್ಲಿ ಶಂಕರಾಚಾರ್ಯರು ಹೇಳಿದ್ದಾರೆ. "ಶುದ್ಧ ಮನಸ್ಸು ಕಲ್ಪವೃಕ್ಷವಾಗಿ ಬದಲಾಗುತ್ತದೆ, ಅಪರಿಶುದ್ಧವಾಗಿರುವ ಮನಸ್ಸು" ಎಂದಿಗೂ ಪರಮಾತ್ಮ ದರ್ಶನ ಮಾಡಲು ಬಿಡದೇ ಪರಾಧೀನವಾಗಿಯೇ ಇರುತ್ತದೆ, ಆದ್ದರಿಂದ 'ಧ್ಯಾನ'ದಿಂದ ಮನಸ್ಸನ್ನು ಅಂತರ್ಮುಖ ಮಾಡಬೇಕು.

## ಆತ್ಮ

ಆತ್ಮ ಪೂರ್ಣಾತ್ಮದಿಂದ, ಪರಮಾತ್ಮನಿಂದ ಬರುತ್ತದೆ. ಪರಮಾತ್ಮ ಪ್ರತಿ ಜೀವಿಯಲ್ಲೂ ಸೂಕ್ಷ್ಮಾತಿಸೂಕ್ಷ್ಮವಾಗಿ 'ಆತ್ಮ'ವಾಗಿ ಇರುತ್ತಾನೆ, ಆತ್ಮಅಣುವಿಗಿಂತ ಕೂಡಾ ಅತಿ ಸೂಕ್ಷ್ಮವಾಗಿ ಜೀವಿಗಳಲ್ಲಿ ಪ್ರವೇಶ ಮಾಡಲ್ಪಟ್ಟು ಶರೀರಕ್ಕೆ ಚೈತನ್ಯ ನೀಡುತ್ತದೆ, 'ಆತ್ಮ'ಕ್ಕೆ ಸಾವು, ಹುಟ್ಟುಗಳಿಲ್ಲ, ಹಸಿವು, ನೀರಡಿಕೆ ಇಲ್ಲ, ಶೋಕ ಮೋಹಗಳು ಇಲ್ಲ.

* ಹುಟ್ಟು ಸಾವುಗಳು ಶರೀರ ಧರ್ಮ
* ಹಸಿವು ನೀರಡಿಕೆ ಪ್ರಾಣ ಧರ್ಮ
* ಶೋಕ ಮೋಹಗಳು ಮನೋಧರ್ಮ

ಈ ಆರು ಇಲ್ಲದಿರುವುದರಿಂದ ಆತ್ಮವನ್ನು ಷಟ್ ಧರ್ಮರಹಿತ ಎನ್ನುತ್ತಾರೆ, ಶರೀರ ಮಾಡುವ ಪ್ರತಿ ಕೆಲಸಕ್ಕೆ ಆತ್ಮ ಶಕ್ತಿಯೇ ಕಾರಣ ಶರೀರವಿಲ್ಲದೇ ಆತ್ಮ ತನಗೆ ತಾನಾಗಿ ಸಂಸ್ಕರಿಸಿಕೊಳ್ಳಲಾಗದು, 'ಆತ್ಮ' ಬೀಜದಂತಹುದು, ಶರೀರ ವೃಕ್ಷದದಂತಹುದು, ಬೀಜ ಎಷ್ಟು ಶಕ್ತಿವಂತವಾದರೆ ಅದರಿಂದ ಉತ್ಪನ್ನವಾಗಿರುವ ವೃಕ್ಷ ಅಷ್ಟು ಬಲಿಷ್ಠವಾಗಿರುತ್ತದೆ, ಅದೇ ವಿಧವಾಗಿ ಮನಸ್ಸಿನ ಪ್ರಾಮುಖ್ಯತೆ ಕಡಿಮೆಯಾಗಿ, 'ಆತ್ಮ' ಶಕ್ತಿವಂತವಾಗಿರುವಾಗ ಕಲ್ಪತರುವಿನಂತೆ ಇರುತ್ತದೆ, ಆತ್ಮ ಶಕ್ತಿಹೀನವಾದಾಗ ಶರೀರ ಅನಾರೋಗ್ಯಕರವಾಗಿರುತ್ತದೆ.

ಪ್ರಪಂಚದಲ್ಲಿ ಎಲ್ಲದಕ್ಕಿಂತ ಉನ್ನತವಾದ ಶಕ್ತಿಯೆನ್ನುವುದು ಏನಾದರೂ ಇದ್ದರೆ ಅದು 'ಆತ್ಮ ಶಕ್ತಿ' ಒಂದೇ, 'ಆತ್ಮಶಕ್ತಿ' ನಿತ್ರಾಣವಾಗಿರುವುದನ್ನು ಎಚ್ಚರಿಸುತ್ತದೆ, ಅತೀಂದ್ರಿಯ ಸಾಮರ್ಥ್ಯಗಳನ್ನು ಹೊರತೆಗೆಯುತ್ತದೆ, ಶರೀರಕ್ಕೆ ಪ್ರಾಣ ಎಷ್ಟು ಮುಖ್ಯವೋ 'ಆತ್ಮ' ಅಷ್ಟೇ ಮುಖ್ಯ. 'ಆತ್ಮ'ಕ್ಕೆ ಅನುಭೂತಿಗಳು ಮಾತ್ರವೇ ತಿಳಿಯುತ್ತವೆ, ಇಂದ್ರಿಯ ಜ್ಞಾನದೊಂದಿಗೆ ಆತ್ಮವನ್ನು ತಿಳಿದುಕೊಳ್ಳಲಾರೆವು, ಇದು ಕೇವಲ ಜ್ಞಾನಕ್ಕೆ ಸಿಗಬೇಕಾದದ್ದೇ, ಅದಕ್ಕಾಗಿಯೇ 'ಆತ್ಮ ಜ್ಞಾನ' ಎಂದಿದ್ದಾರೆ, ಬುದ್ಧಿಯನ್ನು ವಿಕಸಿಸುವಂತೆ ಮಾಡುವುದು, ಪ್ರಜ್ಞೆಯನ್ನು ಪ್ರಜ್ವಲಿಸುವಂತೆ ಮಾಡುವುದು, ಶರೀರಕ್ಕೆ ಚೈತನ್ಯವನ್ನು ತರುವುದು 'ಆತ್ಮ'ವೇ, ಇದಕ್ಕೆ ಅನೇಕ ಶಕ್ತಿಗಳಿವೆ, ಅನೇಕ ಮಹತ್ವಗಳು, ಸಿದ್ಧಿಗಳಿವೆ ಅವುಗಳನ್ನು ಗ್ರಹಿಸಲು ಅನುಭೂತಿಹೊಂದಲು 'ಧ್ಯಾನ ಸಾಧನೆ' ಅಗತ್ಯ. ಮಾಮೂಲು ಕಣ್ಣಿನೊಂದಿಗೆ ನೋಡುವಂತಹವುದು ಪರಿಮಿತ, 'ಜ್ಞಾನನೇತ್ರ'ದೊಂದಿಗೆ ನೋಡುವಂತಹುದು ಅಪರಿಮಿತವಾದದ್ದು, ಅದಕ್ಕೆ 'ಧ್ಯಾನ' ಸಾಧನೆ ತೀವ್ರವಾಗಿ ಮಾಡಬೇಕು, ಮೂರನೆಯ ನೇತ್ರ ತೆರೆದುಕೊಳ್ಳಬೇಕು, ಹಾಗೆ ಮೂರನೇ ನೇತ್ರ ತೆರೆದುಕೊಂಡ ಪ್ರತಿಯೊಬ್ಬನೂ ಭಗವಂತನೇ ಆಗುತ್ತಾನೆ. 'ಆತ್ಮವನ್ನು ತಿಳಿದು ಕೊಳ್ಳುವುದೆಂದರೆ' 'ಬ್ರಹ್ಮವನ್ನು' ತಿಳಿದುಕೊಳ್ಳುವುದೇ.

ಪ್ರಪಂಚದಲ್ಲಿ ಎಲ್ಲವೂ ನಾಶವಾಗುವ ವಸ್ತುಗಳೇ, ಆದರೆ ಆತ್ಮ ಒಂದೇ ನಾಶವಾಗದ್ದು 'ಧ್ಯಾನ' ಸಾಧಕನು, ಆತ್ಮವೇ ಪರಬ್ರಹ್ಮವೆಂದು ತಿಳಿದುಕೊಳ್ಳಬೇಕು, ಪ್ರತಿಯೊಬ್ಬರೂ 'ಆತ್ಮ'ದ ಕುರಿತು ಈ ಮೂರು ಸಹ ತಿಳಿಯಬೇಕು.

1. ಆತ್ಮ ಶಾಶ್ವತವಾದದ್ದು 2.ತಾನು ಆತ್ಮವೇ ಹೊರತು ದೇಹವಲ್ಲವೆಂದು 3.ಎಲ್ಲಾ ಜೀವಿಗಳಲ್ಲೂ ಅಂದರೆ ಜೀವಿಸುವ ಪ್ರತಿಯೊಂದರಲ್ಲೂ ಒಂದೇ ಆತ್ಮ ವ್ಯಾಪಿಸಿದೆ ಎಂದು ತಿಳಿದುಕೊಳ್ಳಬೇಕು.

ತೀವ್ರವಾದ 'ಧ್ಯಾನ ಸಾಧನೆ'ಯಿಂದ ನಮ್ಮಲ್ಲಿ ಮಹೋನ್ನತವಾದ ಆಲೋಚನೆಗಳು ಬಂದಾಗ, ಆದರ್ಶವೇರ್ಪಟ್ಟಾಗ, ನನ್ನ ಆಲೋಚನೆಗಳು ಪರಿಮಿತಿಗಳನ್ನು ದಾಟಿ, ಬಂಧಗಳನ್ನು ಕಡಿದುಕೊಂಡು ನಮ್ಮ 'ಚೈತನ್ಯ' ಎಲ್ಲಾ ದಿಕ್ಕುಗಳಲ್ಲೂ ವ್ಯಾಪಿಸುತ್ತದೆ, ನಮ್ಮಲ್ಲಿ ನಿತ್ರಾಣವಾಗಿರುವ ಎಲ್ಲಾ ಶಕ್ತಿಗಳೂ ಪ್ರತಿಭೆ, ಜ್ಞಾನ ಒಂದೇ ಬಾರಿಗೆ ಜಾಗೃತಗೊಳ್ಳುತ್ತವೆ.

# ಧ್ಯಾನಕ್ಕೆ ಬೇಕಾದದ್ದು

'ಧ್ಯಾನ'ಕ್ಕೆ ಮುಖ್ಯವಾಗಿ 1. ನಂಬಿಕೆ 2. ಶ್ರದ್ಧೆ 3. ಅಭ್ಯಾಸ 4. ಉತ್ಸಾಹ ಎನ್ನುವುದು ತುಂಬಾ ಅಗತ್ಯ.

**1. ನಂಬಿಕೆ :** ಎಷ್ಟೋ ವಿಧದ 'ಧ್ಯಾನ'ಗಳಿವೆ ಆದರೆ ಒಬ್ಬ ಸದ್ಗುರು ನಮಗೆ ಹೇಳಿದ ಸಾಧನೆಯ ಮೇಲೆ ನಂಬಿಕೆ ಇರುವುದರಿಂದ ನಾವು ಆ ಸಾಧನೆಯನ್ನು ಸರಿಯಾಗಿ ಮಾಡುತ್ತೇವೆ, ನಮ್ಮ ಪುಣ್ಯ ಕರ್ಮಗಳಿಂದ, ಸತ್ಕರ್ಮಗಳಿಂದ ಮಾತ್ರವೇ ಒಬ್ಬ ಸದ್ಗುರು ದೊರೆಯುತ್ತಾನೆ, ಅಂತಹ ಸದ್ಗುರು ಹೇಳಿದ ಸಾಧನೆ ತಮಾಷೆಯಾಗಿ ಇರುವುದಿಲ್ಲ ಅಲ್ಲವೇ! ಅಂತಹ ಸದ್ಗುರುಗಳು ಸತ್ಯವನ್ನೇ ಹೇಳುತ್ತಾರೆ. ಸತ್ಯದಲ್ಲೇ ಜೀವಿಸುತ್ತಾರೆ, ನಮ್ಮನ್ನೂ ಸತ್ಯದ ಕಡೆಗೆ ಪಯಣಿಸುವಂತೆ ಮಾಡುತ್ತಾರೆ, ನಾವು ನಮ್ಮ ಸಾಧನೆಯ ಮೇಲೆ ನಂಬಿಕೆ ಇಟ್ಟಾಗ "ಈ ಸಾಧನೆಯಿಂದ ಮಾತ್ರವೇ ನಾನು ಜ್ಞಾನ ಹೊಂದಬಲ್ಲೆನು" ಎನ್ನುವ ಅಭಿಪ್ರಾಯಕ್ಕೆ ಬಂದು ಸಾಧನೆಯನ್ನು ಇಷ್ಟವಾಗಿ ಮಾಡುತ್ತೇವೆ, ಇಷ್ಟವಾಗಿ ಮಾಡುವುದರಿಂದ ಸಾಧನೆಯನ್ನು ಅಧಿಕವಾಗಿ ಮಾಡಬಲ್ಲೆವು, ಪತ್ರೀಜಿ ಹೇಳಿದ "ಶ್ವಾಸದ ಮೇಲೆ ಗಮನ" ಎನ್ನುವ ಸಾಧನೆಯನ್ನು ಗೌತಮ ಬುದ್ಧನು ಎಷ್ಟೋ ವಿಧಗಳ 'ಧ್ಯಾನ'ಗಳು ಮಾಡಿ ಕೊನೆಗೆ ಇದೇ ಸರಿಯಾದದ್ದೆಂದು ಎಲ್ಲರಿಗೂ ಈ 'ಆನಾಪಾನಸತಿ' ಬೋಧಿಸಿದರು, 'ಧ್ಯಾನ'ವೆಂದರೆ ಮನಸ್ಸನ್ನು ಶೂನ್ಯ ಮಾಡುವುದು, ಮನಸ್ಸು ಶೂನ್ಯವಾಗಬೇಕು ಅಂದರೆ ಶ್ವಾಸವನ್ನು ಹಿಡಿಯಬೇಕು, ಏಕೆಂದರೆ ಬೇರೆ ಸಾಧನೆಗಳಲ್ಲಿ ಮನಸ್ಸು ಕೆಲಸ ಮಾಡುತ್ತದೆ, ಶ್ವಾಸದ ಮೇಲೆ ಗಮನ ಎನ್ನುವುದು ಮನಸ್ಸನ್ನು ಶೂನ್ಯಕ್ಕೆ ಬೇಗ ಕರೆದುಕೊಂಡು ಹೋಗುತ್ತದೆ, ಆದ್ದರಿಂದಲೇ ನಾವು ಮಾಡುವ ಸಾಧನೆ ಮೇಲೆ ನಮಗೆ ನಂಬಿಕೆ ಇರಬೇಕು.

**2. ಶ್ರದ್ಧೆ :** ಯಾವ ಕೆಲಸವನ್ನಾದರೂ ಶ್ರದ್ಧೆಯಿಂದ ಮಾಡಿದರೆ ತುಂಬಾ ನೈಪುಣ್ಯತೆಯಿಂದ ಇರುತ್ತದೆ, ಓದುವಾಗ "ಶ್ರದ್ಧೆಯಿಂದ ಓದಿಕೋ" ಎನ್ನುತ್ತಾರೆ! ಸರಿಯಾದ ಶ್ರದ್ಧೆಯಿಂದ ಸತ್ಫಲಿತಗಳು ಉಂಟಾಗುತ್ತವೆ, ಭಗವದ್ಗೀತೆಯಲ್ಲಿ ಶ್ರದ್ಧೆ ಮೂರು ವಿಧವಾಗಿ ಇರುತ್ತದೆ ಎಂದು ಹೇಳಲಾಗಿದೆ, ಅವು 1)ತಾಮಸಿಕ ಶ್ರದ್ಧೆ 2) ರಾಜಸಿಕ ಶ್ರದ್ಧೆ 3)ಸಾತ್ವಿಕ ಶ್ರದ್ಧೆ.

ಇವು ಜನ್ಮಾಂತರ ಸಂಸ್ಕಾರಗಳ ಪ್ರಭಾವಗಳಿಂದ ಈ ಜನ್ಮದಲ್ಲಿ ಮಾಡುವ ಪ್ರಯತ್ನದಿಂದ ಬರುತ್ತವೆ ಎಂದು ಹೇಳಿದ್ದಾರೆ. ಮಾನವರು ಯಾವ ರೀತಿಯ ಶ್ರದ್ಧೆ ಹೊಂದಿರುತ್ತಾರೋ ಆ ವಿಧವಾದ ಫಲಿತವನ್ನು ಹೊಂದುತ್ತಾರೆ. ಸಾಧನೆ ಆಗಬೇಕೆಂದರೂ, ಜ್ಞಾನ ಬೆಳೆಸಿಕೊಳ್ಳಬೇಕೆಂದರೂ 'ಸಾತ್ವಿಕ ಶ್ರದ್ಧೆ' ಅಗತ್ಯ, ಅದರಿಂದಲೇ 'ಆತ್ಮ ಸ್ಥಿತಿ'ಗೆ ಸೇರಿಕೊಳ್ಳಬಲ್ಲೆವು ಗೀತೆಯಲ್ಲಿ ಅದರಿಂದಲೇ ಈ ವಿಧವಾಗಿ ಹೇಳಲಾಗಿದೆ.

**ಶ್ಲೋ: ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇನ್ದ್ರಿಯಃ**

**ಜ್ಞಾನಂ ಲಬ್ಧ್ವಾ ಪರಾಂ ಶಾಂತಿ ಮಚಿರೇಣಾಧಿಗಚ್ಛತಿ.( ಭ. ಗೀ.4–39)**

ತಾಮಸಿಕ ಶ್ರದ್ಧೆ, ರಾಜಸಿಕ ಶ್ರದ್ಧೆಯಿಂದ ಸಾಧನೆ ಆಗುವುದಿಲ್ಲ ಆತ್ಮಜ್ಞಾನವಾಗುವುದಿಲ್ಲ, ಆದ್ದರಿಂದ ಸಾತ್ವಿಕ ಶ್ರದ್ಧೆ ಸಾಧಕನಿಗೆ ಅಗತ್ಯವಿರುವುದರ ಕಾರಣವಾಗಿ ಪ್ರತಿಯೊಬ್ಬರೂ ಸಾತ್ವಿಕ ಶ್ರದ್ಧೆಯನ್ನು ಆಶ್ರಯಿಸಿ ಅವರವರ ಆಧ್ಯಾತ್ಮಿಕ ಕಾರ್ಯಕ್ರಮಗಳು ಮಾಡಬೇಕೆಂದು ಹೇಳಲಾಗಿದೆ.

**3. ಅಭ್ಯಾಸ :** 'ಧ್ಯಾನ' ಆರಂಭಿಸಿದ ಹೊಸತರಲ್ಲಿ ಯಾರಿಗೂ 'ಧ್ಯಾನ'ವಾಗುವುದಿಲ್ಲ, 'ಧ್ಯಾನ'ದಲ್ಲಿ ಕುಳಿತುಕೊಳ್ಳಲು ಶರೀರ ಸಹಕರಿಸುವುದಿಲ್ಲ, ಸಹಜವಾಗಿ ಕಣ್ಣು ತೆರೆದಾಗ ಅಷ್ಟು ಆಲೋಚನೆಗಳು ಬರುವುದಿಲ್ಲ ಕಣ್ಣು ಮುಚ್ಚಿದ ತಕ್ಷಣ ಎಷ್ಟೋ ಆಲೋಚನೆಗಳು ಬರುತ್ತವೆ, ಯಾವಾಗ ಕಣ್ಣು ತೆರೆಯುತ್ತೇವೋ ಎನಿಸುತ್ತದೆ, ಆದರೆ ದಿನವೂ ಕುಳಿತು ಅಭ್ಯಾಸ ಮಾಡುವುದರಿಂದ ತಾನಾಗಿ ಆಲೋಚನೆಗಳು ಕಡಿಮೆಯಾಗಿ ಶರೀರಕ್ಕೆ ಮನಸ್ಸಿಗೆ 'ಧ್ಯಾನ' ಅಭ್ಯಾಸವಾಗುತ್ತದೆ.

ಮನಸ್ಸು ಚಂಚಲವಾಗಿದ್ದು, ಅದನ್ನು ನಿಗ್ರಹಿಸುವುದು ತುಂಬಾ ಕಷ್ಟ ಆದರೆ 'ಶ್ವಾಸದ ಮೇಲೆ ಗಮನ'ದ ಅಭ್ಯಾಸ ಮಾಡುವುದರಿಂದ ನಿಧಾನವಾಗಿ ಮನಸ್ಸು 'ಧ್ಯಾನ'ಕ್ಕೆ ಒಳಗಾಗುತ್ತದೆ, ಎಷ್ಟು ದೊಡ್ಡ ಮದವೇರಿದ ಆನೆಯಾದರು ಚಿಕ್ಕ ಅಂಕುಶಕ್ಕೆ ಶರಣಾಗುವಂತೆ ಮನಸ್ಸು 'ಶ್ವಾಸದ ಮೇಲೆ ಗಮನ'ಕ್ಕೆ ಶರಣಾಗುತ್ತದೆ.

ಅಭ್ಯಾಸಕ್ಕೆ ಮತ್ತೊಂದು ಉದಾಹರಣೆ ಒಂದು ಊರಿನಲ್ಲಿ ಒಬ್ಬ ಗುರುಗಳು ಇದ್ದರು, ಅವರು ಕೆಲವು ದಿನಗಳು ಪ್ರಚಾರಕ್ಕಾಗಿ ತೆರಳಿದರು ಆತನಿಗೆ ಒಂದು ಊರಿನಲ್ಲಿ ಊಟಕ್ಕೆ ಏರ್ಪಾಟು ಮಾಡಿದರು, ಆ ಊರಿನಲ್ಲಿ ಯಾರು ಏರ್ಪಾಟು ಮಾಡಿದ್ದರೋ ಆ ಮನೆಯ ಒಡತಿ ಗುರುಗಳ ಶಿಷ್ಯನಿಗೆ ಕರೆಮಾಡಿ ಗುರುಗಳು "ಯಾವ ಸಾರು

ತಿನ್ನುತ್ತಾರೆ"? ಎಂದು ಕೇಳಿದಳು ಎಲ್ಲಾ ಸಾರುಗಳು ಇಷ್ಟ ಆದರೆ ಹಾಗಲಕಾಯಿ ಎಂದಾಗ ಫೋನ್ ಕರೆ ಕಟ್ ಆಯಿತು ಎಷ್ಟು ಪ್ರಯತ್ನಿಸಿದರೂ ಲೈನ್ ಸಿಗಲಿಲ್ಲ, ಆ ಮನೆಯಾಕೆ ಗುರುಗಳಿಗೆ ಹಾಗಲಕಾಯಿ ಇಷ್ಟವೆಂದುಕೊಂಡು ಅಡುಗೆಗಳೆಲ್ಲಾ ಹಾಗಲ ಕಾಯಿಯಿಂದಲೇ ಮಾಡಿದಳು ಹಾಗಲಕಾಯಿ ಪಲ್ಯ, ಚಟ್ನಿ, ಹಾಗಲಕಾಯಿ ಫ್ರೈ, ಹಾಗಲಕಾಯಿ ಹುಳಿ ಹೀಗೆ ವಿಧ ವಿಧವಾಗಿದ್ದವು ಗುರುಗಳು ಊಟಕ್ಕೆ ಬಂದು ಕುಳಿತು ಪಾತ್ರೆಗಳ ಮೇಲಿನ ಮುಚ್ಚಳ ತೆಗೆದು ನೋಡಿದರೆ ಎಲ್ಲಾ ಹಾಗಲಕಾಯಿ ಅಡುಗೆಗಳೇ ಬೇರೆ ಯಾವುದೂ ಇಲ್ಲ, ಆದ್ದರಿಂದ ಬೇರೆ ದಾರಿಯಿಲ್ಲದೇ ಅದನ್ನೇ ಹಾಕಿಕೊಂಡು ತಿಂದರು ಮಾರನೆಯ ದಿನ ಪಕ್ಕದ ಊರಿನಲ್ಲೇ ಕಾರ್ಯಕ್ರಮ ಆ ಊರಿನವರೂ ಇವರನ್ನು ಗುರುಗಳಿಗೆ ಏನು ಇಷ್ಟ ಎಂದು ಕೇಳಿದಾಗ ಅವರು ತಾವು ಮಾಡಿದ ಹಾಗಲಕಾಯಿ ವೈವಿಧ್ಯ ಹೇಳಿದಾಗ, ಅವರೂ ಕೂಡ ಅದೇ ಮಾಡಿ ಬಡಿಸಿದರು. ಆ ದಿನವೂ ಬೇರೆ ವಿಧಿ ಇಲ್ಲದೆ ಗುರುಗಳು ಅದನ್ನೇ ತಿಂದರು ಹೀಗೆ ಕ್ರಮವಾಗಿ ವಾರದ ಅಷ್ಟೂ ದಿನಗಳು ಹಾಗಲಕಾಯಿ ತಿಂದಿದ್ದರಿಂದ ಅವರಿಗೆ ಅದೇ ಅಭ್ಯಾಸವಾಯಿತು. ಹಾಗೆ ಮೊದಲನೆಯ ದಿನ 'ಧ್ಯಾನ'ವೂ ಅಭ್ಯಾಸ ಇರುವುದಿಲ್ಲ, ಕಷ್ಟವಾದರೂ ದಿನವೂ ಅಭ್ಯಾಸ ಮಾಡಿಕೊಂಡರೆ ಅದೇ ರೂಢಿಯಾಗುತ್ತದೆ.

ಅದಕ್ಕೆಂದೇ ಪತಂಜಲಿ ಮಹರ್ಷಿ "ಅಭ್ಯಾಸ ವೈರಾಗ್ಯಾಭ್ಯಾಮ್ ತನ್ನಿರೋದಃ" ಎಂದಿದ್ದಾರೆ, ಅಂದರೆ "ಅಭ್ಯಾಸ ವೈರಾಗ್ಯ" ಗಳೊಂದಿಗೆ ಮನಸ್ಸನ್ನು ನಿರೋಧಿಸಬಹುದು ಎಂದಿದ್ದಾರೆ, ಆದ್ದರಿಂದ ಮನಸ್ಸು ಪರಮಾತ್ಮನಲ್ಲಿ ನಿಲ್ಲಿಸಲು ಅಭ್ಯಾಸ ಮಾಡಲೇ ಬೇಕು, ಪ್ರತಿದಿನ 'ಧ್ಯಾನ'ಸಾಧನೆಯನ್ನು ಕ್ರಮ ತಪ್ಪದಂತೆ ಮಾಡುವುದರಿಂದ 'ಧ್ಯಾನ'ಸಾಧನೆ ಅಭ್ಯಾಸವಾಗುತ್ತದೆ, 'ಧ್ಯಾನ'ಕ್ಕೆ ಅಭ್ಯಾಸವು ಅತ್ಯಗತ್ಯ. ವಸಿಷ್ಠ ಮಹರ್ಷಿ ಕೂಡ 'ಆತ್ಮಜ್ಞಾನ'ಕ್ಕಾಗಿ ಅಭ್ಯಾಸ ಮಾಡಲೇಬೇಕೆಂದು ರಾಮಚಂದ್ರನಿಗೆ ಬೋಧಿಸಿದ್ದಾರೆ, ಕಾರಣ 'ಆತ್ಮಜ್ಞಾನ'ದಿಂದ ಸಮಸ್ತ ದುಃಖಗಳು ದೂರವಾಗುತ್ತವೆ ಪರಮಾನಂದ ಲಭಿಸುತ್ತದೆ, ಅದನ್ನೇ ವಶಿಷ್ಠರು ಸಹ ಹೇಳಿದ್ದಾರೆ.

4) ಉತ್ಸಾಹ : ಯೋಗವನ್ನು ಅಭ್ಯಾಸ ಮಾಡುವವನು ಉತ್ಸಾಹವಂತನಾಗಿ ಇರಬೇಕು ಎಷ್ಟು ಅವಾಂತರಗಳು ಬಂದರೂ ಧೃತಿಗೆಡಬಾರದು.

ಯಾವ ಕೆಲಸವನ್ನು ಮಾಡಿದರೂ 'ಉತ್ಸಾಹ'ದೊಂದಿಗೆ ಮಾಡಿದರೆ, ಆ ಕೆಲಸ ತ್ವರಿತವಾಗಿ ಆಗುತ್ತದೆ ಕೆಲಸ ಮಾಡಲು ಶ್ರದ್ಧೆ ಎಷ್ಟು ಮುಖ್ಯವೋ ಉತ್ಸಾಹ ಕೂಡ ಅಷ್ಟೇ ಮುಖ್ಯ, ಅದಕ್ಕೆ ಹಿರಿಯರು "ಮಾಡುವ ಕೆಲಸವನ್ನು ಅಳುತ್ತಾ ಮಾಡುವುದಕ್ಕಿಂತ ಮಾಡದೇ ಇದ್ದರೇನೇ ಒಳಿತು" ಎಂದು. ಹಾಗೆ ಪ್ರಾಪಂಚಿಕ ಕೆಲಸಗಳಲ್ಲೇ ಅಲ್ಲದೇ ಆತ್ಮ ಸಾಧನೆಯಲ್ಲೂ ಕೂಡ 'ಉತ್ಸಾಹ' ಇರಬೇಕು. ಪರಮಾತ್ಮನನ್ನು ತಿಳಿದುಕೊಳ್ಳುವ ಈ ಸಾಧನೆಯಲ್ಲಿ ಎಷ್ಟು ಶ್ರದ್ಧೆ, ಉತ್ಸಾಹವನ್ನು ಸಾಧಕನು ತೋರಿಸುತ್ತಾನೋ ಪ್ರಕೃತಿ ಅಷ್ಟು ಸಹಕರಿಸುತ್ತದೆ, ಸಾಧನೆ ಮಾಡಲು ಆಲಸ್ಯ ತರವಲ್ಲ, ಆಲಸ್ಯ ಬಂದಿದೆ ಎಂದರೆ ನಮ್ಮಲ್ಲಿ ತಮೋಗುಣ ಇದೆಯೆಂದು ಅರ್ಥ.

ಹಾಗೆ ಸೋಮಾರಿತನ ಇದ್ದಾಗ ನಾವು ತಿನ್ನುವ ಆಹಾರದಲ್ಲಿ ತಮೋಗುಣ ಉಂಟುಮಾಡುವ ಆಹಾರ ಇದೆಯೇ ಎನ್ನುವುದನ್ನು ಪರಿಶೀಲಿಸಿ ಅಂತಹ ಆಹಾರವನ್ನು ತ್ಯಜಿಸಬೇಕು, ಮುಖ್ಯವಾಗಿ ಹಳಸಿದ, ಹುಳಿಯಾದ ಎಷ್ಟೋ ದಿನಗಳ ಹಿಂದೆ ಬೇಯಿಸಿ ಫ್ರಿಡ್ಜ್ ನಲ್ಲಿ ಇಟ್ಟಿರುವ ತಣ್ಣಗಿರುವ ಪದಾರ್ಥಗಳನ್ನು ತಿಂದರೆ ತಮೋ ಗುಣ ಹೆಚ್ಚುತ್ತದೆ, ಅತಿಯಾಗಿ ತಿನ್ನುವುದು, ಅತಿಯಾಗಿ ನಿದ್ರಿಸುವುದು ಕೂಡ ತಮೋಗುಣದ ಲಕ್ಷಣಗಳು. ಅಗತ್ಯವಿಲ್ಲದೆ ಕೆಲಸಗಳನ್ನು ಸೃಷ್ಟಿಸಿಕೊಳ್ಳುವುದರಿಂದಲೂ 'ಧ್ಯಾನ'ದ ಮೇಲೆ ಶ್ರದ್ಧೆ ಕಡಿಮೆಯಾಗುತ್ತದೆ, ಶರೀರದ ಆಯಾಸದಿಂದ ಕೂಡ ಸಾಧನೆಯಾಗುವುದಿಲ್ಲ, ಅದ್ದರಿಂದ ಸಾಧನೆಗೆ ಭಂಗ ತರುವ ಕೆಲಸಗಳನ್ನು ಕಡಿಮೆ ಮಾಡಿಕೊಂಡರೆ 'ಧ್ಯಾನ' ಮಾಡಬೇಕೆನ್ನುವ ಉತ್ಸಾಹ ಬರುತ್ತದೆ, ಹಾಗೆ ಆತ್ಮಜ್ಞಾನವನ್ನು ಹೆಚ್ಚಿಸುವಂತಹ ಪುಸ್ತಕಗಳನ್ನು ಓದುವುದರಿಂದಲೂ 'ಧ್ಯಾನ' ಮಾಡಬೇಕೆಂಬ ಉತ್ಸಾಹ ಬಯಕೆ ಉಂಟಾಗುತ್ತದೆ.

# ಧ್ಯಾನ ಸಾಧನೆಯಲ್ಲಿ ಅಭಿವೃದ್ಧಿಯಾಗಬೇಕೆಂದರೆ?

**'ಧ್ಯಾನ' ಸಾಧನೆಯಲ್ಲಿ ಅಭಿವೃದ್ಧಿಯಾಗಬೇಕೆಂದರೆ, ಮುಖ್ಯವಾಗಿ 1. ವಿಚಾರಣೆ 2. ವಿಶ್ವಾಸ 3. ವಿಮರ್ಶೆ 4. ವಿಶ್ಲೇಷಣೆ 5. ವಿವೇಕ 6. ವೈರಾಗ್ಯ 7. ವಿನಯ ಎನ್ನುವುದು ತುಂಬಾ ಮುಖ್ಯ.**

**1.ವಿಚಾರಣೆ :** ಸಾಧನೆ ಮಾಡುವುದು ಎಷ್ಟು ಮುಖ್ಯವೋ ಸಾಧನೆಯಲ್ಲಿ ಉನ್ನತಿ ಸಾಧಿಸಬೇಕೆಂದರೆ ವಿಚಾರಣೆ ಕೂಡಾ ಅಷ್ಟೇ ಮುಖ್ಯ, ಮೊದಲನೆಯದಾಗಿ 'ನಾನು ಯಾರು'? ಎಂದು 'ವಿಚಾರ' ಮಾಡಬೇಕು, 'ಜ್ಞಾನ'ಹೆಚ್ಚಲು ವಿಚಾರಣೆ ಮಾಡಬೇಕು. ಮೊಸರನ್ನು ಕಡೆದಾಗ ಬೆಣ್ಣೆ ಬರುವಂತೆ ವಿಚಾರಣೆಯಿಂದ ಜ್ಞಾನ ಬರುತ್ತದೆ, ವಿಚಾರವೆಂದರೆ "ತತ್ವ ವಿಚಾರ" ಅಂದರೆ "ಆತ್ಮ ವಿಚಾರ", ತತ್ವ ವಿಚಾರ ಎಂದರೆ 'ಜ್ಞಾನ ಮಾರ್ಗ', 'ಆತ್ಮ ಸಾಕ್ಷಾತ್ಕಾರ'ಕ್ಕೆ ಜ್ಞಾನವೇ ಸರಿಯಾದ ಮಾರ್ಗ, ಎಷ್ಟು ಜನ್ಮಗಳು ಎತ್ತಿದರೂ ಜ್ಞಾನ ಹೊಂದದೇ ಮುಕ್ತಿ ಲಭಿಸದು, 'ನಾನು ಯಾರು? ಈ ಪ್ರಪಂಚವೇನು'? ಎಂದು ವಿಚಾರ ಮಾಡುವುದರಿಂದ ಜ್ಞಾನ ಬರುತ್ತದೆ, ಈ ವಿಚಾರಣೆ ಎನ್ನುವುದು ಬುದ್ಧಿ ವಿಕಸಿಸಿದಾಗಲೇ ನಡೆಯುತ್ತದೆ.

ಸಹಜವಾಗಿ ಬುದ್ಧಿ ವಿಕಸಿಸಬೇಕೆಂದರೆ, "ಧ್ಯಾನ" ಅಗತ್ಯ ಕ್ಷಣ ಕ್ಷಣವೂ ಮನಸ್ಸು ಸಾಧನೆಯ ಮೇಲೆ ಹೋಗುವುದಕ್ಕಿಂತ ಹೊರಗಿನ ವಿಷಯಗಳ ಮೇಲೆ ಆಸಕ್ತಿ ತೋರುತ್ತದೆ, ಅಂತಹ ಸಂದರ್ಭಗಳಲ್ಲಿ ಇದು ನನಗೆ ಅಗತ್ಯವಿದೆಯೇ ಇಲ್ಲವೇ ಎಂದು ವಿಚಾರ ಮಾಡಿ, ಅಗತ್ಯವಿದ್ದರೆ ಕೆಲಸ ಮಾಡಬೇಕು ಆಗ 'ಆತ್ಮಶಕ್ತಿ' ಹೆಚ್ಚಿಸುವ ಕೆಲಸಗಳ ಮೇಲೆ ಆಸಕ್ತಿ ಬರುತ್ತದೆ ಅಷ್ಟೇ ಹೊರತು 'ಆತ್ಮಶಕ್ತಿ' ಕಳೆದುಕೊಳ್ಳುವ ಕೆಲಸಗಳು ಮಾಡಬಾರದು, 'ವಿಚಾರಣೆ' ಪರಮ ಜ್ಞಾನ ಎಂದಿದ್ದಾರೆ ವಸಿಷ್ಠರು, ಆದ್ದರಿಂದ ನಾವು ವಿಚಾರಣೆ ಮಾಡಿ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು.

**2.ವಿಶ್ವಾಸ :** ನಮಗೆ ಸದ್ಗುರುವು ಸಿಕ್ಕಿದಾಗ ಆತ್ಮಜ್ಞಾನ ಹೊಂದಬೇಕೆಂದರೆ, ಗುರುವಿನ ಮೇಲೆ, ಗುರುವಿನ ಮಾತಿನ ಮೇಲೆ ವಿಶ್ವಾಸ ಇಡಬೇಕು, ಆಗಲೇ ನಮಗೆ ಜ್ಞಾನ ಉಂಟಾಗುತ್ತದೆ ಸದ್ಗುರುಗಳು ಯಾವಾಗಲೂ ನಮ್ಮನ್ನು ಸತ್ಯದ ಕಡೆಗೆ ಅಂದರೆ ಆತ್ಮದ ಕಡೆಗೆ ಅರ್ಥಾತ್ ಪರಮಾತ್ಮನ ಕಡೆಗೆ ನಡೆಸಲು ಪ್ರಯತ್ನಿಸುತ್ತಾರೆ, ಸಹಜವಾಗಿ ನಮ್ಮ ಮನಸ್ಸು ಯಾವಾಗಲೂ ಪ್ರಾಪಂಚಿಕ ವಿಷಯಗಳ ಮೇಲೆ ಹೋಗುತ್ತದೆ, ಆದರೆ ಗುರುಗಳ ಬೋಧನೆಗಳು ಯಾವಾಗಲೂ ನಮ್ಮನ್ನು 'ಆತ್ಮ ಮಾರ್ಗದಲ್ಲಿ' ಪಯಣಿಸುವಂತೆ ಮಾಡಿ ಪರಮಾತ್ಮನನ್ನು ಸೇರಿಕೊಳ್ಳಲು ಸಹಕರಿಸುತ್ತಾರೆ.

ಮಾತಂಗ ಮಹರ್ಷಿಗಳ ಶಿಷ್ಯೆ "ಶಬರಿ", ಆಕೆಗೆ ಜ್ಞಾನದ ಮೇಲೆ ಇದ್ದ ಶ್ರದ್ಧೆ, ಗುರುವಿನ ಮೇಲೆ ಇರುವ ಭಕ್ತಿಗೆ ಅವರು ಸಂತೋಷಪಟ್ಟು, ಆಕೆ ಗುರುವಿನ ಮಾತಿನ ಮೇಲೆ ವಿಶ್ವಾಸವಿಟ್ಟು ಅದೇ ವಿಶ್ವಾಸದೊಂದಿಗೆ ರಾಮನಿಗಾಗಿ ಎದುರು ನೋಡಿದಳು, "ನಾನು ಮರಣಿಸುವ ಸಮಯದೊಳಗೆ ನನ್ನ ರಾಮ ಬರುತ್ತಾನೆ, ನನ್ನ ಗುರುಗಳು ಹೇಳಿದ್ದಾರೆ", ಎಂದು ಎದುರು ನೋಡಿದಳು, ನಿರುತ್ಸಾಹಗೊಳ್ಳಲಿಲ್ಲ ಅದರ ಫಲಿತವಾಗಿ ಕೊನೆಗೆ ಆಕೆಗೆ ರಾಮನ ದರ್ಶನ ಲಭಿಸಿತು, ಇದರ ತಾತ್ಪರ್ಯ ಏನೆಂದರೆ ಗುರುವು ಹೇಳಿದ ಮೇಲೆ ನಾವು ಸಕಾರಾತ್ಮಕ ಚಿಂತನೆಗಳಲ್ಲಿ ಇರಬೇಕು, ನಕಾರಾತ್ಮಕವಾಗಿ ಯೋಚಿಸಬಾರದು ಅದಕ್ಕೆ ಪತ್ರೀಜಿಯವರು ನಮ್ಮನ್ನು ಯಾವಾಗಲೂ ಸಕಾರಾತ್ಮಕ ಆಲೋಚನೆಗಳೊಂದಿಗೆ ಇರಲು ಹೇಳುತ್ತಾರೆ.

ಹಾಗೆ ಪತ್ರೀಜಿ 'ವಿಶ್ವಾಸ'ದ ಬಗ್ಗೆ ತುಂಬಾ ಚೆನ್ನಾಗಿ ಹೇಳಿದ್ದಾರೆ, ಪ್ರಜೆಗಳು ನೋಡಲು ಒಂದೇ ವಿಧವಾಗಿ ಇದ್ದರೂ ಅವರ 'ಆತ್ಮ ಸ್ಥಿತಿ'ಗಳನ್ನು ಅನುಸರಿಸಿ ಅವರ ಆತ್ಮದ ಹಂತವನ್ನು, ಮುಂದಿನ ಗುರಿಯನ್ನು ಬದಲಾಯಿಸಿಕೊಳ್ಳುತ್ತಾರೆ ಎಂದು ತುಂಬಾ ಅದ್ಭುತವಾಗಿ ತಿಳಿಸಿದ್ದಾರೆ.

ಲೋಕದಲ್ಲಿ ವಿಶ್ವಾಸ ಹೊಂದಿದ ವಿಶ್ವಾಸಪರರು ಮೂರು ವಿಧಗಳಾಗಿರುತ್ತಾರೆ.

**1. ಮೊದಲನೆಯ ವಿಧದ ವಿಶ್ವಾಸಪರರು :** ಇವರು ಆತ್ಮ ಸ್ಥಿತಿಯಲ್ಲಿ ಚಿಕ್ಕ ಮಕ್ಕಳಂತಹವರು, ಇವರು ಹೇಳುವುದು ಏನೆಂದರೆ, ನಮಗೆ ಭಗವಂತನ ಮೇಲೆ ಅಥವಾ ಗುರುವಿನ ಮೇಲೆ ವಿಶ್ವಾಸ ಇದೆಯಾದ್ದರಿಂದ ನಮ್ಮ ಜೀವನದಲ್ಲಿ ಯಾವ ಸಮಸ್ಯೆಗಳು ಇಲ್ಲದೇ ಹೂವಿನ ಹಾಸಿಗೆಯಂತೆ ಜೀವನ ಇರಬೇಕೆಂದು, ಆ ಭಗವಂತನನ್ನು ಗುರುಗಳನ್ನು ಡಿಮ್ಯಾಂಡ್ ಮಾಡುತ್ತಾರೆ, ಷರತ್ತಿನೊಂದಿಗೆ ಕೂಡಿದ ವಿಶ್ವಾಸವನ್ನು ಹೊಂದಿರುವ ಇವರು ತಮ್ಮ ಜೀವನದಲ್ಲಿ ಯಾವ ಒಳಿತು ಕೆಡಕುಗಳಾದರೂ ನಾವು ಎಷ್ಟೋ ಬ್ಯುಸಿಯಾಗಿದ್ದು ಕೂಡ ಸಮಯವನ್ನು ಭಗವಂತನ ಪೂಜೆ, ಪ್ರಾರ್ಥನೆ ಅಥವಾ ಇನ್ನಾವುದೋ ಕೆಲಸದ ಮೇಲೆ ಇಡುತ್ತೇವೆ, ಇಷ್ಟು ಭಗವಂತನನ್ನು ನಂಬಿದರೂ ನಮಗೆ ಏನೂ ಲಾಭವಾಗುತ್ತಿಲ್ಲ ಎಂದು ದೇವರನ್ನು ನಿಂದಿಸುತ್ತಾರೆ.

ಆಧ್ಯಾತ್ಮಿಕ ಮಾರ್ಗದಲ್ಲಿ ಇವರೆಲ್ಲಾ ಚಿಕ್ಕ ಮಕ್ಕಳಂತಹವರು, ತಮ್ಮ ತಮ್ಮ ಅಭಿಪ್ರಾಯಕ್ಕೆ ತಕ್ಕಂತೆ ಇವರೆಲ್ಲಾ ದೇವರುಗಳು, ಗುರುಗಳು ಸ್ಪಂದಿಸಬೇಕೆಂದು ಆಶಿಸುತ್ತಾ ಇರುತ್ತಾರೆ, ಇವರೆಲ್ಲಾ ಹಿಂದಿನ ಜನ್ಮಗಳಲ್ಲೇ ಕರ್ಮಗಳ ಪ್ರಭಾವದಿಂದ ವರ್ತಮಾನ ಜೀವನ ವಾಸ್ತವಗಳು, ನಿಬಂಧನೆಗಳು ಇರುತ್ತವೆಯೆಂದು ಅವುಗಳಿಂದ

ಭವಿಷ್ಯತ್ತಿಗೆ ಬೇಕಾದ ನೈಪುಣ್ಯಗಳು ತಮಗೆ ಸಿಗುವುದರಲ್ಲಿದೆಯೆಂದು ಗುರುತಿಸಲಾರರು, ಇವರೆಲ್ಲಾ ಕರ್ಮಸಿದ್ಧಾಂತದ ಬಗ್ಗೆ ಚಿಕ್ಕ ಮಕ್ಕಳಂತೆ ಹಠ ಮಾಡುತ್ತಾ ಇರುತ್ತಾರೆ, ಅದರಿಂದ ಮತ್ತಷ್ಟು ಕಷ್ಟಗಳಿಗೆ ಗುರಿಯಾಗುತ್ತಾ ಇರುತ್ತಾರೆ.

ಉದಾಹರಣೆಗೆ ತೀವ್ರವಾದ ಅಸ್ತಮಾದಿಂದ ಬಾಧಿಸಲ್ಪಡುತ್ತಿರುವ ಚಿಕ್ಕ ಮಗು ಐಸ್ ಕ್ರೀಂ ಕೇಳಿದರೆ, ಮಗು ಮತ್ತಷ್ಟು ಅನಾರೋಗ್ಯಕ್ಕೆ ಈಡಾಗುತ್ತಾನೆ ಎಂದು ಆಸ್ಪತ್ರೆಯಪಾಲು ಆಗುತ್ತಾನೆ ಎಂದು ಆ ಮಗುವಿನ ತಾಯಿ ಆತನಿಗೆ ಐಸ್ ಕ್ರೀಂ ಕೊಡಿಸುವುದಿಲ್ಲ, ಆದರೆ ಮಗು ಹಾಗೆಂದುಕೊಳ್ಳುವುದಿಲ್ಲ ಮೇಲಾಗಿ ನನ್ನ ಕೋರಿಕೆ ಈಡೇರಿಸಲಿಲ್ಲ ಎಂದು ತಾಯಿಯ ಮೇಲೆ ಕೋಪಗೊಳ್ಳುತ್ತಾನೆ ಹಾಗೆಯೇ ಈ ಭಕ್ತರೂ, ಶಿಷ್ಯರೂ ತಮ್ಮ ಕೋರಿಕೆಗಳನ್ನು ಮನ್ನಿಸಲಿಲ್ಲ, ಕಷ್ಟಗಳನ್ನು ತೊಲಗಿಸಲಿಲ್ಲ ಎಂದು ದೇವರನ್ನು, ಗುರುಗಳನ್ನು ದೂರುತ್ತಾರೆ ಅವರ ಮೇಲೆ ಮುನಿಸಿಕೊಳ್ಳುತ್ತಾರೆ.

**2. ಎರಡನೆಯ ವಿಧದ ವಿಶ್ವಾಸಪರರು :** ಇವರು ಪುರೋಗಮನ ಹೊಂದಿದ ಆತ್ಮಗಳು ಕೊಟ್ಟು ತೆಗೆದುಕೊಳ್ಳುವ ಧೋರಣೆಯಲ್ಲಿ ಸಿಕ್ಕಿಕೊಂಡ ಇವರೆಲ್ಲಾ ದೇವರು, ಗುರುಗಳು ದೊಡ್ಡ ಅದ್ಭುತಗಳನ್ನು ಸೃಷ್ಟಿಸಬಲ್ಲರು ಎಂದು ನಂಬುತ್ತಾರೆ. ಇವರು ಜೀವನದಲ್ಲಿ ದೊಡ್ಡ ದೊಡ್ಡ ಕಷ್ಟಗಳು ಬಂದರೂ ಸ್ಥಿರವಾಗಿ ನಿಲ್ಲುತ್ತಾರೆ, ದೇವರು ಗುರುಗಳು ಆ ಕಷ್ಟದಿಂದ ಹೊರಗೆ ತೆಗೆದುಹಾಕಬಲ್ಲರೆಂದು ಭಾವಿಸುತ್ತಾ ಇರುತ್ತಾರೆ, ಅವರ ವಿಶ್ವಾಸ ಎಲ್ಲಿಯವರೆಗೆ ಹೋಗುತ್ತದೆಯೆಂದರೆ, 'ಇದು ನನ್ನ ಸಮಸ್ಯೆಯಲ್ಲ ಭಗವಂತನದು, ಗುರುವಿನದು ಅವರೇ ನೋಡಿಕೊಳ್ಳುತ್ತಾರೆ", ಎಂದು ನಂಬುತ್ತಾರೆ ನನ್ನ ಸಮಯವನ್ನು, ಶಕ್ತಿಯನ್ನು, ಪ್ರೇಮವನ್ನು ಅವರ ಮೇಲೆ ಹೂಡಿಕೆ ಮಾಡಿದ್ದೇನೆ ಆದ್ದರಿಂದ ಅವರು ನನ್ನ ನಂಬಿಕೆಯನ್ನು ಸುಳ್ಳು ಮಾಡುವುದಿಲ್ಲ ಎಂದು ಕೂಡಾ ವಿಶ್ವಾಸವನ್ನು ಇಟ್ಟಿರುತ್ತಾರೆ.

ಆಧ್ಯಾತ್ಮಿಕ ಪ್ರಯಾಣ ಮತ್ತಷ್ಟು ವೇಗವಾಗಿ ಸಾಗಬೇಕೆಂದರೆ, ಕಡ್ಡಾಯವಾಗಿ ಕೆಲವು ಕರ್ಮ ಫಲಿತಗಳನ್ನು ಯಾರಾದರೂ ಅನುಭವಿಸಬೇಕಾದ್ದೇ, ಆಗಲೇ ಅವರು ಮತ್ತಷ್ಟು ಉನ್ನತ ಸ್ಥಿತಿಯಲ್ಲಿ ಈ ಭೌತಿಕ ಲೋಕವನ್ನು ದಾಟಬಲ್ಲರು ಎಂದು ದೈವಕ್ಕೆ, ಗುರುವಿಗೆ ತಿಳಿದಿದೆ ಅದಕ್ಕೆ ಅವರು ಮೌನವಾಗಿ ಇರುತ್ತಾ ಅವರ ಏಳು ಬೀಳುಗಳನ್ನು ಸಾಕ್ಷಿಗಳಂತೆ ಸದಾ ಗಮನಿಸುತ್ತಾ ಇರುತ್ತಾರೆ, ಅಂತಹ ವೇಳೆಯಲ್ಲಿ "ನನಗೆ ನಿನ್ನ ಮೇಲೆ ನಂಬಿಕೆ ಇದೆ ಆದ್ದರಿಂದ ಇಂತಹ ಕಷ್ಟ ನನಗೆ ಕೊಡದಂತೆ ನೋಡಿಕೊಳ್ಳುವ ಜವಾಬ್ದಾರಿ ನಿನ್ನದೇ" ಎಂದುಕೊಳ್ಳುವುದು ತುಂಬಾ ಮೂರ್ಖತ್ವ ವೈದ್ಯರ ಬಳಿ ಹೋದಾಗ ಆತನ ಕರ್ತವ್ಯ ಆತ ಮಾಡಲು ಬಿಡಬೇಕು ಶಸ್ತ್ರಚಿಕಿತ್ಸೆ ನಡೆದ ಮೇಲೆ, "ಬೇಗ ಗುಣಮುಖರಾಗಲಿ" ಎಂದುಕೊಳ್ಳಬೇಕೇ ಹೊರತು ವೈದ್ಯರು ಶಕ್ತಿ ಯುಕ್ತಿ ಗಳನ್ನು ಋಜುವಾತು ಮಾಡಬೇಕೆಂದುಕೊಳ್ಳಬಾರದು.

**3. ಮೂರನೆಯ ವಿಧದ ವಿಶ್ವಾಸಪರರು :** ಇದು ಎಲ್ಲಕ್ಕಿಂತ ಅತ್ಯುತ್ತಮ ವಿಶ್ವಾಸ, ಇದು ಸಂಪೂರ್ಣ ಶರಣಾಗತಿ, ಇದು ಎರಡು ಕಡೆ ಹರಿತವಿರುವ ಕತ್ತಿಯಂತಹುದು, ಇವರು ದೇವರ ಮೇಲೆ, ಗುರುವಿನ ಮೇಲೆ ಎಂತಹ ಷರತ್ತನ್ನು ವಿಧಿಸುವುದಿಲ್ಲ, ಇವರು ಆಧ್ಯಾತ್ಮಿಕ ಪರಿಣಿತಿ ಹೊಂದಿದ ಆತ್ಮಗಳು, ಇವರು ದೇವರ ಮೇಲೆ ಗುರುವಿನ ಮೇಲೆ ಸಂಪೂರ್ಣ ಅಂಕಿತ ಭಾವದಿಂದ ಇರುತ್ತಾರೆ, ವಿಪತ್ತುಕಾರಕ ಪರಿಸ್ಥಿತಿಗಳಲ್ಲಿ ಕೂಡಾ ಯಾವ ವಿಧವಾದ ಸಂರಕ್ಷಣೆ, ಸೌಕರ್ಯಗಳು ಆಶಿಸದೇ ಅವುಗಳ ಬಗ್ಗೆ ಅತ್ಯಂತ ಅರಿವಿನಿಂದ ಇರುತ್ತಾರೆ ರೋಗವಾದರೂ, ಭೋಗವಾದರೂ, ವಿದಾಯವಾದರೂ, ಸಂಯೋಗವಾದರೂ ಕರ್ಮಸಿದ್ಧಾಂತದ ಪ್ರಕಾರವೇ ನನ್ನ ಜೀವನ ನಡೆಯುತ್ತಿದೆ ಎಂದು ತಿಳಿದುಕೊಳ್ಳುತ್ತಾರೆ, 'ನಡೆಯುವ ಪ್ರತಿ ಘಟನೆ ಸರಿಯಾದದ್ದೇ' ಎನ್ನುವ ಅತ್ಯುತ್ತಮ ಜ್ಞಾನದೊಂದಿಗೆ ಅವುಗಳನ್ನು ಸ್ವೀಕರಿಸುತ್ತಾ, ಗೌರವಿಸುತ್ತಾ ಅವರು ತಮ್ಮ ಜೀವನವನ್ನು ಆತ್ಮಪುರೋಗತಿಗೆ ಉಪಯೋಗಿಸುತ್ತಾರೆ.

ಸಂಪೂರ್ಣ ಶರಣಾಗತಿಯಿಂದ ಕೂಡಿದ ಅತ್ಯುತ್ತಮ ವಿಶ್ವಾಸವು ಆಚರಣೆಯಲ್ಲಿ ತುಂಬಾ ಕಷ್ಟವಾದದ್ದು, ಎಲ್ಲಾ ವಿಧವಾದ ಬಯಕೆಗಳಿಂದ ನಮ್ಮನ್ನು ಬಿಡುಗಡೆ ಮಾಡಿಸುತ್ತದೆ, ನೋಡಲು ನಮ್ಮ ಸ್ವಂತ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಿರುವ ಹಾಗೆ ಕಾಣುವ ಈ ಪ್ರಕ್ರಿಯೆ ಅಂತರಂಗದಲ್ಲಿ ಅದು ನಮ್ಮನ್ನು ಗುರುವಿನ ಒಂದು ವ್ಯಕ್ತಿತ್ವದಲ್ಲಿ ಬೆರೆತು ಹೋಗುವಂತೆ ಮಾಡುತ್ತದೆ, ಆಗ ಎಷ್ಟು ನಮ್ಮನ್ನು ನಾವು ಕಳೆದುಕೊಳ್ಳುತ್ತಾ ಇರುತ್ತೇವೋ! ನಾವು ಕೂಡ ದಿವ್ಯರಂತೆ ಬದಲಾಗುತ್ತಾ ಇರುತ್ತೇವೆ, ಆಗ ಏನು ಕೇಳಿದರೂ ಮಾತಾಡಿದರೂ ಲೋಕಕಲ್ಯಾಣಕರವಾಗಿ ಬದಲಾಗುತ್ತದೆ, ಇಂತಹ ದಿವ್ಯ ವಿಶ್ವಾಸದೊಂದಿಗೆ ಇರುವ ಸಾಧಕನಿಗೆ ಪ್ರಕೃತಿ ಕೂಡ ಅತ್ಯುನ್ನತವಾದವುಗಳನ್ನೇ ಹೊಂದಿಸುತ್ತಾ ಇರುತ್ತದೆ.

**3.ವಿಮರ್ಶೆ:** ಸಾಧನೆಯಲ್ಲಿ ಬಂದಮೇಲೆ ನಾವು ಯಾವಾಗಲೂ ನಮ್ಮ ಆಲೋಚನೆಗಳನ್ನು ವಿಮರ್ಶೆಯೊಂದಿಗೆ ಗ್ರಹಿಸಬೇಕು, ಸರಿಪಡಿಸಿಕೊಳ್ಳಲು ಪ್ರಯತ್ನಿಸಬೇಕು, ನಮ್ಮ ಕೆಟ್ಟ ಅಭ್ಯಾಸಗಳನ್ನು ವಿಮರ್ಶಿಸಿಕೊಳ್ಳಬೇಕು, ಹಾಗೆ ಮಾಡುವುದರಿಂದ ಆ ಅಭ್ಯಾಸಗಳನ್ನು ನಿಧಾನವಾಗಿ ಬದಲಾಯಿಸಿಕೊಳ್ಳುತ್ತೇವೆ ಹಾಗೆ ವಿಮರ್ಶಿಸಿಕೊಳ್ಳದಿದ್ದರೆ ನಮ್ಮ ತಪ್ಪುಗಳು ನಾವು ತಿಳಿದುಕೊಳ್ಳಲಾರೆವು, ಯಾವಾಗಲೂ 'ನಾವೇ ಸರಿ' ಎನ್ನುವ ಧೋರಣೆಯಲ್ಲಿ ಇರುತ್ತೇವೆ, ಆದ್ದರಿಂದ ತಪ್ಪುಗಳನ್ನು ವಿಮರ್ಶಿಸಿಕೊಳ್ಳುತ್ತಾ ಸರಿಪಡಿಸುತ್ತಿರಬೇಕು.

ಎಷ್ಟೋ ಜನರು ಬೇರೆಯವರನ್ನೇ ವಿಮರ್ಶಿಸುತ್ತಾರೆ, ಬೇರೆಯವರನ್ನು ವಿಮರ್ಶಿಸದೇ ನಮ್ಮನ್ನು ನಾವು ವಿಮರ್ಶಿಸಿಕೊಳ್ಳಬೇಕು, ಒಂದು ಬಾರಿ ಅಂದರೆ 'ವಿಚಾರಣೆ' ಪದೇ ಪದೇ ಅಂದರೆ 'ವಿಮರ್ಶೆ'ಯಾಗುತ್ತದೆ, ಯಾರ ಬಗ್ಗೆಯಾದರೂ ಒಂದು ಬಾರಿ ಅಂದುಕೊಳ್ಳಬೇಕು ನಮಗೆ ಬೇರೆಯವರಲ್ಲಿ ಹಿಡಿಸಿದ ಗುಣ ಇದ್ದಾಗ ಹಾಗೆ ನಾವು ಯಾವಾಗಲೂ ಆಗಬಾರದು ಎಂದು ವಿಚಾರಣೆಯಿಂದ ತಿಳಿದುಕೊಳ್ಳಬೇಕು.

ನಮ್ಮ ಋಷಿಗಳು ಏನು ಹೇಳುತ್ತಾರೆಂದರೆ, ಯಾವ ವಿಷಯದಲ್ಲಿ ಇತರರಿಂದ ನಿನಗೆ ನೋವಾಗುತ್ತದೋ, ಅದೇ ಕೆಲಸ ನೀನು ಇತರರಿಗೆ ಮಾಡಬೇಡ. ಅದೇ "ಸನಾತನ ಸಂಪ್ರದಾಯ, ಸನಾತನ ಧರ್ಮ" ಎಂದು ಹೇಳುತ್ತಾರೆ. ಪದೇ ಪದೇ ಇತರರನ್ನು ವಿಮರ್ಶಿಸುವುದರಿಂದ ಏನೂ ಲಾಭವಿಲ್ಲ, ಪದೇ ಪದೇ ನಮ್ಮನ್ನು, ನಮ್ಮ ಕೆಟ್ಟ ಅಭ್ಯಾಸಗಳನ್ನು ವಿಮರ್ಶಿಸಿಕೊಳ್ಳುವುದರಿಂದ ನಮ್ಮಲ್ಲಿ ಒಳ್ಳೆಯ ಬದಲಾವಣೆ ಬರುತ್ತದೆ, ಪ್ರಾಪಂಚಿಕ ಜೀವನ ಚೆನ್ನಾಗಿರುತ್ತದೆ, ಆಧ್ಯಾತ್ಮಿಕ ಜೀವನ ಇನ್ನೂ ಚೆನ್ನಾಗಿರುತ್ತದೆ.

**4.ವಿಶ್ಲೇಷಣೆ :** ಯಾವ ವಿಷಯ ಕೇಳಿದರೂ, ಯಾರಿಂದ ಕೇಳಿದರೂ ವಿಶ್ಲೇಷಣೆ ಮಾಡಿಕೊಳ್ಳಬೇಕು ಎಷ್ಟು ಹೆಚ್ಚು ವಿಶ್ಲೇಷಣೆ ಮಾಡುತ್ತೇವೋ, ಅಷ್ಟು ಅಧಿಕವಾಗಿ ಆ ವಿಷಯ ಅರ್ಥವಾಗುತ್ತದೆ ಉದಾಹರಣೆಗೆ "ಸಹ ಜೀವಿಗಳನ್ನು ಪ್ರೇಮಿಸಬೇಕು" ಎಂದು ಪತ್ರೀಜಿ ಹೇಳಿದ್ದಾರೆ ವಿಶ್ಲೇಷಣೆ ಮಾಡುತ್ತಾ ಇದ್ದರೆ, ಏಕೆ ಪ್ರೇಮಿಸಬೇಕು ಎಂದು ಅರ್ಥವಾಗುತ್ತದೆ, ನಾವು ಭೂಮಿ ಮೇಲೆ ಏಕೆ ಹಾಗೂ ಹೇಗೆ ಬಂದಿದ್ದೇವೋ? ಹಾಗೆ ಪ್ರತಿ ಜೀವಿ ಭೂಮಿಮೇಲೆ ಪಾಠ ಕಲಿಯಲು ಅನುಭವಗಳನ್ನು ಹೊಂದಲು ಬಂದಿದೆ ಎಂದು ಅರ್ಥವಾಗುತ್ತದೆ, ವಿಶ್ವವೆಲ್ಲಾ ಇರುವುದು ಒಂದೇ ಆತ್ಮ ಅಂದರೆ 'ಒಂದೇ ಭಗವತ್ ಸ್ವರೂಪ' ಅಜ್ಞಾನದಿಂದ ಬೇರೆ ಬೇರೆಯಾಗಿ ಕಾಣಿಸುತ್ತವೆ, ಅಂದರೆ ದ್ವೈತವಾಗಿ ಕಾಣಿಸುತ್ತವೆ ಜ್ಞಾನ ಬಂದಾಗ ಎಲ್ಲಾ 'ಆತ್ಮ' ಸ್ವರೂಪವೇ, ಎಲ್ಲಾ ಒಂದೇ ಆದ್ದರಿಂದ ಯಾರನ್ನೂ ನೋಯಿಸುವ ಹಕ್ಕು ನಮಗೆ ಇಲ್ಲ ಎಂದು ಅರ್ಥವಾಗುತ್ತದೆ.

ಈ ಸೃಷ್ಟಿಯೆಲ್ಲವೂ ಹರಿದು ಹಾಕಲು ಆಗದಂತಹ ವಸ್ತ್ರದಂತಹುದು, ಆದ್ದರಿಂದ ಈ ಸೃಷ್ಟಿಯಲ್ಲಿ ಯಾವ ಜೀವಿಯನ್ನೂ ನೋಯಿಸಬಾರದು ಎಂದು ಹೇಳುತ್ತಾರೆ ಭಗವದ್ಗೀತೆಯಲ್ಲಿ ಈ ವಿಷಯವನ್ನೇ ಹೇಳಲಾಗಿದೆ.

**ಶ್ಲೋ :– ವಿದ್ಯಾ ವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ**
**ಶುನಿ ಚೈವ ಪಾಶ್ವಕೇ ಚ ಪಂಡಿತಾಃ ಸಮದಶ್ರಿನಃ**

ತಾ : ವಿದ್ಯೆ ವಿನಯ ಹೊಂದಿದ ಬ್ರಾಹ್ಮಣನನ್ನು ಗೋವನ್ನು, ಆನೆಯನ್ನು, ನಾಯಿಯನ್ನು ನಾಯಿ ಮಾಂಸವನ್ನು ಬೇಯಿಸಿ ತಿನ್ನುವ ಚಾಂಡಾಲನನ್ನು ಯಾರು ಸಮದೃಷ್ಟಿಯಿಂದ ನೋಡುತ್ತಾರೋ ಅವರೇ ಪಂಡಿತರು.

ಬ್ರಾಹ್ಮಣನಲ್ಲಿ, ಗೋವಿನಲ್ಲಿ, ಆನೆಯಲ್ಲಿ,ನಾಯಿಯಲ್ಲಿ ಚಾಂಡಾಲನಲ್ಲಿ ಸಮದೃಷ್ಟಿಯಿರಬೇಕು, ಎಂದು ಭಗವದ್ಗೀತೆ ಹೇಳುತ್ತದೆ ಎಲ್ಲರನ್ನೂ ಸಮದೃಷ್ಟಿಯಿಂದ ನೋಡಿದರೆ ದ್ವೇಷವವಿನ್ನು ಎಲ್ಲಿರುತ್ತದೆ ಅದಕ್ಕೆ **"ಸಮತ್ವಂ ಯೋಗ ಉಚ್ಯತೇ"** ಎಂದು ಹೇಳಲಾಗಿದೆ, ಆದ್ದರಿಂದ ಪತ್ರೀಜಿ ಹೇಳಿದ ಪ್ರತಿ ವಿಷಯವನ್ನು ವಿಶ್ಲೇಷಿಸಿಕೊಂಡರೆ, ಎಷ್ಟೋ ಜ್ಞಾನ ವೃದ್ಧಿಸುತ್ತದೆ ನಮ್ಮ ಜ್ಞಾನ ಬೆಳೆಯಬೇಕೆಂದರೆ ನಾವು ಜ್ಞಾನಿಗಳಾಗಬೇಕೆಂದರೆ ಪ್ರತಿ ವಿಷಯವನ್ನು ವಿಶ್ಲೇಷಿಸಿಕೊಳ್ಳುತ್ತಾ ಇರಬೇಕು.

**5.ವಿವೇಕ :** ಒಗರಾಗಿ, ಹುಳಿಯಾಗಿ ಇರುವ ಮಾವಿನಕಾಯಿ ನಿಧಾನವಾಗಿ ಸಿಹಿಯಾಗಿ ಬದಲಾಗುತ್ತದೆ, ಹಾಗೆ ವಿವೇಕಾಭ್ಯಾಸಗಳಿಂದ ರಾಗ ದ್ವೇಷಗಳು ಹೊರಟು ಹೋಗುತ್ತವೆ, ಆಶಾ ಪಾಶಗಳನ್ನು ಬಿಡುತ್ತೇವೆ ಅದರಿಂದ ಮನಸ್ಸು ಶುದ್ಧವಾಗುತ್ತದೆ, ಪ್ರಸನ್ನವಾಗುತ್ತದೆ ಶುದ್ಧವಾದ ಮನಸ್ಸಿನಿಂದಲೇ ಜಗತ್ತು ಮಿಥ್ಯ ಎನ್ನುವ ಭಾವನೆ, ಆತ್ಮ ಸತ್ಯವೆನ್ನುವ ಭಾವನೆ ಸ್ಥಿರವಾಗುತ್ತದೆ, ನಮ್ಮ ಮಾತುಗಳು ಯಾವಾಗಲೂ ಸತ್ಯವಾಗಿರಬೇಕು, ಇದ್ದದ್ದನ್ನು ಇದ್ದಂತೆ ಹೇಳಬೇಕು ಅತಿಶಯೋಕ್ತಿಗಳು ಇರಬಾರದು, ಇತರರ ಮೇಲೆ ದುರುದ್ದೇಶ ಇರಬಾರದು, ಇತರರನ್ನು ಅವಹೇಳನೆ ಅಪಹಾಸ್ಯ ಮಾಡಬಾರದು, ಸ್ವಚ್ಛವಾದ ಕನ್ನಡಿಯಿಂದ ಸೂರ್ಯಕಾಂತಿ ಪ್ರಸರಿಸುವಂತೆ ನಮ್ಮಲ್ಲಿ ಕೂಡಾ ಸತ್ಯವೆನ್ನುವ ಜ್ಯೋತಿಯನ್ನು ಪ್ರಸರಿಸುವಂತೆ ಮಾಡಬೇಕು. ಮಲ ಮೂತ್ರ ಭಾಂಡವಾದ ಶರೀರ ನಾನಲ್ಲ, ಸತ್ಯವಾದ, ನಿತ್ಯವಾದ 'ಆತ್ಮ' ನಾನು ಎನ್ನುವ ಸತ್ಯ ತಿಳಿದುಕೊಳ್ಳುವುದೇ ವಿವೇಕ. ಜೀವಾತ್ಮ ಶರೀರ ಧರಿಸಿ ಅನೇಕ ಕಷ್ಟಗಳನ್ನು ಅನುಭವಿಸಬೇಕಾಗಿ ಬರುತ್ತದೆ, ಆದ್ದರಿಂದ ಪ್ರತಿ ಜನ್ಮದಲ್ಲೂ ಜನನ ಮರಣಗಳಿಂದ ಅನೇಕ ಕಷ್ಟಗಳು ಇರುತ್ತವೆ ಎಂದು ಗ್ರಹಿಸಿ ಜನನ ಮರಣ ರೂಪವಾದ ಸಂಸಾರದಿಂದ ಹೊರಬರಲು ಪ್ರಯತ್ನಿಸಬೇಕು, ಅದಕ್ಕೆ 'ಆತ್ಮ ಜ್ಞಾನ' ಒಂದೇ ಶರಣು ಎಂದು 'ಧ್ಯಾನ' ಸಾಧನೆ ಮಾಡುತ್ತಾ, 'ಆತ್ಮ'ದಿಂದ 'ಜ್ಞಾನ', 'ಬ್ರಹ್ಮ ಜ್ಞಾನ' ಹೊಂದುವುದೇ ವಿವೇಕ, ಜ್ಞಾನ ಹೊಂದಲು ಅವಕಾಶವಿರುವ ಮಾನವ ಜನ್ಮ ಹೊಂದಿದ್ದರೂ, ಸಾಧನೆ ಮಾಡದೇ ಜನ್ಮವನ್ನು ವ್ಯರ್ಥ ಮಾಡಿಕೊಳ್ಳುವುದೇ ಅವಿವೇಕ.

6.ವೈರಾಗ್ಯ : ವೈರಾಗ್ಯ ಸಿದ್ಧಿಯಿಂದಲೇ ಜ್ಞಾನ ಸಿದ್ಧಿ ಹೊಂದಿ ಮೋಕ್ಷವನ್ನು ಹೊಂದುತ್ತೇವೆ. ಮೋಕ್ಷವೆಂದರೆ ಅಸತ್ಯ ರೂಪ ಭಾವಗಳು ಬಿಟ್ಟು ಮೋಹ

ತೊಲಗಿಸಿಕೊಂಡು ನಿತ್ಯ ಸತ್ಯವಾದ ಆತ್ಮವನ್ನು ತಿಳಿದುಕೊಳ್ಳುವುದು, ಅದಕ್ಕಾಗಿ ಆತ್ಮದ ಮೇಲೆ ಭಕ್ತಿ ಅಂದರೆ ಭಗವಂತನ ಮೇಲೆ ಭಕ್ತಿಯನ್ನು ವಿಶೇಷವಾಗಿ ಹೊಂದಿರಬೇಕು, ನಿಜವಾದ ವೈರಾಗ್ಯದೊಂದಿಗೆ ಇರುವುದೆಂದರೆ ಪ್ರಾಪಂಚಿಕ ವಿಷಯಗಳಲ್ಲಿ ಆಗಲಿ ಶರೀರ, ಇಂದ್ರಿಯ ವಿಷಯಗಳಲ್ಲಿ ಆಗಲಿ, ಭೋಗ ಭಾಗ್ಯಗಳು ಅನುಭವಿಸಬೇಕೆಂಬ ಕೋರಿಕೆಗಳಾಗಲಿ, ರಾಗಾಭಿಮಾನಗಳಾಗಲಿ ಇಲ್ಲದೇ ಸತ್ಯಾನ್ವೇಷಣೆಯಲ್ಲಿ ಇರುವುದು ಎಲ್ಲರೂ ತಿಳಿದುಕೊಳ್ಳಬೇಕಾದ ವಿಷಯವೇನೆಂದರೆ, ಕಾಲವೆನ್ನುವ ಅಗ್ನಿಯಲ್ಲಿ ತನ್ನ ಶರೀರವೆನ್ನುವ ಮನೆ ದಿನದಿನಕ್ಕೂ ಉರಿದು ಹೋಗುತ್ತಿರುವಂತೆ ಆಯುಷ್ಯ ಕಡಿಮೆಯಾಗುತ್ತಾ ಇರುತ್ತದೆ, ಆದ್ದರಿಂದ ಈ ಶರೀರ ಇದ್ದಾಗಲೇ, ಆರೋಗ್ಯದಿಂದ ಇರುವಾಗಲೇ ಮೋಕ್ಷ ಹೊಂದಬೇಕೆಂಬ ಕೋರಿಕೆ ಇರಬೇಕು, ಮಂದಬುದ್ಧಿ ಉಳ್ಳವರು "ಭಕ್ತಿ ವೈರಾಗ್ಯ" ಮಾರ್ಗಗಳು ಆಚರಿಸಲು ನನಗೆ ಇನ್ನೂ ಅವಕಾಶ ಬಂದಿಲ್ಲವೆಂದು, ನನಗೆ ಅನೇಕ ಕೆಲಸಗಳು, ಒತ್ತಡಗಳು, ಸಂಸಾರಗಳು ಇವೆಎಂದು, ಎಲ್ಲಾ ನಾನೊಬ್ಬನೇ ನಿಭಾಯಿಸಬೇಕೆಂದು, ಮಕ್ಕಳು ದೊಡ್ಡವರಾದರೆ ಆಗ ಕುಟುಂಬ ಭಾರ ಮಕ್ಕಳಿಗೆ ಒಪ್ಪಿಸಿ ಆಗ ಪ್ರಯತ್ನಿಸುತ್ತೇನೆ ಎಂದು ಹೇಳುತ್ತಾರೆ.

ಈ ಪದ್ಧತಿ ಹೇಗಿರುತ್ತದೆಯೆಂದರೆ, ಮನೆ ಉರಿಯುತ್ತಿದ್ದರೆ ಬಾವಿ ತೋಡಿ ಆ ನೀರಿನಿಂದ ಆ ಬೆಂಕಿಯನ್ನು ನಂದಿಸುತ್ತೇವೆ ಎನ್ನುವಂತೆ ಇರುತ್ತದೆ, ಹಾಗಾಗದೇ ವಿವೇಕವಂತರು ಹತ್ತಿರದಲ್ಲಿರುವ ನೀರಿನಿಂದ ಬೆಂಕಿ ನಂದಿಸೋಣ ಎಂದುಕೊಳ್ಳುತ್ತಾರೆ.

ಆದ್ದರಿಂದ ಮಾನವನು ಬಂಧ ವಿಮುಕ್ತಿ ಬಯಸಿದರೆ, ಮೋಕ್ಷಕ್ಕೆ ಬೇಕಾದ ಭಕ್ತಿ, ವೈರಾಗ್ಯಗಳು ಅನುಸರಿಸಲೇಬೇಕು ಶರೀರದ ಬಗ್ಗೆ ವೈರಾಗ್ಯ ಹೊಂದಿ ಆತ್ಮಾಸಕ್ತಿ ಇರಬೇಕು, 'ಆತ್ಮ ಜ್ಞಾನ'ದಿಂದಲೇ ಶರೀರದ ಮೇಲೆ ಮೋಹ ಹೋಗಿ ವೈರಾಗ್ಯ ಬರುತ್ತದೆ.

ಪ್ರಾಪಂಚಿಕ ಜೀವನದಲ್ಲಿ ಮೂರು ವಿಧವಾದ ವೈರಾಗ್ಯಗಳು ಇರುತ್ತವೆ.

**1.ಪುರಾಣ ವೈರಾಗ್ಯ, 2.ಪ್ರಸೂತಿ ವೈರಾಗ್ಯ, 3.ಸ್ಮಶಾನ ವೈರಾಗ್ಯ.**

**1. ಪುರಾಣ ವೈರಾಗ್ಯ :** ಯಾರಾದರೂ ಪಂಡಿತರಾಗಲಿ, ಗುರುಗಳಾಗಲಿ ಪುರಾಣಗಳಲ್ಲಿನ ಶಾಸ್ತ್ರಗಳ ಒಳಗೆ ಇರುವ ಒಳ್ಳೆಯ ವಿಷಯಗಳು ಹೇಳಿದಾಗ ಆ ವಿಷಯ ಕೇಳುತ್ತಾ ಇರುವವರೆಗೂ ತಾವು ಕೂಡ ಹಾಗೆ ಆಚರಣೆ ಮಾಡಬೇಕು, ಅಂತಹ ಅನುಭೂತಿ ಹೊಂದಬೇಕು ಎನ್ನುವ ಬಯಕೆಯೊಂದಿಗೆ ಇರುತ್ತಾರೆ. ಆದರೆ ಆ ಪುರಾಣ ವಿಷಯಗಳು ಕೇಳಿದ್ದು ಆದ ನಂತರ ಮತ್ತೆ ಪ್ರಾಪಂಚಿಕ, ಸಾಂಸಾರಿಕ ವ್ಯವಹಾರಗಳಲ್ಲಿ

ಮುಳುಗಿ ಆ ಮಾತನ್ನೇ ಮರೆತುಹೋಗುತ್ತಾರೆ, ಅಷ್ಟಾಗಿ ಹಚ್ಚಿಕೊಳ್ಳುವುದಿಲ್ಲ, ಇದನ್ನೇ ಪುರಾಣ ವೈರಾಗ್ಯ ಎನ್ನುತ್ತಾರೆ.

**2.ಪ್ರಸೂತಿ ವೈರಾಗ್ಯ :** ಪ್ರಸವ ಸಮಯದಲ್ಲಿ ಸ್ತ್ರೀಯರು ಆ ವೇದನೆ ತಡೆಯಲಾರದೆ "ಪುರುಷ ಸಾಂಗತ್ಯದಿಂದಲೇ ನನಗೆ ಈ ಕಷ್ಟಕರವಾದ ಧುಸ್ಥಿತಿ ಏರ್ಪಟ್ಟಿದೆ, ಇಲ್ಲದಿದ್ದರೆ ನನಗೆ ನೋವು ಇರುತ್ತಿರಲಿಲ್ಲ!! ಹೆಣ್ಣಾಗಿ ಹುಟ್ಟಿದ್ದರಿಂದಲೇ ಇಂತಹ ಕಷ್ಟ ಎಂದುಕೊಂಡು, ಮತ್ತೆ ಪುರುಷ ಸಾಂಗತ್ಯ ಮಾಡಬಾರದೆಂದು ನಿರ್ಣಯಿಸಿಕೊಳ್ಳುತ್ತಾರೆ, ಆದರೆ ಪ್ರಸವವಾದ ಎರಡು ಮೂರು ತಿಂಗಳಿಗೇ ಪುರುಷ ಸಾಂಗತ್ಯಕ್ಕಾಗಿ ಎದುರು ನೋಡುತ್ತಾರೆ, ಪ್ರಸವ ಸಮಯದಲ್ಲಿರುವ ವೈರಾಗ್ಯ ನಂತರ ಇರುವುದಿಲ್ಲ ಇದನ್ನೇ ಪ್ರಸೂತಿ ವೈರಾಗ್ಯ ಎನ್ನುತ್ತಾರೆ.

**3.ಸ್ಮಶಾನ ವೈರಾಗ್ಯ :** ಯಾರಾದರೂ ಸತ್ತು ಹೋದಾಗ ಆತನ ಬಂಧು ಮಿತ್ರರು ಎಲ್ಲರೂ ಸೇರಿ ಸತ್ತು ಹೋದವರ ಕುರಿತು ಚಿಂತಿಸುತ್ತಾರೆ, ನಂತರ ಸ್ಮಶಾನದಲ್ಲಿ ಶವವನ್ನು ಸುಡುತ್ತಿರುವಷ್ಟು ಸಮಯ ಅಲ್ಲೇ ಇದ್ದು ಯಾವುದೋ ಒಂದು ದಿನ ನಾವು ಕೂಡ ಹೋಗಬೇಕಾದ್ದೆ ಅಲ್ಲವೇ? ಯಾವುದೂ ಶಾಶ್ವತವಲ್ಲಾ? ನಮ್ಮ ಜೊತೆ ಯಾವುದೂ ಬರುವುದಿಲ್ಲ ಅಲ್ಲವೇ? ಎನ್ನುತ್ತಾ ಎಷ್ಟೋ ವೈರಾಗ್ಯ ದೊಂದಿಗೆ ಸ್ಮಶಾನದಲ್ಲಿ ಕೆಲಸ ಪೂರ್ಣಗೊಳ್ಳುವವರೆಗೂ ಅಲ್ಲಿಯವರೆಲ್ಲಾ ಮಾತನಾಡುತ್ತಾರೆ, ಆ ಕಾರ್ಯ ಪೂರ್ಣವಾಗಿ ಮನೆಗೆ ಹೋದಾಕ್ಷಣ ವೈರಾಗ್ಯ ಹೋಗಿ ಮತ್ತೆ ಪ್ರಾಪಂಚಿಕ ಬಯಕೆಗಳಲ್ಲಿ ವ್ಯವಹಾರಗಳಲ್ಲಿ ಮುಳುಗಿ ಹೋಗುತ್ತಾರೆ, ಇದನ್ನೇ "ಸ್ಮಶಾನ ವೈರಾಗ್ಯ" ಎನ್ನುತ್ತಾರೆ.

ಇಚಿತಹ ವೈರಾಗ್ಯಗಳಿಂದ ಜ್ಞಾನ ಉಂಟಾಗದು, ಜ್ಞಾನವೆಂದರೆ ಸರ್ವಕಾಲ, ಸರ್ವವ್ಯವಸ್ಥೆಗಳಲ್ಲಿ ಸತ್ಯವಾಗಿರುವ 'ಪರಮಾತ್ಮ'ನನ್ನು ತಿಳಿದುಕೊಳ್ಳುವುದು ಹಾಗೆ ತಿಳಿದುಕೊಳ್ಳಲಾರದೆ ಹೋಗುವುದೇ ಅಜ್ಞಾನ.

**7.ವಿನಯ :** ಆತ್ಮಜ್ಞಾನದಿಂದ ವ್ಯಕ್ತಿ ಅನಂತ ಶಕ್ತಿವಂತನಾಗುತ್ತಾನೆ, ಆಧ್ಯಾತ್ಮಿಕ ಮಾರ್ಗದಲ್ಲಿ ಅಹಂಕಾರವು ದೊಡ್ಡ ಆತಂಕವಾಗಿ ಅಡ್ಡಿಯಾಗಿ ನಿಲ್ಲುತ್ತದೆ, ಅಹಂಕಾರಿಗಳಾದವರು ಆತ್ಮಜ್ಞಾನವನ್ನು ಜೀರ್ಣಿಸಿಕೊಳ್ಳಲಾರರು, ಆತ್ಮಜ್ಞಾನ ಹೊಂದಬೇಕೆಂದರೆ 'ಆತ್ಮಜ್ಞಾನ', 'ಬ್ರಹ್ಮಜ್ಞಾನ' ಹೊಂದಿದ ಗುರುವಿನ ಬಳಿ ವಿನಯವಾಗಿದ್ದು ವಿದ್ಯೆಯನ್ನು ಅಭ್ಯಸಿಸಬೇಕು, ಆದರೆ ಅಹಂಕಾರ ಇರಬಾರದು ಅಹಂಕಾರವೇ 'ಆತ್ಮಜ್ಞಾನ'ಕ್ಕೆ ಅಡ್ಡಿಯಾಗುತ್ತದೆ ಆತ್ಮಜ್ಞಾನ ಹೊಂದಲು ಕಷ್ಟವಾಗುತ್ತದೆ, ಜಾರುವ ಮೆಟ್ಟಿಲಿನ ಮೇಲೆ ಪ್ರಯಾಣ ಮಾಡಿದಹಾಗೆ ಕೆಸರಿನಲ್ಲಿ ನಾವು ನೆಲವನ್ನು ನೋಡಲಾರೆವು, ನಿರ್ಮಲ ಜಲದಲ್ಲೇ ನೆಲವನ್ನು ನೋಡಲು ಸಾಧ್ಯ, ಅಹಂಕಾರವಿರುವ ಚಿತ್ತದಲ್ಲಿ ಶಾಂತಿ ಇರುವುದಿಲ್ಲ ಅದು ಅಡಗಿದಾಗಲೇ ಆತ್ಮಾನಂದ ಉಂಟಾಗುತ್ತದೆ.

# ಸಾಧಕನು ಅಭಿವೃದ್ಧಿ ಹೊಂದಲು ನಿತ್ಯವೂ ಆಚರಿಸಬೇಕಾದದ್ದು

1) ಶ್ರವಣ 2) ಮನನ 3) ನಿಧಿ ಧ್ಯಾಸನ 4)ಸಾಕ್ಷಾತ್ಕಾರ

**1) ಶ್ರವಣ:** ಸಾಧನೆಯಲ್ಲಿ ಅಭಿವೃದ್ಧಿಗೊಳ್ಳಬೇಕೆಂದರೆ ಎಷ್ಟೋ ವಿಷಯಗಳು ತಿಳಿದುಕೊಳ್ಳಬೇಕು, ಪ್ರತಿಯೊಬ್ಬರಿಂದಲೂ ತಿಳಿದುಕೊಳ್ಳಬೇಕು, ಮೊದಲು ಬೋಧಿಸುವವರ ಮೇಲೆ ನಂಬಿಕೆ ಇರಿಸಬೇಕು, ಎಷ್ಟು ನಂಬಿಕೆ ಇದ್ದರೆ ಅವರು ಹೇಳುವ ವಿಷಯಗಳು ಮನಸ್ಸಿಗೆ ಅಷ್ಟು ನಾಟುತ್ತವೆ, ಆಧ್ಯಾತ್ಮಿಕ ವಿಷಯಗಳು ಅರ್ಥ ಮಾಡಿಕೊಳ್ಳಬೇಕೆಂದರೆ, ಹೃದಯ ಶುದ್ಧಿಯ ಅಗತ್ಯವಿದೆ. ಮನಸ್ಸು ಅನೇಕ ಪ್ರಾಪಂಚಿಕ ವಿಷಯಗಳಮೇಲೆ ಇರುವುದರಿಂದ ಉಪನ್ಯಾಸಕರು ಹೇಳುವುದು ಮನಸ್ಸಿಗೆ ನಾಟದಿರಬಹುದು, ಆದ್ದರಿಂದ ಮನಸ್ಸನ್ನು ಪ್ರಾಪಂಚಿಕತೆಯಿಂದ ಆತ್ಮದಮೇಲೆ ನಿಲ್ಲಿಸಲು ಪ್ರಯತ್ನಿಸಬೇಕು, ಅದಕ್ಕೆ 'ಧ್ಯಾನ' ಸಾಧನೆ ಚೆನ್ನಾಗಿ ಉಪಕರಿಸುತ್ತದೆ, ಪ್ರಾಪಂಚಿಕ ವಿಷಯಗಳು ಬಲವಾಗಿದ್ದರೆ ಆಧ್ಯಾತ್ಮಿಕ ವಿಷಯಗಳು ಸುಲಭವಾಗಿ ಅರ್ಥವಾಗುವುದಿಲ್ಲ.

ಸಾಧನೆಗೆ "ಶ್ರವಣ" ತುಂಬಾ ಅಗತ್ಯ ಗುರುವು ಹೇಳಿದ ವಿಷಯಗಳನ್ನು ಸರಿಯಾಗಿ ಅರ್ಥಮಾಡಿ ಕೊಳ್ಳಬೇಕು, ದೊಡ್ಡ ದೊಡ್ಡವರೆಲ್ಲರೂ ಶ್ರವಣದಿಂದಲೇ ಅಷ್ಟು ಸಾಧನೆ ಮಾಡಿದ್ದಾರೆ **ಉದಾ:–** ವರುಣ ಪುತ್ರನಾದ ಭೃಗು, ಉದ್ದಾಲಕ ಪುತ್ರನಾದ ಶ್ವೇತಕೇತು ತಂದೆಯ ಬಳಿ ಕೇಳಿ ತಿಳಿದುಕೊಂಡರು, ಶ್ರೀರಾಮ ದುಃಖದಲ್ಲಿ ಇರುವಾಗ ತೀವ್ರ ವೈರಾಗ್ಯದಲ್ಲಿ ಇರುವಾಗ ವಸಿಷ್ಠರ ಬೋಧನೆಗಳಿಂದ ಕೇಳಿ ತಿಳಿದುಕೊಂಡನು ಆಗಲೇ ಅವರು ಜ್ಞಾನ ಹೊಂದಿದರು, ಹಾಗೆ ಉತ್ತಮ ಶ್ರವಣ ಮಾಡಿ ಆತ್ಮಜ್ಞಾನ ಹೊಂದಬೇಕು, ಶುಕ ಮಹರ್ಷಿಯ ಬಳಿ ಪರೀಕ್ಷಿತನು ಮಾಡಿದ್ದು ಉತ್ತಮ ಶ್ರವಣವೇ ಈ ಶ್ರವಣ ಮೂರು ವಿಧಗಳು (ಎ.) ಅಧಮ, (ಬಿ.) ಮಧ್ಯಮ, (ಸಿ.) ಉತ್ತಮ.

**ಎ. ಅಧಮ ಶ್ರವಣ :** ಕೇಳಿದಾಗ "ತುಂಬಾ ಚೆನ್ನಾಗಿದೆ, ನಾವು ಕೂಡ ಆಚರಿಸಬೇಕು" ಎಂದುಕೊಳ್ಳುತ್ತಾರೆ, ಆದರೆ ಕೆಲವು ದಿನಗಳಲ್ಲಿ ಕೇಳಿದ್ದು ಮರೆತು ಮೊದಲಿನಂತೆ ಪ್ರವರ್ತಿಸುತ್ತಾರೆ ಪ್ರವರ್ತನೆಯನ್ನು ಬದಲಾಯಿಸಿಕೊಳ್ಳರು, 'ಧ್ಯಾನ' ಸಾಧನೆಯಲ್ಲಿ ಇರುವವರು ಅಧಮರಾದರೆ, ಎಷ್ಟು ದಿನಗಳು ಸಾಧನೆ ಮಾಡಿದರೂ ಏನೂ ಫಲಿತವಿಲ್ಲ ಎಂದು ಕೈಬಿಡುತ್ತಾರೆ, ಅಂದರೆ ಅವರು ಎಷ್ಟು ಕೇಳಿದರೂ ಬದಲಾವಣೆ ಬರಲಿಲ್ಲವೆಂದರೆ ಮನಸ್ಸು ಶುದ್ಧಿಯಾಗಿಲ್ಲ ಎಂದು ಅರ್ಥ.

**ಬಿ. ಮಧ್ಯಮ ಶ್ರವಣ :** ಇವರು ಕೇಳಿದ ವಿಷಯಗಳನ್ನು ಶ್ರದ್ಧೆಯಿಂದ ಕೇಳಿ ಅದನ್ನು ಆಚರಿಸಿ, ಆಧ್ಯಾತ್ಮಿಕವಾಗಿ ಅಭಿವೃದ್ಧಿ ಯಾಗಬೇಕೆಂದು ಬಯಸುತ್ತಾರೆ ಪ್ರತಿಯೊಬ್ಬರಿಂದ ಒಳ್ಳೆಯ ವಿಷಯಗಳು ತಿಳಿದುಕೊಳ್ಳಬೇಕೆಂದು ಎಲ್ಲರೂ ಹೇಳುವುದು ಶ್ರದ್ಧೆಯಿಂದ ಕೇಳುತ್ತಾರೆ, ಒಳ್ಳೆಯದು ಎಂದುಕೊಂಡಿದ್ದನ್ನು ಪ್ರತಿಯೊಂದು ಆಚರಿಸುತ್ತಾರೆ, ನಾವು ಒಳ್ಳೆಯ ದಾರಿಯಲ್ಲಿ ಇರಬೇಕೆಂದುಕೊಳ್ಳುತ್ತಾರೆ.

**ಸಿ. ಉತ್ತಮ ಶ್ರವಣ :** ಆಧ್ಯಾತ್ಮಿಕ ವಿಷಯಗಳು ಶ್ರದ್ಧೆಯಿಂದ ಕೇಳಿ, ಅವರು ಆಚರಿಸುತ್ತಾ ಹತ್ತು ಮಂದಿಯನ್ನು ಆಚರಿಸುವಂತೆ ಮಾಡುತ್ತಾರೆ, ಪಿರಮಿಡ್ ಮಾಸ್ಟರ್ಸ್ ಎಲ್ಲರೂ ಇಂತಹವರೇ ಇವರು 'ಧ್ಯಾನ'ಕ್ಕೆ ಬಂದ ಮೇಲೆ ಮಾಂಸ ತಿನ್ನುವುದು ಮಹಾಪಾಪವೆಂದು, ಮಾನವರ ಆಹಾರ ಶಾಕಾಹಾರವೆಂದು, ಪತ್ರೀಜಿ ಅವರಿಂದ ತಿಳಿದುಕೊಂಡು ಶಾಕಾಹಾರಿಗಳಾಗಿ ಬದಲಾಗುತ್ತಾರೆ, ಅಷ್ಟೇ ಅಲ್ಲ ಪ್ರತಿ ಜೀವಿಗೆ ಸಂಪೂರ್ಣವಾಗಿ ಜೀವಿಸುವ ಹಕ್ಕು ಇದೆ ಎಂದು ಸಹಜೀವಿಗಳು ನಮ್ಮಂತಹವೇ ಎಂದು ಪತ್ರೀಜಿಯಿಂದ ತಿಳಿದುಕೊಂಡು ಎಲ್ಲರನ್ನೂ ಅಹಿಂಸಾಪರರಾಗಿ, ಶಾಖಾಹಾರಿಗಳಾಗಿ, ಧ್ಯಾನಿಗಳಾಗಿ ಬದಲಾಯಿಸುತ್ತಿದ್ದಾರೆ.

ಇವರು ಕ್ರಮವಾಗಿ ಪ್ರತಿದಿನ 'ಧ್ಯಾನ' ಮಾಡುತ್ತಾರೆ, ಎಲ್ಲರಿಗೂ 'ಧ್ಯಾನ' ಹೇಳಿಕೊಡುತ್ತಾರೆ, ಎಲ್ಲರಿಂದಲೂ 'ಧ್ಯಾನ' ಮಾಡಿಸುತ್ತಾರೆ ಇದನ್ನೇ ಉತ್ತಮ ಶ್ರವಣ ಎನ್ನುತ್ತಾರೆ. ಶ್ರವಣ ಮಾಡಿ 'ಧ್ಯಾನ' ಮಾಡುವುದರಿಂದ ಆತ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತೇವೆ, ಶಾಕಾಹಾರಿಗಳಾಗಿ ಬದಲಾಗುವುದರಿಂದ ಪಾಪಕರ್ಮಗಳು ಕಡಿಮೆ ಮಾಡಿಕೊಳ್ಳುತ್ತೇವೆ.

**2) ಮನನ :** ಮನನವೆಂದರೆ ಅಡುಗೆ ಮನೆಯಲ್ಲಿ ಅಡುಗೆ ಮಾಡುವಂತಹದು, ಅಡುಗೆ ಮಾಡಿದರೆ ಮಾತ್ರ ಸರಿ ಹೋಗುವುದಿಲ್ಲ, ಹಸಿವು ತೀರುವುದಿಲ್ಲ ಅಡುಗೆ ಮಾಡಿದ ಪದಾರ್ಥಗಳು ತಿಂದರೇನೆ ಹಸಿವೆ ನೀಗುತ್ತದೆ, ಭುಜಿಸುವುದೆಂದರೆ ಮನನ, ನಾವು ಮಾಡುವ ಭೋಜನದಂತಹುದು ಮನನ ಮಾಡುವುದು ಹೇಗೆ ಇರಬೇಕೋ ತಿಳಿದುಕೊಳ್ಳಬೇಕು, ಮಾನವನು ಪ್ರಕೃತಿಯಲ್ಲಿ ಪ್ರತಿಯೊಂದನ್ನೂ ನೋಡಿ ಕಲಿತುಕೊಳ್ಳಬೇಕು, ಮನನ ಹೇಗೆ ಮಾಡಬೇಕೋ ಹಸುವನ್ನು ನೋಡಿ ಕಲಿಯಬಹುದು, ಹಸು ತಾನು ತಿಂದ ಹುಲ್ಲನ್ನು ಮೆಲುಕು ಹಾಕಿ ಚೆನ್ನಾಗಿ ತಿನ್ನುತ್ತದೆ. ನಾವು ಕೂಡ ಕೇಳಿದ್ದನ್ನು ಬರೆದುಕೊಂಡು ಮತ್ತೆ ಮತ್ತೆ ಓದುತ್ತಾ ಇರಬೇಕು ಅಥವಾ

ಬಿಡುವಿದ್ದಾಗ ಮತ್ತೆ ನೆನಪು ಮಾಡಿಕೊಂಡು ಮೆಲುಕು ಹಾಕಿಕೊಳ್ಳಬೇಕು ಇದನ್ನೇ ಮನನ ಎನ್ನುತ್ತಾರೆ.

ಆಗ ಕೇಳಿದ ವಿಷಯಗಳು ಮರೆಯದಂತೆ ನೆನಪಿನಲ್ಲಿ ಇರುತ್ತವೆ, ಹಾಗೆ ಕೇಳಿದ್ದನ್ನು ಹಲವು ಬಾರಿ ಮನನ ಮಾಡಿಕೊಳ್ಳಬೇಕು ಆಗಲೇ ಆಚರಿಸಬೇಕು ಎಂಬ ಆಸಕ್ತಿ ಏರ್ಪಡುತ್ತದೆ.

ನಾನು ಎಂದರೆ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರವಲ್ಲ ಜನನ ಮರಣಗಳಿಲ್ಲದ 'ಆತ್ಮ'ವೇ ನಾನು, ಎನ್ನುವ ವಿಷಯ ನಿರಂತರ ಮನನ ಮಾಡಿಕೊಳ್ಳುತ್ತಾ ಇರಬೇಕು.

ವಸಿಷ್ಠರು ಪುರುಷ ಪ್ರಯತ್ನದಿಂದಲೇ ಆತ್ಮ ಜ್ಞಾನ ಉಂಟಾಗುತ್ತದೆ, ಆ ಒಂದರಿಂದಲೇ ಜೀವನು ಸಮಸ್ತ ಬಾಧೆಗಳಿಂದ ದೂರವಾಗಿ ಮೋಕ್ಷವನ್ನು ಹೊಂದುತ್ತಾನೆ ಎಂದು ಹೇಳಿದ್ದಾರೆ.

ಪುರುಷ ಪ್ರಯತ್ನವೆಂದರೆ ಏನೆಂದರೆ ಸಜ್ಜನರು ಹೇಳಿದ್ದನ್ನು ಶ್ರದ್ಧೆಯಿಂದ ಏಕಾಗ್ರ ಚಿತ್ತದೊಂದಿಗೆ ಕೇಳಬೇಕು, ಹಾಗೆ ಅನಿಸಿದ್ದನ್ನು ನಿರಂತರ ಮನನ ಮಾಡಬೇಕು ಮನನ ಮಾಡಿದ್ದನ್ನು ಅರ್ಥ ಮಾಡಿಕೊಂಡು, ಆಚರಿಸುವ ಪ್ರಯತ್ನ ಮಾಡಬೇಕು ಅದನ್ನೇ "ಪುರುಷಪ್ರಯತ್ನ" ಎನ್ನುತ್ತಾರೆ.

**3) ನಿಧಿ ಧ್ಯಾಸನ :** ಶ್ರವಣ ಮನನಗಳು ಮಾಡಿದವರಿಗೆ ಆಚರಣೆ ಕರಗತವಾಗುತ್ತದೆ, ಶ್ರವಣ ಎನ್ನುವ ಅಡುಗೆ ದೇಹಕ್ಕಾದರೆ, ಮನನ ಎನ್ನುವುದು ಊಟದ ಹಾಗೆ, ತಿಂದ ಆಹಾರ ಜೀರ್ಣ ಮಾಡಿಕೊಳ್ಳುವುದೇ ಆಚರಣೆ, ಹಾಗೆ ಶ್ರದ್ಧೆಯಿಂದ ಶ್ರವಣ, ಮನನ ಮಾಡಿದವರು ಆಧ್ಯಾತ್ಮಿಕ ವಿಷಯಗಳಲ್ಲಿ ಯಾವಾಗಲೂ ಗಮನವಿಡುತ್ತಾರೆ, ಅದು 'ನಿಧಿ'ಯಂತೆ ಅವರಲ್ಲಿ ಇರುತ್ತದೆ, ಯಾವಾಗಲೂ ಎಲ್ಲಕ್ಕಿಂತಲೂ ಆಧ್ಯಾತ್ಮಿಕ ವಿಷಯಗಳು ಕೇಳುವುದು, ಅದನ್ನು ವಿಚಾರ ಮಾಡುವುದು, ವಿಶ್ಲೇಷಣೆಯಿಂದ ನೆನೆಪಿಸಿಕೊಳ್ಳುವುದು, ಅದನ್ನೇ ಆಚರಿಸುವುದು 'ಧ್ಯಾನ'ಮಾಡುವುದು ಇಂತಹವುಗಳಿಂದ ಮನಸ್ಸಿನಲ್ಲಿ ಜ್ಞಾನವೆನ್ನುವ 'ನಿಧಿ' ಹೆಚ್ಚುತ್ತಾ ಇರುತ್ತದೆ. ಆಚರಣೆ ಎಂದರೆ ಸಮಾಧಿ ಸ್ಥಿತಿಗೆ ಪ್ರಾರಂಭದ ಹಂತ, ಇದು ಪರಿಪಕ್ವ ಹಂತದಲ್ಲಿ "ಸಮಾಧಿ" ಎನ್ನಲಾಗುತ್ತದೆ.

**4) ಸಾಕ್ಷಾತ್ಕಾರ:** ಈ ಮೂರನ್ನೂ ಅನುಭವಕ್ಕೆ ತಂದುಕೊಂಡಾಗ ಮಾತ್ರವೇ ಆತ್ಮ ಜ್ಞಾನ ಬರುತ್ತದೆ, ಅಂದರೆ ಅವರಲ್ಲಿ ಸಾಕ್ಷಾತ್ಕರಿಸುತ್ತದೆ, "ಬೃಹದಾರಕ ಉಪನಿಷತ್" ನಲ್ಲಿ ಮೈತ್ರೇಯಿಗೆ ಯಾಜ್ಞವಲ್ಕ್ಯನು ಈ ವಿಷಯವೇ ಹೇಳಿದ್ದಾನೆ, ಆತ್ಮವನ್ನು ಸಾಕ್ಷಾತ್ಕರಿಸಿ ಕೊಳ್ಳಬೇಕೆಂದರೆ, ಶ್ರವಣ, ಮನನ, ಆಚರಣೆ ಕಡ್ಡಾಯವಾಗಿ ಮಾಡಬೇಕೆಂದು ಹೇಳಿದ್ದಾರೆ.

ಇವುಗಳಿಂದ ಹಿಂದಿನ ಜನ್ಮಗಳ ಕೆಟ್ಟ ವಾಸನೆಗಳು ಸಂಸ್ಕಾರಗಳು ಹೋಗುತ್ತವೆ, ಜ್ಞಾನ ನಿಷ್ಠೆ ಏರ್ಪಡುತ್ತದೆ, ಆಗಲೇ ಮನಸ್ಸು ನಿರ್ಮಲವಾಗುತ್ತದೆ, ಜೀವ ಭಾವನೆ ನಶಿಸುತ್ತದೆ, ಸ್ವಯಂ ಪ್ರಕಾಶವಾದ "ಆತ್ಮ" ಸ್ಥಿರವಾಗಿ ನಿಲ್ಲುತ್ತದೆ.

ಮೂಸೆಯಲ್ಲಿ ಹಾಕಿ ಕರಗಿಸಿದ ಚಿನ್ನ ಶುದ್ಧಿ ಹೊಂದಿದಂತೆ ಜ್ಞಾನಾಗ್ನಿ ಮನಸ್ಸನ್ನು ಶುದ್ಧಿ ಮಾಡುತ್ತದೆ, 'ಜ್ಞಾನ'ವಿಲ್ಲದಿದ್ದರೆ 'ಮೋಕ್ಷ' ಸಿದ್ಧಿಸುವುದಿಲ್ಲ ಆದ್ದರಿಂದ ಸಾಧಕನು ಶ್ರವಣ, ಮನನ, ಆಚರಣೆ ನಿರಂತರವಾಗಿ ಮಾಡಲೇಬೇಕು, ಆಗಲೇ ಆತ್ಮಜ್ಞಾನ ಬರುತ್ತದೆ ಆತ್ಮ ಸಾಕ್ಷಾತ್ಕಾರವಾಗುತ್ತದೆ.

# ಧ್ಯಾನಸಾಧನೆ ಮಾಡುವವರಿಗೆ ಬರುವ ಅಡ್ಡಿ ಆತಂಕಗಳು

ಆತ್ಮ ಜ್ಞಾನ ಹೊಂದಬೇಕೆಂದು ಆತ್ಮಾನುಭೂತಿಯನ್ನು ಹೊಂದಬೇಕೆಂದು 'ಧ್ಯಾನ' ಸಾಧನೆ ಮಾಡಿದವರಿಗೆ ಕೆಲವು ಆತಂಕಗಳು ಕೂಡ ಬರುತ್ತವೆ, ಫಲವನ್ನು ಕೇಳಿಕೊಂಡರೆ ಸಾಲದು, ಫಲವನ್ನು ನೀಡುವ ಗಿಡವನ್ನು ಬೆಳೆಸುವ ಪ್ರಯತ್ನ ಕೂಡ ಮಾಡಬೇಕು, ಬೀಜ ಮೊಳಕೆ ಒಡೆಯುವಾಗ ಕಳೆ ಗಿಡಗಳು ಕೂಡ ಬರುತ್ತವೆ, ಗಿಡವನ್ನು ಜಾಗರೂಕತೆಯಿಂದ ಬೆಳೆಸುವುದು ಎಷ್ಟು ಅಗತ್ಯವೋ! ಕಳೆಯನ್ನು ಕೀಳುವುದು ಅಷ್ಟೇ ಅತ್ಯಗತ್ಯ. ಕಳೆಗಿಡಗಳ ಮಧ್ಯೆ ಆ ಸಸಿಗಳು ಸರಿಯಾಗಿ ಬೆಳೆಯುವುದಿಲ್ಲ. ಹಾಗೆಯೇ ಆತ್ಮ 'ಧ್ಯಾನ'ಮಾಡುವವರಿಗೆ ಕಳೆ ಗಿಡಗಳಂತಹ ಆತಂಕಗಳು ಇರುತ್ತವೆ ಎಂದು ವೇದಾಂತ ಸಾರದ ಉಪನಿಷತ್ ಹೇಳುತ್ತದೆ.

ಆತಂಕಗಳು 1. ಲಯ 2. ವಿಕ್ಷೇಪ 3. ಕಷಾಯ 4. ರಸಸ್ವಾದ ಈ ನಾಲ್ಕು ಆತಂಕಗಳಿಂದ 'ಧ್ಯಾನ'ಆಗುವುದಿಲ್ಲ ಇವುಗಳ ಬಗ್ಗೆ ವಿವರವಾಗಿ ತಿಳಿದುಕೊಳ್ಳೋಣ.

**1.ಲಯ :** ನಾವು 'ಧ್ಯಾನ' ಮಾಡಲು ಕುಳಿತುಕೊಂಡಾಗ ಇಂದ್ರಿಯಗಳನ್ನು ಅಂತರ್ಮುಖ ಮಾಡುತ್ತೇವೆ, 'ಧ್ಯಾನ' ಮಾಡಲು ಅಂತರ್ಮುಖ ವಾಗುವ ಸಮಯದಲ್ಲಿ 'ಧ್ಯಾನ' ಮಾಡಲಾರದ ಮನಸ್ಸು ನಿದ್ರಾವಸ್ಥೆಗೆ ಜಾರುತ್ತದೆ, ಇದನ್ನೇ **"ಲಯಸ್ಥಿತಿ"** ಎನ್ನುತ್ತಾರೆ. ಸಾಧಕನು ಇದನ್ನು ದಾಟಿ ಹೋಗಬೇಕು.

ಈ ಸ್ಥಿತಿ ಏರ್ಪಡಲು ಕಾರಣ ಸಾಧಕನು ನಿದ್ರಿಸಬೇಕಾದ ಸಮಯದಲ್ಲಿ ನಿದ್ರಿಸದಿರುವುದು, ಮಿತಿಮೀರಿ ಆಹಾರ ತೆಗೆದುಕೊಳ್ಳುವುದು, ಅತಿಯಾಗಿ ಉಪವಾಸವಿರುವುದು ಕೂಡಾ ನಿದ್ರಾವಸ್ಥೆಗೆ ಗುರಿ ಮಾಡುತ್ತದೆ, ಶಾರೀರಿಕವಾಗಿ ಅಧಿಕ ಆಯಾಸವನ್ನುಂಟುಮಾಡುವ ಕೆಲಸಗಳು 'ಧ್ಯಾನ'ಕ್ಕೆ ಕುಳಿತುಕೊಳ್ಳುವ ಮುಂಚೆ ಮಾಡಬಾರದು ಇವುಗಳು ತಿಳಿದುಕೊಂಡು ಜಾಗರೂಕತೆ ವಹಿಸಿದರೆ, ಲಯ ಸ್ಥಿತಿಯನ್ನು ಹೊಂದದೆ 'ಧ್ಯಾನ' ಚೆನ್ನಾಗಿ ಆಗುತ್ತದೆ ಯೋಗಿ ವೇಮನ ಏನು ಹೇಳಿದ್ದಾರೆಂದರೆ,

"ನಿದ್ರೆ ಬಿಡಬಾರದು, ನಿದ್ರಿಸಿದರೆ ಬಾರದು

ನಿದ್ರೆಯಲ್ಲೇ ಯೋಗ ನಿದ್ರೆಯ ಅರಿತರೆ

ಬ್ರಹ್ಮವಿದ್ಯೆ ಬದ್ರವಾಗಿರುವುದು

ವಿಶ್ವದಾಭಿರಾಮ ಕೇಳುವೇಮ".

**2.ವಿಕ್ಷೇಪ :** 'ಧ್ಯಾನ'ದಲ್ಲಿ ಬರುವ ಎರಡನೆಯ ಅತಂಕ "ವಿಕ್ಷೇಪ" ಲಯ ಸ್ಥಿತಿ ದಾಟಿದ ಮೇಲೆ ನಮಗೆ ಎದುರಾಗುವ 'ವಿಕ್ಷೇಪ' ಅಂದರೆ ಮನಸ್ಸು ಪ್ರಾಪಂಚಿಕ ವಿಷಯಗಳ ಮೇಲೆ ಹೋಗುವುದು, ಇದನ್ನು ಗ್ರಹಿಸಿ ಹೊರಗೆ ತಿರುಗುವ ಮನಸ್ಸನ್ನು ಒಂದು ಕಡೆ ನಿಲ್ಲಿಸುವ ಪ್ರಯತ್ನ ಮಾಡಬೇಕು, ಮನಸ್ಸು ಬಹಿರ್ಮುಖವಾದಾಗ ಅದನ್ನು ಮತ್ತೆ ಅಂತರ್ಮುಖ ಗೊಳಿಸುವುದಕ್ಕೆ ಮಾರ್ಗವೇ 'ಶ್ವಾಸದ ಮೇಲೆ ಗಮನ' ಅದೇ ಸುಲಭ ಮಾರ್ಗ ಅಷ್ಟೇ ಅಲ್ಲದೇ ಪ್ರಾಪಂಚಿಕ ವಸ್ತುಗಳ ಅಶಾಶ್ವತ ತತ್ವವನ್ನು ತಿಳಿದುಕೊಳ್ಳಬೇಕು.

ನೆನಪಿನಲ್ಲಿ ಇಟ್ಟುಕೊಂಡು ಅಂತಹ ವಿಷಯಗಳ ಮೇಲೆ ಇರುವ ಭ್ರಾಂತಿ ಯಿಂದಲೇ ದುಃಖವನ್ನು ಹೊಂದುತ್ತಿದ್ದೇವೆ ಎಂದು ಮನಸ್ಸಿನಲ್ಲಿ ಚಿಂತಿಸುತ್ತಾ ಇದ್ದರೆ ವಿಕ್ಷೇಪಣಾ ದೋಷ ತೊಲಗುತ್ತದೆ.

ನಾವು ಇನ್ನೂ ಒಂದು ವಿಷಯದಲ್ಲಿ ಜಾಗರೂಕತೆಯಿಂದ ಇರಬೇಕು, ಸಾಧಾರಣವಾಗಿ ನಾವು ದೈನಂದಿನ ಜೀವನದಲ್ಲಿ ಕೆಲಸಗಳನ್ನು ಮಾಡುತ್ತಿರುವಾಗ ಮನಸ್ಸು ಅತಿಯಾಗಿ ಆಲೋಚಿಸುತ್ತದೆ, ಈ ವಿಧವಾಗಿ ಅಭ್ಯಾಸವಾದ ಮನಸ್ಸು 'ಧ್ಯಾನ'ಸಮಯದಲ್ಲಿ ವಿಕ್ಷೇಪಣೆ ಉಂಟುಮಾಡುತ್ತದೆ, ಆದ್ದರಿಂದ ಸಾಧಕನು ನಿರಂತರ ಮನಸ್ಸಿನಲ್ಲಿ ಉಂಟಾಗುವ ಸಂಕಲ್ಪಗಳನ್ನು ವಿಕಲ್ಪಗಳನ್ನು ಗಮನಿಸುತ್ತಾ ಸರಿಯಾದ ಮಾರ್ಗದಲ್ಲಿ ನಡೆಯಬೇಕು ಆಗಲೇ ವಿಕ್ಷೇಪಣೆ ನಿವಾರಣೆಯಾಗುತ್ತದೆ.

**3.ಕಷಾಯ :** 'ಧ್ಯಾನ' ಸಮಯದಲ್ಲಿ ವ್ಯಕ್ತಿಯಲ್ಲಿ ಇರುವ ರಾಗ ದ್ವೇಷಗಳು ವಿಜೃಂಭಿಸಿ 'ಧ್ಯಾನ'ವನ್ನು ಭಂಗ ಪಡಿಸುತ್ತವೆ, ಇದನ್ನೇ 'ಕಷಾಯ' ಎನ್ನುತ್ತಾರೆ, ವಿಕ್ಷೇಪಕ್ಕೆ, ಕಷಾಯಕ್ಕೆ ವ್ಯತ್ಯಾಸವೇನೆಂದರೆ, ಬಾಹ್ಯ ವಿಷಯಗಳ ಮೇಲೆ ಮನಸ್ಸು ಹೊರಳುವುದಕ್ಕೆ ವಿಕ್ಷೇಪ ಎಂದರೆ, ಬಾಹ್ಯ ವಿಷಯಗಳು ಬೇರೆಯಾದರೂ ಪೂರ್ವ ವಾಸನೆಗಳಿಂದ ಕಲ್ಲೋಲ ಉಂಟಾಗಿ ರಾಗ ದ್ವೇಷಗಳು ತಯಾರಾಗುವುದನ್ನು 'ಕಷಾಯ' ಎನ್ನುತ್ತಾರೆ. ಇದರಿಂದ

ಕಲುಷಿತವಾದ ಮನಸ್ಸು 'ಧ್ಯಾನ'ಕ್ಕೆ ಅಡ್ಡಿ ಮಾಡುತ್ತದೆ. ಪ್ರತಿ ವಿಷಯವನ್ನು ಅವಗಾಹನೆ ಮಾಡಿಕೊಂಡರೆ ರಾಗ ದ್ವೇಷಗಳು ಕಡಿಮೆಯಾಗಿ ಕಷಾಯ ದೋಷವೂ ತೊಲಗುತ್ತದೆ.

**4.ರಸಾಸ್ವಾದನೆ:** 'ಧ್ಯಾನ'ಕ್ಕೆ ಆಗುವ ನಾಲ್ಕನೆಯ ಅಡ್ಡಿ ರಸಾಸ್ವಾದನೆ ಈ ಅಡ್ಡಿಯು 'ಧ್ಯಾನ'ದಲ್ಲಿ ಪರಾಕಾಷ್ಠೆಗೆ ಸೇರಿದಾಗ ಉಂಟಾಗುತ್ತದೆ, ಇದನ್ನೇ "ಸುಖಸ್ವಾದನೆ" ಎಂದು ಹೇಳುತ್ತಾರೆ, ರಸಾಸ್ವಾದನೆ ಎಂದರೆ ದುಃಖ ರಹಿತ ಸ್ಥಿತಿ, ದುಃಖ ರಾಹಿತ್ಯ ನಡೆದ ಮಾತ್ರಕ್ಕೆ ನಿರ್ವಿಕಲ್ಪಸ್ಥಿತಿ ಲಭಿಸಿದಂತೆ ಅಲ್ಲ. ಗಾಢ ನಿದ್ರೆಯ ಸ್ಥಿತಿಯಲ್ಲೂ ನಾವು ಅದೇ ಸ್ಥಿತಿಯಲ್ಲಿ ಇರುತ್ತೇವೆ. ಸಮಾಧಿ ಎನ್ನುವುದು ನಿತ್ಯ ಸುಖವೇ ಹೊರತು ನಿಸ್ಸಂಕಲ್ಪ ಸ್ಥಿತಿ ಮಾತ್ರವಲ್ಲ, ಆದ್ದರಿಂದ ದುಃಖ ರಹಿತ ಸ್ಥಿತಿಯನ್ನು ಅಲ್ಲದೇ ಪೂರ್ಣ ಸುಖ ಸ್ಥಿತಿಯನ್ನು ಅನುಭವಿಸಿದಾಗ "ರಸಾಸ್ವಾದನೆ" ತೊಲಗಿ ಸಮಾಧಿ ಲಭಿಸುತ್ತದೆ, ಈ ವಿಧವಾದ ಅಡೆ ತಡೆಗಳ ಬಗ್ಗೆ ತಿಳಿದುಕೊಂಡು ಅವುಗಳನ್ನು ತೊಲಗಿಸಿಕೊಂಡು 'ಧ್ಯಾನ' ಮುಂದುವರೆಸಬೇಕು.

# ಪಂಚ ಭ್ರಮೆಗಳು

ಎಷ್ಟೇ ಸಾಧನೆ ಮಾಡುತ್ತಿದ್ದರು ಸಾಧಕನು ಪಂಚ ಭ್ರಮೆಗಳಿಂದ 'ಆತ್ಮ'ವನ್ನು ತಿಳಿದುಕೊಳ್ಳಲಾರ, ಸಹಜವಾಗಿ ಸಾಮಾನ್ಯರಾದ ಸಾಧಕರಿಗೆ ಈ ಐದು ಭ್ರಮೆಗಳು ಎದುರಾಗುತ್ತವೆ.

1. **ಮೊದಲನೆಯ ಭ್ರಮೆ:** ನಾನು ಜೀವಾತ್ಮ, ದೇವರು ಬೇರೆ ಎಂದುಕೊಳ್ಳುವುದೇ ಮೊದಲ ಭ್ರಮೆ, ಏಕೆಂದರೆ ಆಚರಣೆಯ ದೋಷದಿಂದಾಗಿ ಜೀವನೇ ದೇವರು ಎನ್ನುವ ಸತ್ಯ ತಿಳಿದುಕೊಳ್ಳಲಾರರು, 'ಧ್ಯಾನ'ವೆಂಬ ಭತ್ತವನ್ನು ಮಿಲ್ಲಿನಲ್ಲಿ ಹಾಕಿದರೆ, ಅನೇಕ ಹಂತವಾಗಿ ತಿರುಗಿ ಹೊಟ್ಟು, ತವುಡು ಜರಡಿ ಹಿಡಿದು ಹೂಗಲಾಡಿಸಿ ಸ್ವಲ್ಪ ನುಣುಪನ್ನು ಪಡೆಯುವಂತೆ, ಸ್ವಲ್ಪ ಹೊಳಪನ್ನು ಪಡೆದು 'ಅಕ್ಕಿ'ಯಾಗಿ ಹೊರಗೆ ಬರುತ್ತದೆ. ಹಾಗೆಯೇ ಸಾಧಕನು ಸಾಧನೆ ಮಾಡಿ ಬರುವ ಅಡೆತಡೆಗಳನ್ನು ತೊಡೆದು ಹಾಕಿ ಜೀವನೇ ದೇವರೆಂದು ತಿಳಿದುಕೊಳ್ಳುತ್ತಾನೆ.

2. **ಎರಡನೆಯ ಭ್ರಮೆ :** ಸತ್ಯವಾದ 'ಆತ್ಮ'ದ ಸ್ವರೂಪವನ್ನು ತಿಳಿಯಲಾರದೆ ಹೋಗುವುದು ಕನ್ನಡಿ ಮೇಲೆ ದೂಳು ಬಿದ್ದರೆ ಮುಖ ಸ್ಪಷ್ಟವಾಗಿ ಕಾಣಿಸುವುದಿಲ್ಲ, ಒರೆಸಿದರೆ ಸ್ಪಷ್ಟವಾಗಿ ಕಾಣಿಸುತ್ತದೆ. ಹಾಗೆಯೇ 'ಆತ್ಮ'ವನ್ನು ಆವರಿಸಿರುವ ಮನಸ್ಸಿನಲ್ಲಿರುವ ಮಾಲಿನ್ಯಗಳಿಂದ ಆತ್ಮವನ್ನು ತಿಳಿದುಕೊಳ್ಳಲಾರದೇ ಹೋಗುತ್ತಿದ್ದಾನೆ, ಆದರೆ 'ಧ್ಯಾನ'ಸಾಧನೆಯಿಂದ ಮನಸ್ಸಿನಲ್ಲಿ ಇರುವ ಮಾಲಿನ್ಯಗಳು ತೊಲಗಿ ಆತ್ಮವೇ ನಾನು ಎಂದು ತಿಳಿದುಕೊಳ್ಳುತ್ತೇವೆ.

3. **ಮೂರನೆಯ ಭ್ರಮೆ :** ಅವಸ್ಥೆಗಳಲ್ಲಿ ಮೂರು ಅವಸ್ಥೆಗಳಿವೆ ಅವು "ಜಾಗ್ರತೆ, ಸ್ವಪ್ನ, ಸುಷುಪ್ತಿ"ಗಳು ಈ ಅವಸ್ತೆಗಳಿಗೆ ಆತ್ಮವು ಸಾಕ್ಷಿಯಾಗುತ್ತದೆ ಜಾಗೃತಾವಸ್ಥೆಯಲ್ಲಿ ಸ್ಥೂಲ ಶರೀರ, ಸ್ವಪ್ನಾವಸ್ಥೆಯಲ್ಲಿ ಸೂಕ್ಷ್ಮಶರೀರ, ಸುಷುಪ್ತಿ ಅವಸ್ಥೆಯಲ್ಲಿ ಕಾರಣ ಶರೀರದೊಂದಿಗೆ ಅನುಭವಿಸುವ ಅವಸ್ಥೆಗಳು "ನಾನು ಅನುಭವಿಸುತ್ತಿದ್ದೇನೆ" ಎಂದುಕೊಳ್ಳುವುದು ಸರಿಯಲ್ಲ, ತಾನು ಸಾಕ್ಷೀಭೂತನಾದ 'ಆತ್ಮ' ಮೂರು ಅವಸ್ಥೆಗಳಲ್ಲೂ ಈ ನಿಜ ತಿಳಿಯದೆ ಭ್ರಮೆಗೊಳಗಾಗುತ್ತಿದ್ದಾರೆ.

4. **ನಾಲ್ಕನೆಯ ಭ್ರಮೆ :** 'ಜಗತ್ತು ಬೇರೆ ಆತ್ಮ ಬೇರೆ' ಎನ್ನುವ ಭ್ರಮೆ, ಯೋಚನೆ ಮಾಡಿ ನೋಡಿದರೆ ಮಣ್ಣಿನಿಂದ ಮಡಿಕೆಗಳು ಬೇರೆಯಾಗಿ ಕಾಣಿಸಿದರೂ ಮಣ್ಣು ಒಂದೇ! ಒಡವೆಗಳು ಬೇರೆ ಬೇರೆಯಾಗಿ ಕಾಣಿಸಿದರೂ ಅದರಲ್ಲಿನ ಬಂಗಾರ ಒಂದೇ! ವಿಚಾರಣೆ,

ವಿವೇಕದೊಂದಿಗೆ ಕಾಣಿಸುವ ಜಗತ್ತಾಗಲಿ, ದೃಶ್ಯ ವಸ್ತುಗಳಾಗಲಿ, ಆತ್ಮದಿಂದಲೇ ಹುಟ್ಟಿವೆ ಎಂದು ತಿಳಿದುಕೊಳ್ಳಬೇಕು. ಜಗತ್ತು ಬೇರೆ, ಆತ್ಮ ಬೇರೆ ಅಲ್ಲವೆಂದು ತಿಳಿದುಕೊಳ್ಳಬೇಕು. ಜಗತ್ತಿನಲ್ಲಿ ಎಲ್ಲದರಲ್ಲೂ ಅಂತರ್ ಭಾಗವಾದದ್ದು 'ಆತ್ಮ'ವೇ ಎಂದು ತಿಳಿಯಬೇಕು. ಈ ಭ್ರಮೆ ಕೂಡ 'ಧ್ಯಾನ' ಸಾಧನೆಯಿಂದ ತೊಲಗುತ್ತದೆ.

**5. ಐದನೆಯ ಭ್ರಮೆ:** ಜಗತ್ತು ಸತ್ಯವಾಗಿ ಕಾಣಿಸುತ್ತದೆ, ಸೂರ್ಯ ಬಿಂಬ, ಸೂರ್ಯಕಾಂತಿ, ಸೂರ್ಯ ನಾಮವು ಒಂದೇ ಆದರೂ ಬೇರೆ ಬೇರೆಯಾಗಿ ಕಾಣಿಸುತ್ತವೆ, ಆದರೆ ಎಲ್ಲವೂ ಒಂದೆ! ಹಾಗೆಯೇ 'ಪರಮಾತ್ಮ'ವೇ 'ಆತ್ಮ' ಎಂದು 'ಆತ್ಮ'ದಿಂದ ಉದ್ಭವಿಸಿದ ಪಂಚಭೂತ ಸಮುದಾಯವಾದ ಜಗತ್ತು ಕೂಡ ಒಂದೇ ಎಂದು, ಅವುಗಳೇ ಎಲ್ಲಾ ಕಡೆಯಲ್ಲೂ ತಮ್ಮ ದರ್ಶನ ನೀಡುತ್ತವೆ ಎಂದು ತಿಳಿದುಕೊಳ್ಳಬೇಕು. ಅದೇ ಅದ್ವೈತ ಈ ವಿಧವಾಗಿ ನಿರಂತರ 'ಧ್ಯಾನ'ದ ಮೂಲಕ ಪಂಚ ಭ್ರಮೆಗಳನ್ನು ತೊಲಗಿಸಿಕೊಳ್ಳಬೇಕು.

# ಸಾಧಕನಿಗೆ ಇರಬೇಕಾದ ಲಕ್ಷಣಗಳು

ಸಾಧಕನಿಗೆ ಇರಬೇಕಾದ ಲಕ್ಷಣಗಳು 1. ಸಹನೆ 2. ತಾಳ್ಮೆ 3. ಪ್ರಾಮಾಣಿಕತೆ 4. ನಿರೀಕ್ಷಣೆ

**1. ಸಹನೆ :** 'ಧ್ಯಾನ' ಸಾಧನೆಗೆ ಬಂದ ಸಾಧಕ ಎಷ್ಟು ಸಹನೆಯಿಂದ ಇದ್ದರೆ ಅಷ್ಟು ಪ್ರಗತಿ ಸಾಧಿಸಬಲ್ಲ, ಆದ್ದರಿಂದಲೇ ಆತ್ಮಜ್ಞಾನ ಹೊಂದಬೇಕೆಂಬ ಬಯಕೆಯೊಂದಿಗೆ, ಸಾಧನೆಗೆ ಬಂದಿರುವ ಪಿರಮಿಡ್ ಮಾಸ್ಟರ್ ಗೆ ಪತ್ರೀಜಿಯವರು "ಜ್ಞಾನ ನವರತ್ನಗಳು" ಎನ್ನುವ ರತ್ನದಂತಹ ಒಂಬತ್ತು ವಾಕ್ಯಗಳು ಹೇಳಿದ್ದಾರೆ. ಅವು ಅರ್ಥಮಾಡಿಕೊಂಡು ಆಚರಿಸಿದರೆ ಆತ್ಮಜ್ಞಾನ ಬ್ರಹ್ಮಜ್ಞಾನ ಎಲ್ಲವನ್ನೂ ತಿಳಿದುಕೊಳ್ಳಬಲ್ಲರು. ಅದರಲ್ಲಿ ಸಹನೆಯೇ ಪ್ರಗತಿ ಎನ್ನುವ ಆರನೆಯ ರತ್ನ ತುಂಬಾ ಅದ್ಭುತವಾದದ್ದು, ಸರಿಯಾದ ಸದ್ಗುರು ನಮ್ಮ ಜೀವನದಲ್ಲಿ ಬಂದಾಗ ಸರಿಯಾದ ಸಲಹೆಗಳನ್ನೇ ನೀಡುತ್ತಾರೆ, ಸಾಧಕನಿಗೆ ಬೇಕಾದದ್ದು ಸಹನೆ.

ನಾವು ಸಾಧನೆ ಮಾಡುವಾಗ ಜ್ಞಾನವಿಲ್ಲದವರು ಏನು ಹೇಳುತ್ತಾರೆಂದರೆ, ಕೆಲಸ ಕಾರ್ಯ ಇಲ್ಲದೆ ಕಣ್ಣು ಮುಚ್ಚಿಕೊಂಡರೆ ಏನು ಬರುತ್ತದೆ? ಸಮಯ ವ್ಯರ್ಥ ಅಲ್ಲವೇ? ಎನ್ನುತ್ತಾರೆ. ಹಾಗೆ ಹೊರಗಿನಿಂದ ನಮಗೆ ಎಷ್ಟೋ ಅವಮಾನಗಳು ಬರುತ್ತವೆ, ಅವೆಲ್ಲವನ್ನೂ ಸಹಿಸಬೇಕು ಅಷ್ಟೇ ಅಲ್ಲದೇ 'ಧ್ಯಾನ'ದಲ್ಲಿ ನಾಡೀಮಂಡಲ ಶುದ್ಧಿ ಆಗುವಾಗ ಎಷ್ಟೋ ನೋವುಗಳು ಬರುತ್ತವೆ, ಅವು ಕೂಡಾ ಸಹನೆಯಿಂದ ತಡೆದುಕೊಳ್ಳಬೇಕು, ಸಾಧಕನಿಗೆ ಅಸಹನೆ ಯಾವಾಗಲೂ ಇರಬಾರದು, ತನ್ನ ಸುತ್ತಲೂ ಇರುವ ಪರಿಸ್ಥಿತಿಗಳು ತಮಗೆ ಇಷ್ಟವಾದರೂ ಆಗದಿದ್ದರೂ ಸಹನೆಯಿಂದ ಎದುರಿಸಬೇಕು, ಮಾನವನ್ನು ಅವಮಾನವನ್ನು ಸಹಿಸಿಕೊಳ್ಳಬೇಕು, ಮನೆಯಲ್ಲೋ, ಮೈಯಲ್ಲೋ, ಹೊರಗಿನವರಿಂದಲೋ ಎಷ್ಟು ಕಷ್ಟಗಳು ಬಂದರೂ ಸಹಿಸಬೇಕು.

ಶಿರಡಿ ಸಾಯಿಬಾಬಾ ಕೂಡ ಎರಡು ರತ್ನಗಳಂತಹ ಮಾತುಗಳು ಹೇಳಿದ್ದಾರೆ, ಅವೇ 'ಶ್ರದ್ಧೆ', 'ಸಬೂರಿ' ಎಂದು ಅವರು ತುಂಬಾ ದೊಡ್ಡ ಸಾಧಕರು ಆದ್ದರಿಂದ ಸಾಧಕರು 'ಸಬೂರಿ' ಅಂದರೆ ಸಹನೆಯನ್ನು ಬೆಳೆಸಿಕೊಳ್ಳಬೇಕು ಎಂದು ಬೋಧಿಸಿದ್ದಾರೆ.

ಪತ್ರಿ ಸಾರ್ ಹೇಳುತ್ತಿರುತ್ತಾರೆ, ಪ್ರಹ್ಲಾದನಿಗೆ ಅವನ ತಂದೆಯೇ ಎಷ್ಟೋ ಕಷ್ಟಗಳಿಗೆ ಗುರಿಮಾಡಿದನು ಆದರೂ ಪ್ರಹ್ಲಾದನು ಎಲ್ಲವನ್ನೂ ಸಹಿಸಿಕೊಂಡನು, ಅದರಿಂದಲೇ 'ಆತ್ಮಜ್ಞಾನ', 'ಬ್ರಹ್ಮ ಜ್ಞಾನ' ಹೊಂದಲು ಸಾಧ್ಯವಾಯಿತು, 'ಆತ್ಮ ಜ್ಞಾನ'ಕ್ಕಾಗಿ

ಅನ್ವೇಷಿಸುವವರು ಶರೀರಕ್ಕೆ ಮನಸ್ಸಿಗೆ ಪ್ರಾಧಾನ್ಯತೆ ಕೊಡುವುದಿಲ್ಲ, ಅವರು ಯಾವ ವಿಷಯದಲ್ಲೂ ಅಸಹನೆ ತೋರಿಸುವುದಿಲ್ಲ, ಎಲ್ಲಾ ಸಹನೆಯಿಂದ ಎದುರಿಸುತ್ತಾರೆ ಅದಕ್ಕಾಗಿಯೇ ಪತ್ರಿ ಸಾರ್ ಪಿರಮಿಡ್ ಮಾಸ್ಟರ್ಸ್ ಗೆ "ಸಹನೆಯೇ ಪ್ರಗತಿ" ಎಂದು ಬೋಧಿಸಿದ್ದಾರೆ.

**2.ತಾಳ್ಮೆ :** ಸಾಧಕನಿಗೆ ಸಹನೆ ಎಷ್ಟು ಅಗತ್ಯವೋ 'ತಾಳ್ಮೆ' ಕೂಡಾ ಅಷ್ಟೇ ಅವಶ್ಯಕ, ಯಾವುದನ್ನಾದರೂ ಸಹಿಸಿಕೊಂಡರೇನೇ ಎಷ್ಟೋ ಕಲಿತುಕೊಂಡಂತೆ ಎಂದು ಹಿರಿಯರು ಹೇಳುತ್ತಾರೆ. ಒಂದೊಂದು ಬಾರಿ ನಾವು ಅಂದುಕೊಂಡಂತೆ ಏನೂ ನಡೆಯುವುದಿಲ್ಲ, ಆಗ ಜನರು ನಾನು ಅಂದುಕೊಂಡಂತೆ ಏನೂ ಆಗುವುದಿಲ್ಲ, ದೇವರಿಗೆ ನನ್ನ ಮೇಲೆ ದಯೆಇಲ್ಲ ಎನ್ನುತ್ತಾರೆ. ದೇವರು ನಮಗೆ ಕಷ್ಟಗಳು ನೀಡುವುದಿಲ್ಲ, ನಾವು ಏನು ಮಾಡಿದರೆ ಅದೇ ನಮ್ಮ ಬಳಿಗೆ ಮರಳಿ ಬರುತ್ತದೆ. ಆದ್ದರಿಂದ ಸಾಧನೆ ಮಾಡುವವರು ತಿಳಿದುಕೊಳ್ಳಬೇಕಾದದ್ದು 'ಕರ್ಮಸಿದ್ಧಾಂತ' ಅದು ತಿಳಿದುಕೊಂಡರೆ ಅಂದುಕೊಂಡಿದ್ದು ಆಗದಿದ್ದರೆ ಬೇಜಾರು ಆಗುವುದಿಲ್ಲ ನನಗೆ ಅಗತ್ಯವಿಲ್ಲ ಆದ್ದರಿಂದ ಪ್ರಕೃತಿ ಕೊಟ್ಟಿಲ್ಲ ಎಂದುಕೊಳ್ಳುತ್ತಾರೆ, ಇಲ್ಲದಿದ್ದರೆ "ಯಾವ ಜನ್ಮದಲ್ಲೋ ನಾನು ಅವನಿಗೆ ಅಪಕಾರ ಮಾಡಿದ್ದೇನೆ ಈ ಜನ್ಮದಲ್ಲಿ ನನ್ನನ್ನು ಅವನು ದುಃಖಕ್ಕೆ ಗುರಿ ಮಾಡುತ್ತಿದ್ದಾನೆ" ಎಂದು ಅವರು ಕೊಡುವ ಸಂಕಷ್ಟಗಳನ್ನು ತಡೆದುಕೊಂಡು ತಾಳ್ಮೆಯಿಂದ ಇರುತ್ತಾರೆ.

ಪತ್ರಿ ಸಾರ್ ಪರಿಚಯ ವಾಗುವವರೆಗೂ ಎಲ್ಲರೂ ಅಸಹನೆಯಿಂದ, ದುಃಖದಿಂದ ಇರುತ್ತಿದ್ದರು ಸಾರ್ ಪರಿಚಯವಾದ ಮೇಲೆ ಅವರು ಹೇಳಿದ 'ಕರ್ಮಸಿದ್ಧಾಂತ' ತಿಳಿದುಕೊಂಡಮೇಲೆ ಎಲ್ಲರಿಗೂ ಸಹನೆ, ತಾಳ್ಮೆಯ ಅಭ್ಯಾಸವಾಯಿತು ಅದಕ್ಕೆ ಎಲ್ಲರೂ ಆನಂದವಾಗಿ ಜೀವಿಸಲಾಗುತ್ತಿದೆ, ಕಷ್ಟಗಳಿಗೆ ಧೃತಿಗೆಡದೆ 'ಅವುಗಳನ್ನು ಕರ್ಮಗಳ ಫಲಿತಗಳು' ಎಂದು ತಾಳ್ಮೆಯಿಂದ ಅನುಭವಿಸುತ್ತಿದ್ದಾರೆ, ಕಷ್ಟಗಳನ್ನು ಸಹಿಸದಿದ್ದರೆ ಏನೂ ಸಾಧಿಸಲಾರರು.

ಇದಕ್ಕೆ ಮಲಯಾಳ ಸ್ವಾಮಿಯವರು ಚಿಕ್ಕ ಉದಾಹರಣೆ ಹೇಳುತ್ತಾರೆ, ಹತ್ತು ರೂಪಾಯಿಗಳ ಬೆಲೆಯುಳ್ಳ ಕಬ್ಬಿಣವನ್ನು ಕುದುರೆಯ ಲಾಳವಾಗಿ ಬದಲಾಯಿಸಿದರೆ ಅದರ ಬೆಲೆ ಇಪ್ಪತ್ತು ರೂಪಾಯಿಗಳು ಆಗುತ್ತದೆ, ಅದನ್ನೇ ಚಾಕುವಿನಂತೆ ಬದಲಾಯಿಸಿದರೆ ಮೂವತ್ತು ರೂಪಾಯಿಗಳಾಗುತ್ತದೆ, ಆ ಚಾಕುವನ್ನು ಸೂಜಿಗಳಾಗಿ ಮಾಡಿದರೆ ಐವತ್ತು ರೂಪಾಯಿಗಳಾಗುತ್ತದೆ, ಅದನ್ನೇ ವಾಚ್ ಸ್ಪ್ರಿಂಗಿನಂತೆ ಬದಲಾಯಿಸಿದರೆ ಎರಡುನೂರುಗಳು ಆಗುತ್ತದೆ, ಹಾಗೆ ದರವು ಜಾಸ್ತಿಯಾಗಲು ಕಾರಣ

ಕಬ್ಬಿಣದ ಕಡ್ಡಿ ಎಷ್ಟು ನೋವು ಅನುಭವಿಸಿತೋ ಜ್ವಾಲೆಯಲ್ಲಿ ಕಾದು, ಹೊಡೆತಗಳನ್ನು ತಿಂದು, ಸಾಣೆ ಹಿಡಿಯುವಾಗ ಸಹಿಸಿಕೊಂಡು, ತಾಳ್ಮೆಯಿಂದ ಸಹಿಸಿದೆ, ಹಾಗೆ ಸಹಿಸಿದರೆ ಅದರ ಮೌಲ್ಯ ಹೆಚ್ಚಾಗುತ್ತದೆ. ಸಾಧನೆಯಲ್ಲಿ ಕಷ್ಟಗಳನ್ನು ತಡೆದುಕೊಂಡು, ದುಷ್ಕರ್ಮಗಳೆನ್ನುವ ಕೊಳೆಯನ್ನು ಬಿಡಿಸಿಕೊಂಡಾಗಲೇ ಜೀವನಾಗಿ ಉಳಿಯದೇ ದೇವರಾಗುತ್ತಾನೆ, ಅವನ ಹಿರಿಮೆಯು ಹೆಚ್ಚುತ್ತದೆ.

**3 ಪ್ರಾಮಾಣಿಕತೆ:** ಪ್ರಾಮಾಣಿಕತೆಯಿಂದ ಇರುವುದೆಂದರೆ 'ಸತ್ಯ'ದಲ್ಲಿ ಜೀವಿಸುವುದೇ, ಒಂದು ವಿಧವಾಗಿ ಹೇಳಬೇಕೆಂದರೆ 'ಧರ್ಮ'ವಾಗಿ ಜೀವಿಸುವುದೇ ಯಾರು 'ಧರ್ಮ'ಯುತವಾಗಿ ಜೀವಿಸುತ್ತಾರೋ ಅವರಿಗೆ ಸತ್ಯ ಅರ್ಥವಾಗುತ್ತದೆ, ಸತ್ಯವನ್ನು ಯಾರು ಆಚರಿಸುತ್ತಾರೋ ಅವರು ಈ ಭೂಮಿ ಮೇಲೆ ಪ್ರಾಮಾಣಿಕತೆಯಿಂದ ಇರುತ್ತಾರೆ.

ಈಗ ಇರುವ ಮಾನವರೆಲ್ಲರೂ 'ಸತ್ಯವನ್ನು' ನಂಬುವುದಿಲ್ಲ, 'ಧರ್ಮವನ್ನು' ಆಚರಿಸುವುದಿಲ್ಲ, ಪ್ರಾಮಾಣಿಕತೆಯಿಂದ ಇರಲಾರರು, ಸತ್ಯವನ್ನು ನಂಬುವುವುದೆಂದರೆ ಭಗವಂತನನ್ನು ನಂಬಿದಂತೆ, ಧರ್ಮವನ್ನು ಆಚರಿಸುವುದೆಂದರೆ ಭಗವಂತನನ್ನು ಅನುಸರಿಸುವುದು, ಮಾನವ ಜನ್ಮದ ಗಮ್ಯ ತಿಳಿದುಕೊಳ್ಳಬೇಕೆಂದರೆ ಪತ್ರೀಜಿ ಹೇಳಿದಂತೆ ಧ್ಯಾನಸಾಧನೆ ಮಾಡಬೇಕು.

"ಅಸತ್ಯ ಹೇಳಬಾರದು" ಎಂದುಕೊಳ್ಳುತ್ತೇವೆ, ಆದರೆ ಏನೋ ಕಾರಣಗಳು ಹೇಳುತ್ತಾ ಅಸತ್ಯವನ್ನು ಹೇಳುತ್ತೇವೆ, ಹಾಗೆಯೇ ಯಾರನ್ನೂ ಹಿಂಸಿಸಬಾರದು ಎಂದುಕೊಳ್ಳುತ್ತೇವೆ, ಆದರೆ ಯಾವುದೋ ಸಂದರ್ಭದಲ್ಲಿ ಯಾವುದೋ ವಿಧವಾಗಿ ನೋವು ಕೊಡುತ್ತಾ ಇರುತ್ತೇವೆ. ಮಾನವರೆಲ್ಲರೂ ಅಂದುಕೊಂಡ ಕೆಲಸ ಮಾಡಲಾರದೇ ಹೋಗಲು, ಅಂದುಕೊಂಡಂತೆ ಇರದೇ ಹೋಗಲು ಕಾರಣ ಅವರ ಮನಸ್ಸೇ, ಈ ಮನಸ್ಸನ್ನು ವಶಪಡಿಸಿಕೊಳ್ಳುವ ಉಪಾಯವೇ ಧ್ಯಾನ ಸಾಧನೆ, "ಧ್ಯಾನ ಸಾಧನೆ"ಯಿಂದ ಮಾತ್ರವೇ ಮಾನವನು ತಾನು ಹೇಗೆ ಇರಬೇಕೋ ಹಾಗೆ ಇರಬಲ್ಲನು, ಹೇಗೆ ಮಾತನಾಡಬೇಕೆಂದರೆ ಹಾಗೆ ಮಾತನಾಡುತ್ತಾನೆ.

ಪ್ರಾಮಾಣಿಕತೆಯ ಲೋಪದಿಂದಲೇ ಎಷ್ಟೋ ಪಾಪ ಕರ್ಮಗಳು ಮಾಡುತ್ತೇವೆ, ಆ ಕರ್ಮಗಳು ಇರುವವರೆಗೆ 'ಆತ್ಮ'ವನ್ನು ತಿಳಿಯಲಾರೆವು, ಪಾಪ ಕರ್ಮಗಳು ಮಾಡಬಾರದು ಎಂದರೂ ವಾಕ್ಕನ್ನು ನಿಗ್ರಹಿಸಬೇಕೆಂದರೂ 'ಧ್ಯಾನ' ಮಾಡಬೇಕು 'ಧ್ಯಾನ' ದಿಂದ ಮಾತ್ರವೇ ಪ್ರಾಮಾಣಿಕತೆಯಿಂದ ಇರಬಲ್ಲೆವು.

**4 ನಿರೀಕ್ಷಣೆ :** ಸಾಧಕನಿಗೆ ಇದು ಕೂಡಾ ತುಂಬಾ ಅತ್ಯಗತ್ಯ, ನಾವು ಯಾರ ಅನುಭವವನ್ನಾದರೂ ಕೇಳುತ್ತಿದ್ದಾಗ ಅಂತಹ ಅನುಭವಗಳು ನಮಗೆ ಬರಲಿಲ್ಲವಲ್ಲಾ? ಎಂದು ಸಂಕಟ ಪಡುತ್ತೇವೆ, ಆದರೆ ಹಾಗೆ ಅಂದುಕೊಳ್ಳಬಾರದು ಎಲ್ಲರ ಅನುಭವಗಳು ಕೇಳಿ ನನಗೆ ಎಂದಿಗಾದರೂ ಬರುತ್ತದೆ, ನನ್ನ 'ಧ್ಯಾನ' ಸಾಧನೆ ಹೆಚ್ಚಿಸಿಕೊಳ್ಳಬೇಕು ಎಂದುಕೊಳ್ಳಬೇಕು ಗುರುವಿನ ಮಾತಿನ ಮೇಲೆ ನಂಬಿಕೆ ಇಡಬೇಕು.

ಶಬರಿ ರಾಮನಿಗಾಗಿ ಎಷ್ಟೋ ವರ್ಷಗಳು ನಿರೀಕ್ಷಿಸಿದಳು ಆದರೆ ನಿರಾಸೆಗೊಳ್ಳಲಿಲ್ಲ, ಕೊನೆಗೆ ರಾಮನ ದರ್ಶನವನ್ನು ಪಡೆದಳು. ನಾವು ಕೂಡಾ ಸಾಧನೆಯಲ್ಲಿ ಸಮಯವನ್ನು ಹೆಚ್ಚಿಸಿಕೊಳ್ಳಬೇಕು, ಆಹಾರ ತೆಗೆದುಕೊಳ್ಳುವಾಗ ಜಾಗರೂಕರಾಗಿರಬೇಕು ನಮ್ಮ ನಡುವಳಿಕೆಯನ್ನು ಗಮನಿಸುತ್ತಾ ಇರಬೇಕು, ಫಲಿತ ಬರುವವರೆಗೂ ನಿರೀಕ್ಷಿಸಬೇಕೇ ಹೊರತು ನಿರಾಶೆಯಲ್ಲಿ ಕುಗ್ಗಿ ಹೋಗಬಾರದು.



**'ಅಪಜಯವೂ ಸಹ ವಿಜಯದಲ್ಲಿ ಒಂದು ಮುಖ್ಯವಾದ ಮೆಟ್ಟಿಲೇ!'**
**– ಬ್ರಹ್ಮರ್ಷಿ ಪತ್ರೀಜಿ**

# ಸಾಧಕನು ತಿಳಿದುಕೊಳ್ಳಬೇಕಾಗಿರುವುದು

ಮುಖ್ಯವಾಗಿ ಮೂರು 1.ಶುದ್ಧತ್ವ 2. ಬುದ್ಧತ್ವ 3. ಮುಕ್ತ ಸ್ಥಿತಿ.

**1. ಶುದ್ಧತ್ವ:** ಸಾಧನೆ ಮಾಡುವವರು ಪ್ರಪ್ರಥಮವಾಗಿ ಆಚರಿಸಬೇಕಾದದ್ದು ಶುಚಿಯಾಗಿ ಇರುವುದು, ಶುಚಿ ಎಂದಾಕ್ಷಣವೇ ದೇಹ ಶುದ್ದಿ ಒಂದೇ ಮುಖ್ಯವೆಂದುಕೊಳ್ಳುತ್ತಾರೆ, ಆದರೆ ಶರೀರ ಒಂದೇ ಶುಭ್ರ ವಾಗಿರುವುದಲ್ಲ ಅಂತರ್ ಶುದ್ದಿ ಕೂಡಾ ಇರಬೇಕು. ಮನಸ್ಸು, ವಾಕ್, ಶರೀರ ಮೂರೂ ಶುದ್ಧವಾಗಿರಬೇಕು.

ಶರೀರ ಶುಭ್ರವಾಗಿ ಇರಿಸಿಕೊಳ್ಳುವುದು ಎಲ್ಲರಿಗೂ ತಿಳಿದಿದೆ, ಆದರೆ ಮನಸ್ಸ, ಮಾತು ಹೇಗೆ ಶುಭ್ರವಾಗಿ ಇರಿಸಿಕೊಳ್ಳಬೇಕು? ಎಂದು ಎಷ್ಟೋ ಜನರಿಗೆ ತಿಳಿದಿಲ್ಲ ಪರಿಸರವನ್ನು ಕೂಡ ಶುಚಿಯಾಗಿ ಇರಿಸಿಕೊಳ್ಳುವುದು ಸಾಧಕನಿಗೆ ತುಂಬಾ ಮುಖ್ಯ.

**ಮನಸ್ಸು :** ಇದು ಅನೇಕ ಕೆಟ್ಟ ಆಲೋಚನೆಗಳೊಂದಿಗೆ ದುಷ್ಟ ಸಂಕಲ್ಪಗಳೊಂದಿಗೆ ಮಲಿನವಾಗುತ್ತದೆ, ತೀವ್ರ ಧ್ಯಾನಸಾಧನೆಯಿಂದ ಮನೋಮಾಲಿನ್ಯ ತೊಲಗಿ ಮನಸ್ಸು ಪರಿಶುದ್ಧವಾಗುತ್ತದೆ.

**ವಾಕ್ :** ಮಾತಾಡುವ ಪ್ರತಿ ಮಾತು ಸರಳವಾಗಿ, ಸತ್ಯವಾಗಿ, ಪ್ರಿಯವಾಗಿರಬೇಕು, ಅಸತ್ಯಗಳು ಹೇಳುವುದು, ಇತರರ ಮೇಲೆ ದೂರುಗಳು ಹೇಳುವುದು ಹೆಚ್ಚಾಗಿ ಮಾತಾಡುವುದು ಇತರರನ್ನು ದೂಷಿಸುವುದು ಈ ಅಭ್ಯಾಸಗಳು ಬಿಟ್ಟರೆ ವಾಕ್ ಶುಭ್ರವಾಗುತ್ತದೆ.

**ಕಾಯ :** ಎಂದರೆ ಶರೀರ, ಶರೀರ ಶುದ್ಧಿಗೆ ಸ್ನಾನ ಒಂದೇ ಸಾಲದು ಶರೀರವನ್ನು ಧರ್ಮಾಚರಣೆಗೆ ಉಪಯೋಗಿಸಿಕೊಳ್ಳಬೇಕು, ಅದಕ್ಕಾಗಿ ಈ ಶರೀರದೊಂದಿಗೆ ಒಳ್ಳೆಯ ಕೆಲಸಗಳು ಮಾಡಬೇಕು, ಯಾವಾಗಲೂ ಪವಿತ್ರವಾದ ಕೆಲಸಗಳಿಗೆ ಶರೀರವನ್ನು ಉಪಯೋಗಿಸಿಕೊಳ್ಳ ಬೇಕು ಆಗಲೇ ಶರೀರ ಶುಭ್ರವಾದಹಾಗೆ.

**ಪರಿಸರಗಳು :** ನಮ್ಮ ಪರಿಸರಗಳು ಯಾವಾಗಲೂ ಪ್ರಶಾಂತವಾಗಿ, ಶುಭ್ರವಾಗಿ ಇರಿಸಿಕೊಂಡರೆ ಮನಸ್ಸಿಗೆ ನೆಮ್ಮದಿ ಇದ್ದು ಸಾಧನೆ ಚೆನ್ನಾಗಿ ಆಗುತ್ತದೆ ಅಂತಹ ಪರಿಸರ ಸೃಷ್ಟಿಸಿಕೊಳ್ಳಬೇಕು, ಆಯ್ಕೆ ಮಾಡಿಕೊಳ್ಳಬೇಕು ಇವೆಲ್ಲವೂ ಅಂದರೆ ಮನಸ್ಸು, ಮಾತು, ಶರೀರ, ಪರಿಸರಗಳು ಶುಚಿಯಾಗಿ ಇರಿಸಿಕೊಳ್ಳುವುದರಿಂದ ನಮ್ಮಲ್ಲಿ ಶುದ್ಧತ್ವ ಏರ್ಪಡುತ್ತದೆ.

**2.ಬುದ್ಧತ್ವ :** ಶುದ್ಧತ್ವ ಬಂದ ಮೇಲೆ ಬುದ್ಧತ್ವ ಬರುತ್ತದೆ, "ಬುದ್ಧಿಯಿರುವ ಪ್ರತಿಯೊಬ್ಬರೂ ಬುದ್ಧರೇ" ಎಂದು ಪತ್ರಿ ಸಾರ್ ಹೇಳುತ್ತಿರುತ್ತಾರೆ, ಅಂದರೆ ಯಾರು ಬುದ್ಧತ್ವದಲ್ಲಿ ಇರುತ್ತಾರೋ ಅವರನ್ನೇ "ಬುದ್ಧ" ಎನ್ನುತ್ತಾರೆ. ಈ ಸೃಷ್ಟಿಯಲ್ಲಿ ಬುದ್ಧಿಗೆ ಇರುವ ಶಕ್ತಿ ಯಾವುದಕ್ಕೂ ಇಲ್ಲ ನಮ್ಮ ಜೀವನದಲ್ಲಿ ಒಳ್ಳೆಯದು ಆಗಬೇಕೆಂದರೂ ಕೆಟ್ಟದ್ದು ಆಗಬೇಕೆಂದರೂ ನಮ್ಮ ಬುದ್ಧಿಯೇ ಕಾರಣ ಅದಕ್ಕೆ ನಾವು ಏನಾದರೂ ತಪ್ಪು ಮಾಡಿದರೆ ಬುದ್ಧಿ ಇಲ್ಲವೇ? ಎನ್ನುತ್ತಾರೆ ಈ ಸೃಷ್ಟಿಯಲ್ಲಿ ಸಾಸಿವೆ ಕಾಳಿನಷ್ಟು ಕೆಲಸವಾಗಬೇಕೆಂದರು ಬುದ್ಧಿಯೇ ಕಾರಣ ಆದ್ದರಿಂದ ನಾವು ಬುದ್ಧಿಯನ್ನು ಉಪಯೋಗಿಸಿಕೊಳ್ಳುತ್ತಾ ಅನಂತವಾದ ಪರಮಾತ್ಮ ತತ್ವವನ್ನು ತಿಳಿದುಕೊಳ್ಳುತ್ತಾ ಯಾವುದು ಒಳ್ಳೆಯದೋ ಯಾವುದು ಕೆಟ್ಟದ್ದೋ ತಿಳಿದು ನಡೆಯಬೇಕು ಆಗಿಂದಾಗ್ಗೆ ಸದ್ಗುರು ಹೇಳಿದ ಮಾರ್ಗದಲ್ಲಿದ್ದು ಬುದ್ಧಿಯನ್ನು ಸಾಣೆ ಹಿಡಿಯಬೇಕು ಅದು ಎಲ್ಲರಿಗೂ ಬೋಧಿಸುವುದೇ ಬುದ್ಧತ್ವ.

**3.ಮುಕ್ತ ಸ್ಥಿತಿ :** ನಾವು ಶುದ್ಧತ್ವ ಅನುಸರಿಸುತ್ತಾ ಬುದ್ಧತ್ವದಲ್ಲಿ ಜ್ಞಾನ ಹೊಂದಿದ ಮೇಲೆ ಯಾವುದು ನಿತ್ಯವಾದದ್ದೋ, ಯಾವುದು ಅನಿತ್ಯವಾದದ್ದೋ ನಮಗೆ ತಿಳಿಯುತ್ತದೆ. ಅನಿತ್ಯವಾದವುಗಳ ಮೇಲೆ ಭ್ರಾಂತಿ ಬಿಟ್ಟು, ನಿತ್ಯವಾದ ಸತ್ಯವಾದ ಆತ್ಮದ ಮೇಲೆ ಪ್ರೀತಿ ಬೆಳೆಸಿಕೊಳ್ಳುವುದೇ 'ಮುಕ್ತ' ಸ್ಥಿತಿಯಲ್ಲಿ ಇರುವುದು.

ನಾವು ಏನೂ ಬಿಡಬೇಕಾಗಿಲ್ಲ ಎಲ್ಲದರಲ್ಲೂ ಇದ್ದು ಅವುಗಳ ಮೇಲೆ ಮಮಕಾರಗಳು ಬಿಡುವುದೇ ಮುಕ್ತ ಸ್ಥಿತಿ. ಅದಕ್ಕೇ ಶಂಕರಾಚಾರ್ಯರು 'ಮೋಹ ಕ್ಷಯಮೇ ಮೋಕ್ಷಂ' ಎಂದಿದ್ದಾರೆ. ಮೋಕ್ಷವೆಂದರೂ ಮುಕ್ತಿ ಎಂದರೂ ಒಂದೇ, ಅದೇ ವಿಷಯ ಬುದ್ಧನು ಸಂಸಾರದಲ್ಲಿ ಇರುತ್ತಾ ನಿರ್ವಾಣ ಹೊಂದಬೇಕೆಂದಿದ್ದಾರೆ. ಮಹಾತ್ಮರು "ಎಲ್ಲವನ್ನೂ ಬಿಡುವುದಲ್ಲ ಎಲ್ಲದರ ಮೇಲೂ ಮಮಕಾರ ಬಿಡಬೇಕು" ಎನ್ನುತ್ತಾರೆ. ಅದೇ ಮುಕ್ತ ಸ್ಥಿತಿಯಲ್ಲಿ ಇರುವುದು ಎಂದು ಹೇಳುತ್ತಾರೆ.



**'ನಾನು ಆತ್ಮ ಎಂದು ತಿಳಿದುಕೊಂಡವನು ಎಂದಿಗೂ ಅಳುವುದಿಲ್ಲ!'**

**–ಬ್ರಹ್ಮರ್ಷಿ ಪತ್ರೀಜಿ**

# ಧ್ಯಾನ ಸಾಧಕರು ಆಚರಿಸಬೇಕಾದ ಪಂಚ ನಿಯಮಗಳು

ಧ್ಯಾನ ಸಾಧಕರು ಐದು ವಿಧಗಳ ನಿಯಮಗಳನ್ನು ಆಚರಿಸಬೇಕು ಅವು, 1. ಆತ್ಮ ನಿಯಮ 2. ಆಹಾರ ನಿಯಮ 3. ಸಮಯ ನಿಯಮ 4. ನಿವಾಸ ನಿಯಮ 5. ಸಹವಾಸ ನಿಯಮ.

**1 ಆತ್ಮ ನಿಯಮ :** ಸಾಧಕರು ಧ್ಯಾನಸಾಧನೆ ಪ್ರಾರಂಭಿಸಿದಾಗ "ಸಾಧನೆ ಹೇಗೆ ಮಾಡಿದರೆ ಮುಂದೆ ಹೋಗುತ್ತೇವೆ? ಏನು ತಿಳಿದುಕೊಳ್ಳಬೇಕು? ಹೇಗೆ ಆಚರಿಸಬೇಕು?" ಎಂದು ಅನೇಕ ವಿಷಯಗಳಲ್ಲಿ ಪರಿಶೋಧನೆ ಮಾಡಿಕೊಳ್ಳಬೇಕು. ಮೊಟ್ಟ ಮೊದಲು ತಿಳಿದುಕೊಳ್ಳಬೇಕಾದ ವಿಷಯ, ಆತ್ಮ ಎಂದರೇನು? ಹೇಗಿರುತ್ತದೆ? ಅದರ ಲಕ್ಷಣಗಳು ಏನು? ಆತ್ಮಶಕ್ತಿ ಹೆಚ್ಚಿಸಿಕೊಂಡರೆ ಹೇಗಿರುತ್ತೇವೆ? ಎಂಬುದನ್ನು ತಿಳಿದುಕೊಳ್ಳಬೇಕು. ಆತ್ಮವೇ ಭಗವಂತನೆಂದು ಮೊಟ್ಟ ಮೊದಲು ತಿಳಿದುಕೊಳ್ಳಬೇಕು. ಆತ್ಮ ಪೂರ್ಣಾತ್ಮದಿಂದ ಬರುತ್ತದೆ. ಅಂದರೆ ಆತ್ಮಕ್ಕೆ ರೂಪವಿಲ್ಲ, ಇದನ್ನು "ಸಚ್ಚಿದಾನಂದ ಸ್ವರೂಪ" ಎಂದು ಹೇಳುತ್ತಾರೆ, ಅಂದರೆ ಸತ್, ಚಿತ್, ಆನಂದ ಸ್ವರೂಪವೆಂದು ಹೇಳುತ್ತಾರೆ 'ಸತ್' ಎಂದರೆ ಸತ್ಯವಾದದ್ದು 'ಚಿತ್' ಎಂದರೆ ಚೈತನ್ಯವಂತವಾದದ್ದು, 'ಆನಂದ' ಎಂದರೆ ಆನಂದಕರವಾದದ್ದು ಎನ್ನುತ್ತಾರೆ.

ಧ್ಯಾನ ಸಾಧಕನು ಸಾಧನೆಯಲ್ಲಿ ಆತ್ಮವನ್ನು ಅಖಂಡವಾಗಿ, ಅನಂತವಾಗಿ ಅನುಭೂತಿಯನ್ನು ಹೊಂದುತ್ತಾನೆ. 'ಆತ್ಮ' ಸೂಜಿಯ ಕೊನೆಗಿಂತಲೂ ಸೂಕ್ಷ್ಮವಾಗಿರುವ ಅಣುವಿಗಿಂತಲೂ ಸೂಕ್ಷ್ಮಾತಿಸೂಕ್ಷ್ಮವಾಗಿ ಜೀವಿಗಳ ಶರೀರಗಳಲ್ಲಿದೆ, ಗಿಡಗಳಲ್ಲಿ, ಪ್ರಾಣಿಗಳಲ್ಲಿ ಆತ್ಮವಿರುತ್ತದೆ. ಆದರೆ ಮನಸ್ಸು ಬುದ್ಧಿ ಇರುವುದಿಲ್ಲ, ಆತ್ಮ ಶಕ್ತಿಯಿಂದಲೇ ಶರೀರದ ಮೂಲಕ ಪ್ರತಿ ಕೆಲಸವೂ ನಡೆಯುತ್ತದೆ.

ಆತ್ಮ ಬೀಜದಂತೆ ಶರೀರ ವೃಕ್ಷದಂತೆ ಬೀಜ ಎಷ್ಟು ಚಿಕ್ಕದಾದರೂ ಶಕ್ತಿವಂತವಾದಾಗ ಅದರಿಂದ ಉತ್ಪನ್ನವಾಗುವ ವೃಕ್ಷ ಅತಿ ಬಲಿಷ್ಟವಾಗಿ, ಲಾಭದಾಯಕವಾಗಿಯೂ ಇರುತ್ತದೆ. ಅದೇ ವಿಧವಾಗಿ ಆತ್ಮ ಶಕ್ತಿವಂತವಾದಾಗ ಕಲ್ಪತರುವಿನಂತಹ ಶರೀರ, ಆತ್ಮ ಶಕ್ತಿಹೀನವಾದಾಗ, ಶಕ್ತಿ ಹೀನವಾದ ಶರೀರವಾಗಿರುತ್ತದೆ.

ನಾವು ಹೊಂದಿದ ಜ್ಞಾನ, ಸಂಸ್ಕಾರಗಳನ್ನು ಶರೀರ ಬಿಟ್ಟ ನಂತರ 'ಆತ್ಮ' ತನ್ನ ಜೊತೆ ತೆಗೆದುಕೊಂಡು ಹೋಗುತ್ತದೆ, ಶರೀರದೊಂದಿಗೆ ಇರುವ ಆತ್ಮವನ್ನೇ 'ಜೀವಾತ್ಮ' ಎನ್ನುತ್ತಾರೆ.

ಜೀವಾತ್ಮದ ಕೆಲಸಗಳು ಮೂರು ವಿಧಗಳಲ್ಲಿ ಇರುತ್ತವೆ.

1. ಶರೀರಕ್ಕೆ ಇಂದ್ರಿಯಗಳಿಗೆ ಶಕ್ತಿ ನೀಡುವುದು, 2. ಉಚ್ವಾಸ, ನಿಶ್ವಾಸಗಳ ರೂಪದಲ್ಲಿ ಆಯುಷ್ಯವನ್ನು ನೀಡುವುದು, 3. ಶರೀರದೊಂದಿಗೆ ಕರ್ಮಗಳು ಮಾಡುವುದು ಅನುಭವಿಸುವುದು. ಸಾಧಕನು ಆತ್ಮಕ್ಕಾಗಿ ನಿರಂತರ 'ಧ್ಯಾನ' ದಿಂದ 'ಆತ್ಮ'ದ ಮೇಲೆ ಗಮನವಿರಿಸುವುದೇ ಆತ್ಮದ ನಿಯಮ.

**2. ಆಹಾರ ನಿಯಮ :** ಸಾಧಕನಿಗೆ ಆಹಾರ ನಿಯಮಗಳು ಕೂಡಾ ಅತ್ಯಗತ್ಯ, ನಾವು ತಿನ್ನುವ ಆಹಾರವನ್ನು ಅನುಸರಿಸಿ ಗುಣಗಳು ಏರ್ಪಡುತ್ತವೆ, ಅವುಗಳು ತಮೋಗುಣ, ರಜೋಗುಣ, ಸಾತ್ವಿಕಗುಣ, ನಿರ್ಗುಣ. ತಮೋಗುಣ, ರಜೋಗುಣ ಆತ್ಮಸಾಧನೆಗೆ ಅಡೆತಡೆಗಳನ್ನು ಉಂಟು ಮಾಡುತ್ತವೆ, ಆದ್ದರಿಂದ ಅಂತಹ ಗುಣಗಳನ್ನು ಪ್ರೇರೇಪಿಸುವ ಆಹಾರ ತೆಗೆದುಕೊಳ್ಳಬಾರದು.

**ಎ) ತಮೋಗುಣವನ್ನು ಪ್ರೇರೇಪಿಸುವ ಆಹಾರಗಳು:** ಮಧ್ಯಪಾನ, ಶೇಖರಿಸಲ್ಪಟ್ಟ ಆಹಾರ, ಹುಳಿಯಾದ ಆಹಾರ, ಹಳಸಿದ ಹಾಳಾದ ಆಹಾರ, ಫ್ರಿಡ್ಜ್ ನಲ್ಲಿಟ್ಟ ಬೇಯಿಸಿದ ಆಹಾರ. ಇವುಗಳನ್ನು ಸೇವಿಸುವುದರಿಂದ ಅತಿ ನಿದ್ರೆ, ಅಜ್ಞಾನ, ಭ್ರಮೆ, ಚಪಲಬುದ್ಧಿ ಪಾಪ ಕಾರ್ಯಗಳ ಬಗ್ಗೆ ಆಸಕ್ತಿ, ಅನ್ಯ ಪ್ರಾಣಿಗಳನ್ನು ಹಿಂಸಿಸುವ ಲಕ್ಷಣಗಳು ಉಂಟಾಗುತ್ತವೆ.

**ಬಿ) ರಾಜಸಗುಣ ಪ್ರೇರೇಪಿಸುವ ಆಹಾರಗಳು:** ಅತಿಯಾದ ಮಸಾಲೆಗಳು ಅತಿಯಾದ ಖಾರ ಹಾಗೂ ತಾಜಾತನವಿಲ್ಲದ ಪದಾರ್ಥಗಳು ರಜೋಗುಣ ವೃದ್ಧಿಸುತ್ತವೆ, ಮಾಂಸ, ಮೀನು, ಮೊಟ್ಟೆಸಹ ರಜೋಗುಣವನ್ನು ಉಂಟುಮಾಡುತ್ತವೆ. ಶಾಖಾಹಾರ ದಲ್ಲಿ ಬೆಳ್ಳುಳ್ಳಿ ಸಹ ರಜೋಗುಣವನ್ನು ಉಂಟುಮಾಡುತ್ತದೆ, ಅದರಿಂದ ಗರ್ವ, ಕ್ರೋಧ, ಅಹಂಕಾರ ವಿಷಯಾಸಕ್ತಿ ವ್ಯರ್ಥ ಪ್ರಲಾಪಗಳು ಉಂಟಾಗುತ್ತವೆ.

**ಸಿ) ಸಾತ್ವಿಕ ಗುಣ ಸತ್ವಗುಣ ವೃದ್ಧಿ ಮಾಡುವ ಪದಾರ್ಥಗಳು:** ಸಿಹಿಯಾದ ಮಧುರತ್ವ ಹೊಂದಿದ ತಾಜಾ ಹಣ್ಣುಗಳು ಸಾತ್ವಿಕ ಆಹಾರ ಇವುಗಳನ್ನು ತಿನ್ನುವುದರಿಂದ ಸಾಧನೆ ಸುಲಭಸಾಧ್ಯವಾಗುತ್ತದೆ.

ಇದರ ಬಗ್ಗೆ ಶಾಸ್ತ್ರವು ಏನೆಂದು ಹೇಳುತ್ತದೆ?

"ತಾಮಸವನ್ನು ಬಿಡದೇ, ತತ್ವವು ತಿಳಿಯದು

ರಾಜಸವನ್ನು ಬಿಡದೇ, ಮುಕ್ತಿ ಬಾರದು!

ಸಾತ್ವಿಕತೆಯೇ ಮೋಕ್ಷಸಾಧನೆಗೆ ಮೂಲ" ಎಂದಿದ್ದಾರೆ.

ನಾವು ತೆಗೆದುಕೊಳ್ಳುವ ಆಹಾರ ರಕ್ತವಾಗಿ ಪರಿವರ್ತನೆಯಾಗಿ ಶರೀರಕ್ಕೆ ಶಕ್ತಿಯನ್ನು ನೀಡುತ್ತದೆ, ರಕ್ತದಲ್ಲಿನ ಸೂಕ್ಷ್ಮ ಅಂಶ ಶುಕ್ಲವಾಗಿ ಬದಲಾಗಿ ಬುದ್ಧಿಗೆ ಬಲವನ್ನು ನೀಡುತ್ತದೆ, ಶುಕ್ಲದಲ್ಲಿನ ಸೂಕ್ಷ್ಮ ಅಂಶ ಅಮೃತವಾಗಿ ಬದಲಾಗಿ ಮರಣವು ಸಮೀಪಿಸದಂತೆ ಮಾಡುತ್ತದೆ, ಇಷ್ಟು ಉನ್ನತವಾಗಿ ಜ್ಞಾನಶಕ್ತಿಯನ್ನು ಕೊಡುವ ಆಹಾರವನ್ನು ನಾವು ತೆಗೆದುಕೊಳ್ಳಬೇಕು, ಒಳ್ಳೆಯ ಗುಣವನ್ನು ಉಂಟು ಮಾಡುವ ಆಹಾರವನ್ನೇ ತಿನ್ನಬೇಕು.

ಛಾಂದೋಗ್ಯೋಪನಿಷತ್ ನಲ್ಲಿ ಈ ವಿಧವಾಗಿ ಹೇಳಲಾಗಿದೆ,

"ಆಹಾರ ಶುದ್ಧ ಸತ್ವ ಶುದ್ಧಿಹಿ

ಸತ್ವ ಶುದ್ಧ ದ್ಯವಾ ಸ್ಮೃತಿಹಿ

ಸ್ಮೃತಿ ಲಂಭೇ ಸರ್ವ ಗ್ರಂಥಾನಾಂ, ವಿಪ್ರಮೋಕ್ಷಹ"

ಆಹಾರ ಶುದ್ಧಿಯಿಂದಲೇ ಮಾನಸಿಕ ಶುದ್ಧಿಯಾಗುತ್ತದೆ, ಅದರಿಂದಲೇ ಸತ್ಯ ಶುದ್ಧಿ ಏರ್ಪಡುತ್ತದೆ, ಅದರಿಂದ ಭಗವಂತನ ಸ್ಮರಣೆ ಏರ್ಪಡುತ್ತದೆ, ನಿರಂತರ ಭಗವಂತನ ಸ್ಮರಣೆಯಿಂದಲೇ ಬಂಧಗಳೆಲ್ಲದರಿಂದಲೂ ವಿಮುಕ್ತರಾಗುತ್ತೇವೆ.

ಇದರಿಂದ ಅರ್ಥವಾಗುವುದೇನೆಂದರೆ ಆಹಾರ ಶುದ್ಧಿ ಯಿಂದಲೇ ಮನಸ್ಸು ಶುದ್ಧಿ ಯಾಗುತ್ತದೆ, ಮನಸ್ಸು ಶುದ್ಧಿಯಿಂದ ಹೃದಯ ಶುದ್ಧಿ, ಹೃದಯ ಶುದ್ಧಿಯಿಂದ ದೃಢ ವಾಗುವ ಪ್ರಜ್ಞೆ ಉಂಟಾಗುತ್ತದೆ, ದೃಢವಾದ ಪ್ರಜ್ಞೆಯಿಂದ ಆತ್ಮಕ್ಕೆ ಇರುವ ಬಂಧಗಳೆಲ್ಲಾ ಕಳಚುತ್ತದೆ, ಅದಕ್ಕೇ ಸಾಧಕರು ಎಂತಹ ಆಹಾರ ತಿನ್ನಬೇಕು? ಹೇಗಿರಬೇಕೋ ಕೃಷ್ಣ ಭಗವಾನನು ಈ ಕೆಳಗಿನ ಶ್ಲೋಕದ ಮೂಲಕ ಹೇಳಿದ್ದಾರೆ.

**ಶ್ಲೋಕ : ಯುಕ್ತಾಹಾರ ವಿಹಾರಸ್ಯ, ಯುಕ್ತ ಚೇಷ್ಟಸ್ಯ ಕರ್ಮಸು**

**ಯುಕ್ತ ಸ್ವಪ್ನಾವ ಬೋಧಸ್ಯ ಯೋಗೋಭವತಿ ದುಃಖಃ ( ಭ. ಗೀ 6–17)**

ಸಾಧಕರು ಯುಕ್ತವಾದ ಆಹಾರ ಅಂದರೆ (ಮಿತವಾದ ಸಾತ್ವಿಕವಾದ), ಯುಕ್ತವಾದ ವಿಹಾರ ಅಂದರೆ (ಪ್ರವರ್ತನೆ), ಯುಕ್ತವಾದ ನಿದ್ರೆ ಅಂದರೆ (ಮಿತ ನಿದ್ರೆ) ಯುಕ್ತ ವಾದ ಕರ್ಮಗಳು (ಒಳ್ಳೆಯ ಕರ್ಮಗಳು) ಹೊಂದಿರಬೇಕು ಎಂದು ಈ ಶ್ಲೋಕದ ಮೂಲಕ ಹೇಳಲಾಗಿದೆ.

ಅಷ್ಟೇ ಅಲ್ಲದೆ ಸಾಧಕನು ಆಹಾರ ವಿಷಯದಲ್ಲಿ ಇನ್ನೂ ಎಚ್ಚರ ವಹಿಸಬೇಕು. ಎ) ಪಾತ್ರೆ ಶುದ್ಧಿ, ಬಿ) ಪದಾರ್ಥ ಶುದ್ಧಿ, ಸಿ) ಪಾಕ ಶುದ್ಧಿ.

**ಎ) ಪಾತ್ರೆ ಶುದ್ಧಿ:** ಎಂದರೆ ಪಾತ್ರೆಗಳು ಶುಭ್ರವಾಗಿ ತೊಳೆಯುವುದಲ್ಲ, ಮಾಂಸ ಬೇಯಿಸದ ಪಾತ್ರೆಗಳು ಮಾತ್ರವೇ ಉಪಯೋಗಿಸಬೇಕು, ಅಂತಹ ಪಾತ್ರೆಗಳಲ್ಲಿ ಬೇಯಿಸಿದ ಆಹಾರವನ್ನು ಮಾತ್ರ ತಿನ್ನಬೇಕು. ಪೂಜೆಗಳಲ್ಲಿ ಹಬ್ಬಗಳಲ್ಲಿ ಮಾಂಸವನ್ನು ಬೇಯಿಸಿದ ಪಾತ್ರೆಗಳಲ್ಲಿ ಪ್ರಸಾದ ಮಾಡಿ ವಿಗ್ರಹಗಳಿಗೆ ನೈವೇದ್ಯ ಮಾಡುವುದಿಲ್ಲ ಏಕೆಂದರೆ ಆ ಪಾತ್ರೆಯಲ್ಲಿ ಜೀವಿಯನ್ನು ಕೊಂದ ಪಾಪವು ಇರುತ್ತದೆ. ಅದನ್ನು "ನೀಸು" ಎನ್ನುತ್ತೇವೆ, ಅಂದರೆ "ನೀಚವಾದ ಆಹಾರ" ಎಂದು ನಮಗೆ ಗೊತ್ತಿಲ್ಲದೇ ಹೇಳುತ್ತಿದ್ದೇವೆ.

ನಾವು ತಯಾರಿಸಿದ ವಿಗ್ರಹಗಳಿಗೇ ಮಾಂಸಾಹಾರ ಬೇಯಿಸಿದ ಪಾತ್ರೆಯಲ್ಲಿ ಪ್ರಸಾದ ಬೇಯಿಸದಿರುವಾಗ ಭಗವಂತನೇ ನಿರ್ಮಿಸಿ, ಭಗವಂತನೇ ನೆಲೆಸಿರುವ ಈ ಶರೀರದಲ್ಲಿ ಅಂತಹ ಪಾತ್ರೆಗಳಲ್ಲಿ ಮಾಡಿದ ಆಹಾರವನ್ನು ಹೇಗೆ ಮಾಡುತ್ತೇವೆ? ನಾವು ಎಷ್ಟು ಅಜ್ಞಾನಿಗಳೊ ನೋಡಿ, ನಾವು ಕಟ್ಟಿದ ದೇವರ ವಿಗ್ರಹಗಳಿಗೆ ಪಂಚಾಮೃತಗಳೊಂದಿಗೆ ಅಭಿಷೇಕ ಮಾಡುತ್ತೇವೆ, ಒಳ್ಳೆಯ ಪಾತ್ರೆಯಲ್ಲಿ ಮಾಡಿದ ಅಡುಗೆಯನ್ನೇ ನೈವೇದ್ಯ ಮಾಡುತ್ತೇವೆ, ಆದರೆ ಭಗವಂತ ನಿರ್ಮಿಸಿ ತಾನೇ ಸ್ವಯಂ ನೆಲೆಸಿರುವ ಮಾನವ ದೇವಾಲಯದಲ್ಲಿ ಮಧ್ಯವನ್ನು ಅಭಿಷೇಕ ಮಾಡುತ್ತೇವೆ, ಮಾಂಸಾಹಾರದ ನೈವೇದ್ಯ ಮಾಡುತ್ತೇವೆ.

ಮಾನವ ಜನ್ಮ ಎತ್ತಿ ಜ್ಞಾನವಿಲ್ಲದೆ ಇಂತಹ ಕೆಲಸಗಳಿಂದ ಅಜ್ಞಾನದಿಂದ ಮಾನವನು ನಿರಂತರ ದುಃಖದಲ್ಲಿದ್ದಾನೆ. ಆದ್ದರಿಂದಲೇ ಪತ್ರೀಜಿಯವರು ಶಿರಡಿ ಧ್ಯಾನಯಜ್ಞದಲ್ಲಿ "ಮಾಂಸಾಹಾರ ಬೇಯಿಸಿದ ಪಾತ್ರೆಗಳನ್ನು ಬದಲಾಯಿಸಬೇಕು ಎಂದರು ಅದರಲ್ಲಿ ಬೇಯಿಸಿದ ಪದಾರ್ಥಗಳನ್ನು ತಿನ್ನಬಾರದು" ಎಂದು ಹೇಳಿದ್ದಾರೆ ನಾವು ಹಾಗೆ ಒಳ್ಳೆಯ ಪಾತ್ರೆಯಲ್ಲಿ ಮಾಡಿದ ಆಹಾರವನ್ನು ತಿನ್ನುವುದರಿಂದ ಪಾಪವೆನ್ನುವ ದೋಷ ಇರುವುದಿಲ್ಲ ರಜೋಗುಣ ಇರುವುದಿಲ್ಲ.

**ಬಿ) ಪದಾರ್ಥ ಶುದ್ಧಿ :** ಕರ್ಮಮಯವಾದ ಶರೀರಕ್ಕೆ ಧರ್ಮಯುಕ್ತವಾದ ಆಹಾರ ನೀಡಬೇಕು. ಎಷ್ಟೋ ಜನರು ಫಸ್ಟ್ ಕ್ಲಾಸ್ ಭೋಜನ ಮಾಡುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ, ಆದರೆ ಇದರಿಂದಲೇ ಮನುಷ್ಯ ಥರ್ಡ್ ಕ್ಲಾಸ್‌ಗೆ ಮಾರ್ಪಾಟು ಆಗುತ್ತಿದ್ದಾನೆ, ನಿಜವಾಗಿ ಫಸ್ಟ್ ಕ್ಲಾಸ್ ಭೋಜನ ಎಂದರೆ ಶರೀರವನ್ನು ಆರೋಗ್ಯವಂತವಾಗಿ ಮಾಡಿ ಮನಸ್ಸನ್ನು ಪ್ರಶಾಂತವಾಗಿರಿಸಿ ಬುದ್ಧಿಯನ್ನು ತೇಜೋವಂತವಾಗಿ ಮಾಡುವುದು, ನಮ್ಮಲ್ಲಿ ಒಳ್ಳೆಯ ಲಕ್ಷಣಗಳಿದ್ದರೇನೇ ಒಳ್ಳೆಯ ಸಾಧನೆಯಾಗುತ್ತದೆ.

ಮಲ, ಕ್ರಿಮಿ, ಕೀಟಗಳು ಕೊಳೆತ ಪದಾರ್ಥ ಮೊದಲಾದವುಗಳನ್ನು ತಿನ್ನುವ ಹಂದಿ, ಕೋಳಿ, ಮೀನುಗಳ ಮಾಂಸವನ್ನು ತಿನ್ನುವುದರಿಂದ ನಮ್ಮಲ್ಲಿರುವ ಜ್ಞಾನ ನಶಿಸುತ್ತದೆ, ಅವುಗಳ ತಲೆ ನೆಲದ ಕಡೆ ನೋಡುತ್ತಿರುತ್ತವೆ. ಅಂತಹ ಪ್ರಾಣಿಗಳನ್ನೇ ಆಹಾರವಾಗಿ ಸೇವಿಸುವುದರಿಂದ ನಮ್ಮ ಜ್ಞಾನದಮಟ್ಟ ಕೆಳಗೆ ಇಳಿಯುತ್ತದೆ ಹೊರತು ಮೇಲೆ ಏರುವುದಿಲ್ಲ.

ವೃಕ್ಷಗಳೆಲ್ಲಾ ಸೂರ್ಯನ ಕಡೆಗೆ ಇರುತ್ತವೆ, ಸೂರ್ಯ ರಶ್ಮಿಯಿಂದ ಬೆಳೆಯುತ್ತವೆ, ಅವುಗಳಿಂದ ಬಂದ ಆಹಾರವನ್ನು ತಿನ್ನುವುದರಿಂದ ನಮ್ಮಲ್ಲಿ ಜ್ಞಾನ ಊರ್ಧ್ವ ಮುಖವಾಗಿ ಬೆಳೆಯುತ್ತದೆ ಪರಮಾತ್ಮನ ಜ್ಞಾನವನ್ನು ಮೊಟ್ಟ ಮೊದಲು ಸೂರ್ಯನಿಗೆ ಬೋಧಿಸಲ್ಪಟ್ಟಿದೆ (ಭಗವದ್ಗೀತೆಯ ಆಧಾರವಾಗಿ) ಆದ್ದರಿಂದ 'ಸೂರ್ಯನು ಜ್ಞಾನಕ್ಕೆ ಪ್ರತೀಕ' ಎನ್ನುತ್ತಾರೆ ಹಾಗೆಯೇ 'ಸೂರ್ಯ ಭಗವಾನ್' ಎನ್ನುತ್ತಾರೆ, ಕಣ್ಣಿಗೆ ಕಾಣುವ ದೈವ ಎನ್ನುತ್ತಾರೆ, ಆದ್ದರಿಂದ ನಾವು ಶಾಕಾಹಾರವನ್ನು ತಿನ್ನಬೇಕು.

**ಸಿ) ಪಾಕ ಶುದ್ಧಿ:** ನಾವು ಅಡುಗೆ ಮಾಡುವಾಗ ತುಂಬಾ ಪ್ರೇಮದಿಂದ, ಶಾಂತವಾದ ಮನಸ್ಸಿನೊಂದಿಗೆ ಅಡುಗೆ ಮಾಡಬೇಕು, ದೇವರಿಗೆ ನೈವೇದ್ಯ ಮಾಡಲು ಎಷ್ಟು ಭಕ್ತಿ ಶ್ರದ್ಧೆಗಳಿಂದ ಪ್ರಸಾದ ತಯಾರು ಮಾಡುತ್ತೀರೋ ಹಾಗೇ ಯಾರಿಗೆ ಊಟ ಬಡಿಸಿದರೂ, ಅಷ್ಟೇ ಪ್ರೇಮದಿಂದ ಶ್ರದ್ಧೆಯಿಂದ ಬಡಿಸಬೇಕು ಮನದಲ್ಲೇ ಅವರನ್ನು ಬೈದುಕೊಂಡು ಬಡಿಸುವುದಕ್ಕಿಂತ ಅವರಿಗೆ ಊಟಕ್ಕೆ ಬಡಿಸದಿದ್ದರೇನೇ ಒಳಿತು, ನಮ್ಮ ದೇಶದಲ್ಲಿ ಅತಿಥಿಯನ್ನು ದೇವರಿಗೆ ಹೋಲಿಸುತ್ತಾರೆ, ಅದಕ್ಕೆ 'ಅತಿಥಿ ದೇವೋ ಭವ' ಎಂದಿದ್ದಾರೆ. ನಾವು ಹಾಗೆ ಭಾವಿಸಿ ಅವರಿಗೆ ಅಡುಗೆ ಮಾಡಿ ಬಡಿಸಬೇಕು ಅವರು ಕೂಡ ನಮ್ಮನ್ನು 'ಅನ್ನಪೂರ್ಣ ಸುಖೀಭವ' ಎಂದು ಆಶೀರ್ವದಿಸುತ್ತಾರೆ. ನೀನು ದೇವರಂತೆ ಭಾವಿಸುವ ವ್ಯಕ್ತಿಯ ಆಶೀರ್ವಚನಗಳು ನಮಗೆ ಒಳಿತನ್ನುಂಟು ಮಾಡುತ್ತವೆ.

ಈ ಮೂರು ಶುದ್ಧಿಗಳನ್ನು ಅನುಸರಿಸುವುದರಿಂದ ನಮ್ಮ ಮನಸ್ಸು ಶರೀರ ಆರೋಗ್ಯವಾಗಿದ್ದು ಮನಸ್ಸಿನೊಂದಿಗೆ ಧ್ಯಾನ ಸಾಧನೆಗೆ ಸಹಕರಿಸುತ್ತದೆ.

**3) ಸಮಯ ನಿಯಮ:** ಸಾಧನೆ ಪ್ರಾರಂಭಿಸಿದವರು ಸಮಯ ನಿಯಮವನ್ನು ಅನುಸರಿಸಬೇಕು, ದಿನವೂ ಕ್ರಮ ತಪ್ಪದಂತೆ ಬೆಳಗಿನ ಜಾವ ಒಂದೇ ಸಮಯದಲ್ಲಿ 'ಧ್ಯಾನ'ಕ್ಕೆ ಕುಳಿತುಕೊಂಡರೆ, ಕೆಲವು ದಿನಗಳು ಆಗುವ ಹೊತ್ತಿಗೆ ಶರೀರಕ್ಕೆ ಧ್ಯಾನ ಅಭ್ಯಾಸವಾಗಿ 'ಧ್ಯಾನ'ವು ಚೆನ್ನಾಗಿ ಆಗುತ್ತದೆ, ಕಾಲ ತುಂಬಾ ಮೌಲ್ಯಯುತವಾದದ್ದು, ಸಮಯವನ್ನು ಸಾಧಕನು ಯಾವಾಗಲೂ ವ್ಯರ್ಥ ಮಾಡಬಾರದು, ಪ್ರಾಪಂಚಿಕ ಜ್ಞಾನ ಹೊಂದಲು ಸ್ವಲ್ಪ ಶ್ರದ್ಧೆ ಇದ್ದರೆ ಸಾಕು, ಆದರೆ ಆತ್ಮ ಜ್ಞಾನ ಹೊಂದಲು ತುಂಬಾ ಕಷ್ಟ ಪಡಬೇಕು.

ಮನಸ್ಸು ಸಾಧಕನಿಗೆ ತುಂಬಾ ಕಷ್ಟ ಕೊಡುತ್ತದೆ, ಹಗಲೆಲ್ಲಾ ವ್ಯವಹಾರದಲ್ಲಿ ಇರುವವರಿಗೆ ಶರೀರ ಆಯಾಸಗೊಂಡು ರಾತ್ರಿ ನಿದ್ರಿಸಬೇಕು ಎನಿಸುತ್ತದೆ, ತಮೋಗುಣ ಇರುವವರಿಗೆ ನಿದ್ರೆ ಹೆಚ್ಚು ಆದ್ದರಿಂದ ನಾವು ತಿನ್ನುವ ಆಹಾರದಲ್ಲಿ ತಮೋಗುಣ ಉಂಟುಮಾಡುವ ಪದಾರ್ಥಗಳು ಇಲ್ಲದಿರುವ ಹಾಗೆ ನೋಡಿಕೊಂಡರೆ ನಿದ್ರೆಯನ್ನು ಜಯಿಸಬಹುದು, ರಾತ್ರಿಯಾಗಲಿ ಅಥವಾ ನಸುಕಿನಲ್ಲಿ ಆಗಲಿ ಧ್ಯಾನಮಾಡಬಹುದು, ಆದರೆ ದಿನವೂ ಕ್ರಮವಾಗಿ ಒಂದೇ ಸಮಯಕ್ಕೆ ಧ್ಯಾನಮಾಡುವುದರಿಂದ 'ಧ್ಯಾನ'ವು ಅಭ್ಯಾಸವಾಗುತ್ತದೆ, ಸಾಧಕ ಸಮಯವನ್ನು ಹೀಗೆ ಸದ್ವಿನಿಯೋಗ ಮಾಡಿಕೊಳ್ಳಬೇಕು.

**4 ನಿವಾಸ ನಿಯಮ:** ಸಾಧಕನು ಧ್ಯಾನಮಾಡಿಕೊಳ್ಳಲು ಪ್ರಶಸ್ತವಾದ ನಿವಾಸವನ್ನು ಆರಿಸಿಕೊಳ್ಳಬೇಕು, ತಾನು ಇರುವ ಸ್ಥಾನದ ಪರಿಸ್ಥಿತಿ, ಪ್ರಭಾವಗಳಿಗೆ ಅನುಗುಣವಾಗಿ ಸಹ ಭಾವನೆಗಳು ಉಂಟಾಗುತ್ತವೆ, ಸಹಜವಾಗಿ ನಾವು ಸಂಚರಿಸುವ ಪ್ರದೇಶದಿಂದಲೇ ಭಾವಗಳು ಪ್ರೇರೇಪಿಸಲ್ಪಡುತ್ತವೆ ಉದಾಹರಣೆಗೆ ಒಂದು ವೇಶ್ಯಾಗೃಹದ ಸಮೀಪದಲ್ಲಿ ಇದ್ದಾಗ ಒಂದು ವಿಧದ ಭಾವ, ದೇವಾಲಯದ ಬಳಿ ಇದ್ದಾಗ ಪವಿತ್ರ ಭಾವಗಳು ಹೇಗೆ ಸಹಜವಾಗಿ ಬರುತ್ತವೋ ಹಾಗೆಯೇ ನಾನು ವಾಸಿಸುವ ಪ್ರದೇಶ ಸಂಚರಿಸುವ ಪ್ರದೇಶದ ಅನುಗುಣವಾಗಿ ಭಕ್ತಿ ವೈರಾಗ್ಯ ಭಾವಗಳು ಉಂಟಾಗುತ್ತವೆ.

ಇನ್ನೊಂದು ಉದಾಹರಣೆ ನೋಡೋಣ ಸ್ವಾತಿ ಮಳೆಯ ಹನಿಗಳು ಕೆಸರಿನ ಕೊಳದಲ್ಲಿ ಬಿದ್ದರೆ ಕೆಸರಿನಂತೆ ಬದಲಾಗುತ್ತವೆ, ಕುಡಿಯುವ ನೀರಿನ ಕೊಳದಲ್ಲಿ ಬಿದ್ದರೆ ಕುಡಿಯುವ ನೀರಾಗಿ ಬದಲಾಗುತ್ತದೆ, ಹಾವಿನ ಬಾಯಲ್ಲಿ ಬಿದ್ದರೆ ವಿಷವಾಗುತ್ತದೆ

ಮುತ್ತಿನ ಚಿಪ್ಪಿನಲ್ಲಿ ಬಿದ್ದರೆ ಮುತ್ತಿನಂತೆ ಬದಲಾಗುತ್ತದೆ, ಹೀಗೆ ಸ್ಥಾನಭೇದದ ಅನುಸಾರವಾಗಿ ರೂಪವು ಬದಲಾಗುತ್ತದೆ ಆದ್ದರಿಂದ ಸಾಧನಾ ಸ್ಥಳವು ಏಕಾಂತವಾಗಿ ನಿಶ್ಯಬ್ದವಾಗಿಯೂ, ಸಾಧನೆಗೆ ಅನುಕೂಲವಾಗಿ ಇರಬೇಕು.

**5. ಸಹವಾಸ ನಿಯಮ:** ಇದು ಸಾಧಕನಿಗೆ ತುಂಬಾ ಮುಖ್ಯ. ಈ ದಿನಗಳಲ್ಲಿ ಒಳಿತು ಮಾಡುವವರಿಗಿಂತ ಕೆಡುಕು ಮಾಡುವವರೇ ಹೆಚ್ಚು, ಆದ್ದರಿಂದ ಸರಿಯಾದ ಸ್ನೇಹಿತರನ್ನೇ ಆರಿಸಿಕೊಳ್ಳಬೇಕು, ಮಾಂಸಾಹಾರದ ಅಭ್ಯಾಸವೇ ಇರದ ಮನೆಯಲ್ಲಿ ಹುಟ್ಟಿದರೂ ಮಾಂಸಾಹಾರವನ್ನು ತಿನ್ನುವ ಅಭ್ಯಾಸವನ್ನು ಮಾಡಿಕೊಂಡಿರುತ್ತಾರೆ, ಸಾಧನೆ ಮಾಡಬೇಕು ಆತ್ಮ ಜ್ಞಾನ ಹೊಂದಬೇಕು ಎಂದುಕೊಳ್ಳುವವರು ಮದ್ಯ ಮಾಂಸಗಳನ್ನು ಪ್ರೋತ್ಸಾಹಿಸುವಂತಹ ಸ್ನೇಹಿತರನ್ನು ಬಿಡುವುದೇ ಉತ್ತಮ, ಸಾಧಕನಿಗೆ ಸಹವಾಸ ದೋಷ ಇರಲೇ ಬಾರದು. ಉದಾಹರಣೆಗೆ ಒಂದು ಕಾಡಿನಲ್ಲಿ ರಾಜನು ಒಂಟಿಯಾಗಿ ಕುದುರೆಯ ಮೇಲೆ ಹೋಗುತ್ತಿದ್ದನಂತೆ, ಸ್ವಲ್ಪ ದೂರ ಹೋಗುವುದರೊಳಗೆ ಒಂದು ದೊಡ್ಡ ಭವನ ಕಾಣಿಸಿತಂತೆ ಅಲ್ಲಿ ಒಂದು ಗಿಳಿ ಪಂಜರದಿಂದ 'ಹಿಡಿದುಕೊಳ್ಳಿ ಹಿಡಿದುಕೊಳ್ಳಿ ಓಡಿ ಹೋಗುತ್ತಿದ್ದಾನೆ' ಎಂದು ಹೇಳುತ್ತಿತ್ತಂತೆ, ರಾಜನಿಗೆ ಭಯವಾಗಿ ಸ್ವಲ್ಪ ಮುಂದೆ ಕುದುರೆಯ ಮೇಲೆ ವೇಗವಾಗಿ ಹೋಗುತ್ತಿದ್ದಾಗ ಋಷಿಗಳ ಆಶ್ರಮ ಬಂದಿತಂತೆ ಆ ಆಶ್ರಮದ ಮುಂದೆ ಇರುವ ಪಂಜರದಲ್ಲಿ ಇನ್ನೊಂದು ಗಿಳಿ 'ಬನ್ನಿ ಬನ್ನಿ ದಯಮಾಡಿಸಿ ಗುರುಗಳು ಬರುತ್ತಾರೆ ಎಂದಿತಂತೆ'!! ಆಗ ರಾಜನಿಗೆ ಧೈರ್ಯ ಬಂದು ಏನಿದು! ನೀನು ಹೀಗೆ ಹೇಳುತ್ತಿರುವೆ ಸ್ವಲ್ಪ ಹಿಂದೆ ಇದ್ದಾಗ ಇನ್ನೊಂದು ಗಿಣಿ 'ಹಿಡಿಯಿರಿ, ಹಿಡಿಯಿರಿ' ಎಂದು ಹೇಳಿತು ಎಂದರೆ, ಆ ಗಿಣಿ "ನಾವಿಬ್ಬರು ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದವರು ಅದು ಕಳ್ಳರ ಕೈಗೆ ಸಿಲುಕಿ ಹಾಗೆ ಇದೆ, ನಾನು ಮುನಿಗಳ ಕೈಯಲ್ಲಿ ಸಿಕ್ಕಿ ಆಶ್ರಮದಲ್ಲಿದ್ದು ಹೀಗೆ ಹೇಳುತ್ತೇನೆ, ಎಲ್ಲಾ ಸಹವಾಸ ದೋಷ" ಎಂದು ಹೇಳಿತಂತೆ.

ನೋಡಿದಿರಾ! ನಾವು ಯಾರೊಂದಿಗೆ ಇರುತ್ತೇವೋ ಅವರ ಆಲೋಚನೆಗಳು, ಅಭ್ಯಾಸಗಳು, ಅಭಿಪ್ರಾಯಗಳು ಬರುತ್ತವೆ. ಆದ್ದರಿಂದ ಧ್ಯಾನಸಾಧನೆಗೆ ಆತ್ಮಜ್ಞಾನವನ್ನು ಪ್ರೋತ್ಸಾಹಿಸುವಂತಹ ಸ್ನೇಹಿತರನ್ನೇ ಆಯ್ಕೆ ಮಾಡಿಕೊಳ್ಳಬೇಕು.



**'ಪ್ರತೀ ಕಾರ್ಯದ ಹಿಂದೆ ಒಂದು ಕಾರಣ ಇರುತ್ತದೆ !'**
**ಬ್ರಹ್ಮರ್ಷಿ ಪತ್ರೀಜಿ**

# ಆತ್ಮಜ್ಞಾನ ಹೊಂದಬೇಕೆಂದರೆ ಅನುಸರಿಸಬೇಕಾದದ್ದು

ಆತ್ಮಜ್ಞಾನ ಹೊಂದಬೇಕೆಂದರೆ ಮುಖ್ಯವಾಗಿ ಐದು ವಿಷಯಗಳು ಅನುಸರಿಸಬೇಕು 1. ಸದ್ಗುರು ಸೇವೆ, 2. ಸತ್ಸಂಗ, 3. ಸಜ್ಜನ ಸಾಂಗತ್ಯ, 4. ಸ್ವಾಧ್ಯಾಯ, 5. ಸೇವೆ.

**1. ಸದ್ಗುರು ಸೇವೆ :** ಆತ್ಮಜ್ಞಾನ ಹೊಂದಬೇಕೆನ್ನುವ ಸಾಧಕರು ಧ್ಯಾನಮಾಡುವುದೇ ಅಲ್ಲಾ! ಗುರು ಬೋಧಿಸಿದ್ದನ್ನು ಸಹ ತಪ್ಪದೇ ಆಚರಿಸಬೇಕು, ಹಾಗೆ ಆಚರಿಸುವುದೇ ಸದ್ಗುರು ಸೇವೆ.

ಆದರೆ ಈ ದಿನಗಳಲ್ಲಿ ಎಷ್ಟೋ ಜನರು ಗುರುಗಳಾಗಿ ಬರುತ್ತಿದ್ದಾರೆ, ಅವರಲ್ಲಿ ಸದ್ಗುರುವನ್ನು ಗುರುತಿಸುವುದು ತುಂಬಾ ಕಷ್ಟ, ಆದರೆ ನಮಗೆ ಸ್ವಲ್ಪ ಬುದ್ಧಿ ಜ್ಞಾನವಿದ್ದರೆ ಗುರುತಿಸಬಲ್ಲೆವು, ಸದ್ಗುರುಗಳು ಯಾವಾಗಲೂ 'ಸತ್ಯ'ವನ್ನೇ ಬೋಧಿಸುತ್ತಾರೆ 'ಸತ್ಯ'ದಲ್ಲೇ ಜೀವಿಸುತ್ತಾರೆ. ಸತ್ಯಕ್ಕಾಗಿಯೇ ಅವರ ಜೀವನ ಮುಡುಪಾಗಿಡುತ್ತಾರೆ. ಅವರ ಶಿಷ್ಯರನ್ನು ಸತ್ಯಮಾರ್ಗದಲ್ಲಿ ನಡೆಸುತ್ತಾರೆ, ಅಂತಹವರೇ ಪತ್ರೀಜಿ ಅವರು ಯಾವಾಗಲೂ ಆತ್ಮಜ್ಞಾನವನ್ನು ಬೋಧಿಸುತ್ತಾರೆ. "ನೀನು ಶರೀರವಲ್ಲ ಆತ್ಮವೆಂದು ತಿಳಿದುಕೋ" ಎಂದು ಬೋಧಿಸುತ್ತಾರೆ, ಎಲ್ಲರನ್ನೂ ಆ ಮಾರ್ಗದಲ್ಲಿ ನಡೆಸುತ್ತಾರೆ ಅಂತಹ ಮಹಾನುಭಾವರು ನಮಗೆ ಗುರುಗಳಾಗಿ ಸಿಕ್ಕಿರುವುದು ಎಷ್ಟೋ ಜನ್ಮಗಳ ಪುಣ್ಯ ಫಲವೇ ಹೊರತು ಬೇರೇನೂಅಲ್ಲ.

ಅದಕ್ಕೆ ಆದಿಶಂಕರಾಚಾರ್ಯರು ಮನುಷ್ಯತ್ವ, ಮುಮುಕ್ಷತ್ವ, ಮಹಾಪುರುಷ ದರ್ಶನವು ದುರ್ಲಭವೆಂದು ಹೇಳಿದ್ದಾರೆ.

"ಮನುಷ್ಯತ್ವ" ಎಂದರೆ 84 ಲಕ್ಷ ಜೀವರಾಶಿಗಳಲ್ಲಿ ಮಾನವ ಜನ್ಮದಲ್ಲೇ ಜ್ಞಾನ ಹೊಂದುವ ಅವಕಾಶ ಸಿಗುತ್ತದೆ ತಾನೇ ದೇವರು ಎಂದು ತಿಳಿದುಕೊಳ್ಳುವ ಅವಕಾಶವೂ ದೊರೆಯುತ್ತದೆ, ಆದ್ದರಿಂದ ಮಾನವ ಜನ್ಮ ದೊಡ್ಡದು ಎಂದು ಹೇಳುತ್ತಾರೆ.

"ಮುಮುಕ್ಷತ್ವ" ಎಂದರೆ 'ಮೋಕ್ಷ' ಬೇಕೆಂಬ ಕೋರಿಕೆ ಉಂಟಾಗುವುದು, 'ಮೋಕ್ಷ' ಎಂದರೆ ಮೋಹ ಕ್ಷಯವಾಗುವುದು, ಅಂದರೆ ಎಲ್ಲದರ ಮೇಲೆ ಇರುವ ವ್ಯಾಮೋಹಗಳನ್ನು ತೊಲಗಿಸಿಕೊಳ್ಳುವುದು ಅದು ಯಾವಾಗ ಬರುತ್ತದೆ? ಎಂದರೆ "ಪ್ರಪಂಚದಲ್ಲಿ ಯಾವುದರ ಮೇಲೆ ಮಮಕಾರವಿಟ್ಟರೂ ಹೊಂದುವುದು ಅಲ್ಪ ಸುಖವೇ, ಅನಂತ ದುಃಖವಿದೆ" ಎಂದು ತಿಳಿದುಕೊಂಡಾಗ ಮೋಕ್ಷವು ಸಿಗುತ್ತದೆ, ಅಷ್ಟೇ ಅಲ್ಲ ಆತ್ಮದ ಮೇಲೆ ಮಮಕಾರ ಉಂಟಾದಾಗ ಅನಂತವಾದ ಆನಂದ ಉಂಟಾಗುತ್ತದೆ

ಎಂದು ತಿಳಿದಾಗ ಸಹ ಎಲ್ಲದರ ಮೇಲೂ ಇರುವ ವ್ಯಾಮೋಹಗಳನ್ನು ಕಡಿಮೆ ಮಾಡಿಕೊಳ್ಳುತ್ತೇವೆ ಅದೇ ಮೋಕ್ಷ ಸ್ಥಿತಿ.

ಇದು ತಿಳಿಯಬೇಕೆಂದರೆ ಒಬ್ಬ ಮಹಾಪುರುಷನಾದ 'ಸದ್ಗುರು' ಸಿಗಬೇಕು, ಅವರು ಸಿಗುವುದು ತುಂಬಾ ಕಷ್ಟವಾದ್ದರಿಂದ ಮನುಷ್ಯತ್ವ, ಮುಮುಕ್ಷತ್ವ ಮಹಾಪುರುಷ ದರ್ಶನ ದುರ್ಲಭ ಎಂದು ಹೇಳಿದ್ದಾರೆ. ಅಂತಹ ಮಹಾಪುರುಷರು ಆಗಾಗ ಭೂಮಿಯ ಮೇಲೆ ಅವತರಿಸುತ್ತಾರೆ

ಈ ಭೂಮಿ ಮೇಲೆ ಮಾನವರು ಧ್ಯಾನವಿಲ್ಲದೇ, ಆತ್ಮಜ್ಞಾನ ತಿಳಿದುಕೊಳ್ಳದೇ, ಮಾಂಸಾಹಾರ ಪಾಪವೆಂದು ಅರಿಯದೇ ಎಷ್ಟೋ ಜನರು ಪಾಪಗಳನ್ನು ಮಾಡುತ್ತಿದ್ದಾರೆ. ಅವರೆಲ್ಲರಲ್ಲಿರುವ ದುರ್ಗುಣಗಳನ್ನು ಹೊಡೆದೋಡಿಸುವಂತೆ ಮಾಡಿ, ಅವರನ್ನು ಸಂಸ್ಕರಿಸಲು ಭೂಮಿ ಮೇಲೆ ಅವತರಿಸಿದ ಮಹಾಪುರುಷನೇ ಅವತಾರ ಪುರುಷನೇ ಪತ್ರೀಜಿ. ಇಂತಹವರನ್ನೇ 'ಸದ್ಗುರುಗಳು' ಎನ್ನುತ್ತಾರೆ. ಹಿಂದೆ ಒಂದೊಂದು ಕಾಲಕ್ಕೂ ಒಂದೊಂದು ಯುಗಕ್ಕೂ ಒಬ್ಬೊಬ್ಬ ಸದ್ಗುರುಗಳು ಭೂಮಿಯ ಮೇಲೆ ಬಂದಿದ್ದಾರೆ.

ಕೃತಯುಗಕ್ಕೆ – ದಕ್ಷಿಣಾಮೂರ್ತಿ

ತ್ರೇತಾಯುಗಕ್ಕೆ – ವಸಿಷ್ಠರು

ದ್ವಾಪರ ಯುಗಕ್ಕೆ – ವ್ಯಾಸರು

ಕಲಿಯುಗಕ್ಕೆ – ಶಂಕರಾಚಾರ್ಯರು

ಮತ್ತೆ ಈಗ ಕಲಿಯುಗ ಸಮಾಪ್ತಿ ಕೃತಯುಗದ ಪ್ರಾರಂಭವಾಗುತ್ತಿದೆ, ಈ ಸಂಧಿಯುಗದಲ್ಲಿ ಸದ್ಗುರು ಯಾರೆಂದರೆ ಪತ್ರೀಜಿಯವರೇ, ಅವರೇ ಈ ಭೂಮಂಡಲವೆಲ್ಲಾ ಧ್ಯಾನಮಯವಾಗಬೇಕು, ಎಲ್ಲರೂ ಆತ್ಮಜ್ಞಾನಿಗಳಾಗಿ ಬದಲಾಗಬೇಕು, ಎಂದು ಪ್ರಪಂಚವೆಲ್ಲಾ ತಿರುಗಿ ಆತ್ಮಜ್ಞಾನವನ್ನು ಬೋಧಿಸುತ್ತಿದ್ದಾರೆ. ಅಂತಹವರನ್ನು ಗುರುಗಳಾಗಿ ಪಡೆದ ನಾವು ಅದೃಷ್ಟವಂತರೇ ಅಲ್ಲವೇ!?.

**2.ಸತ್ಸಂಗ:** ಸತ್ಸಂಗವೆಂದರೆ ಸತ್ಯದೊಂದಿಗೆ ಸಂಗಮಿಸಿರುವುದು 'ಸತ್ಯ' ಎಂದರೆ 'ಆತ್ಮ', ಆದ್ದರಿಂದ ಆತ್ಮದೊಂದಿಗೆ ಕೂಡಿರುವುದೇ ಸತ್ಸಂಗ. ಅದೇ 'ಧ್ಯಾನ'ಅದಕ್ಕೆ ಶಂಕರಾಚಾರ್ಯರು ಹೀಗೆ ಹೇಳಿದ್ದಾರೆ.

'ಸತ್ಸಂಗತ್ವೇ ನಿಸ್ಸಂಗತ್ವಂ' ಎಂದು

ಅಂದರೆ ನಿರಂತರ ಸತ್ಯವನ್ನು ಅನುಸರಿಸುವುದರಿಂದ ಅಂದರೆ ಧ್ಯಾನಮಾಡುವುದರಿಂದ ಮಾತ್ರವೇ 'ನಿಸ್ಸಂಗತ್ವ' ಎನ್ನುವುದು ಬರುತ್ತದೆ. ನಿಸ್ಸಂಗತ್ವವೆಂದರೆ ಎಲ್ಲರೊಂದಿಗೆ, ಎಲ್ಲಾ ವಿಷಯಗಳೊಂದಿಗೆ ಇದ್ದರು ಯಾರನ್ನೂ ಯಾವುದನ್ನೂ ಅಂಟಿಕೊಳ್ಳದಂತೆ ಕಮಲದ ಎಲೆಯ ಮೇಲೆ ಇರುವ ನೀರ ಬಿಂದುವಿನಂತೆ ಸದಾ ಆತ್ಮದೊಂದಿಗೆ ಇರುವುದರಿಂದ ನಿಸ್ಸಂಗತ್ವ ಬರುತ್ತದೆ.

ಇದಕ್ಕೊಂದು ಉದಾಹರಣೆ ಒಂದು ಬಾರಿ ಕೃಷ್ಣನ ಅಷ್ಟ ಹೆಂಡತಿಯರು ಯಮುನಾ ನದಿಯಾಚೆಯ ತೀರದಲ್ಲಿರುವ ದೂರ್ವಾಸ ಮಹಾಮುನಿಗೆ ಭೋಜನ ಬಡಿಸಲು ಹೋಗಬೇಕೆಂದುಕೊಂಡರಂತೆ, ನದಿ ಉಕ್ಕಿ ಹರಿಯುತ್ತಿದ್ದುದರಿಂದ ಕೃಷ್ಣನನ್ನು ಹೇಗೆ ಹೋಗಬೇಕು? ಎಂದು ಕೇಳಿದರಂತೆ 'ಸದಾ ಬ್ರಹ್ಮಚಾರಿ ದಾರಿ ಕೊಡಬೇಕೆಂದು ಹೇಳಿದ್ದಾನೆ ಎಂದು ಕೇಳಿ ದಾರಿ ಬಿಡುತ್ತದೆ' ಎಂದು ಹೇಳಿದ್ದಕ್ಕೆ, ಅವರು ಹಾಗೆ ಕೇಳಿದ ಕೂಡಲೇ ದಾರಿ ಕೊಟ್ಟಿದ್ದರಿಂದ ಇವರು ನದಿ ದಾಟಿ ಆ ಮುನಿಗೆ ಭೋಜನವಿಟ್ಟು ಮರಳಿ ಬರಬೇಕು ಎಂದುಕೊಳ್ಳುವಾಗ ಮತ್ತೆ ನದಿ ಅಡ್ಡ ಬಂದಿತಂತೆ, ಆಗ ಸತ್ಯಭಾಮ ದೂರ್ವಾಸಮುನಿಯನ್ನು 'ಈಗ ನಾವು ಹೇಗೆ ಮರಳಿ ಹೋಗಬೇಕು' ಎಂದು ಕೇಳಿದ್ದಕ್ಕೆ ಅವರು 'ನಿತ್ಯೋಪಾಸಿ' ದಾರಿ ನೀಡಬೇಕೆಂದು ಹೇಳಿದನೆಂದು ಕೇಳಿ ದಾರಿ ನೀಡುತ್ತದೆ ಎಂದು ಹೇಳಿದರಂತೆ ಹಾಗೆ ಕೇಳಿದ್ದರಿಂದ ನದಿ ತನ್ನಷ್ಟಕ್ಕೆ ತಾನೇ ದಾರಿ ಬಿಟ್ಟಿದ್ದರಿಂದ ಎಲ್ಲರೂ ಮರಳಿ ಬಂದರು.

ಆದರೆ ಸತ್ಯಭಾಮೆಗೆ ತುಂಬಾ ಆಶ್ಚರ್ಯವಾಯಿತು ಅದಕ್ಕೆ ಕೃಷ್ಣನನ್ನು "ನೀವು ಹೇಳಿದ್ದೇನು? ಮಾಡುತ್ತಿರುವುದು ಏನು"? ಎಂದು ಅರ್ಥವಾಗದೆ ಸತ್ಯಭಾಮ ಕೃಷ್ಣನನ್ನು ಕೇಳಿದಳಂತೆ, "ನೀವು ಅಷ್ಟ ಹೆಂಡತಿಯರೊಂದಿಗೆ ಸಂಸಾರ ಮಾಡುತ್ತಿದ್ದೀರಾ ಅಲ್ಲವೇ? ನೀವು ಹೇಗೆ ಬ್ರಹ್ಮಚಾರಿಯಾಗುತ್ತೀರಾ? ನಮಗೆ ಅರ್ಥವಾಗಲಿಲ್ಲ, ಹಾಗೆ ನಾವು ಊಟ ಬಡಿಸಿದರೆ ಅವರು ತಿಂದರು!! ಹಾಗಾದರೆ ಅವರು ನಿತ್ಯ ಉಪವಾಸಿ ಹೇಗೆ ಆದರು"? ಎಂದು ಕೇಳಿದ್ದಕ್ಕೆ ಶ್ರೀಕೃಷ್ಣನು "ಸಮಯ ಬಂದಾಗ ನಿಮಗೆ ತಿಳಿಯುತ್ತದೆ" ಎಂದು ಹೇಳಿದನಂತೆ.

ಒಂದು ದಿನ ಕೆಲವರು ಸತ್ಯಭಾಮೆಯನ್ನು ಊಟಕ್ಕೆ ಕರೆದು, ಆಕೆ ಊಟಕ್ಕೆ ಕುಳಿತಾಗ ಆಕೆಯ ನೆತ್ತಿ ಮೇಲೆ ಒಂದು ಕತ್ತಿ ಇಟ್ಟು, 'ಅಮ್ಮಾ! ನಿಮ್ಮ ನೆತ್ತಿಯ ಮೇಲಿನ ಕತ್ತಿ ನಿಮಗೆ ಚುಚ್ಚಿಕೊಳ್ಳದೇ ತಿನ್ನಬೇಕು, ನಿಮ್ಮಲ್ಲಿರುವ ದೊಡ್ಡತನವನ್ನು (ಹಿರಿಮೆಯನ್ನು) ತಿಳಿಯಲು

ಈ ಪರೀಕ್ಷೆ", ಎಂದರಂತೆ ಆಕೆ ಕತ್ತಿ ಎಲ್ಲಿ ಚುಚ್ಚಿಕೊಳ್ಳುವುದೋ ಎಂದು ತಿನ್ನುವುದನ್ನು ಗಮನಿಸದೆ ಊಟ ಮಾಡಿ ಮನೆಗೆ ಬಂದಳಂತೆ.

ಆಗ ಕೃಷ್ಣನು "ಊಟ ಮಾಡಿದೆಯಾ? ಏನೇನು ಪದಾರ್ಥಗಳನ್ನು ಬಡಿಸಿದರು"? ಎಂದು ಕೇಳಿದಾಗ ಆಗ ಆಕೆ ನಡೆದಿದ್ದೆಲ್ಲ ಹೇಳಿ, "ಪದಾರ್ಥಗಳ ಮೇಲೆ ದೃಷ್ಟಿ ಇರದ ಕಾರಣ ನೆನಪಿಲ್ಲ" ಎಂದು ಹೇಳಿದಾಗ ಶ್ರೀ ಕೃಷ್ಣನು ನಾನು ಅಷ್ಟ ಹೆಂಡತಿಯರೊಂದಿಗೆ ಇದ್ದರೂ ನನ್ನ ದೃಷ್ಟಿ ಅವರ ಮೇಲೆ ಇರುವುದಿಲ್ಲ, ಆದ್ದರಿಂದ ನಾನು ಸದಾ ಬ್ರಹ್ಮಚಾರಿಯೇ, ಏಕೆಂದರೆ ನಾನು ಯಾವಾಗಲೂ ಬ್ರಹ್ಮದಲ್ಲಿ ವಿಹರಿಸುತ್ತೇನೆ. ನಾನು ನಿಸ್ಸಂಗನು ಆದ್ದರಿಂದ ನದಿ ದಾರಿ ನೀಡಿತು, ಹಾಗೆಯೇ ದೂರ್ವಾಸನು ಶರೀರ ಪೋಷಣೆಗಾಗಿ ಊಟ ಮಾಡಿದನು ಅಷ್ಟೇ ಹೊರತು ರುಚಿಗಾಗಿ ಅಲ್ಲ ಆದ್ದರಿಂದ ಆತ ನಿತ್ಯೋಪವಾಸಿ ಎಂದನಂತೆ.

ಆದಿ ಶಂಕರಾಚಾರ್ಯರು "ನಿಸ್ಸಂಗತ್ವೇ ನಿರ್ಮೋಹತ್ವ" ಎಂದು ಹೇಳಿದ್ದಾರೆ. ಅಂದರೆ ಈ ಪ್ರಪಂಚದ ಮೇಲೆ ಆಸಕ್ತಿ ಹೋದಾಗಲೇ ಮಮಕಾರ ಹೋಗುತ್ತದೆ, ಮಮಕಾರ ಹೋದಾಗಲೇ ನಿರ್ಮೋಹತ್ವ ಬರುತ್ತದೆ ನಿರ್ಮೋಹತ್ವ ಬಂದಾಗ ಎಲ್ಲದರ ಮೇಲೆ ಮೋಹ ನಶಿಸುತ್ತದೆ ಎಂದು ಹೇಳಲಾಗಿದೆ. ಶಂಕರಾಚಾರ್ಯರು "ನಿರ್ಮೋಹತ್ವೇ ನಿಶ್ಚಲ ತತ್ವ" ಎಂದಿದ್ದಾರೆ. ಎಲ್ಲದರ ಮೇಲೆ ಮೋಹ ನಶಿಸಿದಾಗ ಚಿತ್ತವು ನಿಶ್ಚಲವಾಗುತ್ತದೆ. ಸಾಧಕರನ್ನು ಕಷ್ಟಕ್ಕೆ ಒಳಪಡಿಸುವುದೇ ಚಿತ್ತ ಅದು ಯಾವಾಗಲೂ ಕಳೆದು ಹೋದದ್ದನ್ನು ನೆನಪಿಸಿ ನೋವು ನೀಡುತ್ತದೆ, ಭವಿಷ್ಯತ್ತನ್ನು ನೆನಪಿಸಿ ಭಯಪಡಿಸುತ್ತದೆ, ಅದಕ್ಕೆ ಹಿರಿಯರು "ಚಿತೆ ಒಂದು ಬಾರಿ ಸುಟ್ಟರೆ ಚಿತ್ತ ನಿತ್ಯವೂ ಸುಡುತ್ತದೆ" ಆದರೆ ಯಾರು ಸತ್ಸಂಗ ಮಾಡುತ್ತಾರೋ ಅವರಿಗೆ ನಿಸ್ಸಂಗ ಬರುತ್ತದೆ, ನಿಸ್ಸಂಗ ಬಂದಾಗಲೇ ಮೋಹ ನಶಿಸುತ್ತದೆ ಮೋಹ ನಶಿಸಿದಾಗಲೇ ಚಿತ್ತ ಶಾಂತಿಯಿಂದ ಇರುತ್ತದೆ.

ಅವರು ನಿಶ್ಚಲ ತತ್ವೇ ಜೀವನ್ಮುಕ್ತಿ ಎಂದು ಸಹ ಹೇಳಿದ್ದಾರೆ, ಅಂದರೆ ಯಾವಾಗ ನಿಶ್ಚಲ ತತ್ವ ಬರುತ್ತದೋ ಅಂದರೆ ಚಿತ್ತ ನಿಶ್ಚಲ ವಾಗುವುದೋ ಅಂತಹವರಿಗೆ ಬದುಕಿರುವಾಗಲೇ ಕರ್ಮ ವಾಸನೆಗಳು ನಶಿಸುತ್ತವೆ ಜೀವನ್ಮುಕ್ತ ರಾಗುತ್ತಾರೆ, ಸತ್ಸಂಗವೆಂದರೆ ಧ್ಯಾನ ಇದನ್ನೇ ನಾವು 'ಸಾಧನೆ' ಎನ್ನುತ್ತೇವೆ, 'ಸಾಧನೆ' ಎಂದರೆ ನಾವು ಸ್ವಯಂ ಸಾಧಿಸಿಕೊಳ್ಳುವ ಧನ, ಇದನ್ನು ಯಾರಿಗೂ ಯಾರೂ ಕೊಡಲಾಗದು ತಮಗೆ ತಾವೇ ಸಂಪಾದಿಸಿಕೊಳ್ಳಬೇಕು.

**3. ಸಜ್ಜನ ಸಾಂಗತ್ಯ:** ಸಜ್ಜನರು ಎಂದರೆ ಆತ್ಮ ಜ್ಞಾನ ತಿಳಿದವರು, "ಆತ್ಮವೇ ಭಗವಂತ" ಎಂದು ತಿಳಿದುಕೊಂಡವರು ಅಂತಹವರೊಂದಿಗೆ ಸ್ನೇಹ ಮಾಡುವುದರಿಂದ

ನಮ್ಮಲ್ಲಿರುವ ಮಂದಬುದ್ಧಿ ತೊಲಗಿ ಹೋಗುತ್ತದೆ, ನಮ್ಮ ಮಾತಿನಲ್ಲಿ ಸತ್ಯವಿರುತ್ತದೆ ಆದ್ದರಿಂದ ನಮ್ಮ ಮೇಲೆ ಗೌರವ ಹೆಚ್ಚುತ್ತದೆ ಪಾಪ ಮಾಡಲು ಹೋಗದೆ ದೂರವಿರುತ್ತೇವೆ ಚಿತ್ತ ಯಾವಾಗಲೂ ಆನಂದವಾಗಿ ಇರುತ್ತದೆ ಸಜ್ಜನರ ಸಾಂಗತ್ಯ ಮಾನವರಿಗೆ ಎಷ್ಟೋ ಉಪಕಾರ ಮಾಡುತ್ತದೆ, ಈ ಸಂಸಾರದಲ್ಲಿ ಅಹಂಕಾರ ಮಮಕಾರವೆನ್ನುವ ನದಿಯಲ್ಲಿ ಮುಳುಗಿ ಹೋಗದೆ ಇರಬೇಕು ಅಂದರೆ ಸಜ್ಜನ ಸಾಂಗತ್ಯ ಎನ್ನುವ ನೌಕೆ ಇರಬೇಕು.

ಅಷ್ಟಾವಕ್ರನು "ಮೂರು ಲೋಕಗಳಲ್ಲೂ ಅತಿ ದೊಡ್ಡ ಪುಣ್ಯ ಕರ್ಮ ಏನೆಂದರೆ ಸಜ್ಜನ ಸಾಂಗತ್ಯದಲ್ಲಿ ಪಾಲ್ಗೊಳ್ಳುವುದು" ಎಂದಿದ್ದಾರೆ. ಹಾಗೆಯೇ ಗೋಸ್ವಾಮಿ ತುಳಸಿದಾಸ ಒಂದು ಬಗೆಯ ರಸಾಯನ ಸೋಕಿದಾಕ್ಷಣವೇ ಕಬ್ಬಿಣ ಚಿನ್ನವಾಗಿ ಬದಲಾಗುತ್ತದೆ ಹಾಗೆಯೇ ಉತ್ತಮ ಪುರುಷರ ಸಹವಾಸದಿಂದ ಮೂರ್ಖರು ಕೂಡ ಜ್ಞಾನವಂತರಾಗುತ್ತಾರೆ ಎಂದಿದ್ದಾರೆ. ಸಜ್ಜನ ಸಾಂಗತ್ಯದಿಂದ ಮೂರ್ಖನಾದ ಕಾಳಿದಾಸ ಮಹಾಕವಿಗಳಲ್ಲಿ ಒಬ್ಬರಾಗಿ ಬದಲಾದನು.

ಒಚಿದು ಬಾರಿ ಬಲಿಚಕ್ರವರ್ತಿಯೊಂದಿಗೆ ವಿಷ್ಣುಮೂರ್ತಿ ನೀನು ಸಜ್ಜನರೊಂದಿಗೆ ಕೂಡಿ ನರಕಕ್ಕೆ ಹೋಗುತ್ತೀಯಾ ಅಥವಾ ದುಷ್ಟರೊಂದಿಗೆ ಕೂಡಿ ಸ್ವರ್ಗಕ್ಕೆ ಹೋಗಲು ಇಷ್ಟ ಪಡುವೆಯಾ ಎಂದು ಕೇಳಿದರಂತೆ, ಆಗ ಬಲಿ ಚಕ್ರವರ್ತಿ ನಾನು ಸಜ್ಜನರೊಂದಿಗೆ ನರಕಕ್ಕೆ ಹೋಗುತ್ತೇನೆ ಎಂದನಂತೆ ಕಾರಣ ಸಜ್ಜನರು ಎಲ್ಲಿದ್ದರೆ ಅದೇ ಸ್ವರ್ಗ ದುರ್ಜನರು ಎಲ್ಲಿದ್ದರೆ ಅದೇ ನರಕ, ಸಜ್ಜನ ಸಾಂಗತ್ಯದಿಂದ ನರಕ ಕೂಡ ಸ್ವರ್ಗವಾಗುತ್ತದೆ ಅದಕ್ಕಾಗಿಯೇ ಸಜ್ಜನ ಸಾಂಗತ್ಯ ಮಾಡಿ ಎನ್ನುತ್ತಾರೆ.

**4. ಸ್ವಾಧ್ಯಾಯ:** ಶರೀರ ಉನ್ನತಿಗಾಗಿ ಧ್ಯಾನ ಎಷ್ಟು ಮುಖ್ಯವೋ ಸ್ವಾಧ್ಯಾಯ ಅಷ್ಟೇ ಮುಖ್ಯ, ಆದ್ದರಿಂದಲೇ ತೈತ್ರಿರೀಯೋಪನಿಷತ್ತು ಏನೆಂದು ಹೇಳಿದೆ ಎಂದರೆ "ಸ್ವಾಧ್ಯಾಯ ಪ್ರವಚನಾಭ್ಯಾಮ್ ನಪ್ರಮ ದಿವ್ಯಂ" ಎನ್ನುತ್ತಾ ಸ್ವಾಧ್ಯಾಯ ಎಷ್ಟು ಮುಖ್ಯವೋ ಹೇಳಿದೆ.

ತೊಟ್ಟಿಯಲ್ಲಿ ನೀರು ನಿಂತಾಗ ನೀರು ಪಾಚಿ ಹಿಡಿದು ವಾಸನೆ ಬರುತ್ತದೆ, ಹಾಗೆ ಸ್ವಾಧ್ಯಯ ಮಾಡದಿದ್ದರೆ ಮಾನಸಿಕ ವೃತ್ತಿಗಳು ಕಲುಷಿತಗೊಳ್ಳುತ್ತದೆ, ಜ್ಞಾನ ಪರಿಮಿತವಾದಾಗ ನಾವು ಕೂಪ ಮಂಡೂಕ ಗಳಂತೆ ಇರುತ್ತೇವೆ. ಆದ್ದರಿಂದ ದಿನವೂ ಒಂದು ಗಂಟೆಯಾದರೂ ಸ್ವಾಧ್ಯಾಯ ಮಾಡಬೇಕು, ಹಾಗೆ ಮಾಡುವುದರಿಂದ ನಮ್ಮಲ್ಲಿ ಜ್ಞಾನ ಹೆಚ್ಚುತ್ತದೆ, ಮಹರ್ಷಿ 'ಮನು' ಸ್ವಾಧ್ಯಾಯದ ಬಗ್ಗೆ ಹೀಗೆ ಹೇಳಿದ್ದಾರೆ "ಸ್ವಾಧ್ಯಾಯ ಸರ್ವೋತ್ತಮ ತಪಸ್ಸು" ಎಂದಿದ್ದಾರೆ.

ಏಕೆಂದರೆ ಉತ್ತಮ ಗ್ರಂಥ ಪಠಣದಿಂದ ಮಾನವನ ಬುದ್ಧಿ ವಿಕಸಿಸುತ್ತದೆ, ಸತ್ಕರ್ಮಗಳು ಆಚರಿಸಬೇಕೆಂಬ ಸಂಕಲ್ಪ ಉಂಟಾಗುತ್ತದೆ, ಆತ್ಮ–ಪರಮಾತ್ಮಗಳ ಜ್ಞಾನ ಏರ್ಪಡುತ್ತದೆ, ಸರ್ವ ಮಾನವರ ಬಗ್ಗೆ ಸಮದೃಷ್ಟಿ, ಸರ್ವ ಪ್ರಾಣಿಗಳ ಬಗ್ಗೆ ಭೂತದಯೆ, ಸದ್ಭಾವನೆ ಉಂಟಾಗುತ್ತದೆ, ಲೋಕೋಪಕಾರ ಮಾಡಬೇಕೆಂಬ ಕೋರಿಕೆ ಉಂಟಾಗುತ್ತದೆ ನೀತಿಯಾಗಿ ನ್ಯಾಯವಾಗಿ ಜೀವಿಸಬೇಕೆಂದು ಕೋರಿಕೆ ಉದಯಿಸುತ್ತದೆ ಜೀವನವನ್ನು ಸದ್ವಿನಿಯೋಗ ಮಾಡಿಕೊಳ್ಳಬೇಕೆಂಬ ಆಲೋಚನೆ ಬರುವಂತೆ ಮಾಡುತ್ತದೆ




ಅಂತಹವರೇ ಸಮಾಜದಲ್ಲಿ ಅಜ್ಞಾನವನ್ನು ತೊಲಗಿಸುವ ಜ್ಞಾನ ಜ್ಯೋತಿಯನ್ನು ಬೆಳಗಿಸುತ್ತಾರೆ.

ಸ್ವಾಧ್ಯಾಯದಿಂದ ಸಾಧಾರಣ ಮಾನವನು ಕೂಡಾ ಮಹಾತ್ಮನಾಗಬಲ್ಲನು, ಪಂಡಿತನಾಗಬಲ್ಲನು ಎಂದು 'ಮನು' ಹೇಳಿದ್ದಾರೆ. ಹಾಗೆಯೇ ಋಗ್ವೇದ ಏನು ಹೇಳುತ್ತದೆ ಎಂದರೆ ಈಶ್ವರನಿಂದ ಪ್ರತಿಪಾದಿಸಲ್ಪಟ್ಟ ಋಷಿಗಳ ಮೂಲಕ ಸಂಚಯಿಸಲ್ಪಟ್ಟು ಪುನೀತವಾದ ವೇದ ಜ್ಞಾನ ಪಠಿಸುವನು ಆನಂದವಾಗಿ ಪಾವನ ಮಾಡುತ್ತಾನೆ ಸತ್ ಗ್ರಂಥಗಳನ್ನು ಓದುವುದರಿಂದ ಅವರ ಚಿಂತೆಗಳೆಲ್ಲ ನಶಿಸುತ್ತವೆ, ಅವರ ಸಂಶಯಗಳೆಲ್ಲಾ ತೊಲಗುತ್ತವೆ, ಮನಸ್ಸಿನಲ್ಲಿರುವ ಸದ್ಭಾವನೆಗಳು ಜಾಗೃತವಾಗಿ ಪರಮ ಶಾಂತಿಯನ್ನು ಉಂಟುಮಾಡುತ್ತದೆ.

ಹಾಗೆಯೇ ಸ್ವಾಮಿ ದಯಾನಂದ ಸರಸ್ವತಿ ಏನೆಂದರೆಂದರೆ ಸಮುದ್ರದಲ್ಲಿ ಮುಳುಗಿ ರತ್ನಗಳನ್ನು ಆರಿಸಿದಂತೆ ಅರ್ಹ ಗ್ರಂಥಗಳು ಓದುವುದರಿಂದ ದೊಡ್ಡ ವಿಷಯಗಳು ತಿಳಿದುಕೊಳ್ಳುತ್ತಾರೆ.

ಲೋಕಮಾನ್ಯ ತಿಲಕ್ ಏನು ಹೇಳಿದ್ದಾರೆಂದರೆ, ನಾನು ನರಕದಲ್ಲಿ ಕೂಡ ಸದ್ಗ್ರಂಥಗಳನ್ನು ಸ್ವಾಗತಿಸುತ್ತೇನೆ, ಏಕೆಂದರೆ ಸದ್ಗ್ರಂಥಗಳ ಎಲ್ಲಿ ಇರುತ್ತವೋ ಅಲ್ಲಿ ಸ್ವರ್ಗ ಏರ್ಪಡುವ ಶಕ್ತಿ ಹೊಂದಿರುತ್ತದೆ. ಆದ್ದರಿಂದ ಜೀವನಕ್ಕೆ ಅನುಕೂಲವಾಗಿ ಉದ್ಧರಿಸುವ ಯೋಗ್ಯತೆ ಸದ್ಗ್ರಂಥಗಳಲ್ಲಿ ಇದೆ ಎಂದು ತಿಳಿದುಕೊಂಡು ಸ್ವಾಧ್ಯಾಯ ಮಾಡಿ.

5. ಸೇವೆ: ಸೇವೆ ಮಾಡುವುದು ಕೂಡ ಸಾಧಕರಿಗೆ ತುಂಬಾ ಮುಖ್ಯ, ಎಲ್ಲರ ಮೇಲೆ ಪ್ರೇಮ ಇದ್ದಾಗಲೇ ನಾವು ಸೇವೆ ಮಾಡಬಲ್ಲೆವು, ಎಲ್ಲರನ್ನೂ ಆತ್ಮ ಸ್ವರೂಪರಾಗಿ ನೋಡಿದಾಗಲೇ ಎಲ್ಲರನ್ನೂ ಪ್ರೇಮಿಸುತ್ತೇವೆ, ಎಲ್ಲರ ಮೇಲೆ ಪ್ರೇಮ ಇದ್ದರೇನೆ ಸೇವೆ ಮಾಡುತ್ತೇವೆ. ಮದರ್ ಥೆರೇಸಾ ಎಷ್ಟು ದೊಡ್ಡ ಸೇವೆ ಮಾಡಿದರು, ಆಕೆ ಎಲ್ಲರನ್ನೂ ತನ್ನ ಮಕ್ಕಳಂತೆ ಪ್ರೇಮಿಸಿದರು, ಸೇವೆ ಮೊಟ್ಟಮೊದಲು ಶರೀರಕ್ಕೆ ಮಾಡಬೇಕು ನಂತರ 'ಆತ್ಮ ಸೇವೆ' ಮಾಡಬೇಕು.

ಆತ್ಮ ಸೇವೆ ಎಂದರೆ ಎಲ್ಲರಿಗೂ ಧ್ಯಾನ ಕಲಿಸುವುದು, ಧ್ಯಾನ ಕಾರ್ಯಕ್ರಮಗಳು ನಿರ್ವಹಿಸುವುದು, ಧ್ಯಾನ ಕಾರ್ಯಕ್ರಮಗಳಿಗೆ ಸಹಕರಿಸುವುದು, ಧ್ಯಾನ ಯಜ್ಞಗಳಲ್ಲಿ ಪಾಲ್ಗೊಳ್ಳುವುದು, ಮಾಂಸಾಹಾರವನ್ನು ಬಿಡಿಸುವುದು, ಪಾಪ ಕರ್ಮಗಳನ್ನು ಮಾಡದಂತೆ ತಡೆ ಹಿಡಿಯುವುದು 'ಆತ್ಮ ಸೇವೆಯೇ', ಜ್ಞಾನ ದಾನವು 'ಆತ್ಮ ಸೇವೆಯೇ'. ಹಸಿದವರಿಗೆ ಅನ್ನ ನೀಡುವುದು ಧ್ಯಾನ ಕಲಿಸುವುದಕ್ಕಿಂತ ದೊಡ್ಡದಾದ ಸೇವೆ ಈ ಲೋಕದಲ್ಲಿ ಮತ್ತೊಂದಿಲ್ಲ.



**' ಪರರಿಗೆ ಅಪಕಾರ ಮಾಡಿದರೆ ಪಾಪ!**
**ಪರರಿಗೆ ಉಪಕಾರ ಮಾಡಿದರೆ ಪುಣ್ಯ!**
**ನಮಗೆ ನಾವು ಉಪಕಾರ ಮಾಡಿಕೊಂಡರೆ ಮೋಕ್ಷ!'**
**– ಬ್ರಹ್ಮರ್ಷಿ ಪತ್ರೀಜಿ**

# ಆಸೆ

ಮಾನವರು ಆಸೆಯಿಂದಲೇ ತಮ್ಮ ಶರೀರದಲ್ಲಿರುವ ಆತ್ಮವನ್ನು ತಿಳಿದುಕೊಳ್ಳಲಾರದೇ ಹೋಗುತ್ತಿದ್ದಾರೆ. ಹುಟ್ಟಿದಾಗಿನಿಂದ ಸಾಯುವವರೆಗೂ ಪ್ರಾಪಂಚಿಕ ಭೋಗಗಳ ಮೇಲೆ ಇರುವ ಆಸೆಯಿಂದಲೇ 'ಮೋಕ್ಷ'ದ ಬಗ್ಗೆ ಆಲೋಚಿಸಲಾರದೇ ಹೋಗುತ್ತಿದ್ದಾರೆ, ಪ್ರಪಂಚದಲ್ಲಿನ ಮಾನವರೆಲ್ಲರಲ್ಲೂ ಪರಮಾತ್ಮ ಸ್ವರೂಪವಾದ 'ಆತ್ಮ'ವನ್ನು 'ಆಸೆ' ಎನ್ನುವ ಮಾಯೆ ಆವರಿಸಿಕೊಂಡಿದೆ, ನಶಿಸುವ ವಸ್ತುಗಳನ್ನು ನಿಜವಾಗಿ ಇರುವಂತಹವುಗಳೆಂದುಕೊಳ್ಳುವುದು ಹಾಗೆ ಭ್ರಮಿಸುವುದನ್ನು ಮಾಯೆ ಎಂದು ಕರೆಯುತ್ತೇವೆ. ಮನುಷ್ಯರಲ್ಲಿ ಆಸೆಯುಳ್ಳವರು ಮೂರು ವಿಧಗಳಾಗಿ ಇರುತ್ತಾರೆ.

ಶ್ಲೋಕ: ಧೂಮೇನಾವ್ರಿಯತೆ ವಹ್ನಿರ್ಯಥಾ ದರ್ಷೋರ್ಮಲೇನಚ
ಯಥೋಲ್ಬೇನಾವೃತೋ ಗರ್ಭಸ್ಥಥಾ ತೇನೇದಮಾವೃತಂ (ಭ. ಗೀ. 03–38)

ತಾತ್ಪರ್ಯ: ಹೊಗೆಯಿಂದ ಅಗ್ನಿ, ಕೊಳೆಯಿಂದ ಕನ್ನಡಿ ಮಾಯೆಯಿಂದ ಶಿಶುವು ಹೇಗೆ ಆವರಿಸಿಕೊಂಡಿದೆಯೋ ಆ ವಿಧವಾಗಿ ಈ 'ಆತ್ಮ' 'ಆಸೆ' ಎನ್ನಲ್ಪಪಡುವ 'ಕಾಮ'ದೊಂದಿಗೆ ಆವರಿಸಲ್ಪಟ್ಟಿದೆ. ಎಂದು ಗೀತೆಯಲ್ಲಿ ಕೃಷ್ಣ ಭಗವಾನನು ಹೇಳಿದ್ದಾರೆ. 'ಆಸೆ' ಇರುವ ಮೂರು ವಿಧಗಳ ಜನರು ಹೇಗಿರುತ್ತಾರೋ ನೋಡೋಣ.

**ಮೊದಲ ವಿಧದವರು:** ಅಗ್ನಿಯ ಸುತ್ತಲೂ ಹೊಗೆ ಆವರಿಸಿದಂತೆ ಇವರಿಗೆ ಆತ್ಮ ಜ್ಞಾನ ಹೊಂದಲು ಅವರೋಧ ವಾಗಿ 'ಆಸೆ' ಎನ್ನಲ್ಪಡುವ ಮಾಯೆ ಆವರಿಸಿರುತ್ತದೆ. ಇವರಿಗೆ ಪ್ರಾಪಂಚಿಕತೆಯ ಆಸೆ ಇರುತ್ತದೆ ಅಗ್ನಿಯನ್ನು ಸುತ್ತಿಕೊಂಡಿರುವ ಹೊಗೆಗೆ ಗಾಳಿ ತಗುಲಿದಾಕ್ಷಣವೇ ಹೊಗೆಯು ಹೋಗಿ ಅಗ್ನಿ ಪ್ರಜ್ವಲಿಸುತ್ತದೆ, ಆ ವಿಧವಾಗಿಯೇ ಸದ್ಗುರುವನ್ನು ಸೇರಿದಾಕ್ಷಣವೇ ಅವರ ಕರುಣೆಯಿಂದ ಇವರ ಅಜ್ಞಾನ ತೊಲಗಿ ಸತ್ಯವನ್ನು ತಿಳಿದುಕೊಂಡು ಆತ್ಮಜ್ಞಾನವನ್ನು ಹೊಂದುತ್ತಾರೆ.

ಪತ್ರೀಜಿಯವರು ಪರಿಚಯವಾಗುವವರೆಗೂ ರಾಘವರಾವ್‌ರವರು ಎಷ್ಟೋ ವ್ಯಾಪಾರಗಳನ್ನು ಮಾಡುತ್ತಾ, ದಾನ ಧರ್ಮಗಳು ಮಾಡುತ್ತಾ ಇರುತ್ತಿದ್ದರು. ಅದೇ ತುಂಬಾ ಒಳ್ಳೆಯದು ಎಂದು ಭಾವಿಸುತ್ತಿದ್ದರು, ನಂತರ ಎಲ್ಲಕ್ಕಿಂತ ಆತ್ಮ ಜ್ಞಾನ ಹೊಂದುವುದೇ ದೊಡ್ಡದೆಂದು ಜ್ಞಾನ ದಾನವೇ ಶ್ರೇಷ್ಟ ದಾನವೆಂದು ತಿಳಿದುಕೊಂಡರು, ಆಗಿನಿಂದ ಅವರು ಆ ಮಾರ್ಗದಲ್ಲೇ ಪಯಣಿಸುತ್ತಿದ್ದಾರೆ, ಮೊದಲನೆಯ ವಿಧದವರಿಗೆ ರಾಘವರಾವ್ ರವರೆ ಉದಾಹರಣೆ.

**ಎರಡನೆಯ ವಿಧದವರು:** ಇವರಿಗೆ ಆತ್ಮ ಜ್ಞಾನ ಸಂಪಾದಿಸಬೇಕೆಂಬ ಬಯಕೆ ಇರುತ್ತದೆ, ಆದರೆ ಯಾವ ವಿಧವಾಗಿ ಸಂಪಾದಿಸಬೇಕೋ ತಿಳಿಯುವುದಿಲ್ಲ, ಇಂತಹವರು ಎಂತಹವರೆಂದರೆ ಕನ್ನಡಿಯಲ್ಲಿ ಮುಖ ನೋಡಬೇಕೆಂದು ಅನಿಸಿದರೂ ಕನ್ನಡಿಗೆ ಇರುವ ಧೂಳಿನಿಂದ ನೋಡಲು ಉಪಯೋಗವಾಗುವುದಿಲ್ಲ, ಧೂಳು ಒರೆಸಿದೊಡನೆಯೇ ಮುಖ ಕಾಣುತ್ತದೆ, ಇಂತಹವರು ಗುರುವಿನ ಶಿಕ್ಷಣದಲ್ಲಿ ಹೆಚ್ಚು ಸಮಯ ಸಾಧನೆ, ಸಾಂಗತ್ಯ, ಸ್ವಾಧ್ಯಾಯಕ್ಕೆ ಸಮಯ ವಿನಿಯೋಗಿಸಬೇಕು, ಆಗ ಜ್ಞಾನ ಹೊಂದಬಲ್ಲರು.

**ಮೂರನೆಯ ವಿಧದವರು:** ಗರ್ಭಕೋಶದಲ್ಲಿನ ಪಿಂಡ ಹೊರಗೆ ಬರಲು ಶಕ್ತಿ ಸಾಲದಿರುವ ಹಾಗೆ, ಇವರ ಮನಸ್ಸು ಪೂರ್ತಿಯಾಗಿ ಆಸೆಯಿಂದ ಆವರಿಸಲ್ಪಟ್ಟು ಆತ್ಮಜ್ಞಾನ ಹೊಂದಬೇಕೆನ್ನುವ ಯೋಚನೆ ಇರುವುದಿಲ್ಲ. ಇವರ ಮಲಿನ ಸಂಸ್ಕಾರದಿಂದ ಗುರುವನ್ನು ಗೌರವಿಸಲಾರರು, ಗುರುತಿಸಲಾರರು ಇಂತಹವರು ಪ್ರಾಪಂಚಿಕ ಜೀವನದಲ್ಲಿ ಎಷ್ಟೋ ಎದಿರು ಹೊಡೆತಗಳು ತಗುಲಿದಾಗ ಬರುತ್ತಾರೆ, ಅಥವಾ ತಮ್ಮ ಜೊತೆಯವರು ಸಾಧನೆ ಮಾಡಿ ಹೊಂದಿದ ಆನಂದ ನೋಡಿಯಾದರೂ ಬದಲಾಗುತ್ತಾರೆ.

ಆದ್ದರಿಂದ ಪ್ರತಿಯೊಬ್ಬರೂ ಪ್ರಾಪಂಚಿಕ ಜೀವನದಲ್ಲಿ ಜೀವಿಸುತ್ತಾ, 'ಆತ್ಮಜ್ಞಾನ' ಹೊಂದ ಬೇಕೆಂದು ಪತ್ರೀಜಿಯವರು ಹೇಳುತ್ತಾರೆ, ಪ್ರಾಪಂಚಿಕ ಜೀವನವೂ ಬಿಡಬಾರದು ಆಧ್ಯಾತ್ಮಿಕ ಜೀವನವನ್ನು ಬಿಡಬಾರದು ಎಂದು ಹೇಳುತ್ತಾರೆ ರೂಪಾಯಿ ನಾಣ್ಯಕ್ಕೆ ಎರಡು ಬದಿಯಲ್ಲಿ ಅಚ್ಚು ಇದ್ದರೇನೇ ಅದು ಚಲಾವಣೆಯಾಗುತ್ತದೆ, ಹಾಗೆ ನಾವೂ ಕೂಡ ಪ್ರಾಪಂಚಿಕ ಅಧ್ಯಾತ್ಮಿಕ ಎರಡು ಜೀವನವನ್ನು ಅದ್ಭುತವಾಗಿ ನಿರ್ವಹಿಸಬೇಕು.

ಹಣದ ಮೇಲಿನ ಮಿತಿಮೀರಿದ ಆಸೆಯಿಂದಲೇ ತುಂಬಾ ಜನರು ಧ್ಯಾನ ಸಾಧನೆ ಮಾಡಲಾರದೇ ಹೋಗುತ್ತಿದ್ದಾರೆ, ಧ್ಯಾನ ಸಾಧನೆಗೆ ಸಮಯವಿಲ್ಲ ಎಂದು ಹೇಳುತ್ತಾರೆ, 'ಆಸೆ' ಸಹಜ, 'ಅತಿಯಾಸೆ' ಅನರ್ಥಕ್ಕೆ ದಾರಿಯಾಗುತ್ತದೆ, ಅದರ ಹಿಂದೆ ಓಡಿದರೆ ದುಃಖವೇ ಉಳಿಯುತ್ತದೆ.

ಅದೇ ರೀತಿ 'ಆತ್ಮಜ್ಞಾನ'ಕ್ಕಾಗಿ ಮಿತಿಮೀರಿದ ಸಾಧನೆ ಮಾಡಿದರೆ ಬ್ರಹ್ಮಾನಂದ ಬರುತ್ತದೆ, ಮಾನವನಿಗೆ ಚಿನ್ನದ ಮಳೆ ಸುರಿದರೂ ಸಂತೋಷ ಉಂಟಾಗದು, ಆಸೆ ಸಾಯುವುದಿಲ್ಲ ಆದರೆ ಅದರಲ್ಲಿ 'ಸ್ವಲ್ಪ ಸುಖ ಇರುತ್ತದೆ, ಅಧಿಕ ಕಷ್ಟ ಇರುತ್ತದೆ' ಆದರೆ ಆಧ್ಯಾತ್ಮಿಕ ಜೀವನದಲ್ಲಿ 'ಅಲ್ಪ ಕಷ್ಟ ಅಧಿಕ ಸುಖ' ಇರುತ್ತದೆ. ಇದು ತಿಳಿದುಕೊಂಡು 'ಆತ್ಮ ಜ್ಞಾನ' ಹೊಂದಲು ಪ್ರಯತ್ನಿಸಬೇಕು.

# ತ್ರಿವಿಧ ದೋಷಗಳು

ನಮ್ಮಲ್ಲಿರುವ ಮೂರು ವಿಧದ ದೋಷಗಳಿಂದ ಆತ್ಮ ದರ್ಶನ, ಆತ್ಮಾನಂದ ಲಭಿಸುವುದಿಲ್ಲ ಅವುಗಳು 1. ಮಲ, 2.ವಿಚಲನೆ, 3. ಆವರಣ ದೋಷಗಳು ಇವುಗಳಿಂದ ಆತ್ಮವನ್ನು ತಿಳಿದುಕೊಳ್ಳಲಾರೆವು.

ಮನಸ್ಸು ದರ್ಪಣದಂತಹುದು ದರ್ಪಣದ ಮುಂದೆ ಏನು ಇರುವುದೋ ಅದೇ ಪ್ರತಿಬಿಂಬಿಸುತ್ತದೆ, ಯಾವುದು ಇಲ್ಲದಿದ್ದಾಗ ಕನ್ನಡಿ ಯಾವುದನ್ನೂ ಪ್ರತಿಬಿಂಬಿಸಲಾರದು, ಮನಸ್ಸನ್ನು ಪರಿಶುದ್ಧ ಮಾಡಿಕೊಳ್ಳಲು ಬೇಕಾದ ಜ್ಞಾನವನ್ನು ಗುರುವಿನ ಮೂಲಕ ಹೊಂದಿ ನಂಬಿಕೆಯೊಂದಿಗೆ ವಿಶ್ವಾಸದೊಂದಿಗೆ, ಶ್ರದ್ಧೆಯಿಂದ ದೃಢ ಸಂಕಲ್ಪದೊಂದಿಗೆ ನಿರಂತರವಾಗಿ ಕ್ರಮ ತಪ್ಪದೆ ಸಾಧನೆ ಮಾಡಿ ಮಲ, ವಿಚಲನೆ, ಆವರಣ ದೋಷಗಳನ್ನು ತೊಲಗಿಸಿಕೊಳ್ಳಬೇಕು, ಹಾಗಾದರೆ ಆ ದೋಷಗಳು ಹೇಗಿರುತ್ತವೆಯೋ ಅವುಗಳನ್ನು ಹೇಗೆ ತೊಲಗಿಸಿಕೊಳ್ಳಬೇಕೆಂದು ತಿಳಿದುಕೊಳ್ಳೋಣ.

1.ಮಲ: ಮಲ ದೋಷ ಐದು ವಿಧಗಳಾಗಿ ಇರುತ್ತದೆ.

**ಎ).ಅಣುಮಲ:** ಬ್ರಹ್ಮಜ್ಞಾನ ಬೋಧಿಸಿದಾಗ ಕೇಳಿದರೂ, ಪರಮಾತ್ಮನ ಬಗ್ಗೆ ತಿಳಿದುಕೊಳ್ಳಬೇಕು ಎನ್ನುವ ಬಯಕೆ, ಆತುರತೆ ಇಲ್ಲದಿರುವುದು.

**ಬಿ). ಕಾರ್ಮಿಕ ಮಲ:** ವೇದಾಂತ ವಿಷಯಗಳನ್ನು ಹಿರಿಯರು ಬೋಧಿಸುತ್ತಿರುವಾಗ ಅದನ್ನು ನಿಶ್ಚಲ ಬುದ್ಧಿಯಿಂದ ಕೇಳದೇ ಬೇರೆ ವಿಷಯಗಳನ್ನು ಆಲೋಚಿಸುತ್ತಾ ನಿರ್ಲಕ್ಷ್ಯದಿಂದ ಕೇಳುವಿಕೆ.

**ಸಿ). ಮಾಯೆಮಲ:** ಪರಮಾತ್ಮನಿಗಾಗಿ ಯಾವಾಗಲೂ ಧ್ಯಾನ ಮಾಡಬೇಕು ಎಂಬ ಅರಿವು ಮೂಡದಿರುವುದು.

**ಡಿ). ಮಾಯೆಯೇ ಮಲ:** ಸಚ್ಚಿದಾನಂದ ಬ್ರಹ್ಮದ ಬಗ್ಗೆ ಅಸತ್ಯ ಬುದ್ಧಿ ಹುಟ್ಟಿಸಿ, ಇತರ ದೇವತೆಗಳನ್ನು ಮತ್ತು ದೇವತೆಗಳ ಮಂತ್ರಗಳನ್ನು ಮಂತ್ರಾರ್ಥಗಳನ್ನು ನಂಬಿ ಅದನ್ನೇ ಇತರರಿಗೆ ಬೋಧಿಸುವುದು.

**ಇ). ತಿರೋದಾನ ಮಲ:** ಅಂದರೆ ಸದಾ ಪಾಪಕರ್ಮಗಳಲ್ಲಿ ಇರುತ್ತಾ ಪಾಪಕರ್ಮಗಳೇ ಮಾಡುತ್ತಾ ಇರುವುದು.

ಇವುಗಳನ್ನು 'ಪಂಚ ಮಲಗಳು' ಎನ್ನುತ್ತಾರೆ. ಈ ದೋಷ ತೊಲಗಬೇಕೆಂದರೆ, ಶ್ರವಣವನ್ನು ಚೆನ್ನಾಗಿ ಮಾಡಬೇಕು ಅಂದರೆ ಸದ್ಗುರು ಹೇಳಿದ್ದನ್ನು ಜಾಗ್ರತೆಯಿಂದ ಕೇಳಿ ಗುರುವಿನ ವಾಕ್ಯ ವೇದವಾಕ್ಯ ಗುರುವಿನ ಜ್ಞಾನ ವೇದ ಜ್ಞಾನ ಎಂದು ತಿಳಿದುಕೊಂಡು ಗುರುವಿನ ಮಾರ್ಗ ಸತ್ಯ ಮಾರ್ಗವೆಂದು ಭಾವಿಸಿ ಆ ಮಾರ್ಗದಲ್ಲೇ ಪಯಣಿಸಬೇಕು. ಹೆಚ್ಚಾಗಿ ಸ್ವಾಧ್ಯಾಯವನ್ನು ಕೂಡಾ ಮಾಡಬೇಕು ಸಜ್ಜನಸಾಂಗತ್ಯಗಳಲ್ಲಿ ಪಾಲ್ಗೊಳ್ಳಬೇಕು ಇದರಿಂದ ಮಲದೋಷ ತೊಲಗುತ್ತದೆ.

**2. ಸಂಚಲನೆ:** ಧ್ಯಾನ ಸಮಯದಲ್ಲಿ ಸಂಚಲನೆ ಆತ್ಮಜ್ಞಾನಕ್ಕೆ ಆತಂಕದಿಂದ ವೇದಾಂತ ಸಾರೋಪನಿಷತ್ತು ಕೂಡಾ ಹೇಳುತ್ತದೆ, ಈ ದೋಷ ಹೇಗಿರುತ್ತದೆಯೆಂದರೆ ಧ್ಯಾನ ಮಾಡುವಾಗ ಮನಸ್ಸು ಬಹಿರ್ಮುಖವಾಗಿ ಪ್ರಾಪಂಚಿಕ ವಿಷಯಗಳ ಮೇಲೆ ವಸ್ತುಗಳ ಮೇಲೆ ಹೊರಳುತ್ತದೆ, ಇದನ್ನೇ ಸಂಚಲನೆ ಎನ್ನುತ್ತಾರೆ, ಇದನ್ನು ನಿಗ್ರಹಿಸುವುದು ತುಂಬಾ ಕಷ್ಟ.

ಪರಿಪರಿ ವಿಧಗಳಲ್ಲಿ ಅಲೆಯುವ ಮನಸ್ಸು ಒಂದು ಕಡೆ ಪ್ರಶಾಂತವಾಗಿ ಇರುವುದಿಲ್ಲ, ಆದ್ದರಿಂದ ಮನಸ್ಸು ಬಹಿರ್ಮುಖವಾಗಿ ವಿಚಾರಣೆ ಮಾಡಬೇಕು ಯಾವ ಆಲೋಚನೆ ಬರುತ್ತದೋ ಆ ಆಲೋಚನೆ ಬಗ್ಗೆ ವಿಚಾರಣೆ ಮಾಡಿ, ವಸ್ತುಪ್ರಪಂಚದ ಅನಿತ್ಯವನ್ನು ವಿಷಯಗಳಿಂದ ಬರುವ ದುಃಖವನ್ನು ವಿಚಾರಣೆ ಮಾಡಬೇಕು, ಧ್ಯಾನದಿಂದ ಉಂಟಾಗುವ ಆನಂದವನ್ನು ಪದೇಪದೇ ಮನನ ಮಾಡಿಕೊಳ್ಳಬೇಕು. ನಾನು ಆತ್ಮ ಎಂದು ಕೂಡಾ ಪದೇಪದೇ ಮನನ ಮಾಡಿಕೊಳ್ಳಬೇಕು.

ಮನಸ್ಸು ಪ್ರಾಪಂಚಿಕ ವಿಷಯಗಳಲ್ಲಿ ಅನೇಕ ಭ್ರಮೆಯಲ್ಲಿ ಇರುತ್ತದೆ, ವಿಚಾರಣೆಯಿಂದ ಆ ಭ್ರಮೆಗಳು ತೊಲಗುತ್ತವೆ. ವಿರಾಮ ದೊರೆತಾಗಲೆಲ್ಲಾ ಆತ್ಮ ಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಮನನ ಮಾಡಿಕೊಳ್ಳಬೇಕು. ಹೆಚ್ಚಾಗಿ ಸಜ್ಜನ ಸಾಂಗತ್ಯದಲ್ಲಿ ಪಾಲ್ಗೊಳ್ಳುವುದು, ಗುರುವಿನೊಂದಿಗೂ, ಜ್ಞಾನಿಗಳೊಂದಿಗೂ ಕಳೆಯುವುದರಿಂದ ವಿಕ್ಷೇಪ ಸಂಚಲನೆ ದೋಷ ತೊಲಗುತ್ತದೆ. ಸಂಚಲನೆ ಎನ್ನುವ ದೋಷ ತೊಲಗಬೇಕೆಂದರೆ ಗುರುವು ಹೇಳಿದ ಜ್ಞಾನ ನಿತ್ಯ ಮನನ ಮಾಡಿಕೊಳ್ಳಬೇಕು.

3. ಆವರಣ: ಪಂಚಕೋಶಾದಿ ಯೋಗೇನ

ತತ್ತನ್ಮಯ ಇವಸ್ಥಿತಃ

ಶುದ್ಧಾತ್ಮ ನೀಲ ವಸ್ತ್ರಾದಿ

ಯೋಗೇ ನಸ್ಪಟಿ ಕೋಯಧಾ (ಶಂಕರಾಚಾರ್ಯರ ಆತ್ಮಬೋಧೆ 15 ನೆಯ ಶ್ಲೋಕ)

ತಾತ್ಪರ್ಯ: ನೀಲಿ ವಸ್ತ್ರದಿಂದ ಸ್ಪಟಿಕ ಯಾವ ವಿಧವಾಗಿ ಆ ವರ್ಣದ ಹಾಗೆ ಕಾಣಿಸುತ್ತದೆಯೋ ಅದೇ ಪ್ರಕಾರವಾಗಿ ಪರಿಶುದ್ಧವಾದ ಆತ್ಮ ಪಂಚ ಕೋಶಗಳ ಸಂಬಂಧದಿಂದಾಗಿ ಆಯಾ ಸ್ವರೂಪಗಳಿಂದ ಕೂಡಿದಂತೆ ಕಾಣಿಸುತ್ತದೆ.

ಎಲ್ಲಾ ವಿಷಯಗಳು ತಿಳಿದುಕೊಳ್ಳುವುದೇ ಜ್ಞಾನ, ಖಡ್ಗವನ್ನು ಇಟ್ಟುಕೊಳ್ಳಲು 'ಒರೆ'ಯನ್ನು ಉಪಯೋಗಿಸುತ್ತಾರೆ. ಅದು ಖಡ್ಗಕ್ಕೆ 'ಆವರಣ' ಅದೇ ರೀತಿ ಆತ್ಮ ಇರುವಂತಹ ಆಯಾ ಆವರಣಗಳನ್ನು ಕೋಶಗಳಾಗಿ ಕರೆಯುತ್ತಾರೆ. ಆತ್ಮ ಕೋಶಗಳೊಂದಿಗೆ ತಾಧ್ಯಾತ್ಮ ಹೊಂದಿದಾಗ ಆತ್ಮವೇ ಆಯಾ ಕೋಶಗಳಾಗಿ ಇದೆಯೇನೋ ಎಂದು ಭ್ರಮೆಗೊಳಿಸುತ್ತದೆ, ಆದರೆ ಆತ್ಮ ಆಯಾ ಕೋಶಗಳಲ್ಲಿ ಲೀನವಾಗುತ್ತಿಲ್ಲ, ಆತ್ಮ ಅವುಗಳೊಂದಿಗೆ ಸಾಕ್ಷಿಯಾಗಿರುತ್ತದೆ.

ಈ ಕೋಶಗಳೆಲ್ಲದಕ್ಕೂ ಶಕ್ತಿಯನ್ನು ನೀಡಿದ ಆತ್ಮವನ್ನು ತಿಳಿದುಕೊಳ್ಳುವುದೇ ಅಂತಿಮಗುರಿ. ಈ ಕೋಶಗಳೆ ಆತ್ಮವೆಂದು ಕೊಳ್ಳುವುದು ಆವರಣ ದೋಷ ಈ ದೋಷ ತೊಲಗಿದರೇನೇ ಆತ್ಮವನ್ನು ತಿಳಿದುಕೊಳ್ಳಬಲ್ಲೆವು, ಅದಕ್ಕಾಗಿ ತೀವ್ರವಾದ ಧ್ಯಾನ ಸಾಧನೆಯೊಂದೇ ಮಾರ್ಗ, ಜ್ಞಾನವಿಲ್ಲದಿದ್ದರೆ ಏನೂ ಮಾಡಲಾರೆವು, ಅದಕ್ಕೇ ಪ್ರತಿಯೊಬ್ಬರೂ ಧ್ಯಾನ ಮಾಡಿ ಮಲ, ಸಂಚಲನ, ಆವರಣ ದೋಷಗಳನ್ನು ತೊಲಗಿಸಿಕೊಂಡು ಆತ್ಮವನ್ನು ತಿಳಿದುಕೊಳ್ಳಬೇಕು.

# ಸಂಸ್ಕಾರಗಳು ವಾಸನೆಗಳು

**ಸಂಸ್ಕಾರಗಳು:** ಅಂದರೆ ಮೊದಲಿನ ಜನ್ಮಗಳಿಂದ ಬರುವ ಅಭ್ಯಾಸಗಳನ್ನು ಸಂಸ್ಕಾರಗಳು ಎನ್ನುತ್ತಾರೆ. ಶರೀರ ಬಿಟ್ಟರೂ ಹಿಂದಿನ ಜನ್ಮದಲ್ಲಿ ಉಂಟಾದ ಸಂಸ್ಕಾರಗಳು ಸೂಕ್ಷ್ಮ, ಕಾರಣ ಶರೀರಗಳ ಮೂಲಕ ಗ್ರಹಿಸಲ್ಪಟ್ಟು ಮರುಜನ್ಮದಲ್ಲಿ ಪ್ರದರ್ಶಿಸುತ್ತಾ ಇರುತ್ತೇವೆ, ಇದೇ ವಿಧವಾಗಿ ಈ ಜನ್ಮದಲ್ಲಿನ ಸಂಸ್ಕಾರಗಳು ಅಂದರೆ ಅಭ್ಯಾಸಗಳು ಸೂಕ್ಷ್ಮ, ಕಾರಣ ಶರೀರಗಳಿಂದ ಗ್ರಹಿಸಿ ಮರು ಜನ್ಮಕ್ಕೆ ತೆಗೆದುಕೊಂಡು ಹೋಗುತ್ತೇವೆ. ಸಂಸ್ಕಾರಗಳು ಒಳ್ಳೆಯವು ಇರುತ್ತವೆ, ಕೆಟ್ಟವು ಇರುತ್ತವೆ, ಒಳ್ಳೆಯ ಸಂಸ್ಕಾರಗಳು ಸ್ವರ್ಗವನ್ನು ಕೆಟ್ಟ ಸಂಸ್ಕಾರಗಳು ನರಕವನ್ನು ಉಂಟುಮಾಡುತ್ತವೆ.

ಸ್ವರ್ಗ ನರಕಾದಿಗಳು ಮೇಲೆ ಎಲ್ಲೂ ಇರುವುದಿಲ್ಲ, ಇಲ್ಲಿಯೇ ಭೂಮಿ ಮೇಲೆ ಇರುತ್ತವೆ, ಇಲ್ಲಿಯೇ ಅನುಭವಿಸಬೇಕು, ಸಹಜವಾಗಿ ಹೀನಾತಿ ಹೀನವಾದ ಜನ್ಮಗಳಿಂದ ಬಂದ ಸಂಸ್ಕಾರಗಳಿಂದ ವಿಮುಕ್ತಿ ಹೊಂದುತ್ತಾ ನಿಧಾನವಾಗಿ ಉನ್ನತ ಜನ್ಮಗಳಿಗೆ ಬರುತ್ತಿರುತ್ತೇವೆ. ಈ ಸಂಸ್ಕಾರಗಳು ಅನುಭವದಿಂದಲೇ ಕ್ಷೀಣಿಸುತ್ತವೆ, ಈ ಕೆಟ್ಟ ಸಂಸ್ಕಾರಗಳನ್ನು ಬಲಹೀನ ಗೊಳಿಸಬೇಕೆಂದರೆ ಜ್ಞಾನ ಅಗತ್ಯ, ಆಗಲೇ ಅವು ಬಲಹೀನಗೊಂಡು ನಶಿಸುತ್ತವೆ, ಎಂತಹ ಕೆಟ್ಟ ಸಂಸ್ಕಾರಗಳು ಕೂಡಾ ಜ್ಞಾನದಿಂದಲೇ ಕ್ಷೀಣಿಸುತ್ತವೆ.

**ವಾಸನೆಗಳು:** ಇವು ಹೇಗೆ ಏರ್ಪಡುತ್ತವೆ ಎಂದರೆ ಅನೇಕ ಜನ್ಮಗಳಿಂದ ಬಂದ ಬಯಕೆಗಳು, ಸಂಸ್ಕಾರಗಳು ಒಂದಕ್ಕೊಂದು ಸೇರಿ ವಾಸನೆಗಳಾಗಿ ಏರ್ಪಡುತ್ತವೆ.

"ವಾಸನೆಗಳೇ ಬಂಧ, ವಾಸನಾ ಕ್ಷಯವೇ ಮೋಕ್ಷ" ಎನ್ನುತ್ತಾರೆ. ಮೋಕ್ಷವೆನ್ನುವುದು ನಮ್ಮ ನಿಜ ಸ್ವರೂಪವೇ, ಅದು ಸನಾತನವಾದದ್ದು ಅಂತಹ ಸ್ವರೂಪವನ್ನು ಅನುಭವಿಸಲು ವಾಸನೆಗಳು ಅಡ್ಡಿಯಾಗುತ್ತವೆ, ಈ ವಾಸನೆಗಳು ಮೂರು ವಿಧಗಳು.

1). ದೇಹ ವಾಸನೆ, 2). ಲೋಕ ವಾಸನೆ, 3). ಶಾಸ್ತ್ರ ವಾಸನೆ.

**1). ದೇಹ ವಾಸನೆ :** "ನಾನು ದೇಹ" ಎನ್ನುವ ಭಾವದಿಂದ ಏರ್ಪಟ್ಟ ಬ್ರಾಂತಿ ಈ ದೇಹವೇ ನಾನು ಎನ್ನುವ ಭ್ರಾಂತಿಯಿಂದ ಬೆಳಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ದೇಹಕ್ಕಾಗಿ ಹೋರಾಡುತ್ತೇವೆ, ಆರೋಗ್ಯಕ್ಕಾಗಿ ಯಾರು ಏನು ಹೇಳಿದರೂ ಅಂತಹ ಆಹಾರ ತೆಗೆದುಕೊಳ್ಳುತ್ತಾ ಆರೋಗ್ಯಕ್ಕಾಗಿ ಹೋರಾಡುತ್ತೇವೆ ಅಂದವಾಗಿ ಕಾಣಿಸಬೇಕೆಂದು ಬಟ್ಟೆಗಳ ಮೇಲೆ ಶ್ರದ್ಧೆ ತೋರುತ್ತೇವೆ, ಮುಖ ಚೆನ್ನಾಗಿ ಕಾಣಬೇಕೆಂದು ಫೇಸ್ಶಿಯಲ್ಸ್, ಹೇರ್ ಕಟ್ ಮಾಡಿಸುತ್ತೇವೆ, ವಿಧವಿಧವಾದ ಕ್ರೀಮ್ಗಳು ಪೌಡರ್‌ಗಳು ಪರ್ಫ್ಯೂಮ್ ಬಳಸುತ್ತೇವೆ, ಇವೆಲ್ಲಾ ದೇಹ ವಾಸನೆಗಳಿಂದಲೇ ಮಾಡುತ್ತಿದ್ದೇವೆ.

**2). ಲೋಕ ವಾಸನೆ :** ಅಂದರೆ ಆಸ್ತಿಪಾಸ್ತಿಗಳ ಮೇಲೆಭ್ರಮೆ, “ನನ್ನ ಮನೆ, ಮಕ್ಕಳು, ಕಾರು, ಬಂಗಲೆ, ನನ್ನ ಹೊಲ” ಇಂತಹವೆಲ್ಲಾ ತನ್ನ ಆತ್ಮದೊಂದಿಗೆ ಬರುವುದಿಲ್ಲ ಎಂದು ತಿಳಿದರೂ, ಅವುಗಳ ಮೇಲೆ ಭ್ರಾಂತಿಯಿಂದ ಅವುಗಳ ಮೇಲೆ ಮಮಕಾರ



**ನಿಮ್ಮ ಆನಂದಕ್ಕಾಗಿ ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ನ್ಯಾಯವೇ?**
**ಪಿರಮಿಡ್ ಸ್ಪಿರಿಚುವಲ್ ಸೊಸೈಟಿಸ್ ಮೂವ್ ಮೆಂಟ್ – ಇಂಡಿಯಾ**

ಬೆಳೆಸಿಕೊಳ್ಳುತ್ತೇವೆ ಇದನ್ನೇ ಲೋಕವಾಸನೆ ಎನ್ನುತ್ತಾರೆ.

**3). ಶಾಸ್ತ್ರ ವಾಸನೆ :** ಎಲ್ಲ ಶಾಸ್ತ್ರಗಳನ್ನು ಓದಿ, ಎಲ್ಲಾ ತಿಳಿದುಕೊಂಡು, ಎಲ್ಲರೊಂದಿಗೂ ತರ್ಕಿಸಿ, ವಾದಿಸಿ, ಅದರಿಂದ ಬರುವ ವಿಷಯವನ್ನು ಮನಸ್ಸಿನಲ್ಲಿ ಮುದ್ರೆಗಳಾಗಿ ಏರ್ಪಡಿಸಿಕೊಳ್ಳುವುದು, ತನಗೆ ತಿಳಿದ ಶಾಸ್ತ್ರವೇ ಸರಿ ಎಂದುಕೊಳ್ಳುತ್ತಾರೆ, ಎಷ್ಟು ತಿಳಿದುಕೊಂಡರೂ ಈ ಸೃಷ್ಟಿಯಲ್ಲಿ ತಿಳಿದುಕೊಳ್ಳಬೇಕಾದದ್ದು ಇನ್ನೂ ಇದ್ದೆ ಇರುತ್ತದೆ ಎನ್ನುವ ಅವಗಾಹನೆ ಇರುವುದಿಲ್ಲ, ಅಲ್ಲೇ ನಿಂತು ಹೋಗುತ್ತಾರೆ ಇದನ್ನೇ ಶಾಸ್ತ್ರ ವಾಸನೆ ಎನ್ನುತ್ತಾರೆ, ಈ ಮೂರು ವಾಸನೆಗಳು ನಶಿಸದ ಹೊರತು ಮುಕ್ತಿ ಎನ್ನುವ ಲಾಭ ಉಂಟಾಗುವುದಿಲ್ಲ.

**‘ಇತರರ ದೋಷಗಳನ್ನು ನೋಡದಂತೆ ಸ್ವಂತ ದೋಷಗಳನ್ನು ಸರಿಪಡಿಸಿಕೊಳ್ಳಬೇಕು‘**
**– ಬ್ರಹ್ಮರ್ಷಿ ಪತ್ರೀಜಿ**



# ಒಳ್ಳೆಯ ಸಾಧಕನಿಗೆ ಇರಬೇಕಾಗಿರುವ ಲಕ್ಷಣಗಳು

ಒಳ್ಳೆಯ ಸಾಧಕರಾಗಬೇಕೆಂದರೆ ಇರಬೇಕಾದ ಲಕ್ಷಣಗಳು ತಿಳಿದುಕೊಳ್ಳಬೇಕು, ಆ ಲಕ್ಷಣಗಳು ತಿಳಿದುಕೊಳ್ಳದೇ ಎಷ್ಟು ದಿನಗಳು ಕಣ್ಣು ಮುಚ್ಚಿಕೊಂಡರೂ ಪ್ರಯೋಜನ ಇರುವುದಿಲ್ಲ ಅವು ಯಾವುವೋ ನೋಡೋಣ.

1.ಭೂದೇವಿಯಂತಹ ಸಹನೆ

2.ಹೂವಿಗಿರುವ ಸುವಾಸನೆ

3. ಸೂರ್ಯನಂತಹ ಪ್ರಕಾಶ

4.ಸಿಂಹದಂತಹ ನಿರ್ಭಯ

5.ಗುರುವಿನಂತಹ ಉದಾರತೆ

6.ಆಕಾಶ ದಂತಹ ವಿಸ್ತಾರ (ವ್ಯಾಪಕ ಶಕ್ತಿ)

7.ಬಂಧಗಳನ್ನು ಬಿಡಿಸಿ ಕೊಳ್ಳಬೇಕೆಂಬ ಹಂಬಲ ಇರಬೇಕು.

ಇವುಗಳ ಬಗ್ಗೆ ವಿವರವಾಗಿ ತಿಳಿದುಕೊಳ್ಳೋಣ:

**1. ಭೂದೇವಿ ಯಂತಹ ಸಹನೆ :** ಭೂಮಿ ಹೇಗೆ ಸಹಿಸಿಕೊಳ್ಳುತ್ತಾ ಳೋ ಅಂತಹ ಸಹನೆ ಇರಬೇಕು. ನಾವು ಮನೆ ಕಟ್ಟುವಾಗ ಪಾಯ ತೆಗೆಯುತ್ತೇವೆ, ಭೂಮಿ ಯಾವಾಗಲೂ ನೋವು ಎನ್ನುವುದಿಲ್ಲ, ಹಾಗೆ ನದಿಗಳಿಗೆ ಅಣೆಕಟ್ಟು ಕಟ್ಟಲು, ರಸ್ತೆಗಳನ್ನು ಹಾಕುವಾಗ, ಭೂಮಿಯ ಮೇಲೆ ಎಷ್ಟೋ ಹೊಡೆತಗಳು ಅಗೆತಗಳು ಮಾಡುತ್ತಾರೆ, ಭೂಮಿ ಯಾವಾಗಲೂ ಏನೂ ಹೇಳುವುದಿಲ್ಲ ಸಹನೆಯಿಂದ ಇರುತ್ತದೆ. ಹಾಗೆಯೇ ಸಾಧಕನು ಸಾಧನೆಯಲ್ಲಿ ಅಭಿವೃದ್ಧಿಯಾಗಬೇಕೆಂದರೆ ಶಾರೀರಿಕ ನೋವುಗಳನ್ನು ಸಹಿಸಿಕೊಳ್ಳಬೇಕು, ಭೂದೇವಿಯ ನಂತರ ಅಂತಹ ಸಹನೆ ಉಳ್ಳವರು ದ್ರೌಪದಿಯೇ, ಧ್ಯಾನ ಮಾಡುವಾಗ ಬಿಸಿಲು, ಮಳೆ, ಚಳಿ ಶರೀರವನ್ನು ಕಿರಿಕಿರಿಗೊಳಿಸುತ್ತವೆ, ಆದರೂ ಸಹಿಸಿಕೊಂಡು ಸಾಧನೆ ಮಾಡಬೇಕು, ಸಾಧಕನು ಮೊದಲು ಕಲಿತುಕೊಳ್ಳಬೇಕಾದದ್ದು ಸಹನೆ ಇದರಿಂದಲೇ ಧ್ಯಾನದಿಂದ ಎಷ್ಟೋ ಕಲಿತುಕೊಳ್ಳುತ್ತೇವೆ.

**2. ಹೂಗಳಿಗಿರುವ ಸುವಾಸನೆ ಇರಬೇಕು:** ಸೃಷ್ಟಿಯಲ್ಲಿ ಯಾವ ಹೂವಾದರೂ ಒಳ್ಳೆಯ ವಾಸನೆ ನೀಡುತ್ತದೆ, ಪ್ರತಿ ಹೂವು ಏನೋ ಒಂದು ವಾಸನೆ ಹೊಂದಿರುತ್ತದೆ, ಆ

ವಾಸನೆಗಳನ್ನು ಎಲ್ಲರೂ ಆಸ್ವಾದಿಸುತ್ತಾರೆ ಆನಂದಿಸುತ್ತಾರೆ ಹೂವಿಗೆ ವಾಸನೆ ಸಹಜಗುಣ ಮಾನವನಿಗೆ ಮಾತನಾಡುವಿಕೆ ಸಹಜ ಗುಣ.

ಹಾಗೆಯೇ ಸೃಷ್ಟಿಯಲ್ಲಿನ 84 ಲಕ್ಷಗಳ ಜೀವರಾಶಿಗಳಲ್ಲಿ ಮಾನವನೊಬ್ಬನೇ ಮಾತನಾಡಬಲ್ಲ, ಆದ್ದರಿಂದ ಮಾತುಗಳೇ ಕರ್ಮಗಳಾಗಿ ಬದಲಾಗುತ್ತವೆ, ಆದ್ದರಿಂದ ಮಾತುಗಳು ತುಂಬಾ ಜಾಗ್ರತೆಯಿಂದ ಅರಿವಿನಿಂದ ಮಾತನಾಡಬೇಕು, ಯಾರನ್ನೂ ನೋಯಿಸದಂತೆ ಪ್ರೇಮದಿಂದ ಸೌಮ್ಯವಾಗಿ ಮಾತಾಡಬೇಕು ಅದಕ್ಕೆ ಪತ್ರೀಜಿ ಹೇಳುವುದು "ನಿನ್ನ ಮಾತುಗಳು ನಿನಗಾದರೂ ಉಪಯೋಗವಾಗಬೇಕು ಅಥವಾ ನಿನ್ನ ಪಕ್ಕದವರಿಗೆ ಆದರೂ ಉಪಯೋಗವಾಗಬೇಕು ಉಪಯೋಗವಾಗದ ಒಂದು ಮಾತು ಕೂಡಾ ನಮ್ಮ ಬಾಯಿಯಿಂದ ಹೊರ ಬರಬಾರದು" ಎಂದು ಹೇಳುತ್ತಾರೆ.

ಆದ್ದರಿಂದ ನಮ್ಮ ಬಾಯಿಂದ ಯಾವಾಗಲೂ ಸತ್ಯ ವಾಕ್ಕುಗಳೇ ಬರಬೇಕು, ಅವನ್ನೇ ನುಡಿಯಬೇಕು ಪ್ರೇಮದಿಂದ ಮಾತನಾಡುವುದರಿಂದ ಎಲ್ಲರೂ ನಮಗೆ ಮಿತ್ರರಾಗುತ್ತಾರೆ, ಪೌರುಷದಿಂದ, ಗರ್ವದಿಂದ, ಅಹಂಕಾರವಾಗಿ ಮಾತನಾಡಿದರೆ ಎಲ್ಲರೂ ನಮಗೆ ಶತ್ರುಗಳಾಗುತ್ತಾರೆ, ಮಾತಿನಿಂದಲೇ ಸ್ನೇಹ ಬೆಳೆಯುತ್ತದೆ ಮಾತಿನಿಂದಲೇ ವಿರೋಧಿಗಳು ತಯಾರಾಗುತ್ತಾರೆ, ಸಾಧಕರು ಮಾತನ್ನು ತುಂಬಾ ಜಾಗ್ರತೆಯಿಂದ ಅರಿವಿನಿಂದ ಗಮನಿಸುತ್ತಾ ಮಾತನಾಡಬೇಕು.

ಯಾವಾಗಲೂ ಮಂದಹಾಸದೊಂದಿಗೆ, ಪ್ರೇಮದೊಂದಿಗೆ ಮಾತನಾಡಬೇಕು, ಎಲ್ಲರನ್ನೂ ಪ್ರೋತ್ಸಾಹಿಸುತ್ತಾ ಮಾತನಾಡಬೇಕು, ಯಾರನ್ನೂ ನಿರುತ್ಸಾಹಗೊಳಿಸಬಾರದು ಭಗವಂತನು ನಮ್ಮಲ್ಲಿ ಮೆಚ್ಚುವ ಗುಣಗಳು ಪ್ರೇಮ, ಕರುಣೆ ಈ ಎರಡು ಸೃಷ್ಟಿಯಲ್ಲಿ ಇರುವ ಜೀವಿಗಳ ಬಗ್ಗೆ ತೋರಿಸಿದರೆ, ನಮ್ಮ ಮಾತು ಕೂಡಾ ಸೌಮ್ಯವಾಗಿರುತ್ತದೆ ಸುವಾಸನೆಯನ್ನು ಪ್ರತಿಯೊಬ್ಬರು ಹೇಗೆ ಇಷ್ಟಪಡುತ್ತಾರೋ ಹಾಗೆ ನಮ್ಮ ಮಾತನ್ನು ಕೂಡಾ ಜನರು ಇಷ್ಟಪಡಬೇಕು.

**3. ಸೂರ್ಯನಂತಹ ಪ್ರಕಾಶವಿರಬೇಕು:** ಸೂರ್ಯನಂತಹ ಪ್ರಕಾಶವೆಂದರೆ ಸೂರ್ಯನ ಹಾಗೆ ಇರಬೇಕು ಎಂದು ಅರ್ಥ, ಸೂರ್ಯನಂತೆ ಇರುವುದೆಂದರೆ ಸೂರ್ಯನ ಲಕ್ಷಣಗಳು, ಗುಣಗಳನ್ನು ತಿಳಿದುಕೊಂಡು ಸೂರ್ಯನ ಹಾಗೆ ಇರಬೇಕು, ಸೂರ್ಯನಲ್ಲಿ ಯಾವ ಪಕ್ಷಪಾತ ಇರುವುದಿಲ್ಲ, ಬಡವ ಬಲ್ಲಿದ ಎಂಬ ಭೇದ ಇರುವುದಿಲ್ಲ. ಗುಡಿಸಲಿನ ಮೇಲೆ ಆದರೂ ಮಹಾರಾಜನ ಕೋಟೆಯ ಮೇಲೆ ಆದರೂ ತನ್ನ ಕಿರಣಗಳನ್ನು ಒಂದೇ ರೀತಿ ಪ್ರಸರಿಸುತ್ತಾನೆ. ಇವರು ತನ್ನವರು, ಬೇರೆಯವರು ಎಂಬ ಭೇದವಿರುವುದಿಲ್ಲ, ನದಿಯ ಮೇಲೆ ಕೆಸರಿನ, ಗಲೀಜು ನೀರಿನ ಕೊಳದ ಮೇಲೂ,

ಪುಣ್ಯತೀರ್ಥಗಳ ಮೇಲೂ, ಪುಣ್ಯಕ್ಷೇತ್ರಗಳ ಮೇಲೂ, ಸಮುದ್ರದ ಮೇಲೂ ತನ್ನ ಕಿರಣಗಳನ್ನು ಪ್ರಸರಿಸುತ್ತಾನೆ. ಅದೇ ರೀತಿ ಎಲ್ಲರ ಮೇಲೆ ಒಂದೇ ರೀತಿಯಾದ ಪ್ರೇಮವನ್ನು ನಾವು ತೋರಿಸಬೇಕು, ಎಲ್ಲರಿಗೂ ಒಂದೇ ರೀತಿಯ ಪ್ರೇಮ, ಕರುಣೆಯನ್ನು ಸ್ವಾರ್ಥ ಮಮಕಾರ ಬಿಟ್ಟು ಎಲ್ಲರಿಗೂ ಸಮಾನವಾಗಿ ಹಂಚಬೇಕು.

**4. ಸಿಂಹದಂತೆ ನಿರ್ಭಯವಿರಬೇಕು :** ನಮ್ಮಲ್ಲಿರುವ ಭಯದಿಂದಲೇ ನಾವು ಯಾವ ಕೆಲಸ ಮಾಡಲಾರೆವೆಂದು ಎಂದುಕೊಳ್ಳುತ್ತೇವೆ, ಅಹಂಕಾರ, ಮಮಕಾರ ಇರುವವರೆಗೂ ನಮ್ಮಲ್ಲಿ ಭಯವಿರುತ್ತದೆ ಮರಣವೆಂದರೂ ಕೂಡಾ ಭಯವೇ ಮೊದಲು ಅಹಂಕಾರದಿಂದ ಭಯವೇಕೆ ಬರುತ್ತದೋ ತಿಳಿದುಕೊಳ್ಳೋಣ, ಸಂಪತ್ತು ಹೆಚ್ಚಾದಾಗ, ಪದವಿಗಳು ಬಂದಾಗ ಅಹಂಕಾರವಿರುತ್ತದೆ, ಅವು ಯಾವಾಗಲಾದರೂ ಹೋಗುತ್ತವೆಯೇ ಎಂಬ ಭಯವಿರುತ್ತದೆ, ಅವನ್ನು ಉಳಿಸಿಕೊಳ್ಳಲು ಅನುಕ್ಷಣ ಹೋರಾಡುತ್ತಾರೆ ಕೆಟ್ಟದ್ದನ್ನು ಪ್ರೋತ್ಸಾಹಿಸುತ್ತಾರೆ ಅದನ್ನು ಉಳಿಸಿಕೊಳ್ಳಲು ಕೆಟ್ಟ ಮಾರ್ಗದಲ್ಲಿ ಸಾಗುತ್ತಾರೆ, ಪಾಪಗಳನ್ನು ಮಾಡುತ್ತಾರೆ ಆ ಅಹಂಕಾರವೇ ಇಲ್ಲದಿದ್ದರೆ ಒಳ್ಳೆಯ ಮಾರ್ಗಕ್ಕೆ ಹೋಗಲು ಪ್ರಯತ್ನಿಸುತ್ತಾರೆ, ಆದ್ದರಿಂದ ಅಹಂಕಾರ ಇಲ್ಲದೆ ನಿರ್ಭಯವಾಗಿ ಜೀವಿಸುವವರಿಗೆ ತಾತ್ಕಾಲಿಕವಾಗಿ ಕೆಲವು ನಷ್ಟಗಳಾದರೂ ಶಾಶ್ವತವಾಗಿ ಆನಂದವನ್ನು ಜಯವನ್ನು ಹೊಂದುತ್ತಾರೆ.

ಇನ್ನು ಮಮಕಾರದಿಂದ ಭಯ ಹೇಗಿರುತ್ತದೋ ನೋಡೋಣ, ಸಹಜವಾಗಿ ಹೆಂಡತಿಯ ಮೇಲೆ, ಮಕ್ಕಳ ಮೇಲೆ, ಬಂಧುಗಳ ಮೇಲೆ ತನ್ನ ಕುಲದವರ ಮೇಲೆ ಮಮಕಾರವಿರುತ್ತದೆ, ಹೆಂಡತಿ ಮಕ್ಕಳ ಮೇಲೆ ಮಮಕಾರದಿಂದ ಸುಳ್ಳು, ಮೋಸ, ಪಾಪಗಳು ಮಾಡುತ್ತಾರೆ, ಅವರು ತಮ್ಮಿಂದ ದೂರವಾಗುತ್ತಾರೆ ಎಂಬ ಭಯದಿಂದ ಎಷ್ಟೋ ಮಾಡಬಾರದ ಕೆಲಸಗಳನ್ನು ಮಾಡುತ್ತಾ ಇರುತ್ತಾರೆ, ಆ ಭಯ ಇಲ್ಲದಿದ್ದರೆ ಯಾವಾಗಲೂ ಸತ್ಯದಲ್ಲಿ ಜೀವಿಸುತ್ತಾರೆ. ಅಜ್ಞಾನದಿಂದ "ಶರೀರವೇ ನಾನು" ಎಂದುಕೊಂಡು ಈ ಶರೀರ ನಶಿಸಿ ಹೋಗುತ್ತದೆ ಎಂಬ ಭಯವಿರುತ್ತದೆ ಎಷ್ಟರವರೆಗೆ ಆತ್ಮವೇ ನಾನು ಈ ಶರೀರ ನಾನಲ್ಲ ಎಂದು ತಿಳಿದುಕೊಳ್ಳರೋ ಅಲ್ಲಿಯವರೆಗೂ ಮರಣ ಭಯವಿರುತ್ತದೆ.

ಈ ಭಯ ಇರುವಷ್ಟು ದಿನ ಯಾವ ಕೆಲಸ ಮಾಡಬೇಕೆಂದರೂ ಭಯಪಡುತ್ತಾ ಇರುತ್ತಾರೆ, ಭಯವಿಲ್ಲದವರು ಏನಾದರೂ ಸಾಧಿಸುತ್ತಾರೆ, ಭಯ ಉಳ್ಳವರು ದಿನವೂ ಮರಣಿಸುತ್ತಾ ಬದುಕುತ್ತಾರೆ, ಆದ್ದರಿಂದ ಸಾಧಕರು ಯಾವಾಗಲೂ ಧೈರ್ಯದಿಂದ ಇರಬೇಕು ಸಿಂಹದಂತೆ ನಿರ್ಭಯವಾಗಿರಬೇಕು.

**5. ಗುರುವಿನಂತೆ ಉದಾರತೆ ಇರಬೇಕು :** ಕೆಲವರು ಬಾಧೆಯುಳ್ಳ ಗುರುಗಳು ಬೋಧನೆ ಮಾಡುವ ಗುರುಗಳಾಗಬೇಕೆಂದು ಆಶಿಸುತ್ತಾರೆ, ಆದರೆ ಸದ್ಗುರು ಏನೂ ಆಶಿಸದಂತೆಯೇ ಶಿಷ್ಯರಿಗೆ ಬೋಧಿಸುತ್ತಾರೆ, ಶಿಷ್ಯರು ಎಷ್ಟು ಕಸಿವಿಸಿಗೊಳಿಸಿದರೂ ಎಷ್ಟು ನೋವು ಕೊಟ್ಟರೂ ಶಿಷ್ಯನನ್ನು ಜ್ಞಾನವಂತರನ್ನು ಮಾಡುವವರೆಗೂ ಸದ್ಗುರು ಬಿಡುವುದಿಲ್ಲ. ಯಾವ ಸ್ವಾರ್ಥವೂ ಇಲ್ಲದೆ ಎಲ್ಲರಿಗೂ ಒಳ್ಳೆಯದಾಗಬೇಕು ಎಂದು ಸದ್ಗುರುಗಳು ಹಂಬಲಿಸುತ್ತಾರೆ, ಅದರಿಂದಲೇ ಅವರನ್ನು ಪರಬ್ರಹ್ಮ ದೊಂದಿಗೆ ಹೋಲಿಸುತ್ತಾರೆ ಸಾಧಕನು ಗುರುವಿನ ಹಾಗೆ ಆಗಬೇಕೆಂದುಕೊಳ್ಳಬೇಕು ಅಂತಹ ಉದಾರ ಸ್ವಭಾವ ಸಾಧಕ ಅಳವಡಿಸಿಕೊಂಡಾಗ ಅವನೂ ಅಂತಹ ಸ್ಥಾಯಿಗೆ ಸೇರುತ್ತಾನೆ.

**6. ಆಕಾಶದಂತಹ ವ್ಯಾಪಕತೆಯ ಶಕ್ತಿ ಇರಬೇಕು :** ಸಾಧಕನು ಆಕಾಶದಂತೆ ಇರಬೇಕು, ಎಲ್ಲಾ ಕಡೆಯಲ್ಲೂ ಇರಬೇಕು ಆಕಾಶ ಎಲ್ಲರಿಗೂ ಕಾಣಿಸುತ್ತದೆ ಆದರೆ ಯಾರಿಗೂ ಸಿಗುವುದಿಲ್ಲ, ಹಾಗೆಯೇ ಸಾಧಕನು ಎಲ್ಲರೊಂದಿಗೂ ಇರಬೇಕು ಸಂಘದಲ್ಲೂ ಸಂಸಾರದಲ್ಲೂ ಇರಬೇಕು, ಆದರೆ ಯಾರಲ್ಲೂ ಮಮಕಾರದ ಬಂಧವಿರಿಸಿಕೊಳ್ಳಬಾರದು ಹಾಗಿದ್ದಾಗ ಸಾಧನೆಯಲ್ಲಿ ಉನ್ನತತ್ವ ಸಾಧಿಸುತ್ತಾರೆ.

**7. ಬಂಧಗಳನ್ನು ಬಿಡಿಸಿಕೊಳ್ಳಬೇಕು ಎಂಬ ಹಂಬಲವಿರಬೇಕು :** ಸಾಧಕನಿಗೆ ಮುಖ್ಯವಾಗಿ ಇರಬೇಕಾದದ್ದು ಇದೇ ಏಕೆಂದರೆ ಬಂಧದಲ್ಲಿ ಇರುವಾಗ ಸಾಧನೆ ಮಾಡಲಾರರು ಮಮಕಾರದಿಂದಲೇ ಬಂಧವೇರ್ಪಡುತ್ತದೆ, ಎಷ್ಟೋ ಜನರಿಗೆ ಸಾಧನೆಯ ಬಗ್ಗೆ, ಜ್ಞಾನದ ಬಗ್ಗೆ ಗೊತ್ತಿದ್ದರೂ ಮಮಕಾರದಿಂದ ಸಾಧನೆ ಮಾಡಲಾಗುವುದಿಲ್ಲ, ಮಮಕಾರವೆನ್ನುವುದು ಹೆಂಡತಿ ಮಕ್ಕಳ ಮೇಲೆ ಸಂಪತ್ತಿನ ಮೇಲೆ, ಪದವಿಗಳ ಮೇಲೆ, ಸ್ನೇಹಿತರ ಮೇಲೆ ಹೀಗೆ ವಿಧವಿಧವಾಗಿ ಇರುತ್ತದೆ, ಮಮಕಾರದಿಂದಲೇ ಕರ್ಮಗಳನ್ನು ಮಾಡುತ್ತಾರೆ. ಅವು ಪಾಪಕರ್ಮಗಳಾದರು ಆಗಬಹುದು ಪುಣ್ಯಕರ್ಮಗಳಾದರೂ ಆಗಬಹುದು, ಕರ್ಮವಿದ್ದರೆ ಜನ್ಮ ನಿಶ್ಚಿತ ಜನ್ಮವಿದ್ದರೆ ದುಃಖವು ನಿಶ್ಚಿತ, ತನ್ನ ನಿಜಸ್ವರೂಪ (ಆತ್ಮ) ತಿಳಿದುಕೊಳ್ಳಬೇಕೆಂದರೆ ಮಮಕಾರವೇ ಅಡ್ಡಿ ಇದಕ್ಕೆ ಉದಾಹರಣೆಯಾಗಿ ಜಡಭರತನ ಕಥೆಯನ್ನು ತಿಳಿದುಕೊಳ್ಳೋಣ.

ಜಡಭರತನೆಂಬುವ ಮುನಿ ಎಲ್ಲಾ ಬಿಟ್ಟು ಸಾಧನೆ ಮಾಡಿಕೊಳ್ಳುತ್ತಾ, ಮೋಕ್ಷ ಹೊಂದಬೇಕೆಂದು ಅರಣ್ಯಕ್ಕೆ ಹೋದನು, ಅಲ್ಲಿ ಆಶ್ರಮ ನಿರ್ಮಿಸಿಕೊಂಡು ಸಾಧನೆ ಮಾಡುತ್ತಿದ್ದನು, ಒಂದು ದಿನ ಸ್ನಾನಕ್ಕೆ ಹೋಗಿ ಬರುತ್ತಿದ್ದರೆ ದಾರಿಯಲ್ಲಿ ಒಂದು ಜಿಂಕೆ

ಮರಿಯನ್ನು ಪ್ರಸವಿಸಿ ನಂತರ ಮರಣಿಸಿದ್ದನ್ನು ನೋಡಿದನು, ಆ ಚಿಕ್ಕ ಜಿಂಕೆ ಮರಿಯನ್ನು ನೋಡಿ ಕರುಣೆಯಿಂದ ಇದು ತಾಯಿಯನ್ನು ಕಳೆದುಕೊಂಡಿದೆ ಕಾಡಿನಲ್ಲಿ ಯಾವ ಮೃಗವಾದರೂ ತಿಂದು ಹಾಕುವುದೇನೋ ಎಂದು ಆಶ್ರಮಕ್ಕೆ ತೆಗೆದುಕೊಂಡು ಬಂದು ಬೆಳೆಸಲು ತೊಡಗಿದನು.

ಹಾಗೆ ಬೆಳೆಸುತ್ತಿದ್ದಾಗ ಅದರ ಮೇಲೆ ಮಮಕಾರವೇರ್ಪಟ್ಟಿತು, ಜಡಭರತ ಮರಣಿಸುವ ಮೊದಲು ನನ್ನ ನಂತರ ಈ ಮರಿ ಏನಾಗುವುದೋ ಎಂದು ಬಾಧೆ ಪಡುತ್ತಾ ಮರಣಿಸುತ್ತಾನೆ, ಯಾವ ಭಾವದೊಂದಿಗೆ ಮರಣಿಸಿದರೆ ಅಂತಹ ಜನ್ಮ ಬರುತ್ತದೆ ಎಂದು ಗೀತೆಯಲ್ಲಿ ಹೇಳಲಾಗಿದೆ, ಆದ್ದರಿಂದ ಜಿಂಕೆಯಾಗಿ ಜನಿಸಬೇಕಾಯಿತು! ಅಂದರೆ ಮಮಕಾರ ಬಂಧವಾಗಿ ಒಂದು ಜನ್ಮ ಹೆಚ್ಚಾಯಿತು.

ಸಾಧಕನು ಈ ಜನ್ಮದಲ್ಲಿ ಸಾಧಿಸಬಲ್ಲ ಶಕ್ತಿಯನ್ನು ಹೊಂದಿ ಕೂಡಾ ಬಂಧಗಳಿಂದಲೇ ಜನ್ಮಗಳು ಹೆಚ್ಚಾಗುತ್ತವೆ, ಇವೆಲ್ಲಾ ತಿಳಿದುಕೊಂಡ ದಿನ ನಮ್ಮ ದೃಷ್ಟಿ ನಮ್ಮ ಯಾವ ಗುರಿಗಾಗಿ ಸಾಧನೆ ಮಾಡುತ್ತಿದ್ದೇವೋ ತಿಳಿದುಕೊಳ್ಳಬೇಕು, ನಮ್ಮ ಮಾರ್ಗಕ್ಕೆ ಅಡ್ಡಿಯಾಗಿರುವುದನ್ನು ಬಿಟ್ಟು ಅನುಕೂಲವಾಗಿರುವುದನ್ನು ಆಚರಿಸಬೇಕು.

ಎಷ್ಟೋ ಜನ್ಮಗಳಲ್ಲಿ ಮಾಡಿದ ಪುಣ್ಯದಿಂದ ಒಬ್ಬ ಸದ್ಗುರುವನ್ನು ಹೊಂದಿ ಜ್ಞಾನವೇ ಅಂತಿಮ ಲಕ್ಷ್ಯ ವೆಂದು ಗುರುವಿನ ಮೂಲಕ ತಿಳಿದು, ಜ್ಞಾನ ಮಾರ್ಗದಲ್ಲಿರುವ ಅಡ್ಡಿಗಳನ್ನು ತೊಲಗಿಸಿಕೊಂಡು ಆಚರಿಸಬೇಕಾದದ್ದು ಆಚರಿಸುತ್ತಾ ನಮ್ಮ ಅಂತಿಮ ಗುರಿಯನ್ನು ಸೇರಿಕೊಳ್ಳಬೇಕು.

# ಸಾಧಕನಿಗೆ ಬರುವ ಪ್ರತಿರೋಧಗಳು

**1. ಅವಿದ್ಯೆ ಎಂಬ ಪ್ರತಿರೋಧ :** ನಾನು ಜೀವಾತ್ಮ, ದೇವರು ಬೇರೆ ಎಂದುಕೊಳ್ಳುವುದು ನಾನು ಪರತಂತ್ರನು ಎನ್ನುವ ಬಲಹೀನತೆಯೇ ಅವಿದ್ಯೆ ಇಂತಹ ಬಲಹೀನತೆಗಳು ಇರುವಷ್ಟು ಕಾಲ ತಾನೇ ದೈವವೆಂದು ತಿಳಿದುಕೊಳ್ಳಲಾರ.

**2. ಪ್ರಜ್ಞೆಎಂಬ ಪ್ರತಿರೋಧ :** ಇಂತಹವರು ಹಿರಿಯರು, ಗುರುಗಳು ಮಹನೀಯರು ಬೋಧಿಸಿದರು ಹೇಳಿದರೂ ಯಾರ ಮಾತುಗಳನ್ನು ತಮ್ಮ ಕಿವಿಗಳಲ್ಲಿ ಕೇಳಿ ತಲೆಗೆ ಹತ್ತಿಸಿಕೊಳ್ಳುವುದಿಲ್ಲ, ಇವರಿಗೆ ಇತರರು ಹೇಳಿದ ಒಳ್ಳೆಯ ಮಾತುಗಳು ಆಧ್ಯಾತ್ಮಿಕ ವಿಷಯಗಳು ಕೇಳಲು ಮನಸ್ಸು ಇರುವುದಿಲ್ಲ, ಇದನ್ನೇ ಪ್ರಜ್ಞಾಮಾಂಧ್ಯ ಎಂದು ಕೂಡಾ ಹೇಳುತ್ತಾರೆ. ಅಂತಹವರಿಗೆ ಆಧ್ಯಾತ್ಮಿಕ ವಿಷಯಗಳು ಅರ್ಥವಾಗುವುದಿಲ್ಲ, ಆ ವಿಷಯಗಳು ಕೇಳಲು ಇಷ್ಟಪಡುವುದಿಲ್ಲ, ನಾವು ಬಲವಂತವಾಗಿ ಕೂರಿಸಿ ಹೇಳಿದರೂ ಅವರ ಮನಸ್ಸು ಈ ವಿಷಯಗಳನ್ನು ಕೇಳಲು ಆಸಕ್ತಿ ತೋರುವುದಿಲ್ಲ.

**3. ಕುತರ್ಕ :** ಹೀಗೆ ತರ್ಕ ಮಾಡುವವರು ಹಿರಿಯರು ಹೇಳಿದ ಪ್ರತಿ ಮಾತಿಗೂ ವಿರುದ್ಧಾರ್ಥ ಹುಡುಕುತ್ತಾರೆ ಹೊರತು ಆ ವಿಷಯದಲ್ಲಿ ಇರುವ ಅರ್ಥ ಗ್ರಹಿಸಲು ಪ್ರಯತ್ನಿಸುವುದಿಲ್ಲ.

**4. ದುರಹಂಕಾರ :** ಈ ಗುಣವುಳ್ಳವರು ನನಗೆ ಎಲ್ಲಾ ತಿಳಿದಿದೆ ಎಂದು ಗರ್ವ ಪಡುತ್ತಾರೆ, ನನಗೆ ಯಾರೂ ಹೇಳಬೇಕಿಲ್ಲ ಬೋಧಿಸಬೇಕಿಲ್ಲ ಎನ್ನುವ ದುರಹಂಕಾರದಿಂದ ಇರುತ್ತಾರೆ, ಸಾಧನೆಯಲ್ಲಿ ಹೆಜ್ಜೆಯೂರಿದ ಪ್ರತಿಯೊಬ್ಬರೂ ಈ ಗುಣಗಳನ್ನು ತಿಳಿದುಕೊಂಡು ಇಂತಹ ಅಭ್ಯಾಸಗಳನ್ನು ಬದಲಾಯಿಸಿಕೊಳ್ಳಬೇಕು, ಅದರಿಂದಲೇ ಪತ್ರೀಜಿಯವರು ಸಾಧನೆಯೊಂದಿಗೆ ಸ್ವಾಧ್ಯಾಯ ಸಜ್ಜನಸಾಂಗತ್ಯ ಮಾಡಬೇಕೆಂದು ಹೇಳುತ್ತಾರೆ.

ಆಚಾರ್ಯ ಸಾಂಗತ್ಯದಿಂದ ವಿನಯವಾಗಿರುವುದು ಹೇಗೆಂದು ತಿಳಿಯುತ್ತದೆ, ಸ್ವಾಧ್ಯಾಯದಿಂದ ನಮ್ಮ ಜ್ಞಾನ ಎಷ್ಟಿದೆ? ಇನ್ನೂ ನಾವು ಎಷ್ಟು ಕಲಿಯಬೇಕೋ ತಿಳಿಯುತ್ತದೆ, ಸಜ್ಜನ ಸಾಂಗತ್ಯದಿಂದ ನಮ್ಮ ಸಾಧನೆ ಯಾವ ಸ್ಥಿತಿಯಲ್ಲಿ ಇದೆಯೋ

ಸಾಧನೆ ಎಷ್ಟು ಹೆಚ್ಚಿಸಬೇಕು ಎಂದು ತಿಳಿಯುತ್ತದೆ, ಸಾಧಕನು ಯಾವಾಗಲೂ ಭ್ರಮರದಂತೆ ಇರಬೇಕು, ಭ್ರಮರವು ಎಲ್ಲಾ ಹೂವುಗಳಿಂದ ಮಕರಂದವನ್ನು ಹೀರುವಂತೆ ಸಾಧಕನೂ ಕೂಡಾ ಎಲ್ಲರಿಗೂ ಹತ್ತಿರವಾಗಿದ್ದು ಅವರಲ್ಲಿರುವ ಜ್ಞಾನವನ್ನು ಗ್ರಹಿಸಬೇಕು ತನ್ನಲ್ಲಿರುವ ದುರಭ್ಯಾಸ ದುಷ್ಟ ವಾಸನೆಗಳು ಸಂಸ್ಕಾರಗಳು ಬದಲಾಯಿಸಿಕೊಂಡು ಗಮ್ಯದತ್ತ ಪಯಣಿಸಬೇಕು.



## ‘ನಮ್ಮ ವಾಸ್ತವಕ್ಕೆ ನಾವೇ ಕಾರಣಕರ್ತರು‘

## –ಬ್ರಹ್ಮರ್ಷಿ ಪತ್ರೀಜಿ

# ಸಂಕಲ್ಪ ಬೇಧಗಳು

ಸೃಷ್ಟಿಯಲ್ಲಿ ಮಾನವರೆಲ್ಲರೂ ವಿಧವಿಧವಾದ ಹೋಲಿಕೆಗಳೊಂದಿಗೆ ಸಂಕಲ್ಪಗಳೊಂದಿಗೂ ಇರುತ್ತಾರೆ "ಕೋರಿಕೆ" ಎಂದರೆ ಕಷ್ಟಪಡದೇ ಶ್ರಮ ವಹಿಸದೇ ತಾವು ಅಂದುಕೊಂಡದ್ದು ನೆರವೇರಬೇಕು ಎಂದುಕೊಳ್ಳುವುದು, "ಸಂಕಲ್ಪ" ಎಂದರೆ ನಾವು ಕೋರಿಕೊಂಡದ್ದಕ್ಕೆ ವಿಶೇಷ ಶ್ರಮ ವಹಿಸುವುದು, ಕಷ್ಟಪಡದೇ ಬೇಕೆಂದುಕೊಳ್ಳುವುದು ಕೋರಿಕೆ ವಿಶೇಷವಾದ ಶ್ರಮವಹಿಸಿ ಸಂಪಾದಿಸಿಕೊಳ್ಳುವುದು ಸಂಕಲ್ಪ ಮನುಷ್ಯರ ಗುಣಗಳ ಅನುಗುಣವಾಗಿ ಸಂಕಲ್ಪಗಳು ಇರುತ್ತವೆ ಸಂಕಲ್ಪಗಳಲ್ಲಿ ಬೇಧಗಳು ಹೇಗಿರುತ್ತವೆಯೋ ತಿಳಿದುಕೊಳ್ಳೋಣ.

## ಮೃಗ ಸಂಕಲ್ಪ

ಇಂತಹವರು ಯಾವಾಗಲೂ ಧರ್ಮಕಾರ್ಯಗಳು ಮಾಡುವುದಿಲ್ಲ, ತಮ್ಮ ಶರೀರಸುಖ ಮಾತ್ರವೇ ನೋಡಿಕೊಳ್ಳುತ್ತಾರೆ, ಸುಖಕ್ಕಾಗಿ ಆನಂದಕ್ಕಾಗಿ ಎದುರಿನವರಿಗೆ ಹಾನಿಮಾಡಲು ಕೂಡಾ ಹಿಂಜರಿಯುವುದಿಲ್ಲ, ಬೇರೆಯವರ ಧನವನ್ನು ತಮ್ಮ ಆನಂದಕ್ಕಾಗಿ ವಿನಿಯೋಗಿಸಿಕೊಳ್ಳುತ್ತಾರೆ, ಇವರು ಯಾವ ಸಂಕಲ್ಪ ಮಾಡಿದರೂ ಅವರ ಸುಖಕ್ಕಾಗಿ ಮಾಡುತ್ತಾರೆ, ಯಾವ ಸಂಕಲ್ಪ ಮಾಡಿದರು ಅವರ ಸುಖಕ್ಕಾಗಿ ಮಾಡಿ ಇತರರಿಗೆ ಉಪಯೋಗವಾಗದೇ ಅವರಿಗೆ ಹಾನಿ ಮಾಡಿದವರನ್ನು "ದ್ವಿಪಾದ ಪಶು" ಎನ್ನುತ್ತಾರೆ. ಅಂತಹವರ ಸಂಕಲ್ಪಗಳನ್ನು "ಮೃಗ ಸಂಕಲ್ಪ" ಎನ್ನುತ್ತಾರೆ, ಇವರಲ್ಲಿ ತಮೋಗುಣ ಅಧಿಕವಾಗಿರುತ್ತದೆ.

## ಮನುಷ್ಯ ಸಂಕಲ್ಪ

ಇವರು ಭಗವಂತನ ಬಗ್ಗೆ ಸತ್ಯದ ಬಗ್ಗೆ ಧರ್ಮದ ಬಗ್ಗೆ ವಿಶ್ವಾಸ ಹೊಂದಿರುತ್ತಾರೆ, ಪ್ರಪಂಚಕ್ಕಾಗಿ ಹೋರಾಟಮಾಡಿ ಧರ್ಮ ಕಾರ್ಯಗಳು ಮಾಡುತ್ತಾರೆ, ಇವರು ಸಂಪಾದಿಸಿದ ಧನ ದೈವ ಕಾರ್ಯಗಳಿಗೆ ವಿನಿಯೋಗಿಸುತ್ತಾರೆ, ಇತರರ ಸಂಪತ್ತು ಅನುಭವಿಸಬೇಕೆಂದು ಆಶಿಸುವುದಿಲ್ಲ, ಪ್ರಾರಂಭಿಸಿದ ದೈವಕಾರ್ಯಗಳು ಎಷ್ಟು ಕಷ್ಟವಾದರೂ ಪ್ರಯತ್ನಿಸಿ ಪೂರ್ಣಗೊಳಿಸುತ್ತಾರೆ. ಇವರಲ್ಲಿ ಸ್ವಲ್ಪ ರಜೋಗುಣ ಅಧಿಕವಾಗಿ ಸಾತ್ವಿಕಗುಣ ಇರುತ್ತದೆ, ದೇವತಾಸಂಕಲ್ಪ ಇವರಲ್ಲಿ ಸತ್ವಗುಣ ಅಧಿಕವಾಗಿರುತ್ತದೆ ಇವರ ಬಳಿ ಯಾರು ಬಂದರೂ ಸಹಾಯ ಪಡೆದೇ ಹೋಗುತ್ತಾರೆ,

ಧರ್ಮಕಾರ್ಯಗಳು ಮಾಡುವಾಗ ಯಾರನ್ನೂ ಆಶ್ರಯಿಸರು ಇವರು ತಮ್ಮ ಧನ ಸಂಪೂರ್ಣವಾಗಿ ದೈವ ಕಾರ್ಯಗಳಿಗೆ ವಿನಿಯೋಗಿಸುತ್ತಾರೆ.

## ಋಷಿ ಸಂಕಲ್ಪ

ಇವರು ಸರ್ವಸಂಗ ಪರಿತ್ಯಾಗಿಗಳು, ನಿರ್ವಿಷಯ ಸ್ಥಿತಿ ಹೊಂದಿರುತ್ತಾರೆ, ಇವರು ಎಲ್ಲಾ ವೇಳೆಯಲ್ಲೂ ಆತ್ಮಧ್ಯಾನ ಪರರಾಗಿ ಶುದ್ಧ ಸತ್ವದಲ್ಲಿ ಇರುತ್ತಾರೆ, ಸಮಸ್ತ ವಸ್ತುಗಳಲ್ಲಿ ಸಮಸ್ತ ಪ್ರಾಣಿಗಳಲ್ಲಿ ಶುದ್ಧ ಚೈತನ್ಯವೇ ಇದೆಯೆಂದು ಎಲ್ಲರನ್ನೂ ಪ್ರೀತಿಸುತ್ತಾರೆ, ಇವರು ಯಾವಾಗಲೂ ಜನರಿಗೆ ಬೋಧನೆ ಮಾಡಬೇಕೆಂಬ ಆಲೋಚನೆಯೊಂದಿಗೆ ಇರುತ್ತಾರೆ, ಇವರಿಗೆ ಯಾವ ಕಾರ್ಯ ಮಾಡಬೇಕೆಂದು ಸಂಕಲ್ಪಿಸಿದರೂ ಒಡನೆಯೇ ನೆರವೇರುತ್ತವೆ.

## ಈಶ್ವರ ಸಂಕಲ್ಪ

ಇವರಿಗೆ ಚರಾಚರ ವಸ್ತುಗಳೆಲ್ಲದರಲ್ಲೂ ಅಂತರ್ಯಾಮಿಯಾದ ಈಶ್ವರನು ಗೋಚರಿಸುತ್ತಾನೆ, ಇವರು ಸುಲಭವಾಗಿ ನಿರ್ವಿಕಲ್ಪ ಸಮಾಧಿ ಸ್ಥಿತಿ ಹೊಂದುತ್ತಾರೆ, ಇವರು ಆತ್ಮಾರಾಮರಾಗಿ ಲೋಕೋದ್ಧಾರಕ ಬುದ್ಧಿ ಹೊಂದಿರುತ್ತಾರೆ, ಇತರರನ್ನು ಯಾವಾಗಲೂ ಆತ್ಮ ಜ್ಞಾನದ ಕಡೆಗೆ ಪ್ರೇರೇಪಿಸುತ್ತಾರೆ, ಇವರಿಗೆ ಅಷ್ಟಸಿದ್ಧಿಗಳು ಸೇವೆ ಮಾಡಲು ಸಿದ್ಧವಾಗಿರುತ್ತವೆ ಇವರು ಭೂಮಿ ಮೇಲೆ ಹೇಗಿದ್ದರೂ ಜೀವನ್ಮುಕ್ತರೇ.

## ನಿಸ್ಸಂಕಲ್ಪ

ಇವರಿಗೆ ಯಾವ ಸಂಕಲ್ಪಗಳು ಇರುವುದಿಲ್ಲ, ಅಣಿಮಾದಿ ಸಿದ್ದಿಗಳು ಇವರನ್ನು ಸೇವಿಸುತ್ತವೆ, ಇವರಿಗೆ ಯಾವುದು ನಡೆಯಬೇಕೋ  ಅದು ನಡೆದೇ ತೀರುತ್ತದೆ, ತ್ರಿಮೂರ್ತಿಗಳು ಕೂಡಾ ಕಾರ್ಯಗಳು ನಿರ್ವಹಿಸುತ್ತಾರೆ, ಇಂತಹವರು ಅನೇಕ ಜನ್ಮಗಳಲ್ಲಿ ದೈವಭಕ್ತಿ ಗುರುಭಕ್ತಿ ಹೊಂದಿರುತ್ತಾರೆ, ಇವರು ಮಾಡಿದ ಪುಣ್ಯ ಕರ್ಮಗಳಿಂದ ಇಂತಹ ಪರಿಪಕ್ವ ಸ್ಥಿತಿಗೆ ಸೇರಿಕೊಳ್ಳುತ್ತಾರೆ ಸೂರ್ಯನಿಂದ ಕತ್ತಲು ಹೋಗಿ ಬೆಳಕು ಬಂದಂತೆ ಇವರ ಅವತಾರದಿಂದ ಲೋಕದಲ್ಲಿ ಅಜ್ಞಾನ ನಶಿಸಿ ಜ್ಞಾನ ಹೆಚ್ಚುತ್ತದೆ ನಿಸ್ಸಂಕಲ್ಪ ಸ್ಥಿತಿಯಲ್ಲಿ ಮಾತ್ರವೇ ಬ್ರಹ್ಮ ಸಾಕ್ಷಾತ್ಕಾರವಾಗುತ್ತದೆ ಅದರಿಂದಲೇ ಭಗವದ್ಗೀತೆಯಲ್ಲಿ ಏನೆಂದಿದ್ದಾರೆಂದರೆ,

**ಶ್ಲೋ : – ಯಸ್ಯ ಸರ್ವೆ ಸಮಾರಂಭಾ ಕಾಮ ಸಂಕಲ್ಪ ವರ್ಜಿತಾಃ**

**ಜ್ಞಾನಾಗ್ನಿ ದಗ್ಧ ಕರ್ಮಾಣಂ ತಮಾಹ್ಹು ಪಣ್ಣಿತಂ ಬುದಾಹ (4–19) (ಭ.ಗೀ.)**

ಯಾರ ಸಮಸ್ತ ಕರ್ಮಗಳು ಕೋರಿಕೆ, ಸಂಕಲ್ಪ ಎನ್ನುವುದು ಇರುವುದಿಲ್ಲವೋ! ಜ್ಞಾನವೆನ್ನುವ ಅಗ್ನಿಯಿಂದ ದಹಿಸಲ್ಪಟ್ಟ ಕರ್ಮಗಳು ಉಳ್ಳ ಅಂತಹವರನ್ನು ಪಂಡಿತನೆಂದು ಜ್ಞಾನಿಗಳು ಹೇಳುತ್ತಾರೆ. ಭಗವಂತನ ದೃಷ್ಟಿಯಲ್ಲಿ ಪಾಂಡಿತ್ಯ ಎಂದರೆ ಪ್ರಾಪಂಚಿಕ ವಿದ್ಯೆಯಲ್ಲಿ ಮುಳುಗೇಳುವುದಲ್ಲ ಹೃದಯ ಶುದ್ಧಿ ಹೊಂದಿ ಕಾಮ ಸಂಕಲ್ಪಗಳು ಇಲ್ಲದೇ ಆತ್ಮಜ್ಞಾನದಿಂದ ಕೂಡಿರುವುದು.

ಪತ್ರೀಜಿ ಒಂದು ಸಂದರ್ಭದಲ್ಲಿ ಹೀಗೆ ಹೇಳಿದ್ದಾರೆ

1. ಪ್ರಾರಂಭದ ಜನ್ಮಗಳಲ್ಲಿ ನಾವು ಕೋರಿ ಕೊಂಡದ್ದು ಬರುವುದಿಲ್ಲ ಆದರೆ ನಮಗೆ ಏನು ಅರ್ಹತೆ ಇದ್ದರೆ ಅದೇ ಬರುತ್ತದೆ.
2. ಇನ್ನೂ ಕೆಲವು ಜನ್ಮಗಳ ನಂತರ ಅರ್ಹತೆ ಇರುವುದು ಕೂಡಾ ಬರದೇ ಇರಬಹುದು. ಆದರೆ ನಮಗೆ ಬೇಕಾದದ್ದು ಮಾತ್ರ ತಪ್ಪದೇ ಬರುತ್ತದೆ.
3. ಕೊನೆಯ ಜನ್ಮಗಳಲ್ಲಿ ಪ್ರವೇಶಿಸಿದ ನಂತರ ನಮಗೆ ಬೇಕಾಗಿರುವುದು ಕೂಡಾ ಬರುವುದಿಲ್ಲ, ಆದರೆ ನಮ್ಮಿಂದ ಸಮಾಜ ಪ್ರಗತಿಗೆ ಅಗತ್ಯವಾದದ್ದು ಯಾವುದಿದೆಯೋ ಅವು ಮಾತ್ರ ನೆರವೇರುತ್ತವೆ. ಗುರು ಹೇಳಿದರೂ ಭಗವಂತ ಹೇಳಿದರೂ ನಾವು ಕೇಳದೇ ಸಂಕಲ್ಪಗಳನ್ನು ಸ್ವಾರ್ಥಕ್ಕಾಗಿ, ಸ್ವಂತ ಲಾಭಕ್ಕಾಗಿ ಇಟ್ಟರೆ ಅವು ನಡೆಯದಿದ್ದರೆ ದುಃಖವಾಗುತ್ತದೆ. ಆದ್ದರಿಂದ ನಾವೆಲ್ಲಾ ಯಾವ ಸಂಕಲ್ಪಗಳು ಇಲ್ಲದೇ ಸಾಧನೆ ಮಾಡಬೇಕೆಂದು ಪತ್ರಿ ಸಾರ್ ಹೇಳುತ್ತಾರೆ. ಮಾಡಬೇಕಾದದ್ದು ಮಾಡಿದರೆ ಬರಬೇಕಾದದ್ದು ಬಂದೇ ಬರುತ್ತದೆ ಎನ್ನುತ್ತಾರೆ. ಕೋರಿದರೆ ಸ್ವಲ್ಪ ನಮ್ಮದಾಗುತ್ತದೆ ಕೋರದಿದ್ದರೆ ಎಲ್ಲಾ ನಮ್ಮದೇ ಎಂದು ತಿಳಿದುಕೊಳ್ಳಿ.

# ಪಾತ್ರೆ ಶುದ್ಧಿ – ಪದಾರ್ಥ ಶುದ್ಧಿ – ಪಾಕ ಶುದ್ಧಿ

ಮಾನವರು ದುಃಖದಿಂದ ಹೊರಬರಬೇಕೆಂದರೆ ಆಧ್ಯಾತ್ಮಿಕವಾಗಿ ಬೆಳೆಯಬೇಕು ಆಧ್ಯಾತ್ಮಿಕವಾಗಿ ಬೆಳೆಯಬೇಕೆಂದರೆ ಮುಖ್ಯವಾಗಿ **"ಶ್ವಾಸದ ಮೇಲೆ ಗಮನವಿಟ್ಟು ಧ್ಯಾನ ಮಾಡಬೇಕು"**, ಆಧ್ಯಾತ್ಮಿಕ ಉನ್ನತಿಗೆ ಧ್ಯಾನ ಒಂದೇ ಸರಿಹೋಗುವುದಿಲ್ಲ ಧ್ಯಾನದೊಂದಿಗೆ ಆಹಾರ ನಿಯಮಗಳು ಕೂಡಾ ಅಗತ್ಯವೇ ಆಹಾರ ನಿಯಮಗಳು ಅನುಸರಿಸದೇ ಆಧ್ಯಾತ್ಮಿಕ ಬೆಳವಣಿಗೆ ಎಂದಿಗೂ ಸಾಧ್ಯವಿಲ್ಲ ಆದ್ದರಿಂದ ಎಂತಹ ಆಹಾರ ತೆಗೆದುಕೊಳ್ಳಬೇಕೋ ನೋಡೋಣ.

ಮುಖ್ಯವಾಗಿ ಶುದ್ಧವಾದ ಆಹಾರ ತೆಗೆದುಕೊಳ್ಳಬೇಕು, ಆಹಾರ ಶುದ್ಧವಾಗಿ ಇದ್ದರೆ ಧ್ಯಾನದಲ್ಲೇ ಮನಸ್ಸು ಶುದ್ಧವಾಗುತ್ತದೆ. ಅದರ ಅನುಗುಣವಾಗಿ ಮನುಷ್ಯನ ಆಧ್ಯಾತ್ಮಿಕ ಏಳಿಗೆ ಇರುತ್ತದೆ, ಹಾಗಾದರೆ ಆಹಾರದಲ್ಲಿ ಎಂತಹ ಶುದ್ಧತೆ ಇರಬೇಕೋ ನೋಡೋಣ ಮುಖ್ಯವಾಗಿ ಮೂರು ವಿಧದ ಶುದ್ಧತೆ ಇರಬೇಕು 1. ಪಾತ್ರೆ ಶುದ್ಧಿ, 2. ಪದಾರ್ಥ ಶುದ್ಧಿ, 3. ಪಾಕ ಶುದ್ಧಿ

**1). ಪಾತ್ರೆ ಶುದ್ಧಿ :** ಪ್ರತಿಯೊಬ್ಬರೂ ಆಧ್ಯಾತ್ಮಿಕವಾಗಿ ಅಭಿವೃದ್ಧಿಯಾಗಬೇಕಾದರೆ ಪತ್ರೀಜಿಯವರು ಆಹಾರ ನಿಯಮಗಳನ್ನು ಎಷ್ಟು ಚೆನ್ನಾಗಿ ಹೇಳುತ್ತಾರೆ. ಮಾಂಸಾಹಾರವೆಂದರೆ ಮೃತಾಹಾರವೆಂದು ಅಂದರೆ ಕೊಳೆತು ವಾಸನೆ ಸೂಸುವ ಆಹಾರವೆಂದು, ಮೊದಲು ಮಾಂಸಾಹಾರ ಬಿಡಿ ಎಂದು ಹೇಳುತ್ತಾರೆ. ಮಾಂಸಾಹಾರ ಬಿಡುವುದೇ ಅಲ್ಲ ಅದನ್ನು ಬೇಯಿಸಿದ ಪಾತ್ರೆಗಳನ್ನು ಸಹ ಬಳಸಬೇಡಿ ಎನ್ನುತ್ತಾರೆ ಏಕೆಂದರೆ ಅದರ ದೋಷ ಆ ಪಾತ್ರೆಯಲ್ಲಿ ಸಹ ಇರುತ್ತದೆ.

ಉದಾಹರಣೆಗೆ ನಾವು ಹೊಲದಲ್ಲಿ ಬಳಸಿದ ಕ್ರಿಮಿನಾಶಕದ ಡಬ್ಬವನ್ನು ಬಿಸಾಡುತ್ತೇವೆಯೇ ಹೊರತು ಶುಭ್ರ ಮಾಡಿ ಮನೆಯಲ್ಲಿ ಬಳಸಲು ಉಪಯೋಗಿಸುವುದಿಲ್ಲ, ಕಾರಣ ಎಷ್ಟು ಶುಭ್ರ ಮಾಡಿದರೂ ಅದು ನಮಗೆ ಸ್ವಲ್ಪವಾದರೂ ಹಾನಿ ಮಾಡುತ್ತದೆ ಎಂದು ಅಲ್ಲವೇ ನಾವು ಕಾಣಿಸುವುದೇ ನೋಡುತ್ತೇವೆಯೇ ಹೊರತು ಕಾಣದ್ದನ್ನು ನೋಡುವುದಿಲ್ಲ ಅಲ್ಲವೇ, ಮಾಂಸಾಹಾರ ಬೇಯಿಸಿದ ಪಾತ್ರೆಯಲ್ಲಿ ಅದಕ್ಕಿಂತ ಹೆಚ್ಚು ದೋಷ ಇರುತ್ತದೆಯೆಂದು ಪತ್ರೀಜಿ ಅವರಿಗೆ ಗೊತ್ತು. ಅವರಿಗೆ ಕಾಣಿಸುವುದೇ ಅಲ್ಲದೆ ಕಾಣಿಸದ ಸೂಕ್ಷ್ಮಾತಿ ಸೂಕ್ಷ್ಮವಾದ ದೋಷಗಳು ತಿಳಿದಿದೆ ಅಂತಹ ಪಾತ್ರೆಗಳಲ್ಲಿ ಬೇಯಿಸಿದ ಆಹಾರ ತಿನ್ನುವುದರಿಂದ ಮನಸ್ಸು ರಜೋಗುಣಕ್ಕೆ ಬದಲಾಗುತ್ತದೆ ತಮೋಗುಣ, ರಜೋಗುಣ ಇರುವವರೆಗೆ ಧ್ಯಾನ ವಾಗುವುದಿಲ್ಲ

ಆಧ್ಯಾತ್ಮಿಕ ಏಳಿಗೆ ಇರುವುದಿಲ್ಲ, ಆದ್ದರಿಂದ ನಮ್ಮ ಆಧ್ಯಾತ್ಮಿಕ ಅಭಿವೃದ್ಧಿಗೆ ಪಾತ್ರೆ ಶುದ್ಧಿ ತುಂಬಾ ಮುಖ್ಯವೆಂದು ತಿಳಿದುಕೊಳ್ಳಬೇಕು.

**2). ಪದಾರ್ಥ ಶುದ್ಧಿ :** ಪದಾರ್ಥ ಶುದ್ಧಿ ಎಂದರೆ ಕೊಳೆತ ಶೇಖರಿಸಿಟ್ಟ ಆಹಾರ ಪದಾರ್ಥಗಳು ತಿನ್ನಬಾರದೆಂದು ಪತ್ರೀಜಿಯವರು ಹೇಳುತ್ತಾರೆ, ಸೇಬುಆಗಲಿ ಬಾಳೆಹಣ್ಣು ಆಗಲಿ ಯಾವ ಹಣ್ಣಾದರೂ ಕೊಳೆತರೆ ಅದು ಹಾಳಾಗಿದೆ ಎಂದೇ ಅರ್ಥ. ಒಂದು ಕಡೆ ಹಾಳಾಗಿದೆ ಎಂದು ಕತ್ತರಿಸಿ ಉಳಿದದ್ದು ತೆಗೆದು ಹಾಕುತ್ತಿರುತ್ತೇವೆ, ಅದು ಕೂಡಾ ತಿನ್ನಬಾರದು. ಹಾಗೆ ಬೆಳಗ್ಗೆ ಬೇಯಿಸಿದ್ದು ಬಿಸಿಮಾಡಿ ಸಂಜೆ ತಿನ್ನಬಾರದು, ಒಂದು ವಿಧವಾಗಿ ಬೇಯಿಸಿ ಫ್ರಿಜ್ನಲ್ಲಿ ಇರಿಸಿದ್ದು ಯಾವುದೂ ತಿನ್ನಬಾರದು. ಅಂತಹುದು ತಿನ್ನುವುದರಿಂದ ನಮ್ಮಲ್ಲಿ ತಮೋಗುಣ ಹೆಚ್ಚುವುದಲ್ಲದೇ ನಮ್ಮ ಸಾಧನೆಗೆ ಕೂಡಾ ಬಹಳ ಅಡ್ಡಿ ಉಂಟಾಗುತ್ತದೆ. ಆದ್ದರಿಂದ ತಾಜಾ ಆಗಿ ಬಿಸಿಬಿಸಿಯಾಗಿ ಬೇಯಿಸಿ ತಿನ್ನಬೇಕು, ಅದಕ್ಕೆ ಪತ್ರೀಜಿಯವರು ಪದಾರ್ಥ ಶುದ್ಧಿ ಕೂಡಾ ಇರಬೇಕೆಂದು ಹೇಳುತ್ತಾರೆ.

**3). ಪಾಕ ಶುದ್ಧಿ :** ಇನ್ನು ಪಾಕ ಶುದ್ಧಿಯೂ ಇರಬೇಕೆಂದು ಪತ್ರೀಜಿ ಹೇಳುತ್ತಾರೆ, ಹಾಗೆ ಮಾಡದಿದ್ದರೆ ಆ ರುಚಿ ಹೋಗುತ್ತದೆ ಎನ್ನುತ್ತಾರೆ, ಧ್ಯಾನ ಮಾಡಿ ಶುದ್ಧ ಮನಸ್ಸಿನಿಂದ ಅಡಿಗೆ ಮಾಡಿದರೆ ಅದು ತಿಂದವರು ಆರೋಗ್ಯ ಆನಂದ ಪಡೆಯುತ್ತಾರೆ, ಪದಾರ್ಥ ತುಂಬಾ ರುಚಿಯಾಗಿ ಇರುತ್ತದೆ ಕೆಟ್ಟ ಆಲೋಚನೆಗಳೊಂದಿಗೆ ಅಡಿಗೆ ಮಾಡಿದರೆ ಅದು ತಿಂದವರ ಮೇಲೆ ಕೂಡಾ ಪ್ರಭಾವ ತೋರಿಸುತ್ತದೆ. ಒಂದು ಉದಾಹರಣೆ:



ಒಬ್ಬ ರಾಜ ಒಂದು ದಿನ ಒಬ್ಬ ಸಾಧುವನ್ನು ಊಟಕ್ಕೆ ಕರೆದರು ಸಾಧುವಿಗೆ ಊಟ ತಯಾರು ಮಾಡುವ ಅಡಿಗೆಯವನು ರಾಜನ ಬೆಳ್ಳಿಯ ಅಡುಗೆ ಪಾತ್ರೆಗಳು ನೋಡುತ್ತಾ ಇಷ್ಟು ಸಾಮಾನು ಇದೆಯಲ್ಲಾ ಇದರಲ್ಲಿ ನಾನೊಂದು ಚಮಚ ತೆಗೆದುಕೊಂಡರೆ ಯಾರಿಗೆ ತಿಳಿಯುತ್ತದೆ? ಎನ್ನುವ ಭಾವದಿಂದ ಚಮಚವನ್ನು ಜೇಬಿನಲ್ಲಿ ಹಾಕಿಕೊಂಡನು ಅವನು ತನ್ನ ಸ್ವಾರ್ಥ ಭಾವದಿಂದಲೇ ಅಡಿಗೆ ಮಾಡಿದನು.

ಊಟಕ್ಕೆ ಬಂದ ಆ ಸಾಧು ಊಟ ಮಾಡುತ್ತಾ ಒಂದು ಬೆಳ್ಳಿ ಲೋಟವನ್ನು ಚೀಲದಲ್ಲಿ ಹಾಕಿಕೊಂಡು ಆಶ್ರಮಕ್ಕೆ ಹೋದನು, ಆಶ್ರಮಕ್ಕೆ ಹೋಗಿ ಚೀಲದಲ್ಲಿದ್ದ ಸಾಮಾನುಗಳನ್ನು ತೆಗೆದಿರಿಸಿ ಬೆಳ್ಳಿಲೋಟ ನೋಡಿ ಸಾಧುವು ಆಲೋಚಿಸಿದನು ಎಲ್ಲವನ್ನೂ ಎಲ್ಲರನ್ನೂ ಬಿಟ್ಟು ಈ ಆಶ್ರಮಕ್ಕೆ ಬಂದು ಇಂತಹ ಕರ್ಮ ಏಕೆ ಮಾಡಿದೆ? ಎಂದು ಆಶ್ಚರ್ಯಗೊಂಡನು ಆಗ ತನ್ನ ದಿವ್ಯದೃಷ್ಟಿಯಿಂದ ನೋಡಿದರೆ ಕಾರಣ ತಿಳಿಯಿತು, ಆ ದಿನ ಅಡುಗೆ ಮಾಡಿದವನು ಯಾವ ಆಲೋಚನೆ ಮಾಡಿ ಅಡಿಗೆ ಮಾಡಿದ್ದ ಎಂದು ಆ ಆಹಾರ ತಿಂದ ತಾನು ಕೂಡಾ ಹಾಗೆ ಪ್ರವರ್ತಿಸಿದೆ ಎಂದು ತಿಳಿದನು, ಒಡನೆಯೇ ರಾಜನ ಬಳಿಗೆ ಹೋಗಿ ನಡೆದದ್ದೆಲ್ಲಾ ಹೇಳಿ ನಿಮ್ಮ ಅಡುಗೆಯವನ ಬಳಿ ಚಮಚ ಇರುತ್ತದೆ.. ನೋಡಿ ಎಂದು ಹೇಳಿದನು ಹಾಗೆ ನೋಡಿದಾಗ ಆ ಚಮಚ ಅಡುಗೆಯವನ ಬಳಿ ಸಿಕ್ಕಿತು, ನಮ್ಮ ಆಲೋಚನೆಗಳ ಪ್ರಭಾವ ನಾವು ಮಾಡುವ ಅಡುಗೆ ಮೇಲೆ ಇರುತ್ತದೆ ಎಂದು ತಿಳಿದುಕೊಳ್ಳಬೇಕು ಅದು ತಿಂದವರು ಕೂಡಾ ಹಾಗೆಯೇ ಪ್ರವರ್ತಿಸುತ್ತಾರೆ.

**ಸಂತೋಷದಿಂದ ಬದುಕುವ ಹಕ್ಕನ್ನು ನಿಮ್ಮಂತೆ ಭಗವಂತನು ನಮಗೂ ಕೊಟ್ಟಿದ್ದಾನೆ**



ನಾವು ಅಡುಗೆ ಮಾಡುವಾಗ ಒಳ್ಳೆಯ ಆಲೋಚನೆಗಳೊಂದಿಗೆ ಎಲ್ಲರೂ ಆರೋಗ್ಯವಾಗಿ ಆನಂದವಾಗಿ ಚೆನ್ನಾಗಿರಬೇಕು ಎನ್ನುವ ಮನಸ್ತತ್ವ ದಲ್ಲಿ ಎಂತಹ ಕೃತಕ ಭಾವಗಳು ಇಲ್ಲದಂತೆ ಅಡುಗೆ ಮಾಡಿದರೆ ಅದು ತಿಂದವರ ಮೇಲೆ ಆ ಪ್ರಭಾವ ಬೀಳುತ್ತದೆ ಆ ಪದಾರ್ಥ ರುಚಿಯಾಗಿ ಇರುವುದೇ ಅಲ್ಲದೇ ಎಲ್ಲರೂ ಆನಂದವಾಗಿ ಇರುತ್ತಾರೆ.

ಅದಕ್ಕೆ ಪತ್ರೀಜಿಯವರು ಮಾಂಸಾಹಾರಿಗಳ ಮನೆಯಲ್ಲಿ ಊಟ ಮಾಡುವುದಿಲ್ಲ, ಅವರಿಗೆ ಎಲ್ಲಾ ತಿಳಿದಿದೆ ಸೂಕ್ಷ್ಮ ಲೋಪಗಳನ್ನು ಕೂಡಾ ಸಹಿಸರು ಕಾರಣ ಅವು ನಮ್ಮ ಸಾಧನೆಗೆ ಆಧ್ಯಾತ್ಮಿಕ ಅಭಿವೃದ್ಧಿಗೆ ಅಡ್ಡಿಯಾಗುತ್ತವೆ, ಆದ್ದರಿಂದ ಪಾಕಶುದ್ಧಿ ಕೂಡಾ ಸಾಧಕನಿಗೆ ಅತ್ಯಗತ್ಯ ಎಂದು ತಿಳಿದುಕೊಳ್ಳಿ ಪತ್ರೀಜಿಯವರ ಮಾರ್ಗದಲ್ಲಿ ನಡೆದು ಪ್ರತಿಯೊಬ್ಬರೂ ಪಾತ್ರೆ ಪದಾರ್ಥ ಪಾಕ ಶುದ್ಧಿಯನ್ನು ಅನುಸರಿಸಿ ಆಧ್ಯಾತ್ಮಿಕವಾಗಿ ಅಭಿವೃದ್ಧಿಯಾಗಿ ದುಃಖದಿಂದ ಹೊರಬನ್ನಿ.





ನನ್ನ ಕುಟುಂಬ

## ಶ್ರೀ ರಾಮ ಪಬ್ಲಿಕೇಶನ್ಸ್‌ನಲ್ಲಿ ದೊರೆಯುವ ಪುಸ್ತಕಗಳು

| | | | |
|---|---|---|---|
| 1. | ಅಹಿಂಸೆ & ಶಾಖಾಹಾರ | ರೂ. | 30 |
| 2. | ನವವಿಧ ಧರ್ಮಗಳು | ರೂ. | 30 |
| 3. | ಸಸ್ಯಾಹಾರವೇ ಮಾನವಾಹಾರ | ರೂ. | 30 |
| 4. | ಧ್ಯಾನ | ರೂ. | 60 |
| 5. | ವಿದ್ಯಾರ್ಥಿಗಳ ವಿಕಾಸಕ್ಕೆ ಧ್ಯಾನ ವಿದ್ಯೆ | ರೂ. | 50 |
| 6. | ಭಾಗವತ ಸನ್ನಿವೇಶಗಳ ಅಂತರಾರ್ಥ | ರೂ. | 40 |
| 7. | ಶಿರಡಿ ಸಾಯಿ ಸಂದೇಶಗಳು | ರೂ. | 50 |
| 8. | ಪ್ರಾಣ ಶಕ್ತಿ | ರೂ. | 100 |
| 9. | ಜೀವನದ ಸೂಕ್ಷ್ಮಗಳು | ರೂ. | 100 |
| 10. | ವಿದ್ಯಾರ್ಥಿ ಜೀವನ ಕ್ರಾಂತಿ | ರೂ. | 50 |
| 11. | ಸಂಘಂ ಶರಣಂ ಗಚ್ಛಾಮಿ | ರೂ. | 300 |
| 12. | ತುಳಸಿ ದಳ (I) | ರೂ. | 200 |
| 13. | ತುಳಸಿ ದಳ (ii) | ರೂ. | 220 |
| 14. | ಆಶ್ಚರ್ಯ....ಆಶ್ಚರ್ಯ | ರೂ. | 40 |
| 15. | ದುಃಖ ನಿವಾರಣೆಯ ಮಾರ್ಗ | ರೂ. | 80 |
| 16. | ಧ್ಯಾನದಿಂದಲೇ ಜ್ಞಾನ | ರೂ. | 70 |
| 17. | ಬ್ರಹ್ಮಜ್ಞಾನ | ರೂ. | 70 |
| 18. | ಜ್ಞಾನ ಜ್ಯೋತಿ | ರೂ. | 90 |
| 19. | ಗೈಡಿಂಗ್ | ರೂ. | 100 |
| 20. | ಸಂಕಲ್ಪವೆಂದರೇನು? | ರೂ. | 50 |
| 21. | ಕರ್ಮ ಸಿದ್ಧಾಂತ | ರೂ. | 70 |
| 22. | ಜ್ಞಾನ ಕುಸುಮಗಳು | ರೂ. | 90 |
| 23. | ಆಲೋಚನಾ ಶಕ್ತಿ | ರೂ. | 40 |
| 24. | ಆತ್ಮವಿಜ್ಞಾನ ಮತ್ತು ಮೃತ್ಯುವೇ ಇಲ್ಲ | ರೂ. | 40 |
| 25. | ಆಧ್ಯಾತ್ಮಿಕ ಶಾಸ್ತ್ರ | ರೂ. | 40 |
| 26. | ಭಕ್ತಿ ಮುಕ್ತಿ | ರೂ. | 30 |
| 27. | ಧ್ಯಾನ ತರಂಗ | ರೂ. | 40 |
| 28. | ಜ್ಞಾನ ಯುಗ | ರೂ. | 60 |
| 29. | ಸೇತು ವಿಜ್ಞಾನ | ರೂ. | 40 |
| 30. | ಮರಣಿಸುವ ಮುಂಚೆಯೇ ಮರಣಿಸಬೇಕು | ರೂ. | 130 |
| 31. | ಅತೀಂದ್ರಿಯ ಶಕ್ತಿಗಳು | ರೂ. | 40 |
| 32. | ನಾವು ಇಹಲೋಕ ವಾಸಿಗಳಾ? ಪರಲೋಕ ವಾಸಿಗಳಾ? | ರೂ. | 40 |
| 33. | ಆಲೋಚಿಸಿ | ರೂ. | 70 |
| 34. | ನಿರ್ವಾಣ ಮಾರ್ಗ | ರೂ. | 60 |
| 35. | ಸತ್ಯ | ರೂ. | 40 |
| 36. | ಆರ್ಥಿಕ ಪರಿಸ್ಥಿತಿ | ರೂ. | 40 |
| 37. | ಚಕ್ರಗಳು | ರೂ. | 30 |
| 38. | ಭೂತದಯೆ ಮತ್ತು ದೈವತ್ವ | ರೂ. | 80 |
| 39 | ಮೌನ ಧ್ಯಾನ | ರೂ. | 40 |
| 40. | ಗುರವನ್ನು ಗುರುತಿಸುವುದೇ ಹೇಗೆ? | ರೂ. | 30 |
| 41 | ತ್ರಿವಿಧಗಳು | ರೂ. | 70 |
| 42 | ಮರಣದ ನಂತರ ನಮ್ಮ ಜೊತೆ ಬರುವುದು | ರೂ. | 60 |
| 43 | ಧ್ಯಾನವೆಂದರೆ? | ರೂ. | 60 |
| 44 | ಮೆಹರ್‌ಬಾಬಾ ಸಂದೇಶ | ರೂ. | 80 |
| 45 | ಉಪಮಾನ ಧ್ಯಾನ ಸಂದೇಶ | ರೂ. | 80 |
| 46 | ದತ್ತಾತ್ರೇಯ ಮುನಿಯವರ 24 ಗುರುಗಳು | ರೂ. | 70 |
| 47 | ಜ್ಞಾನಮಾಲ | ರೂ. | 70 |
| 48 | ಭಗವಂತನೆಂದರೇ?! | ರೂ. | 90 |

# “ಧ್ಯಾನ ಮಾಡುವ ವಿಧಾನ”

**ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..**
**ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..**
**ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..**
**ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!**

**ಧ್ಯಾನವನ್ನು ಯಾರಾದರೂ ಮಾಡಬಹುದು**
**ಯಾವ ವಯಸ್ಸಿನವರಾದರೂ ಮಾಡಬಹುದು**
**ಯಾವ ಸಮಯದಲ್ಲಿಯಾದರೂ ಮಾಡಬಹುದು**
**ಯಾವ ಸ್ಥಳದಲ್ಲಿಯಾದರೂ ಮಾಡಬಹುದು.**

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.

**ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಚಂದಾದಾರರಾಗಲು ಬ್ಯಾಂಕ್ ಖಾತೆಗೆ ಹಣ ಪಾವತಿಸಿ ಚಂದಾದಾರರಾಗಬಹುದು**

| | |
|---|---|
| **ಬ್ಯಾಂಕ್ ಹೆಸರು : ಭಾರತೀಯ ಸ್ಟೇಟ್ ಬ್ಯಾಂಕ್** | **– State Bank of India** |
| **ಶಾಖೆಯ ಹೆಸರು : ಚಾಮರಾಜಪೇಟೆ ಶಾಖೆ** | **– Chamarajapete Branch** |
| **ಖಾತೆ ಸಂಖ್ಯೆ : 30828057680 : I.F.S.C. ಕೋಡ್** | **– S.B.I.N 0005794** |
| **ಖಾತೆಯ ಹೆಸರು : ಕೆ.ಪಿ.ಡಿ.ಪಿ. ಟ್ರಸ್ಟ್–ಅಕೌಂಟ್–ಧ್ಯಾನ ಕಸ್ತೂರಿ** | **– K.P.D.P. Trust A/c. Dhayana Kasturi** |

ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಆನ್‌ಲೈನ್‌ನಲ್ಲಿಯೇ ಚಂದಾದಾರರಾಗಬಹುದು.
ಕನ್ನಡ ಆಧ್ಯಾತ್ಮಿಕ ಪುಸ್ತಕಗಳನ್ನು ಆನ್‌ಲೈನ್‌ನಲ್ಲಿಯೇ ಖರೀದಿಸಬಹುದು. ಇದಕ್ಕಾಗಿ
ನಿಮ್ಮ ಮೊಬೈಲ್ ಬಳಸಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ,
ನಂತರ ಕಾಣಿಸಿಕೊಳ್ಳುವ ಲಿಂಕ್ ಅನ್ನು ಕ್ಲಿಕ್ ಮಾಡಿ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
**ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ)**
# 1534/1, ಒಂದನೇ ಮಹಡಿ 26ನೇ ಮುಖ್ಯರಸ್ತೆ, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಹತ್ತಿರ
9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069
**ವಾಟ್ಸಾಪ್ ಅಥವಾ ಕರೆಮಾಡಿ : 9448883872; 9901598073**



ನನ್ನ ಜೀವನದಲ್ಲಿ ಆಧ್ಯಾತ್ಮಿಕವಾಗಿ ಅಭಿವೃದ್ಧಿ ಹೊಂದಲು ನನಗೆ ಎಷ್ಟೋ ವಿಧಗಳಲ್ಲಿ ಸಹಕರಿಸಿದ ಪರಮಗುರು ಪತ್ರೀಜಿಯವರಿಂದ ನಾನು ಕಲಿತುಕೊಂಡ ಸ್ವಲ್ಪ ಜ್ಞಾನವನ್ನು ಗುರುಗಳ ಆಶೀರ್ವಾದಗಳೊಂದಿಗೆ ನಿಮ್ಮ ಮುಂದೆ ಇಡುತ್ತಿದ್ದೇನೆ. ಸಹೃದಯದಿಂದ ಸ್ವೀಕರಿಸಬಲ್ಲಿರಿ.

-ತಟವರ್ತಿ ರಾಜ್ಯಲಕ್ಷ್ಮಿ

ರೂ 130/-


ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ

https: //www.youtube.com/pmckannada ● www.meditationeverywhere.org ● www.pssmovement.org

ಶ್ರೀರಾಮ ಪಬ್ಲಿಕೇಶನ್ಸ್

ಶ್ರೀರಾಮಧಾಮ ಧ್ಯಾನಕೇಂದ್ರ, ನಾರಾಯಣಪ್ಪ ಗಾರ್ಡನ್,
ವೈಟ್ ಫೀಲ್ಡ್, ಬೆಂಗಳೂರು - 560 066
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ, 9449695503
ವಿಜಯಲಕ್ಷ್ಮಿ ಎಸ್.ಎನ್. + 91 80500 82689